
ಕೃಷ್ಣಾನಂದ ಕಾಮತ

ಪತ್ರ ಪರಾಚಿ

(ಪತ್ರಗಳು)



ಮನೋಹರ ಗ್ರಂಥ ಮಾಲಾ, ಧಾರವಾಡ

ಪತ್ರ ಪರಾಚೆ

ಮನೋಹರ ಗ್ರಂಥಮಾಲೆಯ
ಆಗಸ್ಟ್ ೨೦೦೪ನೆಯ ವರ್ಷದ
ಎರಡನೆಯ ಗ್ರಂಥ

ಪತ್ರ-ಪರಾಚೆ

(ಪತ್ರಗಳು)

ಲೇಖಕರು

ಕೃಷ್ಣಾನಂದ ಕಾಮತ

೨೦೦೪

ಮನೋಹರ ಗ್ರಂಥ ಮಾಲಾ

ಲಕ್ಷ್ಮೀ ಭವನ, ಸುಭಾಸ ರಸ್ತೆ,

ಧಾರವಾಡ - ೫೮೦ ೦೦೧.

ಫೋನ್ : 0836 - 2441822 (O)

PATRA PARACHI
(Kannada - Letters)

Author : KRISHNANAND KAMAT

PUBLISHER : MANOHARA GRANTHA MALA
Laxmi Bhavan, Subhas Road
DHARWAD - 580 001.
Ph : 0836 - 2441822

DTP : JOSHI COMPUTERS, DHARWAD - 580 001
PRINTER : CHAITANYA OFFSET PRINTERS, GADAG
COVER DESIGN : ARTEC GRAPHICS, DHARWAD
COVER PRINTED AT : SARASWATI OFFSET PRINTERS, DHARWAD

Edition : First Year : 2004 Pages : xii + 152 = 164

Founder Editor : Late G. B. JOSHI
Literary Adviser : GIRISH KARNAD
Editor-Publisher : RAMAKANT G. JOSHI
Manager : SAMEER R. JOSHI

ISBN : 81-88478-13-X

ಪ್ರಕಾಶಕರ ಮಾತು

ಇದೀಗ ಜಿ. ಬಿ. ಜೋಶಿ ಜನ್ಮಶತಮಾನೋತ್ಸವ ಸಮಾರೋಪ ಸಮಾರಂಭ ಮುಕ್ತಾಯಗೊಂಡಿದೆ. ಒಂದು ವರ್ಷ ಪರ್ಯಂತ ವಿವಿಧ ಚಟುವಟಿಕೆಗಳನ್ನು ಬೇರೆ ಬೇರೆ ಊರುಗಳಲ್ಲಿ ಏರ್ಪಡಿಸುವದರ ಜೊತೆಗೆ 'ಜಿ. ಬಿ. ಜೋಶಿ ಸಮಗ್ರ' (ಎರಡು ಸಂಪುಟಗಳಲ್ಲಿ) ಹಾಗೂ ಈ 'ಜಿ. ಬಿ. ಶತನಮನ' (ಸಂಸ್ಮರಣ ಗ್ರಂಥ) ಗ್ರಂಥಗಳು ಬಿಡುಗಡೆಯಾಗಿವೆ.

ಈಗ ಆಗಸ್ಟ್ ೨೦೦೪ ನೆಯ ವರ್ಷದ ಪುಸ್ತಕಗಳಲ್ಲಿ ಎರಡನೆಯದಾಗಿ ದಿ.ಕೃಷ್ಣಾನಂದ ಕಾಮತರ 'ಪತ್ರ ಪರಾಚಿ' ಪ್ರಕಟವಾಗುತ್ತಿದೆ. ಈ ಪುಸ್ತಕ ಕಳೆದ ವರ್ಷವೇ ಪ್ರಕಟವಾಗಬೇಕಿತ್ತು. ಏನೇನೋ ಕಾರಣಗಳ ಮೂಲಕ ಈ ವರ್ಷ ಪ್ರಕಟವಾಗುತ್ತಿದೆ. ಕಾಮತರ ಬರವಣಿಗೆಯ ಬಗ್ಗೆ ಬರೆಯುವ ಕಾರಣವಿಲ್ಲ. ಈಗಾಗಲೇ ಅವರು ಕನ್ನಡ ಸಾಹಿತ್ಯದಲ್ಲಿ ತಮ್ಮ ಸ್ಥಾನ ಗಟ್ಟಿಮಾಡಿಕೊಂಡಿದ್ದಾರೆ. ಅವರು ತಮ್ಮ ಮಗ - ವಿಕಾಸನಿಗೆ ಬರೆದ ಪತ್ರಗಳನ್ನು ಶ್ರೀಮತಿ ಜ್ಯೋತ್ಸ್ನಾ ಕಾಮತ ಅವರು ಸಂಗ್ರಹಿಸಿ, ಸಂಪಾದಿಸಿ, ಪುಸ್ತಕ ರೂಪಕ್ಕೆ ಇಳಿಸಿ ಕೊಟ್ಟಿದ್ದಾರೆ. ಅವರಿಗೂ ನಮ್ಮ ಕೃತಜ್ಞೆಗಳು.

ಪುಸ್ತಕ ಪ್ರಕಾಶನದ ವಿವಿಧ ಅವಸ್ಥೆಗಳಲ್ಲಿ ಆಸ್ಥೆ ವಹಿಸಿ ನೆರವಾದ ಎಲ್ಲರಿಗೂ ಆಭಾರಿ. ಡಿ. ಟಿ. ಪಿ. ಕೆಲಸ ನಿರ್ವಹಿಸಿದ ಜೋಶಿ ಕಂಪ್ಯೂಟರ್ಸ್ ವರ್ಗಕ್ಕೆ ಕೃತಜ್ಞತೆಗಳು. ಮುದ್ರಣ ಕಾರ್ಯ ವ್ಯವಸ್ಥಿತವಾಗಿ ಮಾಡಿಕೊಟ್ಟ ಚೈತನ್ಯ ಆಫ್‌ಸೆಟ್ ಪ್ರಿಂಟರ್ಸ್‌ದ ಶ್ರೀ. ಕೆ. ಅಶೋಕ ಅವರಿಗೆ ನಮ್ಮ ನಮನಗಳು. ಮುಖಪುಟದ ಕಂಪ್ಯೂಟರ್ ಚಿತ್ರ ತಯಾರಿಸಿದ ಶ್ರೀ. ವೀರೇಶ ಹಾಗೂ ಶ್ರೀ. ರವೀಂದ್ರ ವಿಶ್ವಜ್ಞ ಅವರಿಗೆ ಆಭಾರಿ.

ಕನ್ನಡ ಓದುಗರು ಹೊಸ ಸಾಹಿತ್ಯದ ಜೊತೆಗಿನ ನಂಟನ್ನು ಉಳಿಸಿಕೊಳ್ಳಲು ಗ್ರಂಥ ಮಾಲೆಯ ಚಂದಾದಾರರಾಗುವದು ಅನುಕೂಲಕರವಾದ ಕಾರ್ಯ. ಪ್ರತಿ ವರ್ಷ ಹೊಸ ಹೊಸ ಸಾಹಿತ್ಯದ ರುಚಿಯನ್ನು ಅನುಭವಿಸಲು ಹೊಸ ಲೇಖಕರ ಪರಿಚಯ ಮಾಡಿಕೊಳ್ಳಲು ಚಂದಾದಾರರಾಗುವದು ಒಂದು ಸುಲಭ ವಿಧಾನ. ಕನ್ನಡ ಓದುಗರ ಅಭಿರುಚಿಯನ್ನು ಕಳೆದ ೭ ದಶಕಗಳಿಂದ ಬೆಳೆಯಿಸಿದ ಹೆಮ್ಮೆ ನಮಗಿದೆ. ಆದೇ ಅಭಿಮಾನದಿಂದಲೇ ಕನ್ನಡ ಓದುಗರು ಗ್ರಂಥಮಾಲೆಯನ್ನು ಪೋಷಿಸಿಕೊಂಡು ಬರಬೇಕು.

ಈ ವರ್ಷದಿಂದ ಅನಿವಾರ್ಯವಾಗಿ ವಾರ್ಷಿಕ ಚಂದಾಹಣವನ್ನು ೨೫೦-೦೦ ರೂ ಗಳಿಂದ ೩೦೦/- ರೂ. ಗಳಿಗೆ ಏರಿಸಬೇಕಾಗಿದೆ. ಕಳೆದ ಮೂರು ವರ್ಷಗಳಿಂದಲೂ ಚಂದಾ ಹಣವನ್ನು ೨೫೦/- ರೂ. ಗಳಿಗೆ ಸೀಮಿತಗೊಳಿಸಲಾಗಿತ್ತು. ಆದರೆ ಕಾಗದ, ಮುದ್ರಣ ವೆಚ್ಚ, ಹಾಗೂ ಅಂಚೆವೆಚ್ಚಗಳ ಏರಿಕೆಯಿಂದ ಈ ಅಲ್ಪಪ್ರಮಾಣದ ಏರಿಕೆಯನ್ನು ಮಾಡಿದ್ದೇವೆ. ಗ್ರಂಥಮಾಲೆಯ ಚಂದಾದಾರರಿಗೆ ಈ ವರ್ಷದಿಂದ ವಿಚಾರ ಪ್ರಬೋಧಕ ಗ್ರಂಥವನ್ನು ಉಚಿತವಾಗಿ ಕಾಣಿಕೆಯೆಂದು ಕೊಡಲಾಗುವದು

ಈ ವರ್ಷ ಶ್ರೀ. ಮಿಖಾಯೆಲ್ ಗೊಟ್‌ಲೊಬ್ ಅವರ Historical Thinking in South Asia ಎಂಬ ಪುಸ್ತಕದ ಪರಿಚಯಾತ್ಮಕ ಸುದೀರ್ಘ ಲೇಖನವನ್ನು ಕನ್ನಡಕ್ಕೆ 'ದಕ್ಷಿಣ ಏಶ್ಯಾದಲ್ಲಿ ಇತಿಹಾಸ ಚಿಂತನೆ' ಎಂಬ ಹೆಸರಿನಲ್ಲಿ ಶ್ರೀ. ಆರ್ಯರಿಂದ ಅನುವಾದಿಸಿ ನಮ್ಮ ಚಂದಾದಾರರಿಗೆ 'ಉಚಿತ ಕಾಣಿಕೆ'ಯಾಗಿ ನೀಡುತ್ತಿದ್ದೇವೆ. ಚಂದಾದಾರರು ತಮ್ಮ ಅಭಿಪ್ರಾಯ ತಿಳಿಸಬೇಕಾಗಿ ಕೋರಿಕೆ.

- ರಮಾಕಾಂತ ಜೋಶಿ

ಹಿನ್ನೆಲೆಯಾಗಿ

ಕಣ್ಮರೆಯಾಗುತ್ತಿರುವ ಪತ್ರಲೇಖನ ಕಲೆಯಲ್ಲಿಯ ಸಾಹಿತ್ಯಾಂಶಗಳನ್ನು ಗುರುತಿಸಿ, ಮನೋಹರ ಗ್ರಂಥ ಮಾಲೆಯು 'ಪ್ರೇಯಸಿಗೆ ಪತ್ರಗಳು' ಸಂಕಲನವನ್ನು ೧೯೯೧ರಲ್ಲಿ ಪ್ರಕಟಿಸಿತು. ಈಗ ಅದೇ ಲೇಖಕರ 'ಪತ್ರ-ಪರಾಚಿ' ಗ್ರಂಥವನ್ನು ಬೆಳಕಿಗೆ ತರುತ್ತಿರುವದು ಅಭಿಮಾನ ಹಾಗೂ ನೆಮ್ಮದಿಯ ಸಂಗತಿಯಾಗಿದೆ. 'ಪ್ರೇಯಸಿಗೆ ಪತ್ರಗಳು' ಜನರ ಮೆಚ್ಚಿಗೆ ಹಾಗೂ ಒಳ್ಳೆಯ ವಿಮರ್ಶೆ ಗಳಿಸಿತು. ಈ ಸಂಕಲನವೂ ಲೇಖಕರು ಕಂಡುಕೊಂಡ ಜೀವನದರ್ಶನದ ಹಲವು ಇಣುಕುನೋಟಗಳನ್ನು ಒದಗಿಸುತ್ತದೆ. ಓದುಗರಿಗೆ ದೈನಂದಿನ ಜೀವನದ ಹಲವಾರು ತೊಡಕುಗಳಿಗೆ ಉತ್ತರ ನೀಡುತ್ತದೆ.

೨೦-೨-೨೦೦೨ರಂದು ಹಠಾತ್ತಾಗಿ, ನನ್ನ ಪತಿ, ಕಣ್ಮರೆಯಾದರು. ಆಘಾತದಿಂದ ಚೇತರಿಸಿಕೊಳ್ಳಲು ತೀರ ಭಿನ್ನವಾದ, ದೂರದ ವಾತಾವರಣದ ಬದಲಾವಣೆ ಅತ್ಯವಶ್ಯವೆಂದು ಮಗ ವಿಕಾಸನೂ, ಇತರ ಆತ್ಮೀಯರೂ ಒತ್ತಾಯಿಸಿದ್ದರಿಂದ ಅಮೇರಿಕೆಗೆ ಹೊರಟುಬಂದೆ. ಇಲ್ಲಿಯ ಶಾಂತ ವಾತಾವರಣ, ವಿರಾಮಗಳು ಪುನಶ್ಚೇತನವಿತ್ತವು. ಏನಾದರೂ ಬರವಣಿಗೆಯಲ್ಲಿ ತೊಡಗಿಸಿಕೊಳ್ಳಲು ಪ್ರೇರೇಪಣೆ ಇತ್ತವು. ಆದರೆ ಸಹಾಯಕವಾಗಬಹುದಾದ ಯಾವ ಸಾಮಗ್ರಿಯನ್ನೂ ನಾನು ಒಯ್ದಿರಲಿಲ್ಲ. ಒಂದು ದಿನ ಸಹಜವಾಗಿ, 'ನಿನ್ನ ತಂದೆ ಬರೆದ ಪತ್ರಗಳನ್ನೆಲ್ಲ ಇಟ್ಟಿರುವೆಯಾ?' ಎಂದು ವಿಕಾಸನಿಗೆ ಕೇಳಿದೆ. ಆತ ತಡಮಾಡದೇ ಎರಡು ದೊಡ್ಡ ರಟ್ಟಿನ ಪೆಟ್ಟಿಗೆಗಳನ್ನು ತಂದಿತ್ತ. ''ನಿನಗೆ ಬರೆದ ಪತ್ರಗಳು ಒಂದು ಪುಸ್ತಕವಾದರೆ ನನಗೆ ಬರೆದವುಗಳೂ ಏಕೆ ಆಗಬಾರದು?'' ಎಂದು ಹಿಂದೊಮ್ಮೆ ಹಾಸ್ಯವಾಗಿ ಹೇಳಿಯೂ ಇದ್ದ. ಈ ಪತ್ರಗಳನ್ನು ಓದುತ್ತ ಹೋದಂತೆ, ಜೀವನ ಪಾಠಗಳ ಹಲವು ಹೊಳಹುಗಳು ಅವುಗಳಲ್ಲಿ ಗೋಚರಿಸಿದವು. ಪುಸ್ತಕರೂಪದಲ್ಲಿ ತಲುಪಬಹುದಾದ ಸಾಧ್ಯತೆಯನ್ನು ತೋರಿಸಿಕೊಟ್ಟವು. ಪರಿಣಾಮವೇ 'ಪತ್ರ-ಪರಾಚಿ'.

ಡಾ. ಕೃಷ್ಣಾನಂದ ಕಾಮತರ ಬದುಕು ಹಾಗೂ ಸಾಧನೆಗಳು ಬಹುಮುಖವಾದವುಗಳು. ಸಾಮಾನ್ಯ ಮನುಷ್ಯನೊಬ್ಬ, ಈ ಹರಹು ಹಾಗೂ ಆಳವುಳ್ಳ ಆಸಕ್ತಿಗಳ ಜೀವನ ನಡೆಸಲು ಸಾಧ್ಯವೇ? ಎಂದು ಅಚ್ಚರಿಯನ್ನು ಉಂಟುಮಾಡುವ ವ್ಯಾಪ್ತಿಯುಳ್ಳವುಗಳು. ೬೭ ವರ್ಷಗಳ ಜೀವಮಾನದಲ್ಲಿ ಅವರು ೨ ಲಕ್ಷಕ್ಕೂ ಮೀರಿ ಚಿತ್ರಗಳನ್ನು ಕ್ಲಿಕ್ಕಿಸಿದರು. ೨೫ ಡಯರಿಗಳಲ್ಲಿ ಛಾಯಾಚಿತ್ರ ಕಲೆಯ ತಾವೇ ಕಂಡು ಹಿಡಿದ ದ್ರಾವಕ ತಯಾರಿಕೆ, ಅಳತೆ, ಮುದ್ರಣ ಮಾಹಿತಿ, ಪ್ರಯೋಗ ಪ್ರಕಾರ, ಹಾಗೂ ಸಾಹಸಗಳನ್ನು ದಾಖಲಿಸಿದರು. ೨೦ಕ್ಕೂ ಮೀರಿದ ದಿನಚರಿಗಳಲ್ಲಿ ತಮ್ಮ ದೈನಂದಿನ ಚಟುವಟಿಕೆಗಳನ್ನು, ಆದಾಯ ಖರ್ಚುಗಳ ವಿಚಾರಗಳನ್ನು ಬರೆದಿಟ್ಟಿದ್ದಾರೆ. ಅಪರೂಪದ ಅಲೆಮಾರಿಯಾಗಿ ದೇಶ, ವಿದೇಶಗಳಲ್ಲಿ

ಸಂಚರಿಸಿದರು. ಕರ್ನಾಟಕದಲ್ಲೇ ಪ್ರಥಮವಾದ ವೈಜ್ಞಾನಿಕ ಛಾಯಾಗ್ರಹಣದ ಲ್ಯಾಬ್ ಪ್ರಾರಂಭಿಸಿ, ಸಂಶೋಧನಾ ವಿದ್ಯಾರ್ಥಿಗಳಿಗೆ, ಪ್ರಯೋಗಾಸಕ್ತರಿಗೆ ಸೇವೆಯನ್ನು ಸುಮಾರು ಮೂರು ದಶಕಗಳ ಕಾಲ ಕೊಡಮಾಡಿದರು. ಪ್ರವಾಸಕಥನ, ವಿಜ್ಞಾನ, ಜನಾಂಗೀಯ ಅಧ್ಯಯನ, ಪರಿಸರ ಪ್ರಜ್ಞೆ, ಕಲೆ ಮೊದಲಾದ ವಿವಿಧ ವಿಷಯಗಳ ಬಗ್ಗೆ ೨೨ ಪುಸ್ತಕಗಳನ್ನೂ, ನೂರಾರು ಲೇಖನಗಳನ್ನೂ ಪ್ರಕಟಿಸಿದರು. ಇನ್ನೂ ಆರೆಂಟು ಗ್ರಂಥಗಳಾಗುವಷ್ಟು ಮಾಹಿತಿಯನ್ನು ಬಿಟ್ಟು ಹೋಗಿದ್ದಾರೆ. 'ಪತ್ರಸಂಸಾರಿ'ಯಾಗಿದ್ದು, ನನಗೆ, ಸ್ನೇಹಿತರಿಗೆ, ಆಪ್ತೇಷ್ಟರಿಗೆ ಬರೆದ ಪತ್ರಗಳು ಸಹಸ್ರಗಟ್ಟಲೆ! ಬಹುಶಃ ಬೆಳಕು ಕಂಡವುಗಳು, ನೂರಾರು ಮಾತ್ರ.

ಈ ಸಂಕಲನದಲ್ಲಿ ಸಂಪಾದಿಸಿದ ೪೪ ಪತ್ರಗಳು, ಅಮೇರಿಕೆಯಲ್ಲಿ ಹೆಚ್ಚಿನ ವ್ಯಾಸಂಗಕ್ಕೆ ಹೋಗಿ, ಈಗ ಅಲ್ಲೇ ವಾಸಿಸುತ್ತಿರುವ, ನಮ್ಮ ಮಗ ವಿಕಾಸನಿಗೆ ಕಾಮತರು, ಒಂದು ದಶಕಕ್ಕೂ ಮೀರಿ ಬರೆದ ನೂರಾರು ಪತ್ರಗಳ ಸಾರವನ್ನು ಹೊಂದಿವೆ. ವಿದೇಶದಲ್ಲಿದ್ದು ಊರಿನ, ಮನೆಯ, ತನ್ನವರ ವಿಚಾರಗಳನ್ನು ತಿಳಿದುಕೊಳ್ಳಲು ಹಾತೊರೆಯುತ್ತಿದ್ದವನಿಗೆ, ಅವೆಲ್ಲವನ್ನು ತಪ್ಪದೇ ಬರೆದು ತಿಳಿಸುತ್ತಿದ್ದರು. ಜೊತೆಗೆ ತನಗಿಷ್ಟವಿದ್ದ ಮನುಷ್ಯವ್ಯಾಪಾರಗಳು, ಜೀವಿಲೋಕದ ವರ್ತನೆ, ಸ್ವಾರಸ್ಯಕರ ವ್ಯಕ್ತಿ-ಘಟನೆಗಳ ಕುರಿತೂ ಬರೆಯುತ್ತಿದ್ದರು. ನಿರಂತರವಾಗಿ ನಡೆದ ಈ ಪತ್ರವ್ಯವಹಾರದಲ್ಲಿ ಒಮ್ಮೊಮ್ಮೆ ಒಂದೇ ವಿಷಯದ ಬಗೆಗಿನ ಮಾಹಿತಿ ಮೂರು-ನಾಲ್ಕು ಪತ್ರಗಳಲ್ಲಿ ಮುಂದುವರಿದು ಬರುತ್ತಿತ್ತು. ಇಂಥ ಮಾಹಿತಿಯನ್ನು ಒಂದೆಡೆ ತಂದು, ಕಾಣಿಸಿದ್ದೇನೆ. ವೈಯಕ್ತಿಕ, ಸಾಂಸಾರಿಕ, ಓದುಗರಿಗೆ ರುಚಿಸದೇ ಹೋಗಬಹುದಾದ ಭಾಗಗಳನ್ನೆಲ್ಲ ಕೈಬಿಟ್ಟಿದ್ದೇನೆ. ಜೀವನಾಸಕ್ತರಿಗೆ, ಮುಖ್ಯವಾಗಿ ತರುಣಜನಾಂಗದವರಿಗೆ ಉಪಯುಕ್ತವಾಗ ಬಹುದಾದ ಮಾಹಿತಿಯನ್ನು ಆಯ್ಕೆಮಾಡಲು ಹವಣಿಸಿದ್ದೇನೆ. ಜೊತೆಗೆ ಜೀವನೋಲ್ಲಾಸವನ್ನು ಕೊನೆಯವರೆಗೆ ಕಾಯ್ದುಕೊಂಡ ಕಾಮತರ ವರ್ಣಮಯ ಬದುಕಿನ ಮೇಲೆ ಬೆಳಕು ಬೀರುವಂಥವನ್ನು, ದೈನಂದಿನ ನೂರೆಂಟು ಸಮಸ್ಯೆಗಳ ನಡುವೆಯೂ ಸಾಧ್ಯವಾಗಿಸಬಹುದಾದ ನೆಮ್ಮದಿಯ ಬಗ್ಗೆ ಅವರ ಹಲವು ಅನಿಸಿಕೆಗಳಿದ್ದ ಪತ್ರಗಳನ್ನು ಸೇರಿಸಿದ್ದೇನೆ.

ಇಂದು ಅಮೇರಿಕೆ, ತಮ್ಮ ಭವಿಷ್ಯವನ್ನು ಉಜ್ವಲವಾಗಿ ರೂಪಿಸಬಲ್ಲ ಏಕೈಕ ಸ್ಥಾನ! ಎಂದು ನಂಬಿದ ಯುವಕರು ಲಕ್ಷಲಕ್ಷ ಸಂಖ್ಯೆಯಲ್ಲಿ ಕಾಣಸಿಗುತ್ತಾರೆ. ನಲವತ್ತು ವರ್ಷಗಳ ಹಿಂದೆಯೇ ವಿದ್ಯಾರ್ಥಿಯಾಗಿ ಆ ಕನಸಿನ ನಾಡಿಗೆ ಹೋಗಿ ಡಾಕ್ಟರೇಟ್ ಪಡೆದು ತಮ್ಮ ಅನುಭವಗಳ ದೊಡ್ಡ ಬುತ್ತಿಯನ್ನೇ ತಂದು ಕಾಮತರು ಓದುಗರೊಂದಿಗೆ ಹಂಚಿಕೊಂಡದ್ದು ಇದೆ. ಅವರ 'ನಾನೂ ಅಮೇರಿಕೆಗೆ ಹೋಗಿದ್ದೆ' - ಏಳು ಮುದ್ರಣಗಳನ್ನು ಕಂಡಿದೆ. ಅಂದು ಅವರು ಕಂಡ ಅಮೇರಿಕನ್ನರ ಜೀವನ ಮೌಲ್ಯಗಳು, (ತಾಂತ್ರಿಕ ಪ್ರಗತಿ ಬಿಟ್ಟರೆ) ಹೆಚ್ಚು ಕಡಿಮೆ ಅವೇ ಉಳಿದುಕೊಂಡಿದ್ದು ಈ ಪತ್ರಸಂಕಲನದಲ್ಲಿ ಕಾಣಬಹುದಾಗಿದೆ.

ಪ್ರವಾಸಕಥನದಂತೆ, ಪ್ರಬಂಧಲೇಖನವೂ ಕಾಮತರು ಇಷ್ಟಪಟ್ಟ ಸಾಹಿತ್ಯಪ್ರಕಾರವಾಗಿತ್ತು. ಇಲ್ಲಿಯ ಕೆಲ ಪತ್ರಗಳು 'ನಗರದ ನಿಸರ್ಗ', 'ಮೋಡಗಳ ಮಾಯಾಲೋಕ', ಪುಟ್ಟ ಜೀವಿಜಗತ್ತು. ಇತ್ಯಾದಿಗಳು ಪುಟ್ಟ ಪ್ರಬಂಧಗಳೇ ಆಗಿವೆ! 'ನಮ್ಮೆಲ್ಲರ ಬಾಬಾ', 'ಹಳೆಯ ಗೆಳೆಯರು' ಕಿರು ವ್ಯಕ್ತಿ ಚಿತ್ರಣ ಮಾದರಿಯಾಗಿವೆ. 'ನಗ್ನಸತ್ಯ' ಕಲಾವಿದನ ಬಿಚ್ಚುಮನಸ್ಸು ತೆರೆದಿಟ್ಟರೆ ಧನಪ್ರಾಪ್ತಿಯ ಇಹಪರ! ಇಂದು ದೇಶದಾದ್ಯಂತ ತಾಂಡವವಾಡುತ್ತಿರುವ ಆರ್ಥಿಕ ಭ್ರಷ್ಟಾಚಾರದ ಬಗೆಗಿನ ವ್ಯಂಗ್ಯ ಟಿಪ್ಪಣಿಯಾಗಿದೆ. ಒಂದೊಂದು ಪತ್ರವೂ ಕ್ಯಾಲಿಡೋಸ್ಕೋಪ್ ಮಾದರಿಯ ಜೀವನ ಚಿತ್ರ ತೋರಿಸುತ್ತದೆ. ಸರಿಹೊಂದಬಹುದಾದ ಶೀರ್ಷಿಕಗಳನ್ನು ಕೊಟ್ಟು ಪ್ರತಿ ಪತ್ರಕ್ಕೆ ಒಂದು ಚೌಕಟ್ಟು ಕೊಡಲು ಹವಣಿಸಿದ್ದೇನೆ.

೧೯೯೭ರ ಬಳಿಕದ ಪತ್ರಗಳಲ್ಲಿ ವಿಶಿಷ್ಟ ತಿರುವು ಕಂಡುಬರುತ್ತದೆ. ಆ ವರ್ಷದ ಅಗಸ್ಟ್ ತಿಂಗಳಿನಲ್ಲಿ, ಸ್ವಾತಂತ್ರ್ಯ ಸುವರ್ಣಮಹೋತ್ಸವದ ಸಂದರ್ಭದಲ್ಲಿ ವಿಕಾಸನು www.kamat.com ಎಂಬ ವೆಬ್‌ಸ್ಯಾಟ್ ಪ್ರಾರಂಭಿಸಿದ. ಭಾರತದ ಬಗ್ಗೆ ಅತಿರಂಜಿತ ಕಲ್ಪನೆ ಬೆಳಿಸಿಕೊಂಡಿದ್ದ ಪಾಶ್ಚಾತ್ಯರಿಗೆ ಅದರ ಜೀವಂತ ಇತಿಹಾಸ, ಧಾರ್ಮಿಕ ನಂಬಿಕೆಗಳು, ಜಾನಪದಕಲೆಗಳು, ಜನಸಾಮಾನ್ಯರ ನೋವು-ನಲಿವುಗಳ ವಾಸ್ತವಿಕ ಚಿತ್ರಣಕೊಡುವದು ಮುಖ್ಯ ಉದ್ದೇಶವಾಗಿತ್ತು. ಜೊತೆಗೆ ಯಾವ ಪ್ರಶಸ್ತಿ-ಪುರಸ್ಕಾರ - ಪ್ರಚಾರ ಪಡೆಯದ ತನ್ನ ತಂದೆಯ ಛಾಯಾಚಿತ್ರ ಹಾಗೂ ಲೇಖನ ಪರಿಣತಿ ಇಂಟರ್‌ನೆಟ್ ದಂತಹ ಸುಲಭ, ಶೀಘ್ರಲಭ್ಯ, ವಿಶ್ವವ್ಯಾಪಿ, ಮಾಧ್ಯಮದ ಮೂಲಕ ಬೆಳಕು ಕಾಣುವಂತಾಗಲಿ! ಎಂಬುದೂ ಆಂತರಿಕ ಆಕಾಂಕ್ಷೆಯಾಗಿತ್ತು. ಈ ಸಾಹಸ, ನಿರೀಕ್ಷೆ ಮೀರಿ ಫಲಕೊಟ್ಟಿತು. ರಷ್ಯ (ಯುಕ್ರೇನ್) ಸ್ಪೇನ್, ಮೊಝಾಂಬಿಕ್, ದಕ್ಷಿಣ ಆಫ್ರಿಕ, ಮಧ್ಯಪ್ರಾಚ್ಯ, ಆಸ್ಟ್ರೇಲಿಯ, ಬ್ರಾಝಿಲ್ ಜಪಾನ, ಮೊದಲಾದ ದೇಶಗಳೂ ಸೇರಿದಂತೆ - ಸಹಸ್ರ ಸಹಸ್ರ ಸಂಖ್ಯೆಯಲ್ಲಿ ವೀಕ್ಷಕರು ಮೆಚ್ಚಿಗೆಯ ಈ -ಮೇಲ್ ಕಳಿಸಲಾರಂಭಿಸಿದರು. ಈ ಬರವಣಿಗೆಯ ಪ್ರಕಟನೆಯ ಹೊತ್ತಿಗೆ ಪ್ರತಿ ತಿಂಗಳೂ ೩೦ ಲಕ್ಷ ಜನ ಕಾಮತ್ ವೆಬ್‌ಸ್ಯಾಟ್ ವೀಕ್ಷಿಸುತ್ತಿರುವದನ್ನು ಕಂಪ್ಯೂಟರ್ ತೋರಿಸುತ್ತದೆ.

ಈ ಹೊಸ ಸಾಹಸದಿಂದ ಕಾಮತರ ಕ್ಯಾಮರಾಕ್ಕೆ ಬಿಡುವಿಲ್ಲದ ಕೆಲಸವಾಯಿತು. ಇಂಟರ್‌ನೆಟ್ ಬೇಡಿಕೆಯ ಚಿತ್ರಗಳೇ ಪ್ರಧಾನವಾಗಿ ಆ ಕುರಿತ ಮಾಹಿತಿ ನಂತರದ ಪತ್ರಗಳಲ್ಲಿ ಮುಖ್ಯವಾಗಿದ್ದರೆ ಆಶ್ಚರ್ಯವಿಲ್ಲ. ಅವುಗಳಲ್ಲಿಯ ಸ್ವಾರಸ್ಯಕರವೆನಿಸಿದವುಗಳನ್ನು ಇಲ್ಲಿ ಸೇರಿಸಿದ್ದೇನೆ.

ಇಂದಿನ ಮಾಹಿತಿ ತಂತ್ರಜ್ಞಾನ ಕ್ರಾಂತಿಯ ದಿನಗಳಲ್ಲಿ ಶೀಘ್ರತಮ ಮಾಧ್ಯಮಗಳಾದ ಟೆಲಿಫೋನು, ಈಮೇಲ್, ಈ - ಚ್ಯಾಟ್‌ಗಳು - ಉಳ್ಳವರಿಗೆ, ಸುಶಿಕ್ಷಿತರಿಗೆ ಸುಲಭ ಲಭ್ಯವಾಗಿವೆ. ಹೀಗಾಗಿ ಅತ್ಯಂತ ಆತ್ಮೀಯ ಹಾಗೂ ಮಾನವೀಯ ಸಂಪರ್ಕ ಸಾಧನವಾಗಿ ನೂರಾರು ವರ್ಷಗಳಿಂದ ಬೆಳೆದು ಬಂದ ಪತ್ರಲೇಖನ ಕಲೆ, ಮಣ್ಣುಮುಕ್ಕಿ ವಿನಾಶದಂಚಿನಲ್ಲಿ ಇದ್ದರೆ ಅಚ್ಚರಿಯಿಲ್ಲ. ದಿಕ್ಕಿನಲ್ಲಿ ವಿವಿಧ ವಿಷಯಗಳ

ಭಂಡಾರವಾಗಿರುತ್ತಿದ್ದ, ಸಾಂಸ್ಕೃತಿಕ ಜೀವನದ ದಾಖಲೆಯಾಗಿರುತ್ತಿದ್ದ ಅಪರೂಪದ ಪತ್ರಗಳು ಚರಿತ್ರೆಗೆ ಸೇರಿ ಹೋಗುವ ಭಯ ಇದ್ದೇ ಇದೆ.

ಇಂಥ ಒಂದು ಪತ್ರ ದಾಖಲಾತಿಯನ್ನು ಬೆಳಕಿಗೆ ತಂದ ಮನೋಹರ ಗ್ರಂಥಮಾಲೆಯ ಸಂಚಾಲಕ ಡಾ. ರಮಾಕಾಂತ ಜೋಶಿಯವರಿಗೆ ಕೃತಜ್ಞತೆಗಳು. ಪತ್ರಗಳನ್ನೆಲ್ಲ ಕಾಯ್ದಿರಿಸಿದ ವಿಕಾಸನಿಗೆ, ನನ್ನ ಆರೋಗ್ಯ, ವಿರಾಮ, ಬರವಣಿಗೆಯ ಯತ್ನಗಳಿಗೆ ಯಾವತ್ತೂ ಸೌಕರ್ಯಗಳನ್ನು ಮುಂದಾಗಿ ಒದಗಿಸಿಕೊಟ್ಟ ಸೊಸೆ, ಡಾ. ಹಿರ್‍ಯೊಂಗ್ ಕಿಮ್‌ಳಿಗೆ ಋಣಿಯಾಗಿದ್ದೇನೆ.

ಜ್ಯೋತ್ಸ್ನಾ ಕಾಮತ್
ಬರ್ಮಿಂಗಹ್ಯಾಮ್
ಅಲಬಾಮ - ೩೫೨೪೨
೧೫-೦೭-೨೦೦೨

ಪರಿವಿಡಿ

	ಹಿನ್ನಲೆಯಾಗಿ		
೧	ವಿಚಾರ ವಿನಿಮಯ	--	೧
೨	ನಾ, ನೀ, ಅರಿತ ಅಮೇರಿಕ	--	೫
೩	ವಿವಾಹ ವರ್ಧಂತಿ	--	೯
೪	ನಾನು ನೀನಾಗಿದ್ದರೆ....	--	೧೧
೫	ನಗ್ನ ಸತ್ಯ!	--	೧೩
೬	ಕಾವಿಕಲೆ	--	೧೫
೭	ಒಂದು ಸುದಿನ	--	೧೯
೮	ಪತ್ರಪ್ರಶಂಸೆ	--	೨೧
೯	ಧನಪ್ರಾಪ್ತಿಯ ಇಹಪರ	--	೨೪
೧೦	ಅನಾರೋಗ್ಯಧಾಮ	--	೨೭
೧೧	ಬಾಳಿಗೊಂದು ಗುರಿ	--	೩೨
೧೨	ಕಲಾವಿದನ ಕನಸು	--	೩೫
೧೩	ಪತ್ರದಾಖಲಾತಿ	--	೩೮
೧೪	ಕಾದಿರಿಸಿದ ನಿಧಿ	--	೪೧
೧೫	ಸೊಸೆಯ ಶೋಧದಲ್ಲಿ	--	೪೩
೧೬	ಷಷ್ಠ್ಯಬ್ದಿಯ ಸವಿ	--	೪೮
೧೭	ನಿವೃತ್ತಿ ಸುಖ	--	೫೨
೧೮	ಕೃಷ್ಣನ, ಕಸವರಿಕೆ!	--	೫೬
೧೯	‘ಮೆಚ್ಚಿಗೆ’ ಎಂಬ ಮಾಯೆ!	--	೫೮
೨೦	ಹಳೆಯ ಗೆಳೆಯರು	--	೬೧
೨೧	ಅರಸಿ ಬಂದ ಪ್ರಶಸ್ತಿ	--	೬೫

೨೨ ಆತ್ಮೀಯರ ಆತಿಥ್ಯ -- ೬೮
೨೩. ಸಗರದ ನಿಸರ್ಗ -- ೭೧
೨೪ ನಿನ್ನ ಬಾಲ್ಯದ ನೆನಪು -- ೭೩
೨೫ ಯೋಚನೆ - ವಿವೇಚನೆ -- ೭೭
೨೬ ನಮ್ಮೆಲ್ಲರ ಬಾಬಾ -- ೮೧
೨೭ ಮೋಡಗಳ ಮಾಯಾಲೋಕ -- ೮೪
೨೮ ಫೋನಾಯಣ! -- ೮೬
೨೯ ಪುಟ್ಟ ಜೀವಿಲೋಕ -- ೮೯
೩೦ ಮಲ್ಟಿಮೀಡಿಯ: ಒಂದು ಮುನ್ನೆಚ್ಚರಿಕೆ -- ೯೨
೩೧ ಅಂಚೆಕಾರ್ಡಿನ ಶುಭಸಂದೇಶ -- ೯೬
೩೨ ಬದುಕಿನ ಸಾರ್ಥಕತೆ -- ೯೮
೩೩ ವೆಬ್‌ಸ್ಪಾಟ್ ವಿಶೇಷ -- ೧೦೩
೩೪ ಹುಟ್ಟುಹಬ್ಬ: ಒಂದು ಹಿನ್ನೋಟ -- ೧೦೮
೩೫ ಕೊಂಕಣಿಯ ಕರ್ಮಕಥೆ! -- ೧೧೨
೩೬ ಚಿತ್ರಸಿದ್ಧಿ -- ೧೧೬
೩೭ ಮಿತವ್ಯಯ: ಒಂದು ಮೆಲುಕು -- ೧೧೯
೩೮ ಕ್ಯಾಮರಾಗಳ ಕತೆ -- ೧೨೩
೩೯ ವಿಮುಖಿನ ಖ್ಯಾತಿ! -- ೧೨೭
೪೦ ತ್ರಿಪುರಾವತಾರ -- ೧೩೧
೪೧ ಚಿತ್ರಸಂಪತ್ತು -- ೧೩೫
೪೨ ಅರಸಿ ಬಂದ ಅಮೇರಿಕನ್ನರು! -- ೧೩೭
೪೩ ಕ್ಲಿಕ್ಕಿಸುವ ಸಾಹಸ -- ೧೪೨
೪೪ ಸದಾಸಿದ್ಧ! -- ೧೪೯

೧. ವಿಚಾರ ವಿನಿಮಯ

ನನ್ನ ಪತ್ರಗಳೆಲ್ಲ ಸರಿಯಾಗಿ ಮುಟ್ಟುತ್ತಲಿವೆ, ಎಂದು ತಿಳಿಯುತ್ತೇನೆ. ನಿನ್ನ ಪತ್ರಗಳಿಂದ ಹಣಕಾಸಿನ ವ್ಯವಸ್ಥೆಯ ಬಗ್ಗೆ ನೀನು ಹೌಹಾರಿದಂತೆ ಅನಿಸಿತು. ಅದರ ಬಗ್ಗೆ ಮುಂಜಾಗ್ರತೆ ಮುಖ್ಯವಾದರೂ ಅದು ಶಿಕ್ಷಣಕ್ಕೆ ಅಡ್ಡಿಯಾಗಬಾರದು. ಸರ್ವದೃಷ್ಟಿಯಿಂದ ಮೊದಲನೆ ಸೆಮೆಸ್ಟರ್ ಅತಿ ಬಿಕ್ಕಟ್ಟಿನದು. ಅಂತೆಯೇ ಉತ್ತಮ ಗ್ರೇಡುಗಳನ್ನು ಪಡೆಯಲೇ ಬೇಕಾಗುತ್ತದೆ. ಅಂದರೇ ಮುಂದಿನ ಓದು, ಹಣಕಾಸಿನ ಸಮಸ್ಯೆ ಬಗೆಹರಿಸಲು ಅನುಕೂಲವಾಗುವದು. ಅತಿ ಕಂಗಾಲ ಪರಿಸ್ಥಿತಿಯಲ್ಲಿ ನಿನ್ನ ಆತ್ಮೀಯ ಸ್ನೇಹಿತನಾದ -----ನ ಸ್ವಲ್ಪ ಸಹಾಯ ಪಡೆದು ಅನಂತರ ಹಿಂದಿರುಗಿಸಿದರಾಯಿತು. ಹೇಗಿದ್ದರೂ ಅವನು ತುಂಬ ಒಳ್ಳೇ ವೇತನ ಬರುವ ನೌಕರಿಯಲ್ಲಿದ್ದಾನೆ. ನಿನಗೆ, ಹಣ ಕೇಳಲು ಮುಜುಗರವಾದರೆ ತಿಳಿಸು. ನನ್ನ ಪರಿಚಿತರಿಗೆ ಬರೆದು ತಿಳಿಸುತ್ತೇನೆ. ಜೀನ್ ರೊಥ್‌ಳಂತಹ ಮೂರು ದಶಕಗಳ ಆತ್ಮೀಯರು, ಅಮೇರಿಕೆಯಲ್ಲಿ ಇರುವಾಗ ಕಂಗಾಲಾಗುವ ಕಾರಣವೇ ಇಲ್ಲ. ಎಲ್ಲವನ್ನು ತಾಳ್ಮೆಯಿಂದ ಕುಳಿತು ಯೋಚಿಸಿದಾಗ ಪರಿಹಾರ ಹೊಳೆಯದೇ ಇರುವದಿಲ್ಲ.

ವಿಶ್ವವಿದ್ಯಾಲಯವನ್ನು ಬದಲಿಸುವಂತಹ ವಿಚಾರ ಹೊಳೆದಾಕ್ಷಣ, ಕಾರ್ಯಗತ ಮಾಡಲು ಹೋಗಬೇಡ. ಅಮೇರಿಕೆಯಲ್ಲಿ ಯಾರಿಗೂ ಹಣ ಸುಲಭವಾಗಿ ಬರುವದಿಲ್ಲ. ಅದಕ್ಕಾಗಿ ಮುಂದಾಲೋಚನೆಯಿಂದ ವರ್ತಿಸಬೇಕು ಶ್ರಮ ವಹಿಸಬೇಕು. ಸಾರಾಸಾರ ವಿಚಾರ ಮಾಡಬೇಕು. ನಿನ್ನ ಯತ್ನದಲ್ಲಿ ಸಂಪೂರ್ಣ ಯಶಸ್ಸು ನಿನ್ನದಾಗುತ್ತದೆ ಎಂಬ ಆತ್ಮವಿಶ್ವಾಸವಿದೆ. ಸ್ವಲ್ಪ ದುಡುಕು ಸ್ವಭಾವವನ್ನು ಬಿಡಬೇಕು. ಯಾವುದೇ ಗೊಂದಲದಲ್ಲಿ ಸಿಕ್ಕಿ ಹಾಕಿಕೊಳ್ಳದೇ ಶಿಕ್ಷಣದತ್ತ ಸಂಪೂರ್ಣ ಲಕ್ಷ್ಯ ಹಾಕಿದರೆ ನಿನಗೆ ಯಾವುದೂ ಕಷ್ಟದಾಯಕ ಅನಿಸುವದೇ ಇಲ್ಲ. ಈ ಮೊದಲು ---- ಭಾರತೀಯ ಕಂಪನಿಯಲ್ಲಿ ರೂಢಿಸಿಕೊಂಡ ಅಪಕ್ವ ಸಂಸ್ಕೃತಿ ಮರೆತುಬಿಡಬೇಕು. ಅಮೇರಿಕನ್ನರ ಬೆನ್ನುಮುರಿ ದುಡಿತ, ಶಿಸ್ತಿನ ಕಾರ್ಯವಿಧಾನ, ತಾಳ್ಮೆ, ಎಲ್ಲವನ್ನೂ ಮುಂದಾಗಿ ಯೋಚಿಸುವ ವಿಧಾನ ಮೊದಲಾದವನ್ನು ನಿನ್ನವನ್ನಾಗಿ ಮಾಡಿಕೊಂಡರೆ, ಯಾವ ಅಮೇರಿಕನ್‌ರನ್ನಾದರೂ ಹಿಂದೆ ಹಾಕಬಲ್ಲೆ!

ಅಮೇರಿಕನ್ ಪ್ರಾಧ್ಯಾಪಕರಿಗೆ ತಮ್ಮ ವಿದ್ಯಾರ್ಥಿಯು ಮೆಚ್ಚಿಗೆಯಾದರೆ, ಸಕಲ ರೀತಿಯಿಂದ ಸಹಾಯ ಮಾಡಲು ಸಿದ್ಧರಿರುತ್ತಾರೆ. ಅಪ್ರಾಮಾಣಿಕ ವಿದ್ಯಾರ್ಥಿಗಳನ್ನು ಕಂಡರೆ ಅವರಿಗೆ ಆಗದು! ನೀನು ಅಲ್ಲಿಗೆ ಹೋದ ಬಳಿಕ ಅವರ ಸಾಧನೆಗೆ ಏನು ಕಾರಣ? ಎಂದು ಅರಿತಿದ್ದರಿಂದ ಸಂತೋಷವಾಗಿದೆ. ನಮ್ಮಲ್ಲಿರುವ ಕೊರತೆಗಳನ್ನು ಅರಿತು ಶಿಸ್ತಿನ ಜೀವನ ನಡೆಸಲಾರಂಭಿಸಿದರೆ, ಜೀವನದಲ್ಲಿ ಏನೆಲ್ಲ ಸಾಧಿಸಬಹುದು, ಎಂದು ಯತ್ನಿಸಿದಾಗಲೇ ಅರಿಯಬೇಕು. ನಮ್ಮ ಮತ್ತು ನಿನ್ನ ಪರಿಚಿತರ ನಿರೀಕ್ಷೆಯಂತೆ ಜೀವನದಲ್ಲಿ ಏನೆಲ್ಲ ಸಾಧಿಸಲಿರುವಿ! ಎಂದು ನಂಬಿದ್ದೇನೆ. ಅದಕ್ಕೆ ಅನುಗುಣವಾಗಿ, ನಿರ್ವ್ಯಸನಿಗಳಾದ ಗೋಪಾಲ್, ಕಾರ್ತಿಕ್, ಶ್ರೀಧರರಂತಹ ಸಹವಾಸಿಗಳು ಸಿಕ್ಕಿದ್ದು

ನಮ್ಮೆಲ್ಲರ ಪುಣ್ಯ ಎಂದುಕೊಂಡಿದ್ದೇನೆ. ಭೆಟ್ಟಿಯಾದವರೆಲ್ಲ ನಿನ್ನ ಪ್ರಗತಿಯ ಬಗ್ಗೆ ವಿಚಾರಿಸುವವರೇ! ಮುಂಬಯಿಯ ಶೆಣ್ವಿ ಬಂಧುಗಳು, ಗಂಗಾಧರ ನಾಯ್ಕ ಇವರಿಂದ ಪತ್ರಗಳು ಬಂದಿವೆ. ನೀನು ಅಮೇರಿಕೆಗೆ ಹೋಗಿರುವ ವಿಚಾರ ಸಂಬಂಧಿಕರಿಂದ ತಿಳಿಯಿತಂತೆ. ತಮ್ಮ ಆನಂದವನ್ನು ವ್ಯಕ್ತಪಡಿಸಲು ಬರೆದಿದ್ದರು. ತಂದೆಯಂತೆ ಮಗನೂ ಯಶಸ್ಸನ್ನು ತನ್ನ ಜೀವನದ ಆಧಾರಸ್ತಂಭವನ್ನು ಮಾಡಿಕೊಳ್ಳಲಿ! ಎಂದು ಗಂಗಾಧರನು ಆಶಾವಾದವನ್ನು ವ್ಯಕ್ತಪಡಿಸಿದ್ದಾನೆ.

ಅಮೇರಿಕೆಯಲ್ಲಿ ಆರೋಗ್ಯವಾಗಿ ಇರುವದು ಅತಿ ಮುಖ್ಯ. ಇಲ್ಲದಿದ್ದರೆ ಡಾಕ್ಟರರಿಗೆ ಕೊಡಬೇಕಾದ ಫೀಸ್‌ಗೆ ಕೊನೆಮೊದಲು ಇರುವದಿಲ್ಲ. ಹಲ್ಲು ಚಿಕಿತ್ಸೆ, ಬಾಣಂತನಗಳಂತಹವು ಅಂತೂ ಭಾರೀ ದುಬಾರಿ! ಅಂತೆಯೇ ಇವುಗಳಿಗಾಗಿ ಬೇರೆಯೇ ವಿಮೆ ತೆಗೆಯಬೇಕಾಗುತ್ತದೆ. ಈಗ ಕಾಣಿಸಿಕೊಂಡಿರುವ ನಿನ್ನ ಹಲ್ಲು ನೋವು ತನ್ನಷ್ಟಕ್ಕೆ ಕಡಿಮೆ ಆದರೆ ಉತ್ತಮ. ಇಲ್ಲವಾದರೆ ಮುಂಜಾನೆ ಒಂದು, ಸಂಜೆಗೆ ಒಂದರಂತೆ ಎರಡು ISOPRIM FORTE ಅಥವಾ ಅವಕ್ಕೆ ಸರಿಸಮಾನ ಅಲ್ಲಿ ಸಿಗುವ ಮಾತ್ರೆಗಳನ್ನು ತೆಗೆದುಕೊಳ್ಳುವದು. Corner Medical Stores ಅಮೇರಿಕೆಯಲ್ಲಿ ತುಂಬ ಸಾಮಾನ್ಯ. ಅಲ್ಲಿ ಅರೆ ಅರಿತ ಡಾಕ್ಟರ್ ಇದ್ದೇ ಇರುತ್ತಾರೆ. ಅವರು ಎಲ್ಲ ಕಾಯಿಲೆಗಳಿಗೆ ಔಷಧ, ಮಾತ್ರೆಗಳನ್ನು ಕೊಡುತ್ತಾರೆ. ಕೈ-ಕಾಲುಗಳಲ್ಲಿ ತೀವ್ರ ನೋವು ಕಾಣಿಸಿಕೊಂಡರೆ, Brufen-200 ಮಾತ್ರೆಗಳಲ್ಲಿ ಒಂದೆರಡನ್ನು ತೆಗೆದುಕೊಳ್ಳುವದು. ಬೇರಾವ ಔಷಧಿಗಳ ಅವಶ್ಯಕತೆ ಇದ್ದರೆ ತಿಳಿಸು. ಅವುಗಳ ಸಾಮಾನ್ಯ ಹೆಸರುಗಳನ್ನು ತಿಳಿದುಕೊಂಡು ಬರೆಯುತ್ತೇನೆ.

ನಾನು ಮೊನ್ನೆ ಹೊನ್ನಾವರಕ್ಕೆ ಹೋದಾಗ ಡಾ. ಗಜಾನಿಂದ ಸವಿವರವಾಗಿ ಪರೀಕ್ಷಿಸಿಕೊಂಡೆ. ರಕ್ತ ಒತ್ತಡ ಅತ್ಯಲ್ಪ ಪ್ರಮಾಣದಲ್ಲಿ ಕಾಣಿಸಿಕೊಂಡಿದೆ. ತೂಕ ಕಡಿಮೆಮಾಡಿಕೊಂಡರೆ ಇನ್ನೂ ಆರೋಗ್ಯ ಸುಧಾರಿಸಬಹುದು ಎಂದು ಹೇಳಿದ. ಬಾಯಿಯ ಚಪಲದ ಕರಿದ ಪದಾರ್ಥಗಳು, ಸಕ್ಕರೆ, ನನಗೆ ಇಷ್ಟವಿದ್ದ ಉಪ್ಪಿನಕಾಯಿ ಮೊದಲಾದವೆಲ್ಲ ಅತಿ ಕಡಿಮೆ ಪ್ರಮಾಣದಲ್ಲಿ ಸೇವಿಸಲಾರಂಭಿಸಿದ್ದೇನೆ. ತೂಕ ಕಡಿಮೆಯಾಗಿದೆ. ತುಳಸಿದಾಸನಿಗೂ ತೂಕ ಕಡಿಮೆ ಮಾಡಿಕೊಳ್ಳಲು ಹೇಳಿದ್ದು ಅವನು ಈ ದಿಸೆಯಲ್ಲಿ ಪ್ರಯತ್ನಶೀಲನಾಗಿದ್ದಾನೆ!

ನೀನು ಗೆಳೆಯರೊಂದಿಗೆ ನೆರೆಯ ರಾಜ್ಯದಲ್ಲಿ ಪ್ರವಾಸಮಾಡಿದ ಸಾಹಸಗಳ ವಿವರಗಳು ತಿಳಿದವು. ಜೀವನದಲ್ಲಿ ಸಾಹಸಿ ಆಗಬೇಕು ನಿಜ. ಆದರೆ ನಮ್ಮ ವೈಯಕ್ತಿಕ ಸುರಕ್ಷತೆಯನ್ನು ಅಲಕ್ಷಿಸುವಂತಿಲ್ಲ. ಕೈಕಾಲು ಮುರಿದುಕೊಂಡು ಮೂಲೆಗುಂಪಾದರೆ, ಸಾಹಸದಿಂದ ಸಿಕ್ಕ ಸಂತೋಷದ ನೂರುಪಟ್ಟು ಹೆಚ್ಚು ಜಿಗುಪ್ಸೆ, ನೋವುಗಳನ್ನು ಜೀವನದ ಉದ್ದಕ್ಕೂ ಅನುಭವಿಸಬೇಕಾಗುತ್ತದೆ. ನಿನಗೆ ಕೈತುಂಬ ಸಂಬಳ ತರುವ ನೌಕರಿ ಸಿಕ್ಕಬಳಿಕ ಇಂಥ ಸಾಹಸಗಳಿಗೆ ಇನ್ನೂ ರೆಕ್ಕೆಗಳು ಮೂಡುತ್ತವೆ. ಆದರೆ ತಾಳ್ಮೆಯಿಂದ, ಈ ಪ್ರವಾಸ/ಸಾಹಸ ಅತ್ಯವಶ್ಯವೇ? ಎಂದು ಯೋಚಿಸಿ ನಿರ್ಣಯ ಕೈಕೊಳ್ಳುವದು ಅತಿ ಮುಖ್ಯ. ನೀನು ಮುಂದೆ ಕಾರು, ಹೊಚ್ಚ ಹೊಸ ಕಾರು ಕೊಳ್ಳುವ

ಬಗ್ಗೆ ನನಗೆ ಅನುಮಾನವೇ ಇಲ್ಲ. ಆದರೆ ಕಾರನ್ನು ವಿಮಾನದಂತೆ ಓಡಿಸದೇ ನಿಯಂತ್ರಣದಲ್ಲಿ ಇಟ್ಟುಕೊಂಡೇ, ಜಾಗರೂಕತೆಯಿಂದ ನಡೆಸಬೇಕು. ಡಾ.---- ನು, ಮೋಟರ ಸಾಯ್ಕಲ್ಲನ್ನು ಹೆಲಿಕಾಪ್ಟರಿನಂತೆ ಓಡಿಸಿ ಅಪಘಾತಕ್ಕೆ ಈಡಾಗಿ ಈಗ ಎಲ್ಲ ತರದ ನೋವನ್ನು ಅನುಭವಿಸುತ್ತಿದ್ದಾನೆ. ಕುಟುಂಬದವರನ್ನೂ ಸಂಕಟಕ್ಕೆ ಒಳಪಡಿಸಿದ್ದಾನೆ.

ನಿನ್ನೆ ಸಂಜೆ ಟೆಂಪೆದ ನಿನ್ನ ಸ್ನೇಹಿತ ಕಿರಣ್ ಮತ್ತು ಅಭಿಲಾಷ್ ಮನೆಗೆ ಬಂದಿದ್ದರು. ಅವರನ್ನು ಕಂಡು ನೀನು ಕಳಿಸಿದ ಕಿರುಗಾಣಿಕೆಗಳನ್ನು ನೋಡಿ, ಜ್ಯೋತ್ಸ್ನಾಳಿಗೆ ಉಕ್ಕಿ ಬಂದ ಸಂತೋಷ ಹೇಳತೀರದು! ಅವನಿಗೆ ಅನೇಕಾನೇಕ ಪ್ರಶ್ನೆ ಕೇಳಿ ನಿನ್ನ ಯೋಗಕ್ಷೇಮ ವಿಚಾರಿಸಿಕೊಂಡಳು. ''ನಿನಗೆ ಭಾರತದಿಂದ, ಅದೂ ಮನೆಯಿಂದ ಬಹಳಷ್ಟು ಪತ್ರಗಳು ಬರುತ್ತವೆ. ಜೊತೆಯವರಿಗೆಲ್ಲ ವಿಕಾಸನ ಮೇಲೆ ಹೊಟ್ಟೆಕಿಚ್ಚು! ಎಂದು ಕಿರಣ್ ಹೇಳಿದ. ಪತ್ರ ಬರೆಯುವದರಲ್ಲಿ ಮತ್ತು ಪಡೆಯುವದರಲ್ಲಿ ಇರುವ ಆನಂದ ಎಂತಹದೆಂಬುದು, ವಾರಕ್ಕೊಮ್ಮೆಯೋ ತಿಂಗಳಿಗೊಮ್ಮೆಯೋ ಫೋನ ಮಾಡುವ ಅಥವಾ ಪಡೆಯುವ ರೂಢಿಮಾಡಿಕೊಂಡವರಿಗೆ ಹೇಗೆ ಅರಿವಾಗಬೇಕು? ನೀನು ಬರೆದ ಎಲ್ಲ ಪತ್ರಗಳನ್ನು ಕಾದಿಡುವದಲ್ಲದೇ ಇನ್ನಿತರರಿಗೆ, ಬರೆದವನ್ನು ಅದೇ ಕವರಿನಲ್ಲಿಟ್ಟುವನ್ನು ಝೆರೊಕ್ಸ ಪ್ರತಿ ಮಾಡಿಸಿ ಇಡುತ್ತಿದ್ದೇನೆ. ಯಾಕಂದರೆ, ಬಾಬಾ, ಮಾಲಿ, ಪ್ರದೀಪರಿಗೆಲ್ಲ ಬರೆದ ಪತ್ರಗಳು ಕೆಲಕಾಲದ ಬಳಿಕ ಅವರ ಹತ್ತಿರ ಇರುತ್ತವೆಂದು ಖಂಡಿತವಾಗಿ ಹೇಳಲಾಗುವದಿಲ್ಲ! ನಿನ್ನ ಪತ್ರಗಳನ್ನು ಓದಿದವರೆಲ್ಲ ಅಪ್ಪ-ಅಮ್ಮನಂತೆ ನೀನೂ ಒಬ್ಬ ಬರಹಗಾರನಾಗುತ್ತಿ! ಎಂದು ನಂಬಿದ್ದಾರೆ.

ನಿನ್ನ ಪತ್ರದಿಂದ ಇಲ್ಲಿಯಂತೆಯೇ ಅಮೇರಿಕೆಯಲ್ಲಿಯೂ ಬೆಲೆಗಳು ಗಗನಕ್ಕೆ ಏರಿದ್ದನ್ನು ಕಂಡುಕೊಂಡೆ. ನಾನು ಅಲ್ಲಿ ಏರೋಗ್ರಾಮಿಗೆ ಹನ್ನೊಂದು ಸೆಂಟ್ ಕೊಟ್ಟರೆ ಈಗ ಅದಕ್ಕೆ ಮೂವತ್ತೊಂಬತ್ತು ಸೆಂಟ್ ಆಗಿವೆ. ಜಿನಸಿ ಸಾಮಾನುಗಳೂ ದುಬಾರಿಯಾಗಿವೆ ಎಂದು ನೀನಿಟ್ಟ ಸಾಮಾನಿನ ಖರೀದಿಯ ಚೀಟಿ ನೋಡಿ ಅರಿವಾಯಿತು. ಅದರಲ್ಲಿ ಮೂಲಂಗಿ, ಗಾಜರ, ಸವತೆಕಾಯಿಗಳಿಗೂ ಇರುವ ಬೆಲೆ ನೋಡಿ ನಗುಬಂದಿತು. ಅವುಗಳು ಇಲ್ಲಿ ಅತಿ ಅಗ್ಗವಾಗಿದ್ದರಿಂದ ನಿನಗೆ ಅವು ಎಳ್ಳಷ್ಟು ಇಷ್ಟವಿರುತ್ತಿರಲಿಲ್ಲ! ಇಂದಿಗೂ ರೂಪಾಯಿಗೆ ನಾಲ್ಕು ಸೌತೆಕಾಯಿ, ಬಾಳೆಹಣ್ಣು ಹಾಗೂ ಪೇರಲ ಹಣ್ಣುಗಳನ್ನು ತರುತ್ತಿರುತ್ತೇನೆ. ನಿನ್ನ ಸಂಗಡಿಗರಲ್ಲಿ ಒಬ್ಬಿಬ್ಬರು ಶಾಕಾಹಾರಿಗಳಿದ್ದರೂ ಅಡಿಗೆ ಮಾಡುವದು ಕಷ್ಟಕ್ಕೆ ಇಟ್ಟುಕೊಳ್ಳುತ್ತದೆ. ಸ್ವಲ್ಪ ಮೊಟ್ಟೆ, ಮೀನು, ಮಾಂಸದ ಸೇವನೆಯನ್ನು ಎಲ್ಲರೂ ರೂಢಿಸಿಕೊಂಡರೆ ಸಕಲರಿಗೂ ಸಹಾಯವಾಗುತ್ತಿತ್ತು. ಅಮೇರಿಕೆ, ಮಾಂಸಾಹಾರ ಅಗ್ಗವಾಗಿ ಸಿಗುವ ನಾಡು ಅಲ್ಲವೇ? ಅಂಥಲ್ಲಿ ಸಹ ಆನಂದಮೋಹನನ ಮೀನಿನ ಶಾಕಾಹಾರ ಹಾಗೂ ರಘುವಿಯ 'ಕೋಷರ್' ಮಾಂಸದ ರೂಢಿಗಳಿಂದ ನಮಗೆಷ್ಟು ತೊಂದರೆಯಾಗುತ್ತಿತ್ತು ಎಂದು ಹೇಳಿದ್ದೂ ನೆನಪಿರಬೇಕಲ್ಲವೇ? ಅಮೇರಿಕೆಯಲ್ಲಿ ಸೇವೆ (ಸರ್ವಿಸ್) ಗಳಿಗೆ ವಿಪರೀತ ಬೆಲೆ. ದುಡ್ಡೇ ದೊಡ್ಡಪ್ಪ. ಆದ್ದರಿಂದ ಎಲ್ಲಾ ವಿಧದಲ್ಲೂ ಮಿತವ್ಯಯವನ್ನು

ರೂಢಿಸಿಕೊಳ್ಳುವದು ಬಲು ಮುಖ್ಯ! ಸಿದ್ಧ ಆಹಾರ (canned food) ಅಗ್ಗವೂ, ಬೇಕಾದ ರುಚಿಯದೂ, ವೇಳೆ ಉಳಿತಾಯದ್ದೂ ಇರುವದರಿಂದ ಅದನ್ನು ರೂಢಿಸಿಕೊಂಡರೆ ನೆಟ್ಟಗೆ.

◆ ◆ ◆

೨. ನಾ, ನೀ, ಅರಿತ ಅಮೇರಿಕ

ನಿನ್ನ ೧೮-೨-೯೯೧ರ ಪತ್ರ, ಸತತ ಐವತ್ತು ದಿನ ಪ್ರವಾಸ ಮಾಡಿ ನಿನ್ನೆ ಬಂದು ಮುಟ್ಟಿತು! ಅಮೇರಿಕೆಯ ಜೀವನದ ಏರಿಳಿತಗಳನ್ನು ನೀನು ಒಂದಿಷ್ಟೂ ಅಳುಕದೇ ಎದುರಿಸುತ್ತಿರುವದರಿಂದ, ಹೃದಯ ತುಂಬಿಬಂದಿತು. ಜ್ಯೋತ್ಸ್ನಾಳ ಕಣ್ಣೂ ತೇವವಾದವು. ಇಂಥ ಮಗನನ್ನು ಪಡೆದದ್ದಕ್ಕೆ ಅಭಿಮಾನವೆನಿಸದೇ ಇದ್ದೀತೇ? ನನ್ನ ಮಟ್ಟಿಗೆ ಜೀವನದಲ್ಲಿ ಸುಖ-ದುಃಖಗಳನ್ನು ಏಕಪ್ರಕಾರವಾಗಿ ನೋಡುವವನೇ ಆತ್ಮವಂತ. ತನ್ನ ಕೊರತೆಗಳನ್ನು ಅರಿತು ತಿದ್ದಿಕೊಳ್ಳುವವನೇ ಆತ್ಮವಂತ, ಜ್ಞಾನಾರ್ಜನೆಗೆ ಸಿಕ್ಕ ಅವಕಾಶಗಳನ್ನು ಸದುಪಯೋಗ ಮಾಡಿಕೊಳ್ಳುವವನೇ ಆತ್ಮವಂತ. ಕೇವಲ ಊಟ-ಉಪಚಾರ, ವಿರಾಮ, ನಿದ್ರೆಗಳಿಂದ ತೃಪ್ತಿಪಡುವ ಜನಸಾಮಾನ್ಯರಿಗಿಂತ ನೀನು ಮೇಲಿನ ಸ್ತರದಲ್ಲಿ ಇದ್ದುದರಿಂದ ಅತೀವ ಸಂತೋಷವಾಯಿತು. ಜೀವನದಲ್ಲಿಯ ಈ ಸಾಧನೆ ಅನೇಕರಿಗೆ ಅರ್ಥವಾಗುವದೇ ಇಲ್ಲ. ಸೃಜನಶೀಲ ಚಟುವಟಿಕೆಗಳಿಂದ ಸಿಗುವ ತೃಪ್ತಿ ಬೇರೆ ಯಾವುದರಿಂದಲೂ ಪಡೆಯುವದು ಅಸಾಧ್ಯವೆಂದು ಅನುಭವದಿಂದ ಹೇಳಬಲ್ಲೆ. ಕಳೆದ ಆರು ತಿಂಗಳಲ್ಲಿ ನಿನ್ನ ಪರಿಶ್ರಮ ಸಾಧನೆಗಳು ಅಸಾಮಾನ್ಯವಾಗಿವೆ.

ದೊಡ್ಡ ಹುದ್ದೆ ಲಪಟಾಯಿಸಿ, ಬರುವ ಕೈತುಂಬ ಸಂಬಳವನ್ನು ಐಶಾರಾಮದ ಜೀವನಕ್ಕೆ ಖರ್ಚುಮಾಡಿ, ವಿವಿಧ ಕ್ಲಬ್‌ಗಳ ಸದಸ್ಯನಾಗಿ 'ಸಾಮಾಜಿಕ' ಚಟುವಟಿಕೆಗಳಲ್ಲಿ ಮೆರೆದಾಡುವದು ಜೀವನದ ಗುರಿ ಅಲ್ಲವೇ ಅಲ್ಲ. ಆ ಮಹಾನ್ ದೇಶದ ಕೆಲವು ಉತ್ತಮಾಂಶಗಳನ್ನು ನೀನು ಕಂಡುಕೊಂಡಿದ್ದಿ. ಅದರಂತೆ ಜೀವನ ನಡೆಸುತ್ತಿರುವಿ. ನಮ್ಮ ಅಭಿನಂದನೆಗಳನ್ನು ಸ್ವೀಕರಿಸು.

ಮೊಲೆಕ್ಯುಲರ್, ಬಾಯೋಫಿಜಿಕ್ಸ ಡಿಪಾರ್ಟಮೆಂಟಿನ ವೈಜ್ಞಾನಿಕ ಛಾಯಾಚಿತ್ರಕಾರನೊಂದಿಗೆ ಒಳ್ಳೆಯ ಪರಿಚಯ ಬೆಳೆಸಿಕೊಂಡಿರುವಿ, ಎಂದು ತಿಳಿಯಿತು. ಸಂತೋಷವಾಗಿದೆ. ಬಿಡುವು ಸಿಕ್ಕಾಗ ಅವನ ಕಸುಬಿನ ಗುಟ್ಟುಗಳನ್ನು ಅರಿತುಕೋ. ಅವನು ಎಂಥ ಫಿಲ್ಮ್ ಹಾಗೂ ಪೇಪರ್ ಬಳಸುತ್ತಾನೆ? ಡೆವೆಲಪರ್‌ಗಳು ಯಾವವು? ಮೊದಲಾದ ವಿವರಗಳನ್ನು ಬರೆದು ಇಟ್ಟುಕೋ. ಜೀವನದಲ್ಲಿ ಯಾವ ಅನುಭವ, ಎಂದು ನೆರವಿಗೆ ಬಂದೀತು, ಎಂದು ಹೇಳಲು ಸಾಧ್ಯವಿಲ್ಲ. ನನ್ನ ಛಾಯಾಚಿತ್ರ ಗ್ರಹಣದ ಆಸಕ್ತಿಯೇ ನನ್ನ ವೃತ್ತಿಯಾಗಬಹುದು, ಎಂದು ನಾನೆಂದೂ ನಂಬಿರಲಿಲ್ಲ!

ನೀನು ಉತ್ತರ ಕೆರೋಲಿನಕ್ಕೆ ಹೋಗುವ ಕಾರ್ಯಕ್ರಮ ರದ್ದು ಮಾಡಿದ್ದರಿಂದ ನೆಮ್ಮದಿಯಾಯಿತು. ಮಳೆ, ಗಾಳಿ, ಗುಡುಗು, ಮಿಂಚುಗಳಿಗೆ ಬೆದರದೇ ಮುನ್ನುಗ್ಗುವ ನಿನ್ನ ಪ್ರವೃತ್ತಿಗೆ ಇದು ಅಸಾಮಾನ್ಯ ನಿರ್ಧಾರ ಎನಿಸಿತು. ಹವಾಮಾನ ಉತ್ತಮವಿದ್ದಾಗ, ಜೇಬು ತುಂಬ ಹಣವಿದ್ದಾಗ ಉತ್ತರ ಕೆರೋಲಿನ, ವಾಶಿಂಗ್ಟನ್, ಮಾಯಾಮಿಗಳಿಗೆ ಹೋಗುವ ಸಾಧ್ಯತೆ ಇದ್ದೇ ಇದೆ. ಅಮೇರಿಕೆಯಂತಹ ದೇಶದಲ್ಲಿ ಅವಕಾಶಗಳಿಗೆ ಏನೇನೂ ಕೊರತೆ ಇಲ್ಲ. ಕಾಯುತ್ತಿರಬೇಕು, ಅಷ್ಟೆ?

ನಿನ್ನ ಪತ್ರದಲ್ಲಿ ಅಲ್ಲಿಯ ಕೆಲ ಭಾರತೀಯರ ವರ್ತನೆಯ ಬಗ್ಗೆ ಬರೆದಿರುವಿ. 'ನಾನೂ ಅಮೇರಿಕೆಗೆ ಹೋಗಿದ್ದೆ' ಪುಸ್ತಕದಲ್ಲಿ 'ಅಮೇರಿಕೆಯಲ್ಲಿ ಭಾರತೀಯರು' ಎನ್ನುವ ಅಧ್ಯಾಯವನ್ನು ಸೇರಿಸಿದ್ದೇನೆ. ಇಂಥವರ ಹಲವಾರು ವಿಚಾರಗಳನ್ನು ಅಲ್ಲಿ ಹೊರಗೆಡವಿದ್ದೇನೆ, ಕಾಲು ಶತಮಾನದ ಹಿಂದೆಯ ನನ್ನ ಅನುಭವಗಳ ಪಡಿನೆಳಲನ್ನು ನೀನು ಈಗಲೂ ಅಲ್ಲಿ ಕಾಣುತ್ತಿರುವದನ್ನು ಓದಿ ಸಂತೋಷವಾಯಿತು. ಇಂದು ಅಮೇರಿಕೆಯ ಕನಸು ಕಾಣುವ, ಕಾಣದ ಯುವ ಪೀಳಿಗೆಯ ಬೇಡಿಕೆಗಳಿಗೆ ಕೊನೆಮೊದಲೇ ಇಲ್ಲ, ಅವರಿಗೆ ಭಾರತದ ಸವಲತ್ತುಗಳು, ಅಮೇರಿಕೆಯಲ್ಲಿ ಬೇಕು. ಅಮೇರಿಕೆಯ ಹಣಗಳಿಕೆ, ಭಾರತದಲ್ಲಿ ಬೇಕು. ಇದು ಹೇಗೆ ಸಾಧ್ಯ?

ಈ ಹಿಂದಿನ ಪತ್ರದಲ್ಲಿ ನಿನ್ನ ಖರ್ಚಿಗೆ ಬೇಕಾಗುವ ಹಣವನ್ನು ಇಲ್ಲಿಂದಲೇ ಕಳಿಸುತ್ತೇನೆ, ಎಂದು ಬರೆದಿದ್ದೆ. ನೀನು ಈಗ ವಿಶ್ವವಿದ್ಯಾಲಯ ಬದಲಿಸಿದ್ದಿ. ಆದ್ದರಿಂದ ವಿದೇಶೀ ವಿನಿಮಯ ಪಡೆಯಲು ನಿನ್ನ ಈಗಿನ ವಿಶ್ವವಿದ್ಯಾಲಯದಿಂದ ಕಾಗದ ಪತ್ರಗಳನ್ನು ಕಳಿಸು. ನೀನು ಅಲ್ಲಿ ಉತ್ತಮ ಶಿಕ್ಷಣ ಪಡೆದು, ಒಳ್ಳೇ ಗ್ರೇಡುಗಳನ್ನು ನಿನ್ನವನ್ನಾಗಿ ಮಾಡಿಕೊಳ್ಳುವದು ಮುಖ್ಯವೇ ಹೊರತು ಅಲ್ಲಿ ಅಮೇರಿಕನ್‌ರೊಡನೆ ಸ್ಪರ್ಧಿಸಿ ಹಣ ಗಳಿಸುವದು ಆಗಲಿ, ಅರೆಹೊಟ್ಟೆ ಉಣ್ಣುವದಾಗಲಿ, ಸರಿಯಲ್ಲ. ಛಾಯಾಗ್ರಹಣ ಮತ್ತು ಅಡಿಗೆಗಳನ್ನು ನೀನು ಅಮೇರಿಕೆಗೆ ಹೋಗಿ ಕಲಿಯಬೇಕಾಯಿತು! ಎಂದು ನೆನಪಿಸಿಕೊಂಡಾಗ ನಗು ಬಂದಿತು.

ಮುಂದೇನು ಮಾಡಬೇಕು? ಎಂಬ ಬಗ್ಗೆ ನೀನು ಒಂದು ನಿರ್ಧಾರಕ್ಕೆ ಬಂದದ್ದು ಒಳ್ಳೆಯದಾಯಿತು. ನಿನಗೆ ಡಾಕ್ಟರೇಟು ಮಾಡಲು ಸಕಲ ಸೌಲಭ್ಯಗಳು ಸಿಗುವಂತಿದ್ದರೆ, ಶಿಕ್ಷಣವನ್ನು ಮುಂದುವರಿಸು. ಇದಕ್ಕಾಗಿ ಮೂರು ನಾಲ್ಕು ವರ್ಷಗಳಾದರೂ ಬೇಕೇಬೇಕು, ಎಂದು ನಿನಗೆ ತಿಳಿದಿರಬಹುದು. ಅನಂತರ ಒಂದೆರಡು ವರ್ಷಗಳ ಮಟ್ಟಿಗೆ ಅನುಭವಕ್ಕಾಗಿ ನೌಕರಿ ಮಾಡಬಹುದು. ಇದೆಲ್ಲ ಹಣಸಂಪಾದನೆಗೆ ಖಂಡಿತವಾಗಿ ಇರಲೇ ಕೂಡದು! ಹೆಚ್ಚೆಚ್ಚು ಕಾಲ ಅಮೇರಿಕೆಯಲ್ಲಿ ಇದ್ದು ಆ ಬಳಿಕ ಇಲ್ಲಿ ಹಿಂದಿರುಗಿ ಬಂದರೆ, ಹೊಂದಾಣಿಕೆ ಹೆಚ್ಚೆಚ್ಚು ತೊಂದರೆದಾಯಕವಾಗುತ್ತದೆ. ಆಪತ್ತಿಗೆ ಆಗುವಂತೆ ಹಣದ ಉಳಿತಾಯದ ಕಡೆಗೆ ಹೆಚ್ಚಿನ ಲಕ್ಷ್ಯ ಪೂರೈಸಬೇಕು. ಹಣಬೇಕು, ಎಂದಾಗ ಸಾಲ ಮಾಡುವದಾಗಲಿ, ಕ್ರೆಡಿಟ್ ಕಾರ್ಡ ಬಳಸುವದಾಗಲಿ ವಿಹಿತವಲ್ಲ.

ನೀನು ಅಮೇರಿಕೆಗೆ ಹೊರಟು ಸರಿಯಾಗಿ ಒಂದು ವರ್ಷ ಕಳೆಯಿತು. ಈ ಅವಧಿಯಲ್ಲಿ ನೀನು ಜೀವನದ ಅನೇಕ ಮುಖಗಳನ್ನು ಅರಿತು ಅದರಿಂದ ಜಾಣನಾದದ್ದು ಒಂದು ಮಹಾಸಾಧನೆ. ವಿದ್ಯಾಭ್ಯಾಸದ ಪ್ರಗತಿಯಂತೂ ಎಲ್ಲರಿಗೆ ಸಂತೋಷ ಕೊಟ್ಟಿದೆ.

ಒಂದು ವಾರದ ಹಿಂದೆ ಡಾ. ಎಸ್. ಎಲ್. ಭೈರಪ್ಪನವರು ಮನೆಗೆ ಬಂದಿದ್ದರು. ಸ್ವಇಚ್ಛೆಯಿಂದ ನಿವೃತ್ತರಾಗಲು ನಿರ್ಧರಿಸಿದ್ದಾರೆ. 'ವಿಕಾಸನೂ ನಿಮ್ಮಂತೆಯೇ ಬರೆಯುವದರಲ್ಲಿ ಆಸಕ್ತಿ ತಳೆದಿದ್ದಾನೆಯೇ?' ಎಂದು ವಿಚಾರಿಸಿದರು. 'ಅವನು ಮನಸ್ಸು

ಮಾಡಿದರೆ ಕನ್ನಡದಲ್ಲಿ ಅಷ್ಟೆ ಅಲ್ಲ, ಇಂಗ್ಲಿಷಿನಲ್ಲಿಯೂ ಉತ್ತಮ ಬರಹಗಾರನಾಗಬಹುದು. ಆದರೆ ಅವನಿಗೆ ಇನ್ನೂ ಜೀವನದಲ್ಲಿ ಏನು ಸಾಧಿಸಬೇಕು? ಎಂಬ ಗುರಿ ಇದ್ದಂತೆ ಅನಿಸುವದಿಲ್ಲ, ನಾನು ಕಂಡಂತೆ!' ಎಂದು ಉತ್ತರಿಸಿದೆ. ತಾವು ಜೀವನದಲ್ಲಿ ಏನು ಸಾಧಿಸಬೇಕು ಎಂದು ಕಟ್ಟುನಿಟ್ಟಾಗಿ ನಿರ್ಧರಿಸಲಾಗದವರು ಬೆಂಡು ಕಟ್ಟಿಗೆಯಂತೆ ಗಾಳಿ ಬೀಸಿದಲ್ಲಿ, ತೆರೆಗಳು ಹರಿದಲ್ಲಿ ಮುಳುಗುವದು, ತೇಲುವದು ಸಾಮಾನ್ಯ. ನಾನು ನೋಡಿದ ಬಹುಸಂಖ್ಯಾತ ಭಾರತೀಯರು ಇಂಥವರೇ! ಹೀಗಾಗಿ ಅಮೇರಿಕೆಯಲ್ಲೇ ಉಳಿದುಬಿಡುತ್ತಾರೆ. ನಿನ್ನ .... ಸ್ನೇಹಿತನೂ ಇದೇ ವರ್ಗಕ್ಕೆ ಸೇರಿದವನೆನಿಸಿತು. ಹಾ! ಹೂ! ಎನ್ನುವಷ್ಟರಲ್ಲಿ ಅಮೇರಿಕೆಯ ಎಂ. ಎಸ್. ಮುಗಿದು ಹೋಗುತ್ತದೆ. ಮುಂದೇನು? ಎಂದು ತಿಳಿಯದೇ ಸಿಕ್ಕ ಸಟರ್ ಪಟರ್ ನೌಕರಿಗೆ ಸೇರಿಕೊಳ್ಳಬೇಕಾಗುತ್ತದೆ. ಯೋಚಿಸು!

'ಅಮೇರಿಕೆಯಲ್ಲಿ ಹಜಾಮತಿ' ಎಂದು ನೀನೂ ಒಂದು ಲೇಖನವನ್ನು ಬರೆದಿರುವಿ ಎಂದು ತಿಳಿದು ಸಂತೋಷವಾಯಿತು. ಅಲ್ಲಿ ಹಜಾಮತಿ ಅತಿ ದುಬಾರಿಯಾಗಿರುವದರಲ್ಲಿ ಎರಡು ಮಾತಿಲ್ಲ. ಆದರೆ ನೀವುಗಳೆಲ್ಲ ಹಿಪ್ಪಿಗಳಾಗಿ ಓಡಾಡುವದಕ್ಕಿಂತ ಗೆಳೆಯರೆಲ್ಲ ಸೇರಿ, ಈ ಕೆಲಸವನ್ನು ಕರಗತ ಮಾಡಿಕೊಳ್ಳುವದು ಲೇಸಲ್ಲವೇ? ಹೆಚ್ಚು ಕಡಿಮೆಯಾದರೆ ಅಲ್ಲಿಯವರು, ಇಲ್ಲಿಯವರಂತೆ ಗೇಲಿ ಮಾಡುವಷ್ಟು 'ಕಗ್ಗ' ಅಲ್ಲ! ಎಲ್ಲರ ಅನುಭವಗಳೂ ವಿದ್ಯಾರ್ಥಿದೆಸೆಯಲ್ಲಿ ಒಂದೇ ಆಗಿರುತ್ತವೆ. ಸ್ಯಾರೆಕ್ಯೂಸ್‌ನಲ್ಲಿ ಮುಖರ್ಜಿ ನನಗೆ ಹಜಾಮತಿ ಮಾಡಿ, ಒಂದು ಪ್ಯಾಕೆಟ್ ಸಿಗರೇಟು ಪಡೆಯುತ್ತಿದ್ದ. ಸಿಯಾಟಲ್‌ಗೆ ಹೋದಾಗ ಬಾಬನ್ ನಾಡಕರ್ಣಿ, ನಾನು, ಪರಸ್ಪರ ಹಜಾಮತಿ ನೆರವೇರಿಸಿದ್ದೆವು! ನೀನು ಇದಾಗಲೇ ಬಾಬಾ (ನಿಮ್ಮಜ್ಜ)ರ ತಲೆಯ ಮೇಲೆ ಸಾಕಷ್ಟು ಕೈ ಓಡಿಸಿಯೇ ಇದ್ದಿ. ಈಗ ಗೆಳೆಯರ ಕ್ರಾಪಿನ ಮೇಲೂ ಕೈಯಾಡಿಸುವಷ್ಟು ಕತ್ತರಿಚಳಕ ನಿನಗೆ ಸಾಧಿಸಿದೆ, ಎಂದು ತೋರುತ್ತದೆ. ಇದರಿಂದ ಹಣದ ಉಳಿತಾಯ, ವೇಳೆಯ ಉಳಿತಾಯ, ಗೆಳೆಯರ ಚಕ್ಕಂದದ ಜೊತೆಗೆ ಮುಖದ ಒಪ್ಪಂದ (ಒಪ್ಪಾದ ಅಂದ!)ವೂ ಕೈಗೂಡುತ್ತದೆ ಎಂಬುದು ಅನುಭವದ ಮಾತು.

ಇದೀಗ ನಿನ್ನ ಫೋನು ಬಂದಿತ್ತು, ನಿನಗೆ ಶಿಷ್ಯವೇತನ ಸಿಕ್ಕಿದೆ ಎಂದು ತಿಳಿದು ಅತೀವ ಆನಂದವಾಯಿತು. ಇದು ಕೇವಲ ಧನಸಹಾಯವಷ್ಟೇ ಆಗಿರದೇ, ಶಿಕ್ಷಣದಲ್ಲಿ ಪಡೆದ ಯಶಸ್ಸನ್ನು ಸಾರುತ್ತದೆ. ಆದ್ದರಿಂದ ನಮಗೆಲ್ಲ ಅಭಿಮಾನದ ಸಂಗತಿಯೂ ಆಗಿದೆ. ಈ ಹಣಕಾಸಿನ ಸಮಸ್ಯೆ ಪರಿಹಾರವಾಗಿರುವದರಿಂದ ಸಕಲ ಸಮಯವನ್ನು ಓದಿಗೆ ಮೀಸಲಿಡುತ್ತಿಯಲ್ಲವೇ? ಪ್ರತಿ ಎರಡು ವಾರಗಳಿಗೊಮ್ಮೆ ಬರುವ ಹಣವೆಲ್ಲವನ್ನೂ ಖರ್ಚುಮಾಡದೇ, ಕೊಂಚವಾದರೂ ಉಳಿತಾಯ ಮಾಡಿದರೆ, ಮುಂಬರುವ ದಿನಗಳಲ್ಲಿ ನೆರವಾಗುವದು. ಲಕ್ಷ್ಮಿಗೆ ಸಲ್ಲಬೇಕಾದ ಗೌರವವನ್ನು ತೋರಿಸಿದಾಗಲೇ ಅವಳು ಒಲಿದು ತನ್ನ ಸೋದರಿ, ಸರಸ್ವತಿಗೆ ನಿಮ್ಮನ್ನು ಶಿಫಾರಸು ಮಾಡುತ್ತಾಳೆ!

'ವಿಕಾಸನು ಸರ್ವಸಾಧಾರಣ ಹುಡುಗರಿಗಿಂತ ಬೇರೆ!' ಎಂಬ ನನ್ನ ಮಾತಿನಲ್ಲಿ, ನಿಮ್ಮಮ್ಮನಿಗೆ ವಿಶ್ವಾಸ ಮೂಡಲಾರಂಭಿಸಿದೆ! ಏಕೆಂದರೆ ಬಾಬಾರಿಗೆ ನೀನು ಬರೆದ ಎರಡೂ ಪತ್ರ ಅವಳು ಓದಿದ್ದಾಳೆ. ಬಾಬಾರ ಆನಂದ, ಅಭಿಮಾನಗಳನ್ನು ನೋಡಿಯೇ ಅರಿಯಬೇಕು. ತಾನು ಅವನಿಗೆ ಇಂಗ್ಲಿಷ್ ಓದಿಸಲಿಲ್ಲ. ಅವನು ಶಬ್ದಕೋಶದಿಂದ ಶಬ್ದಗಳನ್ನು ತೆಗೆಯಲು ಬೇಸರಿಸುತ್ತಿದ್ದ. ಇಷ್ಟಾಗಿಯೂ ಸೊಗಸಾದ ಇಂಗ್ಲಿಷಿನಲ್ಲಿ ಹೇಗೆ ಬರೆಯುತ್ತಾನೆ? ಎಂದು ಅವರಿಗೆ ಅಚ್ಚರಿ! ಜ್ಯೋತ್ಸ್ನಾ, ಸಂದರ್ಭ ಸಿಕ್ಕಾಗಲೆಲ್ಲ ಮಗನಿಗೆ ಕನ್ನಡ ಮಾಧ್ಯಮದಲ್ಲಿ ಓದಿಸಿದ್ದು. ಆದರೂ ಅವನಿಗೆ ಇಂಗ್ಲಿಷಿನಲ್ಲಿ ಪರಿಣತಿ ಸಾಧಿಸಿದ್ದು, ತಪ್ಪದೇ ಸಾರುತ್ತಿರುತ್ತಾಳೆ.

◆ ◆ ◆

೩. ವಿವಾಹವರ್ಧಂತಿ

ನಿನ್ನ ಅಪ್ಪ-ಅಮ್ಮರು ವಿವಾಹವಾಗಿ ೨೩-೨-೯೧ಕ್ಕೆ ಸರಿಯಾಗಿ ಕಾಲುಶತಮಾನ ಜಾರಿಕೊಳ್ಳುತ್ತದೆ. ಹಲವರಿಗೆ ತಾವು ಹುಟ್ಟಿಬಂದದ್ದು, ವಿವಾಹ ಮಾಡಿಕೊಂಡದ್ದು ಮುಂತಾದವು ಮಹಾಸಾಧನೆಗಳಾಗಿರುವದರಿಂದ ದೊಡ್ಡ ಪ್ರಮಾಣದಲ್ಲಿ ಅವನ್ನು ಆಚರಿಸಲು ಹಣದ ಹೊಳೆ ಹರಿಸುತ್ತಾರೆ. ನಮಗೆ ಮಾತ್ರ ಹುಟ್ಟಿದ ಬಳಿಕ, ವಿವಾಹವಾದ ಬಳಿಕ ಕೈಗೊಂಡು ಪೂರ್ಣವಾದ ಕೆಲಸಗಳೇ ಅತಿ ಮುಖ್ಯ ಎಂದು ಬೇರೆ ಹೇಳಬೇಕೇ? ನಮ್ಮಿಬ್ಬರಿಗೆ ಅಭಿಮಾನದ ಸಂಗತಿ ಎಂದರೆ ನಿನ್ನಂತಹ ಪುತ್ರನನ್ನು ಪಡೆದದ್ದು ಇದಕ್ಕಾಗಿ ಎಷ್ಟು ಜನ ನಮ್ಮ ಬಗ್ಗೆ ಗೌರವ ತಾಳಿದ್ದಾರೆ, ಅಸೂಯೆ ಪಡುತ್ತಾರೆ. ಎಂದು ಹೇಳಲಿಕ್ಕಿಲ್ಲ! ನಮ್ಮ ಆತ್ಮೀಯರು ಪರಿಚಿತರು ಭೇಟಿಯಾದಾಗ ಅಥವಾ ಪತ್ರಮುಖೇನ ನಿನ್ನ ಪ್ರಗತಿಯ ಬಗ್ಗೆ ವಿಚಾರಿಸದೇ ಇರುವದಿಲ್ಲ. ಅವನು ಯಶಸ್ಸಿನಲ್ಲಿ ಅಪ್ಪ-ಅಮ್ಮನನ್ನು ಮೀರಿಸುತ್ತಾನೆ! ಎಂದು ಭವಿಷ್ಯ ನುಡಿಯುವವರೂ ಇದ್ದಾರೆ.

ಜ್ಯೋತ್ಸ್ನಾಳನ್ನು ವರಿಸಲು ನಾನು ಪೂರ್ವಜನ್ಮದಲ್ಲಿ ಪುಣ್ಯಮಾಡಿಕೊಂಡು ಬಂದಿರಬೇಕು, ಎಂದುಕೊಂಡಿದ್ದೇನೆ. ಅವಳು ಸ್ವತಃ ಬೆಳೆಯುತ್ತ ಬಂದು, ನನ್ನ ಆಸಕ್ತಿಗಳನ್ನೂ ಬೆಳೆಸಿಕೊಳ್ಳಲು ಸರ್ವ ರೀತಿಯಿಂದ ನೆರವಾದಳು. ಅಮೇರಿಕೆಯ ಡಾಕ್ಟರೇಟು ಪಡೆದು, ಕೀಟಶಾಸ್ತ್ರಜ್ಞ ಅನಿಸಿಕೊಂಡದ್ದು ನನ್ನ ಸಾಧನೆಯಾದರೆ, ಬರಹಗಾರನಾದದ್ದು, ಛಾಯಾಚಿತ್ರಕಾರನಾದದ್ದು ಅವಳಿಂದಲೇ! ಎಂದರೆ ಅತಿಶಯೋಕ್ತಿಯಲ್ಲ. ನಮ್ಮಲ್ಲಿ ಹುದುಗಿಕೊಂಡಿರುವ ಕ್ರಿಯಾಶಕ್ತಿ ಹೊರಹೊಮ್ಮಬೇಕಾದರೆ, ಅದಕ್ಕೆ ಪ್ರೋತ್ಸಾಹ ಅತ್ಯವಶ್ಯ. ಕಳೆದ ಕಾಲುಶತಮಾನದಲ್ಲಿ ನಾನು ಬರೆದದ್ದೆಲ್ಲವನ್ನೂ ಚಿಕಿತ್ಸಕವಾಗಿ ಓದಿನೋಡಿ, ಮಾಡಿದ ಅಕ್ಷರದೋಷಗಳನ್ನೆಲ್ಲ ತಿದ್ದಿ, ಮುದ್ರಣಕ್ಕೆ ಪ್ರತಿಮಾಡಿ ಕೊಟ್ಟವಳು ಜ್ಯೋತ್ಸ್ನಾ. ನನ್ನ ಪತ್ನಿ, ಇಷ್ಟೊಂದು ಆಸಕ್ತಿ ವಹಿಸದಿದ್ದರೆ, ನಾನು ಲೇಖಕನೆಂದು ಹೆಸರು ಪಡೆಯಲು ಸಾಧ್ಯವೇ ಇರಲಿಲ್ಲ. ಆಕಾಶವಾಣಿಯ ಉಚ್ಚ ಅಧಿಕಾರಿಗೆ ತನ್ನ ಪತಿ, ಛಾಯಾಚಿತ್ರಕಾರ ಎಂದು ಹೇಳಿಕೊಳ್ಳುವದು ಅಭಿಮಾನದ ಸಂಗತಿ ಏನಲ್ಲ. ಆದರೆ ಜ್ಯೋತ್ಸ್ನಾಳ ಸಹಾಯ, ಸಹಕಾರಗಳಿಂದ ವೈಜ್ಞಾನಿಕ ಛಾಯಾಗ್ರಹಣವನ್ನು ಕಳೆದ ಎರಡು ದಶಕಗಳಿಂದ ನಡೆಯಿಸಿಕೊಂಡು ಬರುವಂತಾಗಿದೆ. ಪತಿಯ ಧನಸಂಪಾದನೆಯೇ ಅವನ ಯಶಸ್ಸಿನ ಅಳತೆಗೋಲು! ಎಂದು ನಿರ್ಧರಿಸುವ ಪತ್ನಿಯನ್ನು ಹೊಂದಿದ್ದರೆ ಎಷ್ಟೊಂದು ಕಷ್ಟವಾಗುತ್ತಿತ್ತು, ಎಂದು ನೀನೇ ಊಹಿಸು.

ಈ ಪತ್ರ, ನಾವಿಬ್ಬರೂ ನಮ್ಮ ವಿವಾಹದ ಕಾಲು ಶತಮಾನೋತ್ಸವವನ್ನು ಆಚರಿಸುವತ್ತ ಪ್ರಥಮ ಹೆಜ್ಜೆಯಾಗಿದೆ. ನಮ್ಮಿಬ್ಬರಿಗೂ ಅಭಿನಂದನೆಗಳನ್ನು ಪಡೆಯುತ್ತಿರುವದಾಗಲಿ, ಹೊಟೇಲಿನಲ್ಲಿ ಸತ್ಕಾರ ಮಾಡಿ। ಮಾಡಿಸಿಕೊಳ್ಳುವದಾಗಲಿ, ಉಡುಗೊರೆಗಳ ವಿನಿಮಯದಲ್ಲಾಗಲಿ ವಿಶ್ವಾಸವಿಲ್ಲ. ಅಂತೆಯೇ ಬೇರೆಯೇ ರೀತಿಯಲ್ಲಿ

ಆಚರಿಸಲಿದ್ದೇವೆ. ನಮ್ಮ ವಿವಾಹದ ಆಮಂತ್ರಣ ಪತ್ರಿಕೆಗಳಲ್ಲಿ ಉಳಿದವನ್ನು ಕಾಯ್ದಿರಿಸಿದ್ದೆ. ಅಂದು ಕಳಿಸದೇ ಇದ್ದವರಿಗೆ ಒಂದೊಂದು ಪ್ರತಿ ಕಳಿಸಿ, ಕಾಲುಶತಮಾನದ ಹಿಂದೆ ನಮ್ಮ ವಿವಾಹಕ್ಕೆ ಆಮಂತ್ರಿಸಲಾಗದ್ದಕ್ಕೆ ಕ್ಷಮೆ ಇರಲಿ! ಎಂದು ತಿಳಿಸುವ ಯೋಜನೆ ಇದೆ. ಇಂತಹ ಆಮಂತ್ರಣ ಪತ್ರಿಕೆ ನಿನ್ನಂತಹ ಕಿರಿಯರಿಗೆ ಕಳಿಸಿದರೆ ಎಷ್ಟು ತಮಾಷೆಯಾಗಿರುತ್ತದೆ ಅಲ್ಲವೇ?

ನಮ್ಮ ವಿವಾಹಕಾಲದಲ್ಲಿ, ಅನೇಕರು ಅಭಿನಂದನಾ ಪತ್ರಗಳನ್ನು ಬರೆದಿದ್ದರು. ಅವುಗಳನ್ನು ಕಾದಿರಿಸಿದ್ದೇನೆ. ಈಗ ಅವುಗಳ ಝುರಾಕ್ಸ್ ಪ್ರತಿ ತೆಗೆದು, ಅವುಗಳಿಗಾಗಿ ಕೃತಜ್ಞತೆ ತಿಳಿಸಬೇಕೆಂದಿದ್ದೇನೆ. ನಮ್ಮ ಆತ್ಮೀಯರಲ್ಲದೇ ಧಾರವಾಡದ ವಾಚನಾಲಯ ತಜ್ಞ ಕೆ. ಎಸ್. ದೇಶಪಾಂಡೆ, ಮಾಜಿ ದೂರದರ್ಶನ ಡಾಯರೆಕ್ಟರ್ ಕಮಲಾಪುರ, ಕವಿ ರಾಘವೇಂದ್ರ ಇಟಗಿ, ಹಿರಿಯ ಸಾಹಿತಿ ಎನ್ಕೆ, ಮೊದಲಾದವರಿದ್ದಾರೆ. ಕೊನೆಯ ಇಬ್ಬರು ಕವನರೂಪದಿಂದ ಆಶೀರ್ವಾದ ಕಳಿಸಿದ್ದರು. ಅವುಗಳ ಬಗ್ಗೆ ಅವರಿಗೇ ನೆನಪು ಇದೆಯೋ ಇಲ್ಲವೊ! ಅಂತೆಯೇ ಅವನ್ನು ಝುರೊಕ್ಸಮಾಡಿ, ಕಳುಹಿಸಿ ಕೃತಜ್ಞತೆ ತಿಳಿಸಲಿದ್ದೇನೆ. ಇನ್ನೂ ಒಂದು ವಿಚಾರವಿದೆ. ನಮ್ಮ ಮೂವರ ಸಾಧನೆಯ ಪಟ ಒಂದನ್ನು ಮಾಡಿ ಅದರ ಝುರೊಕ್ಸ ಪ್ರತಿಗಳನ್ನು ಆಪ್ತೇಷ್ಟರಿಗೆ ಕಳಿಸುವದು. ನಿನ್ನ ಬಿ.ಇ.ಡಿಗ್ರಿ. ಸೀನಿಯರ್ ಮೆನೇಜರ್ ಆಗಿದ್ದ ವಿಸಿಟಿಂಗ್ ಕಾರ್ಡು, ಆಮ್ಮಾರ ಡಾಕ್ಟರೇಟ ಪದವಿ, ಆಕಾಡಮಿ ಪ್ರಶಸ್ತಿ ಪತ್ರ. ಪ್ರಕಟಿತ ಪುಸ್ತಕಗಳ ಮುಖಪುಟ, ಹಾಗೂ ನನ್ನ ಹತ್ತು ಪುಸ್ತಕಗಳ ಮುಖಪುಟಗಳ ಅಚ್ಚು, ಇವನ್ನು ನೋಡಿದ ಕೆಲವರಿಗಾದರೂ ಹೊಟ್ಟೆಕಿಚ್ಚು ಬರುವಂತೆ ಆಗಬಹುದಲ್ಲವೇ? ಆದರೆ ಇದನ್ನು ಮಾಡಲು ತುಂಬ ವಿರಾಮ ಬೇಕು. ಸದ್ಯಕ್ಕೆ 'ತರಂಗ'ಕ್ಕೆ 'ರಾಣಿ ರೂಪಮತಿಯ ಮಾಂಡು' ಬರೆದು ಕಳಿಸಬೇಕಾಗಿದೆ. ಆಮ್ಮಾರು 'ಸುಧಾ'ಕ್ಕೆ ಹಾಸ್ಯಲೇಖ ಬರೆಯಬೇಕಾಗಿದೆ. ಎಮ್.ಕೆ. ಇಂದಿರಾ ಅವರ ಅಭಿನಂದನಾಗ್ರಂಥಕ್ಕೆ ಇನ್ನೊಂದು ಲೇಖ ಬರೆದು ಜೇಗನೇ ಕಳಿಸಬೇಕಾಗಿದೆ. ಅಂತೂ ಕೈತುಂಬ ಕೆಲಸ!

◆ ◆ ◆

೪. ನಾನು ನೀನಾಗಿದ್ದರೆ

ನೀನು ನಿನ್ನ ಭವಿಷ್ಯದ ಕುರಿತಾಗಿ, ಗಂಭೀರವಾಗಿ ವಿಚಾರ ಮಾಡತೊಡಗಿರುವಿ, ಎಂದು ಅರಿತು ನೆಮ್ಮದಿ ಆಯಿತು. ನಾವು ಯತ್ನಿಸಿದ್ದೆಲ್ಲ ಕಾರ್ಯಗತವಾಗುವದಿಲ್ಲ, ಎಂದು ಗೊತ್ತು. ಆದರೆ ಯತ್ನಿಸದೇ ಇರುವದು ಅಪರಾಧ. ನಾನು ನಿನ್ನ ಸ್ಥಾನದಲ್ಲಿದ್ದರೆ, (ಅಮೇರಿಕನ್ನರು ಹೇಳುವ ವಿಧಾನ! If I were you, ಎಂದು ಹಿರಿಯರು ಹೇಳುವದು ರೂಢಿ) ಏನೇನು ಮಾಡುತ್ತಿದ್ದೆ, ಎಂದು ಬರೆಯಲೇ? ೧) ಬರುವ ಸಂಬಳದಲ್ಲಿ ನೆಮ್ಮದಿಯಾಗಿರಲು ಬೇಕಾಗುವಷ್ಟು ಹಣವನ್ನು ಖರ್ಚಿಗೆ ಇಟ್ಟುಕೊಂಡು, ಉಳಿದ ಹಣವನ್ನು ಸಲ್ಲಬೇಕಾದವರಿಗೆ ಸಂದಾಯ ಮಾಡುತ್ತಿದ್ದೆ. ೨) ನೆರವು ಪಡೆದವರ ಋಣಮುಕ್ತನಾದ ನಂತರ, ಆ ಹಣವನ್ನು ಉಳಿತಾಯ ಖಾತೆಗೆ ಜಮಾ ಮಾಡಿಸುತ್ತಿದ್ದೆ. ೩) ಹಣದ ಜೊತೆ ಅಮೇರಿಕೆಯಲ್ಲಿ ಕ್ವಚಿತ್ತಾಗಿ ಲಭ್ಯವಿರುವ ರಜೆಯನ್ನು ಶೇಖರಿಸುತ್ತಿದ್ದೆ. ೪) ಕಷ್ಟಪಟ್ಟು ಉಳಿತಾಯ ಮಾಡಿದ ಹಣವನ್ನು, ಅಮೇರಿಕೆಯನ್ನು ಚೆನ್ನಾಗಿ ಅರಿತ ಬಾಪ್ಪಾನನ್ನು ಅಮೇರಿಕೆಯ ಪುನರ್ದರ್ಶನ ಮಾಡಿಸಲು ವ್ಯಯಿಸುವ ಬದಲಾಗಿ ಒಂದೆರಡು ವರ್ಷಗಳ ಬಳಿಕ ನಾನೇ ಭಾರತ-ಭೇಟಿಗಾಗಿ ಬಳಸುತ್ತಿದ್ದೆ. ೫) ಅದಕ್ಕೂ ಮೊದಲು ನನ್ನನ್ನು ಸಂಭಾಳಿಸಿಕೊಂಡು ಹೋಗಬಹುದಾದಂತಹ ಕನ್ಯೆಯ ಪತ್ತೆ ಹಚ್ಚಲು ಮಾತಾ-ಪಿತರಿಗೆ ವಿನಂತಿಸಿಕೊಳ್ಳುತ್ತಿದ್ದೆ. ೬) ರಜಾದಿನಗಳನ್ನು ಅಲ್ಲಿ-ಇಲ್ಲಿ ಓಡಾಡಿ ಕಳೆಯುವ ಬದಲಾಗಿ ತಂದೆ-ತಾಯಿಯ ಜೊತೆಯಲ್ಲಿ ಕಳೆಯಲು ಯತ್ನಿಸುತ್ತಿದ್ದೆ. ೭) ಅವರು ಆರಿಸಿದ ಕನ್ಯೆ ನನಗೆ ಒಪ್ಪಿಗೆಯಾದಲ್ಲಿ ವಿವಾಹವನ್ನು ಮಾಡಿಕೊಂಡು ಪತ್ನಿ ಸಮೇತ ಅಮೇರಿಕೆಗೆ ಹಿಂದಿರುಗುತ್ತಿದ್ದೆ. ೮) ಪತ್ನಿಯು ಅಮೇರಿಕೆಯ ಜೀವನಕ್ಕೆ ಸಂಪೂರ್ಣವಾಗಿ ಮಾರು ಹೋಗುವ ಮುನ್ನ, ಬೆಂಗಳೂರಿನಲ್ಲಿ ಅಮೇರಿಕನ್ ಕಂಪನಿಗಳು ತೆರೆದ ಶಾಖೆಗಳಲ್ಲಿ ನೌಕರಿಗಾಗಿ ಯತ್ನಿಸುತ್ತಿದ್ದೆ. ೯) ಆ ಯತ್ನದಲ್ಲಿ ಸಫಲವಾಗದಿದ್ದರೆ, ಭಾರತೀಯ ಕಂಪನಿ, ಅಥವಾ ವಿದ್ಯಾಸಂಸ್ಥೆಗಳಲ್ಲಿ ನೌಕರಿ ದೊರಕಿಸುತ್ತಿದ್ದೆ. ೧೦) ಜೀವನದಲ್ಲಿ ನೆಮ್ಮದಿ ಪಡೆಯಲು, ಬರುವ ಸಂಬಳವೇ ಅಳತೆಗೋಲು ಆಗಿರದ್ದರಿಂದ, ತಿಂಗಳ ಖರ್ಚು ತೂಗಿಸಿಕೊಂಡು ಹೋಗುವ ಸಂಬಳಕ್ಕೂ ಒಪ್ಪಿಕೊಂಡು ಬಿಡುತ್ತಿದ್ದೆ. ೧೧) ಹೀಗೆ ಮಾಡುವದರಿಂದ ನನ್ನ ಜೀವನದ ಆಸಕ್ತಿಗಳಾದ ಛಾಯಾಗ್ರಹಣ, ಚಿತ್ರಗಾರಿಕೆ, ಬರವಣಿಗೆ ಹಾಗೂ ಪ್ರವಾಸಕ್ಕೆ ಬೇಕಾಗುವ ಸಮಯ ನನ್ನದಾಗುತ್ತಿತ್ತು. ೧೨) ತಂದೆ-ತಾಯಿ, ಯಾವುದೇ ಜವಾಬ್ದಾರಿಯನ್ನು ನನ್ನ ಮೇಲೆ ಹೊರಿಸದೇ ಇರುವದರಿಂದ ಅವು ಯಾವವನ್ನೂ ಈಡೇರಿಸಲು ನನ್ನ ಜೀವನ ಸವೆಸಬೇಕಾಗಿರಲಿಲ್ಲ! ೧೩) ಬದಲಾಗಿ ತಾಯ್ತಂದೆಗಳು ನಿರಂಬಳ ಜೀವನಕ್ಕಾಗಿ ಮಾಡುತ್ತಿರುವ ಪ್ರಯತ್ನಗಳನ್ನು ಪರಿಶೀಲಿಸುತ್ತಿದ್ದೆ. ಧಾರವಾಡದಲ್ಲಿ ಸೈಟು, 'ಕಾಮತ-ಕುಟೀರ' ಕಟ್ಟಿಸಲು ಜಾಗ ಕಾಯ್ದಿರಿಸಿದ್ದನ್ನು ಗಮನಿಸುತ್ತಿದ್ದೆ. ೧೪) ಸಹಪಾಠಿಗಳಲ್ಲಿ, ತಾಯ್ತಂದೆಗಳಿಗಿರುವ ಅನನುಕೂಲ, ಹೊಣೆಗಾರಿಕೆಗಳನ್ನು ನೆನಪಿಸಿಕೊಳ್ಳುತ್ತಿದ್ದೆ. ೧೫) ನನ್ನ ತಾಯ್ತಂದೆಗಳು ವಿವಿಧ ಕಾರಣಗಳಿಗಾಗಿ ಬಾಲ್ಯ,

ಯೌವನಗಳಲ್ಲಿ ಬಹಳ ಕಷ್ಟಪಟ್ಟು ಎಷ್ಟೆಲ್ಲ ಸಾಧಿಸಿದ್ದಾರೆ, ಅಂಥವರಿಗೆ ನೋವಾಗದಂತೆ ನಡೆದುಕೊಳ್ಳಲು ಪ್ರಯತ್ನಿಸುತ್ತಿದ್ದೆ. ೧೬) ಐಹಿಕವಾಗಿ ಅವರಿಬ್ಬರೂ ನನ್ನಿಂದ ಏನೇನೂ ಅಪೇಕ್ಷಿಸುವದಿಲ್ಲ ಎಂದು ನನಗೂ ಗೊತ್ತು! ಅದರಂತೆ ನನ್ನ ಕನಸುಗಳನ್ನು ನನಸು ಮಾಡುವದರಲ್ಲಿ ಅವರೆಂದೂ ಅಡ್ಡಿ-ಆತಂಕಗಳನ್ನು ತಂದೊಡ್ಡುವದಿಲ್ಲವೆಂದು ಗೊತ್ತು! ಆದ್ದರಿಂದ ನನ್ನ ಭವಿಷ್ಯದ ಕುರಿತು ಸ್ಪಷ್ಟವಾದ ಧೋರಣೆ ತಳೆಯುತ್ತೇನೆ. ೧೭) ಅಂತೆಯೇ ೧೯೯೫ರೊಳಗಾಗಿ ಭಾರತದಲ್ಲಿ ಸ್ಥಾಯಿಯಾಗಿ ವಾಸಿಸಲು ನಿರ್ಧರಿಸಿ ಹಿಂದಿರುಗಬೇಕು ಎಂದು ನಿರ್ಧರಿಸಿದ್ದೇನೆ. ೧೮) ಅದಕ್ಕೂ ಪೂರ್ವದಲ್ಲಿ ಅನುಕೂಲ ಮಾಡಿಕೊಂಡು ಅಮ್ಮನನ್ನು ಅಮೇರಿಕೆಗೆ ಬರಮಾಡಿಕೊಂಡು, ಈ ಮಹಾನ್ ದೇಶದ ಸ್ಥೂಲದರ್ಶನವನ್ನು ಮಾಡಿಸಬೇಕೆಂದಿದ್ದೇನೆ. ದೇವರೇ! ನನ್ನ ಸಂಕಲ್ಪವನ್ನು ಈಡೇರಿಸುವ ಶಕ್ತಿ-ಸಾಮರ್ಥ್ಯಗಳನ್ನು ದಯಪಾಲಿಸು.

ಈ ಧಾಟಿಯಲ್ಲಿ ವಿಕಾಸನ ಸ್ಥಳದಲ್ಲಿ ನಾನಿದ್ದರೆ ಯೋಚಿಸುತ್ತಿದ್ದೆ. ರವಿವಾರ (೨೦-೧೨-೧೯೯೨) ನಿನ್ನ ಫೋನು ಬಂದಾಗ ನಾನು ಹೆಚ್ಚು ಮಾತನಾಡಿ, ಬಿಲ್ ಹೆಚ್ಚಿಸುವ ಮನಸ್ಸಾಗಲಿಲ್ಲ. ಅಂತೆಯೇ ಈ ಪತ್ರ.

◆ ◆ ◆

೫. ನಗ್ನ ಸತ್ಯ

ನಿನ್ನ ದೀರ್ಘಪತ್ರ ತಲುಪಿ ಸಂತೋಷವಾಯಿತು. ತಂದೆ-ತಾಯಿಗಳಿಗೆ ಪತ್ರ ಬರೆಯಲು ಸಮಯದ ಅಭಾವವಿಲ್ಲವೆಂದು ತಿಳಿದು ನೆಮ್ಮದಿಯಾಯಿತು. ಇತ್ತೀಚೆಗೆ ನೀನು ಭಾರತಕ್ಕೆ ಬಂದಾಗ, ಇಷ್ಟಾದರೂ ನಮ್ಮೊಂದಿಗೆ ಮಾತನಾಡಿದ್ದರೆ, ನಾವು ಎಷ್ಟೊಂದು ಖುಷಿಪಡುತ್ತಿದ್ದೆವು ಗೊತ್ತೆ? ಆಗ ನೀನು ಆತ್ಮೀಯವಾಗಿ ನಡೆಸಬಹುದಾದ ವಿಚಾರ ವಿಮರ್ಶೆಗೆ ಸಿಗುತ್ತಿರಲಿಲ್ಲ, ಎಂಬುದೇ ನಮ್ಮ ಕೊರಗು. ಪತ್ರಗಳ ಮುಖಾಂತರವಾಗಿಯಾದರೂ ಈ ಕ್ರಿಯೆ ಪ್ರಾರಂಭವಾಗಿದೆಯಲ್ಲ! ಸಂತೋಷ.

ಒಂದಿಲ್ಲೊಂದು ದಿನ ಅಧಿಕಾರಯುತ ನಾಗರಿಕನಾಗಿ ನೀನು ಬಾಳಬೇಕಾಗಿ ಬರುವದರಿಂದ ವಕ್ರವಾಗಿ ವಿಚಾರಮಾಡಿ ಯಾವುದೊಂದು ನಿರ್ಧಾರಕ್ಕೆ ಬರುವ ಅಭ್ಯಾಸವನ್ನು ಬಿಡಬೇಕು. ಇಂಥಹ ವಿಚಾರಗಳು ನಿನ್ನ ಈ ಮತ್ತು ಇದಕ್ಕೂ ಹಿಂದಿನ ಪತ್ರಗಳಲ್ಲಿ ತುಂಬಿ ತುಳುಕುತ್ತವೆ. ಈ ಪತ್ರದಲ್ಲಿಯ ಒಂದೇ ಒಂದು ಉದಾಹರಣೆ ಕೊಡುತ್ತೇನೆ. ನಾನು ಎಂದೂ ನಿನಗಾಗಲಿ ಬೇರೆ ಯಾರಿಗೇ ಆಗಲಿ, ''ಪ್ಲೇಬಾಯ್'' ಪತ್ರಿಕೆ ನೋಡಬಾರದು, ಓದಬಾರದು, ಎಂದು ಹೇಳಲೇ ಇಲ್ಲ! ಕಾಮ ಪ್ರಚೋದನೆ ಮತ್ತು ಸೌಂದರ್ಯ ಪ್ರಜ್ಞೆಗಳಲ್ಲಿಯ ಅಂತರವನ್ನು ಅರಿತುಕೊಂಡಿದ್ದೇನೆ.

ನಾನು ಪ್ರಥಮಬಾರಿಗೆ ಸಾಯರೆಕ್ಯೂಸ್‌ನಲ್ಲಿ ಮೂತ್ರಾಲಯ ಹೊಕ್ಕಾಗ, ಮೂತ್ರವಿಸರ್ಜನೆ ಮಾಡುವದನ್ನೆ ಮರೆತುಬಿಟ್ಟಿದ್ದೆ! ಏಕೆ ಗೊತ್ತೆ? ಅಲ್ಲಿಯ ಗೋಡೆಗಳ ಮೇಲೆಲ್ಲ ಭವ್ಯವಾದ ನಗ್ನಸುಂದರಿಯರ ಚಿತ್ರಗಳನ್ನು ಅಂಟಿಸಿದ್ದರು! ಅಮೇರಿಕೆಯಲ್ಲಿ ವಿದ್ಯಾರ್ಥಿನಿಯರೂ ನಗ್ನ ತರುಣ। ತರುಣಿಯರ ಚಿತ್ರಗಳಿಂದ ತಮ್ಮ ವಾಸಸ್ಥಾನವನ್ನು ಅಲಂಕರಿಸುತ್ತಿರುವದು ನಿನಗೆ ತಿಳಿದಿರಬೇಕು. 'ಪ್ಲೇಬಾಯ್' ಪತ್ರಿಕೆಯನ್ನು ನಾನು ಕೊಳ್ಳುತ್ತಿರಲಿಲ್ಲ. ಆದರೆ ಯಾರಾದರೂ ಸಹಪಾಠಿಗಳು ಹಳೆಯ ಸಂಚಿಕೆಗಳನ್ನು ತಂದುಕೊಟ್ಟಾಗ ಖಂಡಿತ ನೋಡುತ್ತಿದ್ದೆ. ಪಂಡೇಲಾ ಎಂಬ ನನ್ನ ಪರಿಚಿತ, ಸಾಯರೆಕ್ಯೂಸ್ ಬಿಟ್ಟು ಹೋಗುವಾಗ ತಾನು ಕೊಳ್ಳುತ್ತಿದ್ದ ಈ ಪತ್ರಿಕೆಯ ದೊಡ್ಡ ಹೊರೆಯನ್ನೇ ಕೊಟ್ಟಿದ್ದ. ಅವು ತೀರ ಭಾರವಾಗಿದ್ದರಿಂದ ನಾನು ಹಿಂದಿರುಗಿ ಬರುವಾಗ, ತರದೇ ಅಲ್ಲಿಯೇ ಬಿಟ್ಟುಬಂದಿದ್ದೆ.

ನಗ್ನ ಸ್ತ್ರೀಸೌಂದರ್ಯವನ್ನು ಛಾಯಾಚಿತ್ರಗಳಲ್ಲಿ ಸೆರೆ ಹಿಡಿಯಬೇಕೆಂದು ಅನೇಕ ಬಾರಿ ಅನಿಸಿದ್ದಿದೆ. ಆದರೆ ಅದು ನನ್ನಂತಹರಿಗೆ ಏಕೆ, ಅಮೇರಿಕನ್ನರಿಗೂ ಸುಲಭಸಾಧ್ಯವಲ್ಲ ಎಂಬುದು ಎಲ್ಲರಿಗೂ ತಿಳಿದ ವಿಷಯ. ರೂಪದರ್ಶಿಗಳಿಗೆ ದೊಡ್ಡ ಮೊತ್ತವನ್ನು ಫೀ ಎಂದು ತೆರಬೇಕಾಗುತ್ತದೆ. ಹೀಗೆ ಹಣ ತೆರುವದು ಅಸಾಧ್ಯವಾದರೆ ಸ್ನೇಹಿತೆಯನ್ನೋ ಸೋದರಿಯನ್ನೋ, ಪತ್ನಿಯನ್ನೋ ಚಿತ್ರೀಕರಣಕ್ಕೆ ಬಳಸುವ ವಾಡಿಕೆಯಿದೆ. ಮುಖ ತೋರಿಸದೇ ಮೈಮಾಟವನ್ನು ಅಂದವಾಗಿ ಕ್ಲಿಕ್ಕಿಸುವದೇ ಜಾಣ್ಮೆಯಲ್ಲವೇ? ಮದುವೆಯಾದ ಹೊಸದರಲ್ಲಿ ಪತ್ನಿಗೆ ಈ ಸೂಚನೆ ಕೊಟ್ಟಾಗ

ಹಿಂದೆ ಮುಂದೆ ಯೋಚನೆ ಮಾಡಿ ತಿರಸ್ಕರಿಸಿದ್ದೇ ಅಲ್ಲದೇ ರಂಪ ಮಾಡಿದ್ದಳು! ಸೌಂದರ್ಯ ದೃಷ್ಟಿ ಮತ್ತು ಕಾಮುಕದೃಷ್ಟಿಯಲ್ಲಿ ಅಂತರ ಅರಿಯದಿರುವದೇ ನಮ್ಮಲ್ಲಿ ನಗ್ನತೆಯ ಬಗೆಗಿನ ಮೌಢ್ಯಕ್ಕೆ ಕಾರಣವಿರಬಹುದು. ಹೀಗೆ ಯೋಚಿಸುವ ನಾನು, ನಿನಗೆ 'ಪ್ಲೇಬಾಯ್' ಓದಬೇಡ! ಎಂದು ಹೇಳಿದ್ದೇನೆ, ಎಂದರೆ ನಂಬುವದಾದರೂ ಹೇಗೆ?

ನೀನು ಹೊತ್ತು ತಂದ ಸಂಚಿಕೆಗಳನ್ನು ಕಸ್ಟಮ್ಸದವರೆಲ್ಲ ಕಿತ್ತುಕೊಂಡರೇ? ಹಾಗೆ ಮಾಡದಿದ್ದರೆ ನಾನು ಮೊದಲಿನಿಂದ ಕಡೆಯ ತನಕ ಅವನ್ನು ನೋಡುತ್ತಿದ್ದೆ. ಪತ್ನಿಗೂ ತೋರಿಸುತ್ತಿದ್ದೆ. ಹಾಗೂ ಆ ಸಂಚಿಕೆಗಳನ್ನು ಕಾಯ್ದಿರಿಸುತ್ತಿದ್ದೆ. ನಾನು ನಿನಗೆ ಹೇಳಿದ್ದು! ಬರೆದದ್ದು ಬೇರೆಯೇ! ಅಂತಹ ಪತ್ರಿಕೆಗಳು ಸಕಲರಿಗೂ ಆಕರ್ಷಕವಾಗಿದ್ದರಿಂದ ಅಷ್ಟು ದೂರದಿಂದ ಹೊತ್ತು ತಂದರೂ ಅವು ತಮ್ಮ ಗುರಿ ಸೇರದೇ ಇರುವದರಿಂದ ತಾರದಿರುವದೇ ಜಾಣತನ! ಎಂದು ಹೇಳಿದ್ದೆ. ಎರಡನೆಯದಾಗಿ ನಮ್ಮ ಕೆಲ ಸೋಗಿನ ಹಿತಚಿಂತಕರಿರುತ್ತಾರೆ. ಗೋಮುಖ ವ್ಯಾಘ್ರದಂತೆ ಇರುತ್ತಾರೆ. ನೀನು ಇಂಥ ಪತ್ರಿಕೆಗಳನ್ನು ತಂದಿರುವಿ, ಎಂದು ಸ್ವಲ್ಪ ಸುಳಿವು ಸಿಕ್ಕರೆ ಸಾಕು. 'ವಿಕಾಸನು, ಅಮೇರಿಕೆಗೆ ಹೋಗಿ ಸಂಪೂರ್ಣ ಹಾಳಾಗಿ ಹೋಗಿದ್ದಾನೆ' ಎಂದು ಡಂಗುರ ಸಾರಲು ಹಿಂದೆ ಮುಂದೆ ನೋಡುವದಿಲ್ಲ. ಅವರ ಕುಹಕಗಳಿಗೆ ಹೆದರಬೇಕಾಗಿಲ್ಲವಾದರೂ ಮನೆಯ ಮಜ್ಜಿಗೆಯನ್ನು ಈಚಲ ಮರದಡಿ ಯಾಕೆ ಕುಡಿಯಬೇಕು? ಇಷ್ಟೆಲ್ಲ ವಿವರಣೆ ಬರೆದ ನಂತರ ನಾನು ಹೇಳಿದ್ದೇನು? ಮತ್ತು ನೀನು ತಪ್ಪಾಗಿ ಹೇಗೆ ಅರ್ಥಮಾಡಿಕೊಂಡಿ ಎಂಬುದರ ಕಲ್ಪನೆ ಬಂದಿರಬೇಕು, ಎಂದು ತಿಳಿಯಲೇ?

ನೀನು ಬರುವಾಗ ತಂದ ಸಾಮಾನುಗಳಲ್ಲಿ ಒಂದು ಕ್ಯಾಮರಾವನ್ನು ಶುಭಾಗೆ ಕಾಣಿಕೆಯಂದು ಕೊಟ್ಟಿದ್ದಿ ಅಲ್ಲವೇ? ಆ ಕ್ಯಾಮರಾದ 'ಬಾಕಿ ಇತಿಹಾಸ್' ನಿನಗೆ ತಿಳಿದಂತೆ ಇಲ್ಲ. ಶುಭಾಳ ವರ್ಗದವರೆಲ್ಲ ಉಂಚಳ್ಳಿ ಜಲಪಾತ ನೋಡಲು ಹೋಗಿದ್ದರಂತೆ. ಕ್ಯಾಮರಾವನ್ನು ಜೊತೆಗೆ ಒಯ್ಯದಿದ್ದರೆ ಯಾವದೇ ಪಿಕ್‌ನಿಕ್, ಟ್ರಿಪ್‌ಗಳು ಪೂರ್ಣವಾಗುವದುಂಟೆ? ಶುಭಾಳಿಗೆ ಕಾಡು-ಮೇಡು ಅಲೆದು ರೂಢಿಯಿಲ್ಲ. ಜಪ್ಪಿಸಿ ನಡೆಯುವದು ಗೊತ್ತಿಲ್ಲ. ಜಲಪಾತದ ಬಳಿ ಹರಿಯುವ ನೀರಿನಲ್ಲಿ ಬಿದ್ದು ಬಿಟ್ಟಳಂತೆ! ಮೇಲ್ವಿಚಾರಕರು ಕೂಡಲೇ ಕೈ ಹಿಡಿದು ಮೇಲಕ್ಕೆತ್ತಿ ಬಚಾವ್ ಮಾಡಿದರು. ಅವಳೊಂದಿಗೆ ಕ್ಯಾಮರಾ ಕೂಡ ಮುಳುಗಿ ಅಂದಗೇಡಿಯಾಗಿ, ಕೆಲ ಭಾಗಗಳನ್ನು ಕಳೆದುಕೊಂಡು ನಗ್ನ ಭಗ್ನವಾಗಿ ಮೂಲೆಗುಂಪಾಗಿದೆಯಂತೆ! ಹೀಗಾಗಿ ಸೃಷ್ಟಿಸೌಂದರ್ಯವನ್ನು ಸೆರೆಹಿಡಿದಿಡುವ ಅವಳ ಕನಸು ಭಗ್ನವಾಗಿ ಹೋಯಿತೆಂದು ಪತ್ರ ಬಂದಿದೆ.

◆ ◆ ◆

೬. ಕಾವಿಕಲೆ

ಇಂದು ಕರ್ನಾಟಕ ರಾಜ್ಯ ಲಲಿತಕಲಾ ಅಕಾಡಮಿಯ ಪತ್ರ ಬಂದಿದೆ. 'ಕಾವಿಕಲೆ' ಕುರಿತಾಗಿ ಒಂದು ಹಸ್ತಪ್ರತಿಯನ್ನು ಸಿದ್ಧಮಾಡಿಕೊಡುವಂತೆ ವಿನಂತಿಸಿಕೊಂಡಿದ್ದಾರೆ. ಪುಸ್ತಕದಲ್ಲಿ ಐವತ್ತು ಕಪ್ಪು-ಬಿಳುಪು ಹಾಗೂ ಎರಡು ವರ್ಣ ಛಾಯಾಚಿತ್ರಗಳನ್ನು ಸೇರಿಸಲಿದ್ದಾರಂತೆ. ಇದಕ್ಕಾಗಿ ಎರಡು ತಿಂಗಳ ಕಾಲಾವಕಾಶ ಕೊಟ್ಟಿದ್ದಾರಲ್ಲದೇ ಎರಡು ಸಾವಿರ ರೂಪಾಯಿಗಳನ್ನು ಗೌರವಧನವಾಗಿ ಕೊಡಲಿದ್ದಾರಂತೆ. ಚಿತ್ರಗಳಿಗಾಗಿ ಪ್ರತ್ಯೇಕ ಗೌರವಧನ ಕೊಡಲಿದ್ದಾರಂತೆ. ಈ ಹಿಂದೆ ಡಾ. ಅ. ಸುಂದರ ಅವರು, ಪುರಾತತ್ವಶಾಸ್ತ್ರ ವಿಭಾಗದಿಂದ ಇಂತಹ ಪುಸ್ತಕವೊಂದನ್ನು ಪ್ರಕಟಿಸುತ್ತೇನೆಂದು ಹೇಳಿದ್ದರು. ಅದು ಕೈಗೂಡಿರಲಿಲ್ಲ. ನಂತರ ಡಾ. ಶ್ರೀನಿವಾಸ ಹಾವನೂರರೂ ಆಸಕ್ತಿ ತೋರಿಸಿ ಮಾಡಿಸುವವರಿದ್ದರು. ಆದರೆ ಅವರಿಗೆ ಹಣದ ನೆರವು ಸಿಗದೇ ಏನೂ ಮಾಡಲಾಗಲಿಲ್ಲ. ಈಗ ಲಲಿತಕಲಾ ಅಕಾಡಮಿಯವರು, ತಾವಾಗಿಯೇ ಹಸ್ತಪ್ರತಿಯನ್ನು ಕೇಳಿದ್ದರಿಂದ ಸಂತೋಷವಾಗಿದೆ. ಇದಕ್ಕಾಗಿ ಬಹಳ ದುಡಿಯಬೇಕು.

* * *

ಇಷ್ಟುದಿನ ಸತತವಾಗಿ ದುಡಿದದ್ದಕ್ಕೆ ಕೊನೆಗೊಮ್ಮೆ ಕಾವಿಕಲೆ ಕುರಿತಾದ ಹಸ್ತಪ್ರತಿ ತಯಾರಾಗಿದೆ. ಅದರಲ್ಲಿ ಸೇರಿಸಲು ಬೇಕಾಗುವ ಚಿತ್ರಗಳನ್ನು ಸಿದ್ಧಪಡಿಸಬೇಕಾಗಿದೆ. ಎಲ್ಲವೂ ಸುಸೂತ್ರವಾಗಿ ನಡೆದರೆ, ಈ ಮಾರ್ಚ್ ತಿಂಗಳೊಳಗೆ ಆ ಪುಸ್ತಕ ಹೊರಬರಬೇಕು. ಇಂಥ ಪುಸ್ತಕವನ್ನು ಇದಕ್ಕೂ ಮೊದಲು ಯಾರೂ ಬರೆದಿಲ್ಲ. ಮುಂದೆಯೂ ಬರೆಯುವದು ಸಾಧ್ಯವಿಲ್ಲ! ಎಂದು ಹಸ್ತಪ್ರತಿಯನ್ನು ಓದಿದ ಅ.ಲ.ನರಸಿಂಹನ್ ಅವರು ಉದ್ಗರಿಸಿದರು. ಜ್ಯೋತ್ಸ್ನಾಳಂತೂ ತನ್ನ ಪತಿ, ಪ್ರವಾಸಕಥನ, ಪತ್ರಸಾಹಿತ್ಯ, ಪ್ರಾಣಿ ಪ್ರಪಂಚದ ಕುರಿತು ಬರೆಯುವಷ್ಟೇ ಸರಸವಾಗಿ ಕಲೆಯ ಕುರಿತು ಬರೆಯಬಲ್ಲರೆಂದು ಕಂಡುಕೊಂಡು ಜಂಬದಿಂದ ಸಾರುತ್ತಿದ್ದಾಳೆ! ಬಿಡುವಿನ ವೇಳೆಯನ್ನೆಲ್ಲ ಬಳಸಿ, ಮುದ್ರಣಕ್ಕೆ ಹಸ್ತಪ್ರತಿಯನ್ನು ಸಿದ್ಧಮಾಡಿದ್ದಾಳೆ.

ಮಾರ್ಚ್ ತಿಂಗಳ ಮೊದಲವಾರದಲ್ಲಿ ಕರ್ನಾಟಕ ಲಲಿತ ಕಲಾ ಅಕಾಡೆಮಿಯವರು ಹೊನ್ನಾವರದಲ್ಲಿ ವಿಚಾರಗೋಷ್ಠಿಯನ್ನು ಇಟ್ಟುಕೊಂಡಿದ್ದಾರಂತೆ. ಆದ್ದರಿಂದ ಎರಡು ದಿನಗಳ ಮಟ್ಟಿಗೆ ಹೊನ್ನಾವರಕ್ಕೆ ಬಂದು ಕಾವಿ ಚಿತ್ರಗಳು ಇರುವ ಸ್ಥಳಗಳನ್ನು ತೋರಿಸಲು ಸಾಧ್ಯವೇ? ಎಂದು ನನ್ನನ್ನು ವಿಚಾರಿಸಿದ್ದಾರೆ.

'ಕಾವಿಕಲೆ'ಯ ಎರಡನೇ ಪ್ರೂಫ್ ನೋಡಿ ಕೊಡುತ್ತಿದ್ದಂತೆ ೫೫ ಚಿತ್ರಗಳನ್ನು ಮಾಡಿಕೊಟ್ಟಿದ್ದೇನೆ. ಅವು ಸುಂದರವಾಗಿ ಬಂದಿವೆ! ಎಂದು ನೋಡಿದವರೆಲ್ಲ ಮೆಚ್ಚಿಕೊಂಡಿದ್ದಾರೆ. ಪಠ್ಯ ಮತ್ತು ಚಿತ್ರಗಳು ಸೇರಿ ಡೆಮಿ ಆಕಾರದ ೧೧೦ ಪುಟಗಳ ಪುಸ್ತಕವಾಗಬಹುದು ಅನಿಸುತ್ತದೆ. ಈ ತಿಂಗಳ ಕೊನೆಯೊಳಗೆ ಈ ಪುಸ್ತಕ ಬರುವ ಸಾಧ್ಯತೆ ಇದೆ. ಇಷ್ಟು ಬೇಗ ಬೇರೆ ಯಾವ ಪುಸ್ತಕವೂ ಪ್ರಕಟವಾಗಿರಲಿಲ್ಲ. ಅಕಾಡಮಿಯಿಂದ ಸಂದಾಯವಾಗಬೇಕಿದ್ದ ಮೂರು ಸಹಸ್ರರೂಪಾಯಿಗಳ ಚೆಕ್

ಸಹ ಬಂದಾಗಿದೆ. ನಿನಗೂ ಪುಸ್ತಕದ ಒಂದು ಪ್ರತಿಯನ್ನು ಕಳಿಸುವ ವ್ಯವಸ್ಥೆ ಮಾಡುತ್ತೇನೆ. ಅಕಾಡಮಿ ಕೊಡಮಾಡಿದ ಆಮಂತ್ರಣವನ್ನು ಒಪ್ಪಿಕೊಂಡು ಹೊನ್ನಾವರಕ್ಕೆ ಹೋಗಬೇಕೆಂದಿದ್ದೇನೆ. ಅಲ್ಲಿ ಕಾವಿಚಿತ್ರಗಳ ವಿಡಿಯೋ ತೆಗೆಸುವದು ಮುಖ್ಯ ಉದ್ದೇಶವಾಗಿದೆ.

ಈ ಪುಸ್ತಕದ ಅರ್ಧಭಾಗವೆಲ್ಲ ಅಪರೂಪದ ಚಿತ್ರಗಳಿಂದಲೇ ತುಂಬಿ ಹೋಗಿದೆ. ಕೇವಲ ಛಾಯಾಚಿತ್ರಗಳನ್ನು ಪೂರೈಸಿದರೆ, ಮಾಸಿದವುಗಳು ಮುದ್ರಣಕ್ಕೆ ಸರಿಹೋಗುವದಿಲ್ಲವೆಂದು ಅರಿತು ಅವುಗಳನ್ನು ನೆರಳಿನಂತೆ ಕಪ್ಪು-ಬಿಳುಪು ಚಿತ್ರಗಳನ್ನಾಗಿ ಪರಿವರ್ತಿಸಿ ಕೊಟ್ಟಿದ್ದರಿಂದ ಸುಂದರವಾಗಿ ಮೂಡಿ ಬಂದಿವೆ. ಒಂದೇ ಸಾವಿರ ಪ್ರತಿಗಳ ಮುದ್ರಣದ ವೆಚ್ಚ ಇಪ್ಪತ್ತೈದು ಸಹಸ್ರರೂಪಾಯಿಗಳಷ್ಟು ಬಂದರೂ ಪ್ರತಿಯ ಬೆಲೆ ಕೇವಲ ಹದಿನೈದು ರೂಪಾಯಿಗಳು! ಹೀಗಾಗಿ ಜನಸಾಮಾನ್ಯರೂ ಕೊಂಡು ಓದಬಹುದಾಗಿದೆ. ನನಗೆ ಆರು ಪ್ರತಿಗಳನ್ನು ಗೌರವಸೂಚಕವಾಗಿ ಕೊಡಮಾಡಿದ್ದಾರೆ. ಮೊದಲ ಮಾತುಗಳಲ್ಲಿ ಲೇಖಕನನ್ನು ಕುರಿತು ಹೀಗೆ ಬರೆಯಲಾಗಿದೆ. ''ಡಾ. ಕೃಷ್ಣಾನಂದ ಕಾಮತರು ಮೂಲತಃ ಹೊನ್ನಾವರದವರಾಗಿದ್ದು, ಚಿಕ್ಕಂದಿನಿಂದಲೇ ಕಾವಿಕಲೆಯ ಬಗ್ಗೆ ಕುತೂಹಲ ತಾಳಿ, ಆ ಕುರಿತು ವ್ಯಾಪಕವಾಗಿ ಅಧ್ಯಯನ ಹಾಗೂ ಕ್ಷೇತ್ರಕಾರ್ಯಗಳನ್ನು ಮಾಡಿ, ನೂರಾರು ಛಾಯಾಚಿತ್ರ ಹಾಗೂ ವರ್ಣಪಾರದರ್ಶಿಕೆಗಳನ್ನು ತೆಗೆದು ಸಂಗ್ರಹಿಸಿದ್ದಾರೆ. ಪ್ರಾಣಿ-ಪಕ್ಷಿಪ್ರಪಂಚದ ಕುರಿತು ಚಿತ್ರ, ಶಿಲ್ಪ ಕಲೆಯ ಕುರಿತು ಹಲವಾರು ಲೇಖ, ಪುಸ್ತಕಗಳನ್ನು ಬರೆದ ಡಾ. ಕಾಮತರ ಹೆಸರು ಹೆಚ್ಚಾಗಿ ಅವರ ಪ್ರವಾಸ ಸಾಹಿತ್ಯದೊಂದಿಗೆ ತಳಕು ಹಾಕಿಕೊಂಡಿದೆ. ಈಗ ಕಾವಿಕಲೆಯ ಕುರಿತು ಅಚ್ಚುಕಟ್ಟಾಗಿ ಹಸ್ತಪ್ರತಿಯನ್ನು ಮಾಡಿಕೊಟ್ಟಿದ್ದಾರೆ. ....ಈ ಪುಸ್ತಕಕ್ಕಾಗಿಯೇ ನೂರಾರು ಛಾಯಾಚಿತ್ರಗಳನ್ನು ಮುದ್ರಿಸಿಕೊಟ್ಟಿದ್ದಾರೆ. ಅವುಗಳನ್ನು ರೇಖಾಚಿತ್ರಗಳನ್ನಾಗಿಸಿದ್ದು ಅವುಗಳಲ್ಲಿ ಅರವತ್ತಕ್ಕಿಂತ ಹೆಚ್ಚಿನವುಗಳನ್ನು ಪುಸ್ತಕದಲ್ಲಿ ಬಳಸಿಕೊಳ್ಳಲಾಗಿದೆ.''

ಈ ಮೊದಲು ಲಲಿತಕಲಾ ಆಕಾಡಮಿಯವರೇ 'ಚಿತ್ರಕಲಾ ಪ್ರಪಂಚ' ಎಂಬ ಬೃಹತ್ ಗ್ರಂಥವನ್ನು ಪ್ರಕಟಿಸಿದ್ದಾರೆ. ಅದರಲ್ಲಿ ನನ್ನದೊಂದು ಲೇಖವಿದೆ. 'ಹರತಿಸಿರಿ' ಯಲ್ಲಿ ಪ್ರಕಟವಾದ ನನ್ನ ಸೀಬಿಯ ಭಿತ್ತಿ ಚಿತ್ರಗಳು, ಎಂಬುದು. ಇದಕ್ಕಾಗಿ ಗ್ರಂಥದ ಒಂದು ಪ್ರತಿಯನ್ನು ನನಗೆ ಕೊಡುವದಲ್ಲದೇ ನೂರು ರೂಪಾಯಿಗಳ ಗೌರವಧನವನ್ನೂ ಸಲ್ಲಿಸಿದರು. ಈ ಎರಡು ಮಹತ್ವದ ಪ್ರಕಟನೆಗಳಿಂದ ಕಲೆಯ ಕುರಿತು ವ್ಯಾಪಕವಾಗಿ ಬರೆಯಬೇಕು, ಎಂಬ ಹುಮ್ಮಸ ಬಂದಿದೆ. ಛಾಯಾ ಚಿತ್ರಕಾರನು ಬರಹಗಾರನಾಗುವದು, ಬರಹಗಾರನಿಗೆ ಚಿತ್ರಕಲೆಯಲ್ಲಿ ಆಸಕ್ತಿ ಇರುವದು, ವಿರಳ ಅಲ್ಲವೇ? ಈ ಮೂರೂ ಕ್ಷೇತ್ರಗಳಲ್ಲಿ ನನಗಿದ್ದ ಆಸಕ್ತಿಯ ಸಂಪೂರ್ಣ ಲಾಭವನ್ನು ಪಡೆಯಬೇಕೆಂದಿದ್ದೇನೆ.

ಈ ಪುಸ್ತಕ ಓದಿದ ಸುಷಕ್ಕ ತಮ್ಮ ಅನಿಸಿಕೆಯನ್ನು ಹೀಗೆ ತಿಳಿಸಿದ್ದಾರೆ - ಪುಸ್ತಕದ ಹೊದಿಕೆಯ ಮೇಲಿನ ಮುರಳೀಧರನ ಸುಂದರ ಚಿತ್ರ ಮನಸ್ಸನ್ನು ಆಕರ್ಷಿಸಿತು.

ಕಾವಿಕಲೆಯ ಬಗ್ಗೆ ಹೆಚ್ಚಿಗೆ ತಿಳಿದುಕೊಳ್ಳುವ ಕುತೂಹಲವನ್ನು ಕೆರಳಿಸಿತು. ಪುಸ್ತಕದೊಳಗಿನ ಮಾಹಿತಿ, ಚಿತ್ರಗಳಿಂದ ಮನಸ್ಸು ತುಂಬಿತು. ಶ್ರೀ ಕಾಮತ ಅವರು ಈ ಪುಸ್ತಕ ಪ್ರಕಟಿಸುವಲ್ಲಿ ಪಟ್ಟ ಹತ್ತು ವರ್ಷಗಳ ಪರಿಶ್ರಮ ಬೆಟ್ಟದಷ್ಟಿದೆ! ಎಂದು ಅನಿಸದಿರದು. ಈ ಪುರಾತನ ಕಲೆ ಈಗ ಅಲಕ್ಷಿತವಾಗಿ ವಿನಾಶದ ಅಂಚಿನಲ್ಲಿದೆ ಎಂದು ತಿಳಿದು ಅತ್ಯಂತ ಕಳವಳವಾಯಿತು. ಇಂಥ ಅಧ್ಯಯನ ಹಾಗೂ ಸಂಶೋಧನೆಯ ಶ್ರಮದ ಕೆಲಸವನ್ನು ಶ್ರೀ ಕಾಮತರಂಥವರು ಅಲ್ಲದೇ ಇನ್ನಾರು ಮಾಡಿಯಾರು? ಅನಿಸುತ್ತದೆ. ಈ ಪುಸ್ತಕ ಓದಿದ ನಂತರ ನಾವೂ ಹಿಂದಕ್ಕೆ ಸಿರ್ಸಿ, ಬನವಾಸಿ, ಕುಮಟಾದ ದೇವಸ್ಥಾನಗಳಲ್ಲಿ ಕಾವಿಚಿತ್ರಗಳನ್ನು ನೋಡಿದ್ದೇವಾದರೂ, ಅವುಗಳ ಬಗ್ಗೆ ತಿಳಿದುಕೊಳ್ಳುವ ತವಕವನ್ನೇ ಪಡದೇ ಅಲಕ್ಷಿಸಿದ್ದು ನೆನಪಾಗಿ ನಾಚಿಕೆ ಪಡುವಂತೆ ಆಯಿತು. ಕಣ್ಣಿಗೆ ಕಲೆಯ ದೃಷ್ಟಿ ಬೇಕಲ್ಲವೇ?

ಡಾ. ಹಾ. ಮಾ. ನಾಯಕರು 'ತರಂಗ'ದ ಜುಲೈ ೧೧, ೧೯೯೩ರ ಸಂಚಿಕೆಯಲ್ಲಿ ಹೀಗೆ ಬರೆದಿದ್ದಾರೆ. 'ಡಾ. ಕೃಷ್ಣಾನಂದ ಕಾಮತರ ಕಾವಿಕಲೆ, ಕರ್ನಾಟಕದ ಉತ್ತರ ಕರಾವಳಿಯ ಪ್ರದೇಶದಲ್ಲಿ ಪ್ರಚಲಿತವಿರುವ ಒಂದು ಕಲಾಪ್ರಕಾರ, ಕಾವಿಕಲೆಯ ಕುರಿತ ಮೊದಲ ಪುಸ್ತಕ ಇದು. ತುಂಬ ಶ್ರದ್ಧೆ, ಆಸಕ್ತಿ, ಅಧ್ಯಯನಗಳ ಫಲವಾದ ಈ ಪುಸ್ತಕ ಕುತೂಹಲಕಾರಿಯಾಗಿದೆ. ಕಲಾ-ವಿದ್ಯಾರ್ಥಿಗಳಿಗೆ ಅಪರೂಪದ ಆಕರವೆನಿಸುತ್ತದೆ.

ಡಾ. ಬಸವರಾಜ ಸಾದರ ಅವರು, ತಮ್ಮ ಪತ್ರದಲ್ಲಿ - ''ಕಾವಿಕಲೆ, ಹೊಸದಾದ ಕಲಾಜಗತ್ತೊಂದನ್ನು ದರ್ಶಿಸುತ್ತ ಅದೇ ಓದಿಸಿಕೊಂಡು ಹೋಯಿತು. ಕನ್ನಡದಲ್ಲಿ ಬಹುಶಃ ಇನ್ನಾವುದೇ ಭಾಷೆಗಳಲ್ಲೂ, ಈ ಬಗೆಯ ಪುಸ್ತಕ ಇದೇ ಮೊದಲನೆಯದೆನಿಸುತ್ತದೆ. ಇದು ನಿಮ್ಮ ಸಂಶೋಧನ ಪ್ರವಾಸಿ ಪ್ರವೃತ್ತಿಯ ಫಲ. ಕಾವಿ ಜಾನಪದಕಲೆಯ ಪಾರಿಭಾಷಿಕತೆಯೊಂದನ್ನು ಮೊಟ್ಟ ಮೊದಲನೆಯದಾಗಿ ದಾಖಲಿಸಿದ ನೂತನ ಹಾಗೂ ಮೌಲಿಕ ಪ್ರಯತ್ನ ತಮ್ಮದೆಂದು ಖಂಡಿತ ಹೇಳಬೇಕು...''

ಕರ್ನಾಟಕ ಲಲಿತ ಅಕಾಡಮಿಯವರು ಹೊನ್ನಾವರದಲ್ಲಿ ಒಂದು ವಾರದ ಶಿಬಿರವನ್ನು ನಡೆಯಿಸಿದ್ದನ್ನು ಬರೆದಿದ್ದೆನಲ್ಲವೇ? ಅದರ ಸಮಾರೋಪ ಭಾಷಣದಲ್ಲಿ ಅಕಾಡಮಿ ಅಧ್ಯಕ್ಷರಾದ ಶ್ರೀ. ಪಿ. ಆರ್. ತಿಪ್ಪೇಸ್ವಾಮಿ ಅವರು ನಿನ್ನ ಅಪ್ಪನ ಕಲಾಭಿರುಚಿ, ಕಲಾವಿದನ ಕೈಚಳಕಗಳನ್ನು ಪ್ರಶಂಸಿಸಿದರಂತೆ. ಕೇಳಿದೊಡನೆ, ಕಾವಿಕಲೆಯ ಪುಸ್ತಕವೊಂದನ್ನು ಬರೆದುಕೊಟ್ಟದ್ದನ್ನು ಅಭಿಮಾನದಿಂದ ನೆನಸಿಕೊಂಡರಂತೆ. ಸಮಾರಂಭದ ವ್ಯವಸ್ಥಾಪಕರಾಗಿದ್ದ ಶ್ರೀ. ಜಿ. ಪಿ. ನಾಯ್ಕರು ಕೃಷ್ಣಾನಂದ ಕಾಮತರನ್ನು ತುಂಬ ಹೊಗಳಿದರಂತೆ. ಇದೇ ಜಾಡು ಹಿಡಿದು, ಅಧ್ಯಕ್ಷಸ್ಥಾನವನ್ನು ಅಲಂಕರಿಸಿದ ಶಾಸಕರಾದ ರಾಣೆ ಅವರು ಕೂಡ ಕಾಮತರನ್ನು ನೆನಪಿಸಿಕೊಂಡರಂತೆ. ಮೋಜಿನ ಮಾತೆಂದರೆ, ಈ ಮೂವರಲ್ಲಿ ಒಬ್ಬರೂ ನನ್ನನ್ನು ನೋಡಿರಲಿಲ್ಲ! ಅಲ್ಲದೇ ಅದೇ ಸಮಯದಲ್ಲಿ ನಾನು ಹೊನ್ನಾವರದಲ್ಲಿ ಇದ್ದುದನ್ನೂ

ಅರಿತಿರಲಿಲ್ಲ. ಕೆಲವರಂತೂ ಗಜಾನೇ ಕೃಷ್ಣಾನಂದ ಕಾಮತ! ಎಂದು ಭ್ರಮಿಸಿದರಂತೆ. ಇಂದಿನ ದಿನಗಳಲ್ಲಿ ನಾವು ನಾಲ್ವರು ಅಣ್ಣ ತಮ್ಮಂದಿರಲ್ಲಿ ಒಬ್ಬರು, ಇನ್ನೊಬ್ಬರೆಂದು ಭ್ರಮಿಸುವ ಘಟನೆಗಳು ಗಗನಕ್ಕೇರಿವೆ. ಅ. ಲ. ನರಸಿಂಹನ್ ಅವರಿಗೆ ಕಾವಿಚಿತ್ರಗಳನ್ನು ತೋರಿಸಲು ಅವರ್ಸಾ ಅಂಕೋಲಾಗಳಿಗೆ ಹೋದ ಗಜಾನನ್ನು ಅಲ್ಲಿಯ ಶಿಕ್ಷಕಿಯೋರ್ವಳು ಕೃಷ್ಣಾನಂದ ಕಾಮತನೆಂದೇ ಭ್ರಮಿಸಿ, ಮನೆಗೆ ಆಗ್ರಹದಿಂದ ಕರೆದೊಯ್ದು ಚಹ, ತಿಂಡಿ ಕೊಟ್ಟು ಸತ್ಕರಿಸಿದಳಂತೆ!

ಈ ಪುಸ್ತಕದ ಇಂಗ್ಲಿಷ್ ಅನುವಾದ, ಒಂದು ಕಲಾಗ್ರಂಥದ ರೂಪದಲ್ಲಿ ಮುದ್ರಿತವಾಗಬೇಕು, ಎಂದು ಅ. ಲ. ನರಸಿಂಹನ್‌ಗೆ ತುಂಬ ಆಸೆ. ಆದರೆ ಅದಕ್ಕೆ ತಗಲುವ ಖರ್ಚು ಕೇಳಿಯೇ ಬವಳಿಬರಬೇಕು. ಕನಿಷ್ಟ ಐದುಲಕ್ಷ ರೂಪಾಯಿಗಳಾದರೂ ಬೇಕಂತೆ! ಸದ್ಯಕ್ಕೆ ಆ ಕುರಿತು ಯೋಚಿಸಿಲ್ಲ.

◆ ◆ ◆

೭. ಒಂದು ಸುದಿನ

ಸುಖ ಸಂದಾಗ ಹಿಗ್ಗದೇ, ಕಷ್ಟಬಂದಾಗ ಕುಗ್ಗದೇ ಜೀವನದಲ್ಲಿ ಸಮತೋಲನ ಇಟ್ಟುಕೊಳ್ಳಬೇಕು, ಎಂದು ಯತ್ನಿಸುವವರ ಗುಂಪಿಗೆ ಸೇರಿದವನು ನಾನು. ಆದರೂ ಎಂದಾದರೊಮ್ಮೆ ಅಪೂರ್ವದ ಗೌರವ ದೊರೆತಾಗ ಅಭಿಮಾನದಿಂದ ಹೃದಯ ತುಂಬಿ ಬರುತ್ತದೆ. ಇಂದು ಅಂತಹ ಅಪೂರ್ವದ ದಿನ. ನಾನು ಪದವೀಧರನಾದಾಗ, ಕುರಿಹಿಂಡನ್ನು ಒಂದೆಡೆ ಕಲೆಯುವಂತೆ ನಮ್ಮನ್ನು ಕೂಡಹಾಕಿ ಆನಂತರ ಸರ್ಟಿಫಿಕೇಟುಗಳನ್ನು ಒಯ್ಯುವಂತೆ ಹೇಳಿದ್ದರು. ಸ್ನಾತಕೋತ್ತರ ಪದವೀದಾನ ಸಮಾರಂಭದ ಹೊತ್ತಿಗೆ ನಾನು ಮುಂದಿನ ಸಂಶೋಧನಾ ಸಾಧ್ಯತೆಯ ಪರಿಶೀಲನೆಗೆ ದಿಲ್ಲಿಗೆ ಹೋಗಿದ್ದೆ. ಕಠಿಣ ಪರಿಶ್ರಮದಿಂದ ಪಡೆದ ಅಮೇರಿಕನ್ ಡಾಕ್ಟರೇಟ ಪದವಿದಾನ ಸಮಾರಂಭದಲ್ಲಿ ಪಾಲುಗೊಳ್ಳಲಾಗಲಿಲ್ಲ, ಬೇಗನೇ ಭಾರತಕ್ಕೆ ಹಿಂದಿರುಗಿ ಬಂದುಬಿಟ್ಟಿದ್ದೆ!

ನಾನು ಬರೆದ ಅಮೇರಿಕೆಯ ಪ್ರವಾಸಕಥನ ಮತ್ತು ಪ್ರಾಣಿಪರಿಸರ ಪುಸ್ತಕಗಳಿಗೆ ಸಾಹಿತ್ಯ ಅಕಾಡೆಮಿಯವರು ಪ್ರಥಮ ಬಹುಮಾನ ಘೋಷಿಸಿದರೂ, ಬಹುಮಾನದ ಮೊತ್ತವನ್ನು ಅಂಚೆಯಿಂದ ಕಳಿಸಿ ಕೈ ತೊಳೆದುಕೊಂಡಿದ್ದರು. ಈ ಬಾರಿ 'ಬಸ್ತರ ಪ್ರವಾಸ' ಪುಸ್ತಕಕ್ಕೆ ಬಂದ ಬಹುಮಾನ ಸ್ವೀಕರಿಸಲು ಆಮಂತ್ರಿಸಿ, ಬರಹೋಗುವ ಖರ್ಚು, ವಾಸದ ವ್ಯವಸ್ಥೆಯ ಏರ್ಪಾಡು ಮಾಡಿದ್ದರೂ ನಾನು ಹೋಗಿರಲಿಲ್ಲ. ಆನಂತರ ಸಾಹಿತ್ಯ ಅಕಾಡೆಮಿಯವರಿಂದ ಬಹುಮಾನದ ವಿಷಯವಾಗಿ ಯಾವ ಸಮಾಚಾರವೂ ತಿಳಿದುಬಾರದ್ದರಿಂದ ಅದನ್ನು ಅವರು ಮರವಿನ ಖಾತೆಗೆ ಜಮಾ ಮಾಡಿರಬೇಕು, ಎಂದುಕೊಂಡಿದ್ದೆ. ಇದ್ದಕ್ಕಿದ್ದಂತೆ ಒಂದು ದಿನ ಸಾಹಿತ್ಯ ಆಕಾಡೆಮಿಯ ಅಧ್ಯಕ್ಷರಾದ ಶ್ರೀ ಬರಗೂರ ರಾಮಚಂದ್ರಪ್ಪನವರಿಂದ ಫೋನ ಕರೆ ಬಂದಿತು. ತಾನು ನಮ್ಮ ಮನೆಗೇ ಬಂದು, ನನಗೆ ಬಂದ ಬಹುಮಾನದ ವಿತರಣೆ ಮಾಡಲು ಬಯಸಿದ್ದೇನೆ, ಯಾವ ಹೊತ್ತಿನಲ್ಲಿ ಬಿಡುವಾಗಿರುತ್ತೀರಿ? ಎಂಬುದು ಅವರೊಂದಿಗೆ ನಡೆದ ಮಾತುಕತೆಯ ಸಾರಾಂಶ.

ಇಂದು ಮುಂಜಾನೆ ಒಂಬತ್ತುವರೆ ಗಂಟೆಗೆ ತಮ್ಮ ಸಹಾಯಕ ಶ್ರೀನಿವಾಸರೊಂದಿಗೆ, ಶ್ರೀಬರಗೂರರು ಮನೆಗೇ ಬಂದಿದ್ದರು. ಈ ಅಪರೂಪದ ಘಟನೆ ತಪ್ಪಿಸಿಕೊಳ್ಳಬಾರದೆಂದು ಜ್ಯೋತ್ಸ್ನಾ, ಅರ್ಧದಿನದ ಬಿಡುವು ಪಡೆದು ಮನೆಯಲ್ಲೇ ಇದ್ದಳು. ಸಾಹಿತ್ಯ ಅಕಾಡೆಮಿ ಅಧ್ಯಕ್ಷರು ಗಂಧದ ಹಾರ ಹಾಕಿ, ಹಣ್ಣು ಹಂಪಲುಗಳ ತಟ್ಟೆ ಕೊಟ್ಟು, ಜೊತೆಗೆ ಮೂರು ಸಹಸ್ರ ರೂಪಾಯಿಗಳಿಗೆ ಚೆಕ್ ಹಾಗೂ ಪ್ರಶಸ್ತಿ ಪತ್ರವನ್ನು ಕೊಡಮಾಡಿದರು. ತಾನು ಛಾಯಾಗ್ರಹಣ ಕಲಿತಿದ್ದರೆ! ಎಂದು ಜ್ಯೋತ್ಸ್ನಾ ಮಿಡುಕಿದಳು. ಸಂಭ್ರಮದಿಂದ ಚಹ-ತಿಂಡಿಯ ಏರ್ಪಾಡು ಮಾಡಿದ್ದಳು.

ನಾನು ಸಾಹಿತಿ-ಬಳಗಕ್ಕೆ ವೈಯಕ್ತಿಕವಾಗಿ ತುಂಬ ಅಪರಿಚಿತನಲ್ಲವೇ? ವೃದ್ಧಾಪ್ಯದ ಕಾರಣದಿಂದಾಗಿ ದಾವಣಗೆರೆಯಲ್ಲಿ ಏರ್ಪಟ್ಟ ಪ್ರಶಸ್ತಿ ಪ್ರದಾನ ಸಮಾರಂಭಕ್ಕೆ

ಬರಲಾಗಿರಲಿಕ್ಕಿಲ್ಲ! ಎಂದು ಅವರು ಪರಿಗಣಿಸಿರಬೇಕು, ಎಂದು ನಮ್ಮಿಬ್ಬರ ಭಾವನೆಯಾಗಿತ್ತು. ಆದರೆ ವಸ್ತುಸ್ಥಿತಿ ತೀರ ಭಿನ್ನವಾಗಿತ್ತು. ನಾನು ಮಧ್ಯಪ್ರದೇಶದಿಂದ ಹಿಂದಿರುಗಿದನಂತರ, ಡಾ. ಚಿದಾನಂದ ಮೂರ್ತಿಯವರು ಬೆಂಗಳೂರು ವಿಶ್ವವಿದ್ಯಾಲಯದ ಎಮ್.ಫಿಲ್. ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಲು ಕರೆ ಇತ್ತಿದ್ದರು. ಅಲ್ಲಿ ಸೇರಿದ ಸಭಿಕರಲ್ಲಿ ಬರಗೂರರರೂ ಒಬ್ಬರಾಗಿದ್ದರಂತೆ! ಅಲ್ಲದೇ ಅವರು ತುಮಕೂರಿನಲ್ಲಿ ಇದ್ದಾಗ, 'ವಂಗದರ್ಶನ' ಓದಿದ್ದರಲ್ಲದೇ ಇನ್ನಿತರ ಗೆಳೆಯರೊಂದಿಗೆ ಆಗಾಗ ಚರ್ಚಿಸುತ್ತಿದ್ದರಂತೆ. ನಂತರ ನನ್ನ ಅಮೇರಿಕೆಯ ಪ್ರವಾಸಕಥನ ಓದಿ, ಭಾರೀ ಪ್ರಭಾವಿತರಾಗಿದ್ದರಂತೆ. ಅವರು ಒಳ್ಳೆಯ ಸಾಹಿತಿ. ಬಂಡಾಯ ಸಾಹಿತ್ಯದ ಮುಖಂಡರು ಎಂದು ಇಲ್ಲಿ ಸ್ಮರಿಸಿಕೊಳ್ಳಬಹುದು. ಓರ್ವ ಬರಹಗಾರನನ್ನು, ಕೇವಲ ಬರವಣಿಗೆಯಿಂದಲೇ ಎಷ್ಟೆಲ್ಲ ಜನ ಅರಿತಿರುತ್ತಾರಲ್ಲವೇ?

ಮೊನ್ನೆ ರವಿವಾರ ಮಟಮಟ ಮಧ್ಯಾಹ್ನದಲ್ಲಿ ಓರ್ವ ಕೊಂಕಣಿ ಮಹಿಳೆ ತನ್ನ ಕಿರಿಮಗನೊಂದಿಗೆ ನನ್ನ / ನಮ್ಮ ಭೇಟಿಗೆ ಬಂದಿದ್ದಳು. ಯಾಕೆ ಗೊತ್ತೆ? ಅವಳು ನನ್ನ ಎಲ್ಲ ಕೃತಿಗಳನ್ನು ಓದಿದ್ದಾಳಂತೆ. ಅಲ್ಲದೇ ಜೀವನದಲ್ಲಿ ಬಹಳ ಕಹಿಯನ್ನು ಉಂಡಿದ್ದಾಳಂತೆ. ಅವನ್ನೆಲ್ಲ ನನಗೆ ವಿವರಿಸಿ ಹೇಳಲು ಬಂದಿದ್ದಳು! ಅದನ್ನೆಲ್ಲ ಬರೆದುಕೊಂಡು ಅವಳ ವಿಷಯವಾಗಿ ಕಾದಂಬರಿಯನ್ನು ಬರೆಯಿಸುವದು ಅವಳ ಉದ್ದೇಶವಂತೆ. ಕಥೆ-ಕಾದಂಬರಿ, ನಮ್ಮಿಬ್ಬರದೂ ಮಾಧ್ಯಮವಲ್ಲ! ಎಂದು ತಿಳಿಹೇಳಿ ಸಾಗಹಾಕಬೇಕಾದರೆ ಸಾಕು ಬೇಕಾಯಿತು.

ಪ್ರವೀಣನ ಪರೀಕ್ಷೆ ಮುಗಿದದ್ದರಿಂದ ನನ್ನ ಬಳಿ ಛಾಯಾಗ್ರಹಣ ಕಲಿಯುತ್ತಿದ್ದಾನೆ. ಈಗ ಆಸಕ್ತಿಯಿಂದ ಕಲಿಯುತ್ತಿದ್ದರೂ, ಇದು ಎಷ್ಟು ದಿನ ಮುಂದುವರಿಯುವದು, ಎಂದು ಹೇಳಲಾಗದು. ನನ್ನ ಹತ್ತಿರ ಇದ್ದ ಛಾಯಾಗ್ರಹಣದ ಸಲಕರಣೆಗಳನ್ನೆಲ್ಲ ಧೂಳು ಝಾಡಿಸಿ ತೋರಿಸಿದಾಗ, ಅವನ ತಾಯಿಗೆ ಆದ ವಿಸ್ಮಯಕ್ಕೆ ಕೊನೆ ಮೊದಲಿರಲಿಲ್ಲ. ಒಂಟಿ ಕ್ಯಾಮರಾವನ್ನೇ ಆಧರಿಸಿ ಸಂಸಾರ ನಡೆಸುವವರು ಇರುವಾಗ, ಇವನ್ನೆಲ್ಲ ಬಳಸಿದರೆ ಸುಖವಾಗಿ ಜೀವಿಸಬಹುದಲ್ಲ? ಎಂದಳು. ಆದರೆ ಕೇವಲ ಛಾಯಾಗ್ರಹಣ ನಂಬಿ ಬದುಕುವದು ಎಷ್ಟು ಕಷ್ಟದ್ದೆಂದು ಯತ್ನಿಸಿದಾಗಲೇ ತಿಳಿಯಬೇಕು. ಅದರಂತೆ ಬರಹಗಾರನಾಗಿ ಜೀವನ ನಡೆಸುವದು ಇನ್ನೂ ತೊಂದರೆದಾಯಕ! ಆದರೆ ಕಳೆದ ಒಂದು ತಿಂಗಳಿನಲ್ಲಿ ನನ್ನ ಬರವಣಿಗೆಗೆ ಆರು ಸಹಸ್ರ ರೂಪಾಯಿಗಳು ಬಂದವು, ಎಂದರೆ ನನಗೇ ನಂಬಲು ಸಾಧ್ಯವಾಗುತ್ತಿಲ್ಲ. ಶ್ರಮವಹಿಸಿ, ಶ್ರದ್ಧೆಯಿಂದ ಮಾಡುವ ಕೆಲಸಗಳಿಗೆ ಇನ್ನೂ ಬೆಲೆ ಇದೆ, ಎಂಬುದು ಮನವರಿಕೆಯಾಯಿತು!

◆ ◆ ◆

೮. ಪತ್ರಪ್ರಶಂಸೆ

ನಮ್ಮ ರಜತವಿವಾಹವರ್ಧಂತಿಯ ಭಾಗವಾಗಿ ಪ್ರಕಟವಾದ 'ಪ್ರೇಯಸಿಗೆ ಪತ್ರಗಳು!' ಪುಸ್ತಕಕ್ಕೆ ಒಳ್ಳೆಯ ಪ್ರತಿಕ್ರಿಯೆ ಬರಲಾರಂಭಿಸಿದೆ. ವೈಯಕ್ತಿಕವಾಗಿ ಹೇಳಿದವರು ಹಲವರು, ಪತ್ರ ಮುಖೇನ ತಿಳಿಸಿದವರು ಕೆಲವರು. ವೃತ್ತ ಪತ್ರಿಕೆಯಲ್ಲಿಯೂ ವಿಮರ್ಶೆ ಬರಲಾರಂಭಿಸಿದೆ. ಲಂಕೇಶ ಪತ್ರಿಕೆಯ ಸಾಲುಗಳು ಹೀಗಿವೆ, ''ಕೃಷ್ಣಾನಂದ ಕಾಮತ್ ಅವರು ಕನ್ನಡಿಗರಿಗೆ ಪರಿಚಿತ ಲೇಖಕರು. ಇವರ ಪ್ರವಾಸ ಸಾಹಿತ್ಯವನ್ನು ಬಹಳ ಜನ ಓದಿಮೆಚ್ಚಿದ್ದಾರೆ. ಅನೇಕ ವಸ್ತುಗಳನ್ನು ಕುರಿತು ಸ್ಪಷ್ಟವಾಗಿ ಓದಿಸಿಕೊಳ್ಳುವಂತೆ ವಿದ್ವತ್ಪೂರ್ಣವಾಗಿ ಬರೆಯಬಲ್ಲ ಕೃಷ್ಣಾನಂದ ಕಾಮತರು ಇತ್ತೀಚೆಗೆ ಪ್ರಕಟಿಸಿರುವ 'ಪ್ರೇಯಸಿಗೆ ಪತ್ರಗಳು!' ಕನ್ನಡ ಸಾಹಿತ್ಯಕ್ಕೆ ನೀಡಿದ ಕುತೂಹಲಕರ ಕೃತಿ. ಈ ಬಗೆಯ ಪುಸ್ತಕ ಕನ್ನಡದಲ್ಲಿ ಬಹಳ ಇಲ್ಲ.... ಈ ಪುಸ್ತಕಕ್ಕೆ ಕಾಮತ್‌ರ ಪತ್ನಿ ಜ್ಯೋತ್ಸ್ನಾ ಕಾಮತ್ ತುಂಬ ಸ್ವಾರಸ್ಯವಾದ ಮುನ್ನುಡಿ ಬರೆದಿದ್ದಾರೆ.... ''ಡಾ. ಹಾ. ಮಾ. ನಾಯಕರು ''ಕೃಷ್ಣಾನಂದ ಕಾಮತರು ಏನೇ ಬರೆದರೂ ಸೊಗಸಾಗಿಯೇ ಬರೆಯುತ್ತಾರೆ. ಅವರ ಎಲ್ಲ ಕೃತಿಗಳನ್ನೂ ನಾನು ಓದಿ ಮೆಚ್ಚಿದ್ದೇನೆ.'' ಎಂದು ಪುಸ್ತಕ ವಿಮರ್ಶೆ ಒಂದರಲ್ಲಿ ಬರೆದಿದ್ದಾರೆ.

ಕವಿ ಮತ್ತು ಬರಹಗಾರ, ಪ್ರೊ! ಶ್ಯಾಮ ಸುಂದರ ಬಿದರಕುಂದಿ ವೈಯಕ್ತಿಕವಾಗಿ ಪತ್ರ ಬರೆದು ಮೆಚ್ಚಿಗೆ ತಿಳಿಸಿದ್ದಾರೆ. ''ಯುಗಾದಿ ದಿನವೇ ಹೊರಬಂದ ನಿಮ್ಮ 'ಪ್ರೇಯಸಿಗೆ ಪತ್ರಗಳು' ಪುಸ್ತಕವನ್ನು ತಡವಾಗಿ ಓದಿಕೊಂಡ ನನಗೆ ಸಂತೋಷವನ್ನು ಇಷ್ಟು ತಡವಾಗಿ ಪಡೆದುದಕ್ಕೆ ಅಲ್ಪವಿಷಾದವಿದೆ. 'ನಾನೂ ಅಮೇರಿಕೆಗೆ ಹೋಗಿದ್ದೆ' ನಂತರದ ನಿಮ್ಮ ಬರವಣಿಗೆಯಲ್ಲಿ ವೈವಿಧ್ಯವೇನೋ ಬಂದಿತ್ತು. ಆದರೆ ಆ ಮುಗ್ಧ ಸಹಜ ಲವಲವಿಕೆ, ಒಂದು ಜಾಡಿಗೆ ಬಿದ್ದಿತ್ತೇನೋ! 'ನಾನೂ... ಗಿಂತ ತುಸು ಹಿಂದೆ-ಮುಂದೆ ಬರೆಯಲಾದ ಈ ಪತ್ರಗಳಲ್ಲಿ ನಿಮ್ಮ ಮೂಲಗುಣವಾದ ರುಚಿ, ವಾಸನೆ, ಗಾಢವಾಗಿ ಉಳಿದಿದೆ. ಪತ್ರವೂ ಸಾಹಿತ್ಯ ಎಂದು ನೀವೇನೂ ತಿಳಿದಿರಲಿಕ್ಕಿಲ್ಲ. ಅಂತೆಯೇ ೨೦ ವರ್ಷಗಳ ನಂತರ ಪುಸ್ತಕದಲ್ಲಿ ಪ್ರಿಂಟಾದ ಪತ್ರಗಳು ಸಾಹಿತ್ಯಿಕ ಮಹತ್ವ ಪಡೆದಿವೆ. ಸಾಹಿತ್ಯದ ಮೂಲ ಲಕ್ಷಣ, ಸಹಜತೆ, ಪ್ರಾಮಾಣಿಕತೆ. ಈ ಗುಣದ ಧಾರಾಳಿತನ ಪತ್ರಗಳಲ್ಲೆಲ್ಲ ತುಂಬಿದೆ. ವಧುವಾದ ಪ್ರೇಯಸಿ, ಹೆಂಡತಿಯಾದ ಮೇಲೂ ಪ್ರೇಯಸಿಯಾಗಿ ಉಳಿಯುವದು ತೀರ ಅಪರೂಪ! ನೀವು ದಾಂಪತ್ಯವನ್ನು ಬೌದ್ಧಿಕ, ಭಾವುಕ, ವ್ಯಾವಹಾರಿಕ ಹೀಗೆ, ಎಲ್ಲ ಸ್ತರಗಳಲ್ಲಿಯೂ ಸಮತೋಲನದಿಂದ ಜಪ್ಪಿಸಿ, ಒಪ್ಪಿಸಿ, ಒಪ್ಪಿಕೊಂಡು ಬಂದಿದ್ದೀರಿ. ೨೮ ಗುಣ ಕೂಡಿದ ಕನ್ಯೆಯನ್ನೇ ಒಪ್ಪಿ ಮದುವೆಯ ನಿರ್ಧಾರಮಾಡಿದ ನೀವು ಅನೇಕ ವಿಷಯದಲ್ಲಿ ಸರಿಸಮಳಾದ ಹೆಂಡತಿಯನ್ನು ೨೫ ವರ್ಷದ ತನಕವೂ ಪ್ರೇಯಸಿಯಾಗಿಯೇ ಕಂಡಿದ್ದೀರಿ, ಎನ್ನುವದು ನಮ್ಮ ಇಂದಿನ ಬದುಕಿಗೇ ಸಿಕ್ಕ

ಒಂದು ಸೌಹಾರ್ದಯುತ ಬೆಲೆ. ಪ್ರತಿಯೊಂದು ಪತ್ರವೂ ಬೋಧನೀಯವಾಗಿದೆ. 'ನಾನು-ನೀನು'ಗಳ ಸೀಮಿತ ಜಗತ್ತು ಇಲ್ಲಿದ್ದರೂ ಸಂಕುಚಿತತೆ ಮೀರಿದ ವಿಸ್ತೃತ ಅರಿವು ಎಲ್ಲ ಕಡೆ ಮೂಡಿದೆ. ಇಂಥ ಪುಸ್ತಕ ಬರೆದದ್ದಕ್ಕೆ ಧನ್ಯವಾದಗಳು.''

ಸಾಗರ ತಾಲೂಕಿನ 'ವರದಾಮೂಲ'ದ ೮೧ ವರ್ಷದ ವೃದ್ಧರೊಬ್ಬರಿಗೆ ನನ್ನ ಸಾಹಿತ್ಯ ಓದಿದ ಬಳಿಕ, ನೂರು ವರ್ಷ ಬಾಳಬೇಕೆನ್ನುವ ಲವಲವಿಕೆ ಹುಟ್ಟಿದೆಯಂತೆ! ಬರವಣಿಗೆಗೆ ಇಂಥ ಶಕ್ತಿ ಇರುತ್ತದೆಂದು ನನಗೆ ಅನಿಸಿಯೇ ಇರಲಿಲ್ಲ. ಸಂಸ್ಕೃತ ವಿದ್ವಾಂಸ ಡಾ. ಕೆ. ಕೃಷ್ಣಮೂರ್ತಿ ಅವರು ನನ್ನ ಅನೇಕ ಪುಸ್ತಕಗಳನ್ನು ಓದಿದ್ದಾರೆ. ನಿನ್ನೆ ಭೇಟಿಯಾಗಲು ಮನೆಗೆ ಬಂದಿದ್ದರಂತೆ. ಆದರೆ ಆಗ ನಾನು ಲ್ಯಾಬಿಗೆ ಹೋಗಿದ್ದೆ. ಪತ್ರ ಮುಖೇನ ಮೆಚ್ಚಿಗೆ ತಿಳಿಸುತ್ತೇನೆ. ಅಂದರಂತೆ.

ಜಿ. ಬಿ. ಜೋಶಿಯವರೂ 'ಪ್ರೇಯಸಿಗೆ ಪತ್ರಗಳು' ಪುಸ್ತಕಕ್ಕೆ ಒಳ್ಳೆಯ ಮಾತುಗಳನ್ನು ಸೇರಿಸಲು ಮರೆತಿಲ್ಲ. ''ಕೃಷ್ಣಾನಂದ ಕಾಮತರ ಮೊದಲ ಪುಸ್ತಕ - ನಾನೂ ಅಮೇರಿಕೆಗೆ ಹೋಗಿದ್ದೆ - ಇಂದಲೇ ಅವರು ಗ್ರಂಥ ಮಾಲೆಯ ಆಪ್ತ ಬರಹಗಾರರಲ್ಲಿ ಒಬ್ಬರಾಗಿ ಹೋಗಿದ್ದಾರೆ. ಅಲ್ಲಿಂದೀಚೆಗೆ ಅವರ ಬರವಣಿಗೆಯ ವೈವಿಧ್ಯ ಬೃಹದಾಕಾರವಾಗಿ ಬೆಳೆದಿದ್ದರೂ, ಓದುಗರೊಡನೆ ಸಮರಸವಾಗಿ ಹಂಚಿಕೊಳ್ಳುವ ಕಲೆಯಲ್ಲಿ ಕಡಿಮೆಯಾಗಿಲ್ಲ. (ಯಾಕಂದರೆ ಅವರ ಮೊದಲ ಕೃತಿಯೇ ಅತ್ಯಂತ ಪಕ್ವವಾಗಿ ಹೊರಬಂದ ಕೃತಿ. ಹೀಗಾಗಿ ಬರವಣಿಗೆಯಲ್ಲಿ ಪಕ್ವತೆ ಬಂದಿದೆ ಎನ್ನುವದು ತಪ್ಪಾಗುತ್ತದೆ) ಗ್ರಂಥಮಾಲೆಗೂ ಅವರಿಗೂ ಅಂಟಿದ ನಂಟಿನ ಗಂಟು, ಬಹಳ ಗಟ್ಟಿಯಾದದ್ದು. ಮಾತುಗಳಲ್ಲಿ ಹೇಳಲು ಅಸಾಧ್ಯವಾದದ್ದು. ಅವರಂಥ ಸದ್ದುಗದ್ದಲವಿಲ್ಲದ ಕರ್ಮಿಗಳು ವಿರಳ. ಮಿತವಾದ ಮಾತು; ಮಾತಿಗಿಂತ ತೂಕದ ಕೃತಿ ಹೆಚ್ಚು....''

'ಕೀಟ ಪ್ರಪಂಚ' ಬಹಳ ಜನರಿಗೆ ತಲುಪಿಲ್ಲ. ಆದರೆ ಓದಿದವರು ಮೆಚ್ಚಿಕೊಂಡಿದ್ದಾರೆ. ಹೂಗೊಪ್ಪಲು ಕೃಷ್ಣ ಮೂರ್ತಿಯ ಅನಿಸಿಕೆಗಳು ಹೀಗಿವೆ - 'ನಿಮ್ಮ ''ಕೀಟ ಪ್ರಪಂಚ'' ಓದಿದೆ. ನಿಜವಾಗಿಯೂ ಹೊಸ ಜಗತ್ತೆ! ಈ ವೈಜ್ಞಾನಿಕ ಪ್ರಬಂಧಗಳು, ಸರಳವಾಗಿ, ಕುತೂಹಲಪೂರ್ಣವಾಗಿ, ಸ್ವಾರಸ್ಯಕರವಾಗಿ ನಿರೂಪಿತವಾಗಿವೆ. ಒಮ್ಮೆಯೂ ಬೇಸರವಾಗುವದಿಲ್ಲ. ಒಂದೇ ಬಾರಿ ಕುಳಿತು ಪೂರ್ತಿ ಓದಬಹುದು. ವೈಜ್ಞಾನಿಕ ಬರವಣಿಗೆ ಇಷ್ಟೊಂದು ಆಹ್ಲಾದದಾಯಕವಾಗಿರಬಹುದು, ಎಂದು ಕಲ್ಪಿಸಿಕೊಳ್ಳುವದೇ ಕಷ್ಟ! ಎಲ್ಲ ಲೇಖಗಳೂ, ನಿಮ್ಮ ಪ್ರಯೋಗ, ಅವಲೋಕನ, ಸಂಶೋಧನೆಗಳ ತಳಹದಿಯ ಮೇಲೆ ರಚಿತವಾಗಿರುವದಿಂದ ವಿಶ್ವಾಸಾರ್ಹತೆಯ ಜೊತೆಗೆ, ನಿಮ್ಮ ಸಂಶೋಧನಾ ಮಾರ್ಗದ ವೈವಿಧ್ಯಮಯ ಅನುಭವಗಳು ಓದುಗರಿಗೆ ರೋಚಕ ಅನುಭವ ನೀಡುತ್ತವೆ. ಎಳೆಯರು, ಹಿರಿಯರು, ಯಾರೂ ಖುಷಿಯಾಗಿ ಓದಬಹುದಾದ ಸುಂದರ ಪುಸ್ತಕ. ಕೀಟ ಜಗತ್ತಿನ ವಿಸ್ಮಯಕಾರಿ ಅಂಶಗಳನ್ನು ನಿರೂಪಿಸುವದರ ಜೊತೆಗೆ ಕೆಲವು ಓದುಗರನ್ನಾದರೂ ಸಂಶೋಧನೆಯ ಹಾದಿಗೆ ನಿಮ್ಮ ಪುಸ್ತಕ ಎಳೆದರೆ ಆಶ್ಚರ್ಯವಿಲ್ಲ.

ಸ್ವಾರಸ್ಯಕರ ನಿರೂಪಣೆ, ಅಲ್ಲಲ್ಲಿ ಇಣುಕುವ ಹಾಸ್ಯ ಚಟಾಕಿಗಳು, ಮುದ ನೀಡುತ್ತವೆ. ನಿಮ್ಮ ಪುಸ್ತಕವನ್ನು ಪ್ರಬಂಧಗಳ ಸಂಕಲನವೆಂದರೆ ತಪ್ಪಾಗುತ್ತದೆ. ಏಕೆಂದರೆ ಕಥೆಗಳಂತೆ ಓದಿಸಿಕೊಳ್ಳುತ್ತವೆ. ಆದರೆ ಯಾವುದೂ ಕಾಲ್ಪನಿಕವಲ್ಲ. ಇದು ನಿಮ್ಮ ಬರವಣಿಗೆಯ ವಿಶೇಷ! ಶೀರ್ಷಿಕಗಳೇ ಕೆಲವು ಖುಷಿ ಕೊಡುತ್ತವೆ. 'ದುಡಿಮೆಯ ಕೋಮಲಾಂಗಿನಿಯರು' 'ಕೀಟ ಕನ್ಯೆಯರು' ''ಮೀಸೆಮಂಡೋದರಿಯರು' ಇತ್ಯಾದಿ. ಈ ಪುಸ್ತಕ ನಮ್ಮ ಹೈಸ್ಕೂಲು ಮಕ್ಕಳಿಗೆ ಪಠ್ಯಪುಸ್ತಕವಾಗಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು! ಕನ್ನಡ ಸಾಹಿತ್ಯಕ್ಕೆ ವಿರಳ ಕಾಣಿಕೆ ಇತ್ತಿದ್ದೀರಿ. ಅಭಿನಂದನೆಗಳು'' ಡಾ. ಶ್ರೀನಿವಾಸ ಹಾವನೂರ ಅವರೂ ಈ ಪುಸ್ತಕ ಮೆಚ್ಚಿಕೊಂಡು ಫೋನಿಸಿದರು. ಅದರಲ್ಲಿಯ ಒಂದು ಅಧ್ಯಾಯವನ್ನು ಮಹಾರಾಷ್ಟ್ರದ ಮಾಧ್ಯಮಿಕ ಶಾಲೆಯ ಕನ್ನಡ ಪಠ್ಯಪುಸ್ತಕದಲ್ಲಿ ಸೇರ್ಪಡೆ ಮಾಡಲು ಯೋಚಿಸುತ್ತಿದ್ದಾರೆ.

* * *

ಏಷಿಯಾ ಖಂಡದ ನೋಬೆಲ್ ಪಾರಿತೋಷಕ ಎಂದು ಪರಿಗಣಿಸಲಾದ ಮೆಗ್ಸೆಸೇ ಪ್ರಶಸ್ತಿ ವಿಜೇತ, ಹೆಗ್ಗೋಡು - ಹೊನ್ನೇಸರದ ಕೆ. ವಿ. ಸುಬ್ಬಣ್ಣನವರು 'ಪ್ರೇಯಸಿಗೆ ಪತ್ರಗಳು' ಪುಸ್ತಕವನ್ನು ಮೆಚ್ಚಿಕೊಂಡು ಜ್ಯೋತ್ಸ್ನಾಗೆ ಬರೆದ ಪತ್ರದಲ್ಲಿ ತಮ್ಮ ಜೀವನದಲ್ಲಿ ಪ್ರಭಾವ ಬೀರಿದವರನ್ನು ನೆನಪಿಸಿಕೊಳ್ಳುತ್ತ ಅವರಲ್ಲಿ ಕೃಷ್ಣಾನಂದ ಕಾಮತರೂ ಒಬ್ಬರೆಂದು ಉಲ್ಲೇಖಿಸಿದ್ದರು! ಸುಬ್ಬಣ್ಣನವರ ಮಾತಿನಲ್ಲೇ ಹೇಳುವದಾದರೆ... ''ಅವರು ಒಂದು ಬಗೆಯ ಸಿದ್ಧರು. ಅವಧೂತರು. ಅವರು ಪ್ರತ್ಯಕ್ಷ ಸಾಧಿಸುವದರಲ್ಲಿ ಆಸಕ್ತರಲ್ಲ. ಆದರೆ ಕ್ಷಣಕ್ಷಣಕ್ಕೆ ತಪ್ಪಿ ಜೋಲಿ ಹೊಡೆವ ಸಮಾಜದ ಕೇಂದ್ರವನ್ನು ಸಮತೋಲದಲ್ಲಿ ಹಿಡಿದು ನಿಲ್ಲಿಸಬಲ್ಲ ಸಮಾಜಸಿದ್ಧರು. ಅಂದರಿಕೆ ವಂದನಮು!...

ನನ್ನ ಷಷ್ಠ್ಯಬ್ದಿಯ ಸಮಯದಲ್ಲಿ ನೀನು ಸ್ವತಃ ತಯಾರಿಸಿದ ಶುಭಾಶಯದ ಕಾರ್ಡು ಹಾಗೂ ಅದಕ್ಕೂ ಸುಂದರವಾಗಿ ಬರೆದ ಶುಭಸಂದೇಶ ಮನಸ್ಸನ್ನು ತಟ್ಟಿದವು. ಕೆ. ವಿ. ಸುಬ್ಬಣ್ಣನಂಥ ಧೀಮಂತರಿಂದ ಘನವಾದ ಮೆಚ್ಚಿಗೆ ಪಡೆದದ್ದು ತುಂಬ ಸಂತೋಷದ ಸಂಗತಿ ಆದರೂ, ಪುತ್ರ ಅಥವಾ ಪತ್ನಿಯಿಂದ ಬೆನ್ನು ತಟ್ಟಿಸಿಕೊಳ್ಳುವದು ಸುಲಭಸಾಧ್ಯವಲ್ಲ! ಯಾಕಂದರೆ ಬಾಡಿಗೆದಾರ - ಮಾಲಕರಂತೆ, ಅವರ ಆಸಕ್ತಿಗಳು ತೀರ ವಿರುದ್ಧವಾಗಿರುತ್ತವೆ. ಅತ್ಯಂತ ಜನಪ್ರಿಯ ಕನ್ನಡದ ಕಾದಂಬರಿಕಾರರ ಪತ್ನಿ, ಅವರಿಂದ ತಾನೂ ಪ್ರಸಿದ್ಧಿ ಪಡೆದುದನ್ನು ಮರೆತು, ಮೂರು ಹೊತ್ತು ಕುಡಿದು ಹಾಳುಮಾಡಿದ್ರು! ಎಂದು ಶಾಪಹಾಕುತ್ತ ಇರುತ್ತಿದ್ದರು. ಇನ್ನೊಬ್ಬ ಪ್ರಸಿದ್ಧ ಕವಿಯ ಹೆಂಡತಿ, ಅವರ ನಸ್ಯದ ಹಾಗೂ ಕಾಫಿಯ ಚಟವನ್ನು ನನ್ನಂಥ ಅಪರಿಚಿತನ ಎದುರು ಹೀಗಳೆದದ್ದನ್ನು ಕಂಡು ಕೇಳುವ ಸಂದರ್ಭ ಬಂದಿತ್ತು. ನನ್ನ ಛಾಯಾಚಿತ್ರಗ್ರಹಣ ಇಂಥ ಸನ್ನಿವೇಶಗಳನ್ನು ಸೆರೆಹಿಡಿಯಲು ಅಸಮರ್ಥವಾಗಿದೆ!

◆ ◆ ◆

೯. ಧನಪ್ರಾಪ್ತಿಯ ಇಹ-ಪರ

ಉಳ್ಳವರ ಆಪ್ತರು, ಅಧಿಕಾರ, ಆರ್ಥಿಕ ಲಾಭಗಳನ್ನು ಅದೆಷ್ಟು ಪ್ರೀತಿಸುತ್ತಾರೆ, ಗೌರವಿಸುತ್ತಾರೆ ಎಂದು ಅರಿಯಲು ಪ್ರೇಮನಾಥನ (ಹೆಸರು ಬದಲಾಯಿಸಿದೆ) ಸಾಧನೆ, ಸೋಲುಗಳನ್ನು ಆಳವಾಗಿ ಅಭ್ಯಸಿಸಬೇಕು. ಅವನ ನಲವತ್ತಾರು ವರ್ಷದ ಪ್ರಾಯದಲ್ಲಿ, ರಾಷ್ಟ್ರೀಕೃತ ಬ್ಯಾಂಕೊಂದರಲ್ಲಿ ಬಡತಿಯಿಂದ ವಂಚಿತನಾಗಿದ್ದಾನೆಂದು ಕುಟುಂಬದ ಯಾವತ್ತೂ ಜನ ಹಾರಾಡಿ, ಕೂಗಾಡಿ, ಆಕ್ರೋಶ ತೋರಿಸಿದಾಗ, ಅಲ್ಲಿದ್ದ ಸೋದರಿ, 'ಈ ವರ್ಷ ಸಿಗದಿದ್ದರೇನಾಯ್ತು? ಮುಂದಿನ ವರ್ಷ ಸಿಗಬಹುದಲ್ಲ?' ಎಂದು ಸಹಜವಾಗಿ ಹೇಳಿದ್ದಕ್ಕೆ ಎಲ್ಲರೂ, ತಮ್ಮ ಹಿರಿಯನ ಯೋಗ್ಯತೆ ನೀನು ಅರಿತೇ ಇಲ್ಲವೆಂದು ಆಕೆಯ ಮೇಲೆ ಕೂಗಾಡಿದ್ದರು, ರೇಗಾಡಿದ್ದರು. ನಂತರದ ವರ್ಷಗಳಲ್ಲಿ ಪ್ರೇಮನಾಥನಿಗೇ ಸಕಲ ಮುಂಬಡತಿಗಳು ಸಿಗುವಂತೆ ಆತ ಹಲವಾರು ಏರ್ಪಾಡುಗಳನ್ನು ಮಾಡಿಕೊಂಡದ್ದು ಸರ್ವವಿದಿತ. ಇದೆಲ್ಲ ಆತನ ಅಪಾರ ಬುದ್ಧಿಮತ್ತೆ ಹಾಗೂ ಶ್ರಮದ ಫಲ, ಹಿರಿದಾದ ಸಾಧನೆ! ಎಂದು ಬಂಧು-ಬಳಗದವರೆಲ್ಲ ತಿಳಿದಿದ್ದರೂ ಸರಕಾರಿ ಗುಪ್ತಚಾರರಿಗೆ ಈ ಯಶಸ್ಸಿನ ಹಿಂದೆ ಇರುವ 'ಗೋಲ್‌ಮಾಲ್'ದ ಪರಿಚಯ, ಇಲ್ಲದಿರಲಿಲ್ಲ. ಅಂತೆಯೇ ಈತ ಬ್ಯಾಂಕಿನ ಮುಖ್ಯಸ್ಥನಾಗಿ ಖುರ್ಚಿಯನ್ನು ಖಾಲಿಮಾಡುವ ದಿನಗಳು ಬರುವ ಮುನ್ನವೇ ಆ ದಿಕ್ಕಿನಲ್ಲಿ ಒತ್ತಡಗಳು ಪ್ರಾರಂಭವಾದವು. ಕೃಪಾಪೋಷಿತರು ಆತನಿಗಾದ ಹಾನಿ, ಆತ ಮಾಡಿದ ತ್ಯಾಗಗಳನ್ನೆಲ್ಲ ಹಾಡಿ ಹಾಡಿ ದಣಿದರು. ಸ್ವಗೃಹ ನಿರ್ಮಾಣಕ್ಕೆ ಐವತ್ತು ಲಕ್ಷಕ್ಕೂ ಮಿಕ್ಕಿ ಹಣ ಖರ್ಚು ಮಾಡಿ ಸಿಕ್ಕಿಹಾಕಿಕೊಂಡಾಗ, ಸಹೋದ್ಯೋಗಿಗಳೆಲ್ಲ ಸೇರಿ ಅಸೂಯೆಯಿಂದ ಇಂಥ ಗುಲ್ಲೆಬ್ಬಿಸಿದ್ದಾರೆ! ಎಂದು ಅನೇಕರು ಸಾರಿದರು. ತನ್ನದೇ ಕಂಪನಿ ಹುಟ್ಟು ಹಾಕಿ ಸಾರ್ವಜನಿಕರ ಸೊತ್ತನ್ನು ಕೊಳ್ಳೆ ಹೊಡೆದಿದ್ದಾರೆ! ಎಂದು ವೃತ್ತ ಪತ್ರಿಕೆಗಳು ಘಂಟಾಘೋಷವಾಗಿ ಸಾರಿದಾಗ, ಪತ್ರಿಕೆಗಳೆಲ್ಲ ತಮ್ಮ ಪ್ರಸಾರವನ್ನು ಹೆಚ್ಚಿಸಲು ಅತಿರಂಜಿತ ವರ್ಣನೆ ಬರೆದಿದ್ದಾರೆ ಎಂದು ಆತನ ಸೋದರನೊಬ್ಬ ಆಲಾಪಿಸಿದ. ಆದರೆ ಐವತ್ತು ಕೋಟಿ ರೂಪಾಯಿಗಳನ್ನು ಅಪ್ರಾಮಾಣಿಕವಾಗಿ ತನ್ನದನ್ನಾಗಿ ಮಾಡಿಕೊಂಡಿದ್ದಾನೆ ಎಂದು ಸಕಲರಿಗೂ ಮನವರಿಕೆ ಆಗಲಾರಂಭಿಸಿದಾಗ, ಉಪಾಯಗಾಣದೇ ಪ್ರೇಮನಾಥನು, ಸುಖ-ಸೌಲಭ್ಯಗಳು ಹೆಚ್ಚಾಗಿರುವ ಸ್ವರ್ಗಲೋಕಕ್ಕೆ ತೆರಳಲೇ ಬೇಕಾಯಿತು!

ಕಾಲಕ್ರಮೇಣ, ದೃಶ್ಯ ಬದಲಾಯಿತು. ಆತನ ಧನ, ದೌಲತ್ತಿನ ಲಾಭ, ಪತ್ನಿಗೆ, ಪುತ್ರರಿಗೆ, ಮಾತ್ರ ಮೀಸಲು! ಎಂದು ಎಲ್ಲರಲ್ಲೂ ಅರಿವು ಮೂಡಲಾರಂಭಿಸಿದಾಗ, ಬಂಧುಗಳೆಲ್ಲ ತಮ್ಮ ಅಂತರಂಗದ ಕುದಿತವನ್ನು ಹೊರಹೊಮ್ಮಿಸಲಾರಂಭಿಸಿದರು. ಈ ಅಣ್ಣ (ಪ್ರೇಮನಾಥ) ತನ್ನ ಪತ್ನಿಯ ಕೃಪಾಕಟಾಕ್ಷಕ್ಕೆ ಪಾತ್ರರಾದವರ ಮಕ್ಕಳ ಹುಟ್ಟುಹಬ್ಬಕ್ಕೆ ಸಾವಿರಾರು ರೂಪಾಯಿ ಬೆಲೆಬಾಳುವ ಬಟ್ಟೆ-ಬರೆಗಳನ್ನು

ಉಡುಗೊರೆಯಾಗಿ ಕೊಡುತ್ತಿದ್ದರೂ, ನನ್ನ ಮಕ್ಕಳಿಗೆ ಒಂದು ಬಿಸ್ಕತ್ತಿನ ಪ್ಯಾಕೇಟ್ ಕೂಡ ಕೊಟ್ಟಿಲ್ಲ! ಒಬ್ಬ ಸೋದರರ ಗೋಗರೆದ. ಈ ಭರತ (ತಾನು!) ಸ ಅಣ್ಣ ಶ್ರೀರಾಮ ಕಾರಿನ ಡ್ರಾಯವರನ ಹತ್ತಿರ ತರಕಾರಿ ಕಳಿಸಿ, ಹಣ ವಸೂಲು ಮಾಡಿಕೊಂಡೇ ಬರಲು ತಿಳಿಸಿದ್ದನಂತೆ! ಹಣ ಕೊಟ್ಟು ಪೇಟೆಯಲ್ಲಿ ತರಕಾರಿ ತರಲು ನಮಗೆ ಆಗುತ್ತಿರಲಿಲ್ಲವೇ? ಕಿರಿಯ ಸೋದರರನು ರಾಗವೆಳೆದ - ''ಬಿ. ಡಿ. ಎ.ದಿಂದ ಒಂದು ಸೈಟ್ ಕೊಡಿಸಯ್ಯ! ನೀನೆಂಥ ದೊಡ್ಡ ಜಾಗ ಗಿಟ್ಟಿಸಿದ್ದಿ! ನನಗೂ ಒಂದು ಗೂಡು ಇರಲಿ' ಎಂದು ಕಾಲು ಹಿಡಿದ. 'ಏನು ತರಾತುರಿ? ಕೊಡಿಸೋಣ, ಕೊಡಸ್ತೀನಿ'' ಎನ್ನುತ್ತಲೇ ಕೈಕೊಟ್ಟ. ಮುದ್ದಿನ ತಂಗಿ ಕಣ್ಣೀರು ಹಾಕಿದಳು. ''ನನ್ನ ಉದ್ದಿಮೆ ಸರಿಯಾಗಿ ನಡೆಯುತ್ತಿಲ್ಲ. ಇನ್ನೊಂದು ಹಾಕ್ತೀನಿ. ಸಾಲಕೊಡಿಸು'' ಎಂದರೆ, ''ಸದ್ಯಕ್ಕೆ ಲಾಭ-ಹಾನಿ ಎರಡೂ ಇಲ್ಲದೇ ನಡೆಸುಕೊಂಡು ಹೋಗುತ್ತಾ ಇದ್ದಿ. ಕೆಲಕಾಲ ನಡೆಯಲಿ, ಮುಂದೆ ನೋಡೋಣ!'' ಎಂದು ಟೊಳ್ಳು ಆಶ್ವಾಸನೆ ಕೊಟ್ಟ! ಇನ್ನೊಬ್ಬಾತ ಹಲ್ಲು ಕಡಿದ. ''ಇದೇ ಅಣ್ಣ, ವೃತ್ತ ಪತ್ರಿಕೆಯವರನ್ನೆಲ್ಲ ಸೇರಿಸಿ, ನಮ್ಮಪ್ಪ ಮಾಡಿದ್ದು ಮಕ್ಕಳನ್ನು ಮಾತ್ರ! ನಮಗೆ ಸರಿಯಾಗಿ ಎರಡೂಟ ಇಲ್ಲದೇ ಬೆಳೆದು, ಇಡೀ ಸಂಸಾರ ನಿಲ್ಲಿಸಿದವನು ನಾನು!'' ಎಂದು ಹೇಳಿಕೊಂಡಿದ್ದ. ''ನಮ್ಮಪ್ಪ ಬಸ್ಸಿನ ತಿಕೀಟು ಮಾರಿ, ದೊಡ್ಡ ಸಂಸಾರ ಸಾಕಿದರೆ ಇವನ ಮಕ್ಕಳು ನೋಡು ಶುದ್ಧ ನಾಲಾಯಕರು!'' ಎಂದು ಇನ್ನೊಬ್ಬ ಸೋದರಿ ದೂರಿದಳು.

ಮೂದಲಿಕೆಯಲ್ಲಿ ಸೋದರರ ಹೆಂಡಂದಿರೂ ಸೇರಿದರು. ''ನನ್ನ ಸೋದರನ ದೊಡ್ಡ ಫ್ಯಾಕ್ಟರಿ ಬೆಂಗಳೂರಿನಲ್ಲಿದೆ!'' ಎಂದು ಪುಸಲಾಯಿಸಿ ನನ್ನನ್ನು ಮದುವೆಗೆ ಒಪ್ಪಿಸಿ, ನನ್ನ ಭವಿಷ್ಯ ಹಾಳುಮಾಡಿದರು! ಒಬ್ಬಾಕೆ ಪರಿತಪಿಸಿದಳು. ವರನಿಗೆ ಮಧುಮೇಹ ಕಾಯಿಲೆ ಇದ್ದದ್ದನ್ನು ಬಚ್ಚಿಟ್ಟು ಮೋಸದ ಮದುವೆ ಮಾಡಿದರು! ಇನ್ನೊಬ್ಬಾಕೆ ಗೋಳಿಟ್ಟಳು. ಅವರಿಗೆ ಬಡಾಯಿಕೊಚ್ಚುವದು, ಸುಳ್ಳು ಹೇಳುವದು, ನೀರು ಕುಡಿದಷ್ಟು ಸುಲಭವಾಗಿತ್ತು! ನಾದಿನಿ ತೀರ್ಪುಕೊಟ್ಟಳು.

ಇಷ್ಟೆಲ್ಲ ಆಪಾದನೆಗಳನ್ನು ಎದುರಿಸಿದರೂ, ದೊಡ್ಡ ಮೊತ್ತವನ್ನು ಹೊಂದಿದ ಪ್ರೇಮನಾಥನ ಕುಟುಂಬದವರು ಸಾಧಿಸಿದ್ದು ಏನು? ಎಂಬ ಪ್ರಶ್ನೆ ಎದ್ದು ನಿಲ್ಲುತ್ತದೆ. ಹಿಂದೆ ಆತನ ದರ್ಶನಕ್ಕಾಗಿ ಹಂಬಲಿಸುವವರು ಇದ್ದರು. ಇಂದು ಆತನ ಸಂಬಂಧಿ! ಎಂದು ಕೂಡ ಹೇಳಿಕೊಳ್ಳುವ ಗೋಜಿಗೆ ಹೋಗುವದಿಲ್ಲ. ಮಕ್ಕಳಿಬ್ಬರೂ, ಗ್ರಾಜ್ಯುಯೇಟ್ ಪದವಿಯನ್ನು ಕೂಡ ಪಡೆಯಲು ಆಗದೇ ತಂದೆ ಪ್ರಾರಂಭಿಸಿದ ಕಂಪನಿಯ ಮುಖ್ಯಸ್ಥ ಮತ್ತು ಉಪಮುಖ್ಯಸ್ಥ ಆದರು. ಆದರೆ ಹೊರಗೆ ಟೂರ್ ಹೋದರೆ ಪಂಚತಾರಾ ಹೋಟೇಲಿನಲ್ಲಿ ವಾಸ, ಉಪಾಹಾರಗಳಂತೆ. ಹಿರಿಯ ಆತನು ಬೆಂಗಳೂರಿನಲ್ಲಿದ್ದರೂ ದಿನ ಒಂದಕ್ಕೆ ಆತನ ಖರ್ಚು ಒಂದು ಸಾವಿರ ರೂಪಾಯಿ ಅಂತೆ. ಎರಡನೆಯವರು ತಾನೇನು ಕಮ್ಮಿ? ಎಂದು ಎರಡು ಸಾವಿರವಾದರೂ ದಿನಕ್ಕೆ ಜೇಬುಹಣ ಬೇಕು! ಎಂದು ತಾಯಿಯೊಡನೆ ವಾದಿಸಲಾರಂಭಿಸಿದ್ದಾನಂತೆ. ಪತ್ನಿ, ಬಿಟ್ಟುಹೋದ ಪತಿಯ ಧನರಾಶಿಯ ವ್ಯವಸ್ಥೆ ಮಾಡಲಾಗದೇ ಕಂಗಾಲಾಗಿದ್ದಾಳೆ.

ಅವಳ ಬಂಧುಗಳು ಆ ಧನರಾಶಿಯಲ್ಲಿ ಕಡಿತ ಮಾಡಲು ಹಗಲೂ-ರಾತ್ರಿ ಷಡ್‌ಯಂತ್ರ ನಡೆಸಿದ್ದಾರಂತೆ. ಬೆವರು ಸುರಿಸದೇ ಬಂದ ಹಣದಿಂದ ಅಂಥವರ ಕುಟುಂಬದ ಮೇಲೆ ಆಗುವ ದುಷ್ಪರಿಣಾಮಗಳನ್ನು ಅರಿಯಲು ಇದಕ್ಕೂ ಉತ್ತಮ ಉದಾಹರಣೆ ಬೇಕೇ?

* * *

ಈ ಪ್ರಕರಣ ಕುಟುಂಬಕ್ಕಷ್ಟೆ ಸೀಮಿತವಾಗಿ ಉಳಿಯಲಿಲ್ಲ. ರೇಡಿಯೋ, ಟಿ. ವಿ., ವೃತ್ತಪತ್ರಿಕೆಗಳೆಲ್ಲ ಪ್ರೇಮನಾಥನ ಹಗರಣದ ವಿವಿಧ ಮುಖಗಳನ್ನು ಹೊರ ಹಾಕಲು ಪ್ರಾರಂಭಿಸಿದವು. ಕೇಂದ್ರಮಂತ್ರಿಯೊಬ್ಬರು ಆತನ ವ್ಯವಹಾರಗಳಲ್ಲಿ ಪಾಲುದಾರರೆಂಬ ಆಪಾದನೆಯ ಮೇಲೆ ರಾಜೀನಾಮೆ ಕೊಡಬೇಕಾಯಿತು. ಓರ್ವ ಯೋಜನಾ ಆಯೋಗದ ಸದಸ್ಯರು ರಾಜೀನಾಮೆ ಕೊಡಬೇಕಾಯಿತು. ಇನ್ನೆಷ್ಟು ತಲೆಗಳು ಉರುಳಲಿವೆಯೋ! ಆದರೂ ಆ ಕುಟುಂಬದವರೆಲ್ಲ ಇದೊಂದು ಮಾಮೂಲು ವ್ಯವಹಾರ, ಎಂಬಂತೆ ನಡೆದುಕೊಳ್ಳುವದನ್ನು ನೋಡಿ ವಿಚಿತ್ರವೆನಿಸುತ್ತದೆ. ಒಮ್ಮೆ ಇದ್ದ ಮರ್ಯಾದೆ ಮಾಯವಾದರೆ ಮಾನವನು ಆ ಬಳಿಕ ಯಾವುದಕ್ಕೂ ಹೆದರಬೇಕಾಗಿಲ್ಲ, ಎಂದು ತೋರುತ್ತದೆ. ಪಾಪ! ಅದೆಷ್ಟೋ ಜನರ ಉಳಿತಾಯ ಪ್ರೇಮನಾಥನ ಸಾಹಸಗಳಿಗೆ ಮಾರು ಹೋಗಿ ನೀರ ಪಾಲಾಯಿತು. ಸಂಬಂಧಿಗಳೆಲ್ಲ ಭಿಡೆಗೆ, ಆಗ್ರಹಕ್ಕೆ ಬಿದ್ದು ಆತನ ಖಾಸಗಿ ಕಂಪನಿಯಲ್ಲಿ ಹಣ ತೊಡಗಿಸಿದವರೆಲ್ಲ ಕಳೆದುಕೊಂಡರು. ಎಷ್ಟೊ ಜನ ಇದ್ದ ನೌಕರಿ ಬಿಟ್ಟು ಇವರ ವಲಯದ ಉದ್ದಿಮೆಗೆ ಸೇರಿಕೊಂಡರು. ಅವರ ಖಾಸಗಿ ಡ್ರಾಯವರನು, ಸಾಹೇಬರ ಕೃಪಾಕಟಾಕ್ಷದಿಂದ ಬ್ಯಾಂಕಿನಲ್ಲಿ ಗುಮಾಸ್ತೆಯಾಗಿ, ಎರಡು ಮಹಡಿಯ ಮನೆ ಕಟ್ಟಿಸಿದ್ದ. ನಂತರ ಸ್ವಾಮಿನಿಷ್ಠೆ ವ್ಯಕ್ತಪಡಿಸಲು ಅವರು ಪ್ರಾರಂಭಿಸಿದ ಕಂಪನಿ ಸೇರಿದ. ಜೊತೆಗೆ ತನ್ನ ಮನೆಯನ್ನು ಮಾರಿ, ಐದು ಲಕ್ಷ ರೂಪಾಯಿಗಳನ್ನು ಹೊಸ ಕಂಪನಿಯಲ್ಲಿ ತೊಡಗಿಸಿದ. ಇಂದು ಆತ ಪುನಃ ಮೊದಲಿನ ವೃತ್ತಿಗೇ ಮರಳಬೇಕಾದ ದುಃಸ್ಥಿತಿ ಒದಗಿದೆ. ಇವರೆಲ್ಲ ಸೇರಿ ನಿದ್ರಾಮಾತ್ರೆಗಳ ಬೆಲೆಯನ್ನು ಗಗನಕ್ಕೇರಿಸಿದ್ದಾರೆ!

◆ ◆ ◆

೧೦. ಅನಾರೋಗ್ಯಧಾಮ

ಜ್ಯೋತ್ಸ್ನಾ ತನ್ನ ಆರೋಗ್ಯವನ್ನು ಅಲಕ್ಷಿಸುವದು ತೀರ ಸಾಮಾನ್ಯ. ಎಚ್ಚರಿಕೆ ಕೊಟ್ಟರೂ ಹಾರಿಕೆಯ ಉತ್ತರ ಕೊಡುವದೂ ಅಷ್ಟೇ ಸಾಮಾನ್ಯ! ಗಂಟಲು ನೋವು, ಕಫಸಂಚಯಗಳು ಎಷ್ಟೋ ಕಾಲದಿಂದ ನಡೆದು ಬಂದಿವೆ. ತೀರ ಅಸಹಾಯಕಳಾದಾಗ ಡಾಕ್ಟರರ ಬಳಿಹೋಗಿ, ಬರೆದುಕೊಟ್ಟ ಮಾತ್ರೆನುಂಗಿ, ಚುಚ್ಚುಮದ್ದು ಪಡೆಯುತ್ತಾಳೆ. ನಂತರ ಆಫೀಸಿನಲ್ಲಿ ಅತಿ ಹೆಚ್ಚು ಮಾತನಾಡಿ ಪುನಃ ನೋವನ್ನು ಬರಮಾಡಿಕೊಳ್ಳುತ್ತಾಳೆ. ಹೌದು, ಅಲ್ಲ. ಬೇಡ, ಆಯ್ತು! ಎಂದು ಉತ್ತರಕೊಟ್ಟು ಮುಗಿಸುವ ಬದಲು, ಉದ್ದುದ್ದ ಭಾಷಣ ಬಿಗಿಯುವದನ್ನು ರೂಢಿಸಿಕೊಂಡಿದ್ದಾಳೆ. ಫೋನಿನಲ್ಲೂ ಹಾಗೆಯೇ! ಅಂತೆಯೇ ಅವಳ ಸ್ವರ ಪೆಟ್ಟಿಗೆ ತೀರ ನಾದುರಸ್ತ ಆಗಿದೆ! ಎಂದು ಕಂಠತಜ್ಞ ವೈದ್ಯರು ಅಭಿಪ್ರಾಯ ಪಟ್ಟಿದ್ದರಿಂದ, ಮೈಸೂರಿನ ಅಖಿಲಭಾರತ ವಾಕ್‌ಶ್ರವಣ ಸಂಸ್ಥೆಯಲ್ಲಿ ತಕ್ಷಣ ಚಿಕಿತ್ಸೆ ಪಡೆಯದಿದ್ದರೆ ಜೀವನದ ಉದ್ದಕ್ಕೂ ತೊಂದರೆ ತಪ್ಪಿದ್ದಲ್ಲ! ಎಂದು ಬೆದರಿಸಿದ್ದರಿಂದ, ೧೫ ದಿನಗಳ ರಜೆ ಪಡೆದು ಹೋಗಿದ್ದಾಳೆ. ಈಗ ಅವಳಿಗೆ ಒಂದುವಾರದ ಚಿಕಿತ್ಸೆಯಿಂದ ಗುಣವಿದೆ. ತನ್ನ ನಿಜವಾದ ಸ್ವರ ಯಾವದು? ಎಂದು ಮೊದಲಬಾರಿಗೆ ತಿಳಿಯಿತಂತೆ. ಅಂದರೆ ಇಷ್ಟು ವರ್ಷ ಅವಳು ಅಪಸ್ವರದಿಂದ, ಇಲ್ಲವೇ ಕಿರುಚಲು ಧ್ವನಿಯಿಂದ ಆಫೀಸಿನ ಜನರನ್ನು ನಿಯಂತ್ರಿಸುತ್ತಿದ್ದಳು, ಎಂದ ಹಾಗಾಯಿತು. ಡಾಕ್ಟರರು, ಈಗ ಕಂಡು ಹಿಡಿದ ಧ್ವನಿಯಲ್ಲೇ ಮಾತನಾಡಬೇಕು, ಅವಶ್ಯಕತೆ ಇಲ್ಲದಲ್ಲಿ ಮಾತನಾಡಕೂಡದು! ಎಂದು ತಾಕೀತು ಮಾಡಿದ್ದಾರಂತೆ.

ಆಕಾಶವಾಣಿಯ ಉದ್ಧಾರ ಮಾಡುವ ಕನಸು ಕಟ್ಟಿ, ಕೆಲಸಮಾಡದವರ ಮೇಲೆ ರೇಗಿ ಕೂಗಾಡಿದರೆ, ಪರಿಸ್ಥಿತಿ ಸುಧಾರಿಸುವದುಂಟೆ? ಇರುವ ಒಂದುವರೆ ವರ್ಷ ಸರ್ವಿಸಿನಲ್ಲಿ. ಯಾರ ಮೇಲೂ ಸಿಡಿಮಿಡಿಗೊಳ್ಳದೇ ಶಾಂತ ಚಿತ್ತದಿಂದ ಆಫೀಸಿನ ಕೆಲಸಗಳನ್ನೂ ನಿರ್ವಹಿಸುವದು ಮುಖ್ಯ ಎಂದು ಹೇಳುತ್ತ ಬಂದಿದ್ದೇನೆ.

ಇಷ್ಟಕ್ಕೇ ಮುಗಿಯಲಿಲ್ಲ ಅವಳ ಅನಾರೋಗ್ಯ ಸರಣಿ!

ಕಳೆದ ಒಂದು ವರ್ಷದಿಂದ ಜ್ಯೋತ್ಸ್ನಾ, ಆಯುರ್ವೇದದ ಔಷಧಿಗಳನ್ನು ಏಕಪ್ರಕಾರವಾಗಿ ತೆಗೆದುಕೊಳ್ಳುತ್ತಲೇ ಇದ್ದರೂ, ಸಂಧಿವಾತದ ವಿವಿಧ ರೂಪಗಳು ಆಗಾಗ ಪ್ರತ್ಯಕ್ಷವಾಗುತ್ತಲೇ ಇರುತ್ತವೆ. ಅಂತೆಯೇ ಪ್ರತಿದಿನ ಬೆಳಿಗ್ಗೆ ವಾಕ್‌ಗೆ ಹೋಗುವ ಮೊದಲು ಗಂಟುಗಳಿಗೆ, ಕೈ ಬೆರಳುಗಳಿಗೆ ತೈಲಮಜ್ಜನ ನಡೆಯುತ್ತದೆ. ಒಂದು ಬೆಳಿಗ್ಗೆ ಎಡಗೈ ನಡು ಬೆರಳು ಮಡಚಿಕೊಂಡರೆ ತಿರುಗಿ ನೇರವಾಗಲು ನಿರಾಕರಿಸಿಬಿಟ್ಟಿತು! ತೊಂದರೆ ಮುಂದರಿದಿದ್ದರಿಂದ ಪ್ರಸಿದ್ಧ ಸರ್ಜನ್ ಡಾ. ಕೆ.ಟಿ. ಸುರೇಂದ್ರ, ಅವರ ಬಳಿ ಹೋದೆವು. ಅವರು ಅದು 'ಟ್ರಿಗ್ಗರ್ ಫಿಂಗರ್' ತೊಂದರೆ. ಎಂದು ಕೂಡಲೇ ಗುರುತಿಸಿ, 'ಯೋಚನೆಗೆ ಕಾರಣವಿಲ್ಲ. ತೀರ ಕಿರಿ ಆಪರೇಶನ್ ಮಾಡಿ ಸರಿಪಡಿಸಿ ಬಿಡುತ್ತೇನೆ' ಎಂದು ಆಶ್ವಾಸನೆ ಕೊಟ್ಟರು. ತಾವು ಕೆಲಸ

ಮಾಡುತ್ತಿರುವ ಸಂತ ಮಾರ್ಥಾ ಆಸ್ಪತ್ರೆಯಲ್ಲಿ ಎಲ್ಲ ಅನುಕೂಲಗಳಿವೆ. ಸೇರ್ಪಡೆಯಾಗಿ! ಎಂದು ಸೂಚಿಸಿದರು. ಆ ಕುರಿತು ಏರ್ಪಾಡು ಕೂಡ ಮಾಡಿದರು.

ನಮಗೆ ಕೊಟ್ಟ ನಾಲ್ಕನೆಯ ನಂಬರ ಕೋಣೆ ಸೊಗಸಾಗಿತ್ತು. ವಾತಾವರಣ ಶಾಂತವಾಗಿತ್ತು. ನಗರದ ನಟ್ಟನಡುವೆ ಇದ್ದರೂ ಯಾವುದೋ ವಿಶ್ರಾಂತಿಧಾಮದಲ್ಲಿದ್ದ ಭಾಸವಾಗುತ್ತಿತ್ತು. ಆಪರೇಶನ್ ಮುನ್ನಾ ದಿನ ರಾತ್ರಿ ಮಾಲಿ ಬಂದು ಆಸ್ಪತ್ರೆಯಲ್ಲಿ ಇರುವದೆಂದು ಗೊತ್ತಾಗಿತ್ತು. ಆದರೆ ಅವಳ ಆರೋಗ್ಯವೇ ಬಿಗಡಾಯಿಸಿತು. ಬೇರೆ ಯಾರಿಗೂ ಈ ವಿಷಯದಲ್ಲಿ ನೆರವು ಕೋರದೇ ನಾನೇ ಆಸ್ಪತ್ರೆಯಲ್ಲಿ ಇದ್ದೆ. ಆಪರೇಶನ್ ಚಿಕ್ಕದಾದರೂ, ದೊಡ್ಡ ಆಪರೇಷನ್‌ಗೆ ಮಾಡುವ ಸಿದ್ಧತೆಗಳನ್ನೆಲ್ಲ ಕಡ್ಡಾಯವಾಗಿ ಮಾಡಬೇಕಾಯಿತು. ಮೂತ್ರ-ರಕ್ತ ಪರೀಕ್ಷೆ, ರಕ್ತದೊತ್ತಡ, ಹೃದಯಕ್ಕಾಗಿ ಈ. ಸಿ. ಜಿ. ಎಲ್ಲವನ್ನೂ ಪರೀಕ್ಷಿಸಿದರು. ಗುಂಗಿನ (ಅನೆಸ್ಥೇಶಿಯ) ಔಷಧ ಕೊಟ್ಟು ಶಸ್ತ್ರಕ್ರಿಯೆ ಮಾಡಲಾಯಿತು. ಒಟ್ಟು ಮೂರುದಿನ ಆಸ್ಪತ್ರೆಯಲ್ಲಿರಬೇಕಾಯಿತು. ಇದಕ್ಕೆಲ್ಲ ಫೀ ಎಂದು ದೊಡ್ಡ ಮೊತ್ತವನ್ನೇ ವಸೂಲು ಮಾಡಿದರು. ಈ ಹಿಂದೆ ಸರಕಾರಿ ಸೇವೆಯಲ್ಲಿದ್ದಾಗ ಹೆಚ್ಚಿನ ಔಷಧೋಪಚಾರ, ಕಠಿಣ ಹಾಗೂ ಮಹತ್ವದ ಶಸ್ತ್ರ ಚಿಕಿತ್ಸೆಗಳನ್ನೆಲ್ಲ ಅಗ್ಗದಲ್ಲಿ ಪಡೆದು ರೂಢಿಯಿದ್ದ ಜ್ಯೋತ್ಸ್ನಾಗೆ ನಡುಬೆರಳ ಕಿರಿ ಆಪರೇಶನ್‌ಗೆ 'ವಿಪರೀತ' ಖರ್ಚು ಬಂದಿತು! ಎನಿಸಿದರೆ ಆಶ್ಚರ್ಯವಿಲ್ಲ.

ಒಂದು ವಾರದ ಬಳಿಕ ತಿರುಗಿ ಆಸ್ಪತ್ರೆಗೆ ಹೋಗಿ ಹೊಲಿಗೆ (ಸ್ಟಿಚಸ್) ತೆಗೆಸಿದ್ದಾಯಿತು. ನಂತರದ ದಿನಗಳಲ್ಲಿ ಬ್ಯಾಂಡೇಜನ್ನು ಮನೆಯ ಈ 'ಡಾಕ್ಟರ'ನೇ ಮಾಡುತ್ತಿದ್ದಾನೆ! ಗಾಯ ಬಹುಪಾಲು ಗುಣವಾಗಿದೆ. ಈ ಶಸ್ತ್ರಕ್ರಿಯೆ ಬಗ್ಗೆ ಯಾರಿಗೂ ತಿಳಿಸುವ ಅವಶ್ಯಕತೆ ಕಾಣಲಿಲ್ಲ. ಆದರೆ ಫೋನು ಕೈಕೊಟ್ಟು ನಿನಗೆ ಸಕಾಲಕ್ಕೆ ತಿಳಿಸಲಾಗಲಿಲ್ಲ.

ಹಿಂದೆ, ಮೈಸೂರಿನಲ್ಲಿ ಅಖಿಲ ಭಾರತ ವಾಕ್-ಶ್ರವಣ ಸಂಸ್ಥೆಯಲ್ಲಿ ಹದಿನೈದು ದಿನ ಔಷಧೋಪಚಾರಗಳನ್ನು ಮಾಡಿಕೊಂಡು ಬಂದರೂ ಜ್ಯೋತ್ಸ್ನಾ ''ಕೋಕಿಲ ಕಂಠಿ''ಯಾಗಿ ಮರಳಲಿಲ್ಲ! ಬದಲಾಗಿ ಕಫ ತುಂಬಿಕೊಂಡು ಮಾತನಾಡುವದೇ ಕಷ್ಟವಾಯಿತು. ಡಾ. ಸುಬ್ಬಯ್ಯನಂಥ ಕಂಠತಜ್ಞರ ಚಿಕಿತ್ಸೆ ಪ್ರಾರಂಭವಾಗಿದೆ. ಮಾತ್ರೆಗಳ ರಾಶಿ ಸೇವಿಸುತ್ತಿದ್ದಾಳೆ. ಮೊನ್ನೆ ಎಡಕೈ ಊದಿಕೊಂಡಿತು. ಕ್ಷಕಿರಣ, ರೇಡಿಯಸ್‌ಗೆ ಬಿರುಕು ತೋರಿಸಿತು. ಈಗ ಇನ್ನಷ್ಟು ಮಾತ್ರೆಗಳು. ಪ್ಲಾಸ್ಟರ್ ಸೇವೆ ನಡೆದಿದೆ. ಆದರೆ ಇವುಗಳಿಂದ ನಿತ್ಯ ಜೀವನ ಶ್ರಮಕ್ಕೆ ತೊಂದರೆ ಆಗಿಲ್ಲ.

ಕೃಷ್ಣಕ್ಕಳದು ಚಿಂತಾಜನಕ ಸ್ಥಿತಿಯೇ! ಕೆಲವರ್ಷಗಳ ಹಿಂದೆ, ಅವಳಿಗೆ ಗರ್ಭಕೋಶ ತೆಗೆದು ಹಾಕಲು (ಹಿಸ್ಟರೆಕ್ಟಾಮಿ) ಆಪರೇಶನ್ ಮಾಡಿಸಿಕೊಳ್ಳುವಂತೆ ತಜ್ಞವೈದ್ಯರು ಸೂಚಿಸಿದ್ದರು. ಆದರೆ ಅವಳಿಗೆ ಅದು ಸರಿಬರಲಿಲ್ಲ. ಅನೇಕಾನೇಕ ಡಾಕ್ಟರರ ಅಭಿಪ್ರಾಯ ಪಡೆದು ಕೊನೆಗೊಮ್ಮೆ ಆಪರೇಶನ್ ಇಲ್ಲದೆಯೇ ಗುಣಪಡಿಸಬಹುದು! ಎಂದ ವೈದ್ಯರೊಬ್ಬರ ತೀರ್ಪಿನಿಂದ ಸಂತುಷ್ಟಳಾದಳು. ಆದರೆ ಈ ಚಿಕಿತ್ಸೆ ಬಹಳ

ಕಾಲ ಫಲಕಾರಿಯಾಗಿ ನಡೆಯಲಿಲ್ಲ. ಒಳಭಾಗಗಳು ಕ್ಯಾನ್ಸರ್ ರೋಗಕ್ಕೆ ಬಲಿಯಾಗಿವೆ! ಎಂದು ಮಣಿಪಾಲ ಆಸ್ಪತ್ರೆಯ ಡಾಕ್ಟರರು ತೀರ್ಪನ್ನಿತ್ತರು. ಬಳಿಕ ಅವಳು ಸಿದ್ದೌಷಧಿ, ಸಿದ್ದಾಪುರದ ಗಾಂವಠಿ ವೈದ್ಯರೊಬ್ಬರು, ಬೇರು, ತೊಗಟೆಯಾದಿಗಳನ್ನು ಅರೆದು ಮಾಡಿಕೊಡುತ್ತಿದ್ದ ಕಾಢಾ-ಕಷಾಯಗಳನ್ನು ಕುಡಿದು ಚೈತನ್ಯ ಪಡೆದಳು. ಔಷಧಕ್ಕಿಂತ ಜೀವನದಲ್ಲಿ ಅವಳಗಿರುವ ಅತಿ ಆಸಕ್ತಿ ಹಾಗೂ ಉಲ್ಲಾಸದ ಪ್ರವೃತ್ತಿಗಳೇ ಈ ಚೈತನ್ಯಕ್ಕೆ ಕಾರಣವೆಂದು ನಮಗೆಲ್ಲ ಗೊತ್ತು!

ಆ ಈ ಊರುಗಳಲ್ಲಿ ಗೃಹಪ್ರವೇಶ, ಮುಂಜಿ, ಮದುವೆಗಳೆಂದು, ಪುನಃ ತಿರುಗಾಡಲಾರಂಭಿಸಿದಳು. ಮಲಬದ್ಧತೆ ತೀವ್ರವಾಗಿ, ಹೊಟ್ಟೆಯುಬ್ಬಿ ಹುಬ್ಬಳ್ಳಿಯ ಆಸ್ಪತ್ರೆಯಲ್ಲಿ ಭರ್ತಿಮಾಡಿ, ಮಲವನ್ನೆಲ್ಲ ಹೊರ ತೆಗೆಯಬೇಕಾಯಿತು. ಇದರಿಂದ ಚೇತರಿಸಿಕೊಂಡು ಪುನಃ ತಿರುಗಾಟ ಪ್ರಾರಂಭಿಸಿದಳು. ಹೋದಲ್ಲೆಲ್ಲ ಪಥ್ಯ ಪಾಲಿಸದೇ ಎಲ್ಲವನ್ನು ತಿನ್ನುತ್ತಿದ್ದು, ಮೇಲಿಂದ ಮೇಲೆ ಎನಿಮಾ ಕೊಡುವ ಪ್ರಸಂಗಗಳು ಎದುರಾದವು. ತಂಗಿಯ ಮಗನ ಮದುವೆಯ 'ನಿಶ್ಚಯ ತಾಂಬೂಲ'ಕ್ಕೆ ಹೋಗಿದ್ದಳು. ನಂತರ ಸಖತ್ ಹೊಟ್ಟೆನೋವು ಕಾಣಿಸಿಕೊಂಡಿತು. ಸಣ್ಣ ಶಸ್ತ್ರ ಚಿಕಿತ್ಸೆಯೂ ಆಯಿತು. ಆದರೆ ಪ್ರಯೋಜನವಾಗಲಿಲ್ಲವೆಂದು ತೋರುತ್ತದೆ. ಯಾಕೆಂದರೆ ಮುಂದೆ ಅದೇ ಮದುವೆಗೆ ಆಕೆಗೆ ಧಾರವಾಡಕ್ಕೆ ಹೋಗಲಾಗಲಿಲ್ಲ! ಎಂದರೆ ಹಾಸಿಗೆ ಹಿಡಿದಿದ್ದಾಳೆ ಎಂದೇ ಲೆಕ್ಕ ಎಂದು ತಿಳಿದಿದ್ದೆ.

ಈಗ ನಿರ್ಮಿಸಿದ ಕೃತಕ ಗುದದ್ವಾರವು ಕೈಕೊಟ್ಟಿದೆ. ನಂತರ ಹೃದಯ ಕಂಪನ ಕಾಣಿಸಿಕೊಂಡಿತು. ಬದುಕುವ ಆಸೆಯಿಲ್ಲವೆಂದು ಡಾಕ್ಟರರು ಹೇಳಿದ್ದರಿಂದ ಹೊನ್ನಾವರದವರೆಲ್ಲ ಹೋಗಿ ನೋಡಿಕೊಂಡುಬಂದರು ಉಳಿದವರೆಲ್ಲ ಕಂಗಾಲ ಸ್ಥಿತಿಯಲ್ಲಿ ಇದ್ದರೂ, ಕೃಷ್ಣಕ್ಕ ಹುಟ್ಟುಗುಣಕ್ಕೆ ಅನುಸಾರವಾಗಿ ಮದುವೆ, ಮುಂಜಿ, ಹುಟ್ಟುಹಬ್ಬ, ಯಾತ್ರಾ ಸ್ಥಳ, ಸುತ್ತುವಿಕೆಗಳ ಕುರಿತು ತನ್ನ ಕಾರ್ಯಕ್ರಮಗಳ ಬಗ್ಗೆ ಮಾತನಾಡುತ್ತಲೇ ಇದ್ದಳಂತೆ. ಅವಳ ಆರೋಗ್ಯ ಏನೂ ಚೆನ್ನಾಗಿಲ್ಲ, ಹೀಗೆಲ್ಲ ಅತ್ಯುತ್ಸಾಹ ಒಳ್ಳೆಯದಲ್ಲ! ಎಂದು ಎಚ್ಚರಿಸಿದಾಗ, ತಾನು ಸುಮಂಗಲಿಯಾಗಿಯೇ ಸಾಯುತ್ತಿದ್ದೆನಲ್ಲ ಅದಕ್ಕಿಂತ ಸಂತೋಷ ಇನ್ನಿದೆಯೇ? ಎಂದಳಂತೆ!! ಅವಳ ಈ ಉಲ್ಲಾಸದ ಹಾಗೂ ಲಘು ಪ್ರವೃತ್ತಿಗಳಿಂದಾಗಿ ಅವಳ ಅತಿದೊಡ್ಡ ಅವಿಭಕ್ತ ಕುಟುಂಬದಲ್ಲಿ ಎಲ್ಲರೊಡನೆ ಹೊಂದಿಕೊಂಡು ಹೋಗಿ ಸೈ! ಅನಿಸಿಕೊಳ್ಳಲು ಸಾಧ್ಯವಾಯಿತು, ಎಂದು ಕಾಕಿಯವರು ಮೇಲಿಂದ ಮೇಲೆ ಹೇಳುತ್ತಿರುತ್ತಾರೆ.

★ ★ ★

ಜ್ಯೋತ್ಸ್ನಾಳಿಗೆ ಈ ಹಿಂದೆ ಕಿರು ಆಪರೇಶನ್ ಮಾಡಿಸಿದ ಎಡಕೈಗೆ ಸತತ ನೋವು ಕಾಣಿಸಿಕೊಂಡಿದ್ದರಿಂದ ತಿರುಗಿ ಸರ್ಜನರ ಬಳಿಗೆ ಹೋದೆವು. ಮತ್ತೆ ಸಣ್ಣ ಆಪರೇಶನ್ ಮಾಡಿಬಿಡುತ್ತೇನೆ ಎಂದರು. ಅಂದೇ ಆಸ್ಪತ್ರೆಗೆ ದಾಖಲಾಗಲು ಸೂಚಿಸಿದರೂ ಸಕಲ ಸಿದ್ಧತೆಯನ್ನು ಮಾಡಿಕೊಳ್ಳದಿದ್ದರಿಂದ ತಿರುಗಿ ಬಂದೆವು. ಹೀಗಾಗಿ ೧೯-೪-೧೯೯೫ಕ್ಕೆ ಆಸ್ಪತ್ರೆ ಸೇರಿ ಮರುದಿನ ಆಪರೇಶನ್ ಮಾಡಲಾಯಿತು. ಎಲ್ಲವೂ

ಸುಸೂತ್ರವಾಗಿ ನಡೆದರೂ ಜ್ಯೋತ್ಸ್ನಾಳ ಆರೈಕೆ ಮಾಡಲು ಯಾವ ಮಹಿಳೆಯೂ ಮುಂದೆ ಬಾರದ್ದರಿಂದ ಎಲ್ಲದಕ್ಕೂ ನಾನೇ ಮುಂದಾಗಬೇಕಾಯಿತು. ಅದು ಮಾರ್ಥಾ ಆಸ್ಪತ್ರೆಯಲ್ಲಿ ಐದನೆಯ ಮಹಡಿಯ ಮೇಲೆ ಸ್ತ್ರೀಯರಿಗಷ್ಟೆ ಸೀಮಿತವಾದ ವಾರ್ಡ್ ಆಗಿತ್ತು. ಇರುವ ಒಂದೇ ಲಿಫ್ಟ್, ರೋಗಿಗಳಿಗಷ್ಟೆ ಮೀಸಲು ಇದ್ದುದರಿಂದ ಅದೆಷ್ಟು ಸಲ ನಾನು ಪಾವಟಣಿಗೆಗಳ ಸರಮಾಲೆಯನ್ನು ಹತ್ತಿ ಇಳಿಯಬೇಕಾಯಿತು, ಎಂದು ದೇವರೇ ಬಲ್ಲ! ನರ್ಸಮ್ಮಗಳಿಗೆ ಒಂದೊಂದು ಬಾರಿ, ಒಂದೊಂದು ಔಷಧ ತರಲು ಹೇಳುವದು ಅಭ್ಯಾಸ. ಇವೆಲ್ಲ ಬೇಕಾಗಿಲ್ಲ! ಎಂದು ಡಾಕ್ಟರರೇ ಸೂಚಿಸಿದಾಗ ಹಿಂತಿರುಗಿಸಲು ಹೇಳುವರು. ಹಿಂತಿರುಗಿ ಪಡೆಯುವವರು ಆ ಸರ್ಟಿಫಿಕೇಟ್ ಬೇಕು, ಈ ರೆಕಾರ್ಡ ಬೇಕು, ಎಂದು ತಿರುಗಿ ಓಡಿಸುವರು. ನನಗೆ ಅರವತ್ತು ವರ್ಷಗಳು ದಾಟಿ ಹೋದರೂ, ಇಷ್ಟೆಲ್ಲ ದೈಹಿಕ ಶ್ರಮ ತಡೆದುಕೊಳ್ಳುವದು ಸಾಧ್ಯ! ಎಂದು ನೆಮ್ಮದಿಯಾಯಿತು. ಆಸ್ಪತ್ರೆಯಲ್ಲಿ ಸಿಗುವ ಸವಲತ್ತುಗಳನ್ನು ನೋಡಿ ಸಾಕಪ್ಪಾ! ಎನಿಸಿ ೨೦-೪-೯೮೫ರ ಸಂಜೆಯೇ ಮನೆಗೆ ಹಿಂತಿರುಗಿ ಬಂದೆವು. ಸಿಸ್ಟರುಗಳು ಮಾಡುವ ಸೇವೆ, ನನಗೂ ಮಾಡಲು ಬರುವದರಿಂದ ಯಾವ ತೊಂದರೆಯೂ ಇಲ್ಲ.

ಓರ್ವ ತರಬೇತಿಯಲ್ಲಿರುವ ನರ್ಸ್, ಚುಚ್ಚು ಸೂಜಿಯನ್ನು ತಪ್ಪಾಗಿ ಜ್ಯೋತ್ಸ್ನಾಳ ಕೈಯಲ್ಲಿ ಸೇರಿಸಿದ್ದರಿಂದ ಅದು ಪೂರಿಯಂತೆ ಊದಿಕೊಳ್ಳಲಾರಂಬಿಸಿತು! ತಪಾಸಣೆಗೆ ಬಂದ ಕಿರಿಯ ಡಾಕ್ಟರರು ಸಿಸ್ಟರಳ ಮಂಗಳಾರತಿ ಮಾಡಿ, ಸರಿಯಾಗಿ ಚಿಕಿತ್ಸೆ ಒದಗುವಂತೆ ನೋಡಿಕೊಂಡರು. ಅಲ್ಲಿಯ ನೌಕರರು ಒಂದರ ಬದಲು ಹತ್ತು ಔಷಧಿಗಳನ್ನು ತರಿಸಿಕೊಂಡು, ಅವನ್ನು ತಮ್ಮದನ್ನಾಗಿಸುವ ಕುಶಲ ಕಲೆಯನ್ನು ಕರಗತ ಮಾಡಿಕೊಂಡಿದ್ದಾರೆ. ಹಿಂದಿನ ಸಲ ಈ ಅನುಭವ ನಮ್ಮದಾದ್ದರಿಂದ ಈ ಬಾರಿ ಅವರು ಬರೆದು ಕೊಟ್ಟ ಅದೆಷ್ಟೋ ಔಷಧಿಗಳನ್ನು ಖರೀದಿಸಲೇ ಇಲ್ಲ. ಅಲ್ಲದೇ ಡಾಕ್ಟರರು ಬೇಡವೆಂದ ಔಷಧಗಳನ್ನು ಆ ಕೂಡಲೇ ಖುದ್ದಾಗಿ ವಾಪಸ್ ಮಾಡಿದೆ. ಆದ್ದರಿಂದ ಈ ಬಾರಿಯ ಆಪರೇಶನ್ ಖರ್ಚು ಹಿಂದಿನಕ್ಕಿಂತ ಅರ್ಧದಷ್ಟಾಯಿತು.

ಅತ್ಯವಶ್ಯವಿದ್ದಾಗ ಫೋನು ಮೂರ್ಛೆ ಹೋಗುವದು ಭಾರತದಲ್ಲಿ ತೀರ ಸಾಮಾನ್ಯವಲ್ಲವೇ? ಆ ಮೇರೆಗೆ ಆಪರೇಶನ್‌ಗೆ ೨ ದಿನ ಮೊದಲೇ ಅದು ಸ್ತಬ್ಧವಾಗಿಬಿಟ್ಟಿತು. ನೀನು ಫೋನು ಮಾಡಿದಾಗ ನಮ್ಮ ಫೋನ್ ಸಿಗದೇ ಎಲ್ಲಿ ಕಾಳಜಿ ಮಾಡುವಿಯೋ ಎಂದು ದುಗುಡವಾಯಿತು. ಈ ರವಿವಾರ ನೀನು ಫೋನಿಸಿದಾಗ ಸರಿಯಾಗಿ ಕೇಳಿಬರುತ್ತಿರಲಿಲ್ಲವಾದ್ದರಿಂದ ಮುಂದಿನವಾರ ತಿರುಗಿ ಮಾಡುವದಾಗಿ ಹೇಳಿದ್ದಾಗಿ ಜ್ಯೋತ್ಸ್ನಾ ತಿಳಿಸಿದಳು.

* * *

ಜ್ಯೋತ್ಸ್ನಾ ಅಮೇರಿಕೆಗೆ ಹೋಗುವ ಶಾರೀರಿಕ, ಹಾಗೂ ಮಾನಸಿಕ ಸಿದ್ಧತೆಗಳನ್ನು ನಡೆಸಿದ್ದಾಳೆ. ಮೊನ್ನೆ ಪುನಃ ಡಾ. ಸುರೇಂದ್ರ ಅವರ ಹತ್ತಿರ ಹೋಗಿ ಎಡಗೈ ನೋವನ್ನು ನಿಯಂತ್ರಣಕ್ಕೆ ತರಲು, 'ಗೋಣುತಿರುಗಿಸುವ' ಚಿಕಿತ್ಸೆ ಪಡೆದು ಬಂದಿದ್ದಾಳೆ. ಈ ಕೈನೋವು 'ಟ್ರಿಗ್ಗರ್ ಫಿಂಗರ್'ದಿಂದ ಎಂದು ಗುರುತಿಸಿ ಕಿರು ಆಪರೇಶನ್ ನಂತರವೂ

ಕೈಬೆರಳುಗಳು ನಿಯಂತ್ರಣಕ್ಕೆ ಬಾರದ್ದರಿಂದ ಕೈನರಗಳು ಹೆಣೆದು ಕೊಂಡಿರಬೇಕು, ಎಂದು ಇನ್ನೊಂದು ಮಿನಿ ಶಸ್ತ್ರ ಚಿಕಿತ್ಸೆ ಮಾಡಿದ್ದು ನೆನಪಿದೆಯೇ? ಅದರಿಂದಲೂ ಹೆಚ್ಚಿನ ಲಾಭವಾಗಲಿಲ್ಲ. ಈಗ ಕೊರಳಿನಿಂದ ಕೈಗೆ ಹೋಗುವ ನರಗಳಲ್ಲಿಯೇ ಕೊರತೆ ಇರಬೇಕೆಂದು ಡಾಕ್ಟರರು ಸಂದೇಹಪಟ್ಟರು. ಈ ಬಾರಿ ಶಸ್ತ್ರಚಿಕಿತ್ಸೆ ಬೇಡ! ಎಂದು ತಮ್ಮ ಜಯನಗರದ ಸ್ವಂತ ಆಸ್ಪತ್ರೆಯಲ್ಲಿ ಸ್ಮೃತಿ ತಪ್ಪಿಸಿ ಕೊರಳನರಗಳನ್ನೆಲ್ಲ ಅಲ್ಲೋಲ ಕಲ್ಲೋಲ ಮಾಡಿ ವಿವರ ಪರೀಕ್ಷೆ ಮುಗಿಸಿದರು. ಅದರ ಲಾಭಾಂಶಗಳು ಇನ್ನೂ ಹತ್ತು ದಿನಗಳಲ್ಲಿ ತಿಳಿಯುವದಂತೆ. ಜ್ಯೋತ್ಸ್ನಾಳೊಂದಿಗೆ ಮಧ್ಯಾಹ್ನ ಎರಡು ಗಂಟೆಗೆ ಮನೆ ಬಿಟ್ಟವನು ತಿರುಗಿ ಬರುವಾಗ ಮಧ್ಯರಾತ್ರಿ. ಜ್ಯೋತ್ಸ್ನಾಳಿಗಿನ್ನೂ ಸ್ಮೃತಿ ಬಾರದ್ದರಿಂದ ಅಲ್ಲಿಯೇ ಇದ್ದು, ಮರುದಿನ ಬರಬೇಕಾಯಿತು. ಇನ್ನು ಮುಂದೆ ತಜ್ಞರ ಸಲಹೆ, ಇಂಜೆಕ್ಷನ್, ಮಾತ್ರೆ ನುಂಗುವದು ಮೊದಲಾದವನ್ನು ಬಿಡುವದೇ ಕ್ಷೇಮ! ಎಂಬ ನಿರ್ಧಾರಕ್ಕೆ ಬಂದಿದ್ದಾಳೆ. ಕಾಲುನೋವು, ಕೈನೋವು, ಗಂಟಲುನೋವುಗಳಿಗಾಗಿ ಹೋಮಿಯೋಪಥಿ, ಆಯುರ್ವೇದ, ಎಲೋಪಥಿ, ನಿಸರ್ಗ ಚಿಕಿತ್ಸೆ, ಧ್ವನಿಥೆರಾಪಿ ಎಲ್ಲ ಬಗೆಯ ಔಷಧೋಪಚಾರ ಮಾಡಿಸಿಕೊಂಡ ಬಳಿಕವೂ ಯಾವ ನೋವೂ ಸಂಪೂರ್ಣವಾಗಿ ಗುಣವಾಗಲೇ ಇಲ್ಲ. ಆದ್ದರಿಂದ ಎಲ್ಲ ಚಿಕಿತ್ಸೆ ನಿಲ್ಲಿಸಿ, ಬರುವದೆಲ್ಲ ಬರಲಿ, ದೇವರ ದಯೆ ಒಂದಿರಲಿ! ಎಂಬುದೇ ಸರಿಯಾದ ನಿರ್ಧಾರ.

ಗಜಾ-ಮಂಗಲಾ ಇಬ್ಬರ ತೂಕವೂ ವಿಪರೀತ ಹೆಚ್ಚಾಗಿದ್ದರಿಂದ ಬೆಂಗಳೂರಿನ ಜಿಂದಾಲ್ ನಿಸರ್ಗಚಿಕಿತ್ಸಾ ಸಂಸ್ಥೆಯಲ್ಲಿ ಹತ್ತು ದಿನಗಳ ಚಿಕಿತ್ಸೆ ಪಡೆದು ಐದು ಐದು ಕಿಲೋ ತೂಕ ಕಡಿಮೆ ಮಾಡಿಕೊಂಡಿದ್ದಾರೆ. ಮನೆಗೆ ಹಿಂದಿರುಗಿದ ಬಳಿಕ, ಸತತ ವ್ಯಾಯಾಮ, ನಿಯಮಿತ ಆಹಾರ ಸೇವಿಸಿದರೆ ಮಾತ್ರ ಆರೋಗ್ಯ ಕಾಪಾಡಿಕೊಳ್ಳಲು ಸಾಧ್ಯ! ಇಲ್ಲವಾದರೆ ಯಥಾಸ್ಥಿತಿ. ಮಾಲಿಗೆ ರಕ್ತದ ಒತ್ತಡ ಇದ್ದೇ ಇದೆ. ಸುಮಿತ್ರಾಳಿಗೆ ರಕ್ತದ ಒತ್ತಡ ಮೊನ್ನೆ ಪ್ರಾರಂಭವಾಗಿ ಗುಳಿಗೆಗಳನ್ನು ಪ್ರಾರಂಭಿಸಿದ್ದಾಳೆ. ಪುಷ್ಪಾಳಿಗೆ ಸಿಹಿ ಮೂತ್ರ ಪ್ರಾರಂಭವಾಗಿ ೧೦ ವರ್ಷಗಳು ಕಳೆದಿವೆ. ಉಮೇಶ ತುಳಸಿದಾಸರಿಗೂ ಇದೆ. ನಮ್ಮ ಜೀವನ ಕ್ರಮದಲ್ಲಿ ಆದ ಬದಲಾವಣೆಗಳಿಂದ ಇವೆಲ್ಲ ಸಾಮಾನ್ಯವಾದರೂ ಆನುವಂಶಿಕ ಬಳುವಳಿಯೂ ಕಾರಣವಾಗಿದೆ. ನನ್ನ ಈ ವರೆಗಿನ ಆಯುಸ್ಸು, ಆರೋಗ್ಯದಿಂದಲೇ ಕಳೆಯಿತು, ಎಂಬುದೇ ನೆಮ್ಮದಿ!

◆ ◆ ◆

೧೧. ಬಾಳಿಗೊಂದು ಗುರಿ

ಜ್ಯೋತ್ಸ್ನಾಳ ಅಮೇರಿಕಾ ಭೇಟಿಯ ನಂತರ ಅವಳೊಡನೆಯೇ ಭಾರತಕ್ಕೆ ಮರಳಿ ಬರಲು ನೀನು ಮಾನಸಿಕವಾಗಿ ಸಿದ್ಧನಿರುವಿ! ಎಂದು ತಿಳಿದು ಅತೀವ ಆನಂದವಾಯಿತು. ಉಳಿದ ಪಾಲಕರು ತಮ್ಮ ಮಕ್ಕಳು, ತಿರುಗಿ ಭಾರತಕ್ಕೆ ಬರಲು ಏನೆಲ್ಲ ಆಮಿಷ ತೋರಿಸಿ ಯಶಸ್ಸು ಪಡೆಯದಿದ್ದಾಗ, ನಮ್ಮ ಮಗ ತಾನಾಗಿ 'ಮರಳಲಿದ್ದೇನೆ', ಎಂದು ಬರೆದಾಗ, ಅಭಿಮಾನ ಅನಿಸದೆ ಇದ್ದೀತೆ? ನೀನು ಸಾರಾಸಾರವಾಗಿ ಎಲ್ಲವನ್ನೂ ವಿಚಾರಮಾಡಿಯೇ ಈ ನಿರ್ಧಾರವನ್ನು ಕೈಕೊಂಡಿರುವಿ, ಎಂದು ತಿಳಿಯುತ್ತೇನೆ. ಈ ಕುರಿತಾಗಿ ಮುಂಜಾಗ್ರತೆಯ ಕೆಲವು ಮಾತುಗಳನ್ನು ಬರೆಯುವದು ಅತಿ ಅವಶ್ಯ ಅನಿಸುತ್ತದೆ.

ಹಿಂದೆಯೇ ಬರೆದಂತೆ, ನೀನು ಶ್ರಮವಹಿಸಿ ಮೈಸೂರಿನಲ್ಲಿ ಓದಿ ಕಂಪ್ಯೂಟರ ಇಂಜಿನಿಯರ್‌ನಾಗಿ, ಆ ನಂತರ 'ಸಂಯುಕ್ತಾ ಕಂಪ್ಯುಟರ್ಸ್' ಸೇರಿಕೊಂಡು, ಅವರು ದಿಲ್ಲಿ, ಊಟಿ, ಗೋವಾ, ಸಿರ್ಸಿ, ಕುಮಟಾ, ಕಾರವಾರ, ಹೊನ್ನಾವರಗಳಲ್ಲಿ ಶಾಖೆಗಳನ್ನು ತೆರೆಯಲು ನೆರವಾಗಿ, ಒಳ್ಳೆಯ ಹೆಸರು ಗಳಿಸಿದಿ. ಮುಂದೆ ಸ್ವಂತ ಪ್ರಯತ್ನದಿಂದ ಅರಿಝೋನಾ ವಿಶ್ವವಿದ್ಯಾಲಯದಲ್ಲಿ ಪ್ರವೇಶ ದೊರಕಿಸಿ, ಹಣಕಾಸಿಲ್ಲದೇ ಪರದಾಡಿದಿ. ಅಂತೆಯೇ ಅಲಬಾಮಾ ವಿಶ್ವವಿದ್ಯಾಲಯಕ್ಕೆ ವಲಸೆ ಹೋಗಬೇಕಾಯ್ತು. ದುಡಿಮೆಯಿಂದಲೇ ಇನ್ನುಳಿದವರಿಗಿಂತ ಕಡಿಮೆ ಸಮಯದಲ್ಲಿ ಮಾಸ್ಟರ್ಸ ಪದವಿ ಪಡೆದಿರುವಿ. ಅಮೇರಿಕನ್‌ರೊಡನೆ ಸ್ಪರ್ಧಿಸಿ, 'ಪ್ರೊಸೊಫ್ಟ್'ದಲ್ಲಿ ನೌಕರಿ ಗಿಟ್ಟಿಸಿದಿ. ನಿನ್ನ ಕಾರ್ಯತತ್ಪರತೆ ಮೆಚ್ಚಿ, ಇನ್ನೊಂದು ಕಂಪನಿ, ಇನ್ನೂ ಹೆಚ್ಚು ಸಂಬಳ ಕೊಡಮಾಡಿ ನಿನ್ನನ್ನು ಬರಮಾಡಿಕೊಂಡಿತು. ಇವೆಲ್ಲ ಕ್ರಮಕ್ರಮವಾಗಿ, ಹಂತಹಂತವಾಗಿ ಸಿಕ್ಕ ಯಶಸ್ಸಿನಿಂದಾಗಿ, ಎಂಥವನಾದರೂ ಬೃಹತ್ ಕನಸಿನ ರಾಜ್ಯವನ್ನು ಕಟ್ಟಿಕೊಳ್ಳುತ್ತ ದುಡಿಯಲಾರಂಭಿಸುತ್ತಾನೆ. ಹೀಗೆ ಮಾಡುವದರಿಂದ ಹೆಚ್ಚೆಚ್ಚು ಧನಸಂಪಾದನೆ ಮಾಡುತ್ತ, ಐಷಾರಾಮಗಳನ್ನು ಪಡೆಯುತ್ತ ಸುಖದ ಜೀವನ ನಡೆಸಬಹುದು! ಎಂದು ಬಹುಸಂಖ್ಯಾತರು ಯೋಚಿಸುತ್ತಾರೆ.

ಆದರೆ ಜೀವನದ ಇನ್ನೊಂದು ಮುಖವನ್ನು ಅರಿಯುವ ಗೋಜಿಗೇ ಅನೇಕರು ಹೋಗುವದಿಲ್ಲ. ನಾವು ಸಮಾಜದ ಒಂದು ಅಂಗವಾಗಿ ಬೆಳೆದಿದ್ದೇವೆ. ಅದೃಷ್ಟವಶಾತ್ ನಮಗೆ ಸಿಕ್ಕಿರುವ ಸದವಕಾಶಗಳು ಅನೇಕಾನೇಕ ದೇಶಬಾಂಧವರಿಗೆ ಸಿಕ್ಕಿರುವದಿಲ್ಲ. ಎಷ್ಟೊಂದು ನಮಗೆ ಗೊತ್ತಿದ್ದ ತಾಯ್ತಂದೆಗಳು, ಏನೆಲ್ಲ ಕನಸುಗಳನ್ನು ಕಟ್ಟಿಕೊಂಡು, ಜೀವನದ ಸಕಲ ಕಷ್ಟ ಕಾರ್ಪಣ್ಯಗಳನ್ನು ಸಹಿಸಿಕೊಂಡು ಮಕ್ಕಳನ್ನು ಬೆಳೆಸುತ್ತಾರೆ. ಅವರು, ಮಕ್ಕಳ ಭವಿಷ್ಯದಲ್ಲಿ ಅಡ್ಡಗೋಡೆಯಾಗಿ ನಿಲ್ಲಬಯಸದಿದ್ದರೂ, ಇಳಿವಯಸ್ಸಿನಲ್ಲಿ ಮಕ್ಕಳೊಂದಿಗೆ ಹಾಯಾಗಿ ನಾಲ್ಕು ದಿನ ಇರಬೇಕು, ಎಂದು ಬಯಸುವದು ತೀರ ಸ್ವಾಭಾವಿಕ. ಹಿಂದೆಲ್ಲ ಅವಿಭಕ್ತ ಕುಟುಂಬಗಳು ಇರುತ್ತಿದ್ದವು.

ಒಬ್ಬರಲ್ಲ ಒಬ್ಬರು ಹಳಬರ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಿದ್ದರು. ಮೊಮ್ಮಕ್ಕಳನ್ನು ಆಡಿಸಿಕೊಂಡು, ರಾಮಾ! ಶಿವಾ! ಎನ್ನುತ್ತ ಕೊನೆಯುಸಿರು ಎಳೆಯುತ್ತಿದ್ದರು. ಇಂದು ನಮಗೆಲ್ಲ ವ್ಯಕ್ತಿ ಸ್ವಾತಂತ್ರ್ಯ ಅತಿ ಮುಖ್ಯವಾಗಿದೆ. ಚಿಕ್ಕ ಕುಟುಂಬ, ಒಂದೇ ಮಗು, - ಆರತಿಗಾಗಿ ಮಗಳನ್ನೋ, ಕೀರ್ತಿಗಾಗಿ ಮಗನನ್ನೋ ಪಡೆದು ನಮ್ಮ ಸರ್ವಸ್ವ, ಸರ್ವಲಕ್ಷ್ಯಗಳನ್ನು ಅವನಲ್ಲಿ! ಅವಳಲ್ಲಿ ತೊಡಗಿಸುತ್ತೇವೆ. ಯಶಸ್ಸಿನ ಹಾದಿಯಲ್ಲಿ ಹೊರಟ 'ಅವನು'- 'ಳು' ತನ್ನ ಬೇರುಗಳು ಎಲ್ಲಿವೆ? ಎಂದು ಮರೆತು ಬಿಡುತ್ತಾರೆ. ಸರ್ವತಂತ್ರ ಸ್ವತಂತ್ರವಾಗಿ ನಡೆದುಕೊಳ್ಳಲಾರಂಭಿಸುತ್ತಾರೆ. ಪಾಲಕರು ಒಪ್ಪದ ಕನ್ಯೆಯನ್ನೇ ವರಿಸುವವರಿದ್ದಾರೆ. ಮುಂದೆ ಶಾರೀರಿಕ ಬಲ ಕಡಿಮೆಯಾದಾಗ, ಜವಾಬ್ದಾರಿಗಳು ಹೆಚ್ಚುತ್ತ ಹೋದಾಗ, ತಾವು ಅದೆಷ್ಟು ಭಿನ್ನರಾಗಿದ್ದೇವೆ! ಎಂಬ ಅರಿವು ಮೂಡಲಾರಂಭಿಸುತ್ತದೆ. ಆದರೆ ಅದಾಗಲೇ ಕಾಲ ಮಿಂಚಿ ಹೋಗಿರುತ್ತದೆ. ಅಂತೆಯೇ ಅನೇಕ ಭಾರತೀಯರು ಅಮೇರಿಕೆಯಲ್ಲಿ ಬೇರುರಹಿತ ಜೀವನವನ್ನು ನಡೆಸುವದನ್ನು ನಾವು ಕಾಣುತ್ತೇವೆ.

ಇನ್ನು, ಅಮೇರಿಕೆಯಲ್ಲಿ ಕಟ್ಟಿದ ಕನಸುಗಳನ್ನು ಭಾರತದಲ್ಲಿ ನನಸು ಮಾಡಲಾಗುವದಿಲ್ಲ! ಎಂದು ಬೇರೆ ಹೇಳಲೇ ಬೇಕಾಗಿಲ್ಲ. ಎರಡು ದೇಶಗಳನ್ನು ಹೋಲಿಸುವದೂ ತಪ್ಪು. ಹಾಗೆಂದ ಮಾತ್ರಕ್ಕೆ ನಮ್ಮ ದೇಶದಲ್ಲಿ ನೆಮ್ಮದಿಯಾಗಿ ಬಾಳ್ವೆ ಮಾಡಲಾಗುವದಿಲ್ಲ ಎಂದು ಹೇಳಲಾಗದು. ಪ್ರತಿಯೊಂದು ಕಾರ್ಯವನ್ನು ಧನದ ಪ್ರತಿಫಲದ ಒರೆಗಲ್ಲಿಗೆ ತಿಕ್ಕಿ ನೋಡುವ ಗೋಜಿಗೆ ಹೋಗದೇ ಇದ್ದಲ್ಲಿ ಸಿಕ್ಕಿದರಲ್ಲೇ ತೃಪ್ತಿ ಪಡೆಯುವ ಧೋರಣೆ ಇಟ್ಟುಕೊಂಡಲ್ಲಿ, ಭಾರತದಲ್ಲಿಯೂ, ಜೀವನವನ್ನು ನಂದನವನ್ನಾಗಿ ಮಾಡಿಕೊಳ್ಳುವದು ಸಾಧ್ಯವಿದೆ. ಇದರಿಂದಾಗಿ ಬೇರೆಯವರಿಂದ ಸಾಧಿಸಲಾಗದ್ದನ್ನು ನಾವು ಸಾಧಿಸುವ ಸಂದರ್ಭಗಳು ಇದ್ದೇ ಇರುತ್ತವೆ. ನಾನು ಅಮೇರಿಕೆಯಲ್ಲಿಯೇ ಇದ್ದು ಪ್ರಯತ್ನಿಸಿದ್ದರೆ, 'G-೮' ಶ್ರೇಣಿಯ ನೌಕರಿಯನ್ನು ದೊರಕಿಸಬಹುದಾಗಿತ್ತು. ಭಾರತಕ್ಕೆ ಮರಳಿದ ನಂತರ ಅವರಿವರ ವಶೀಲಿ ಬಳಸಿದ್ದರೆ ಉಚ್ಚಸರಕಾರಿ ನೌಕರಿ ದೊರಕಿಸಬಹುದಾಗಿತ್ತು. ಆದರೆ ಇವೆಲ್ಲ ನನ್ನ ಆತ್ಮಾಭಿಮಾನಕ್ಕೆ ವಿರೋಧವಾದವುಗಳು. ಅದೆಷ್ಟೋ ಸಲ ಅಸಂತೋಷವೇ ಏಳ್ಗೆಗೆ ನಾಂದಿಯಾಗಬಲ್ಲದು.

ರಾಜಸ್ಥಾನದಲ್ಲಿ ಮೂರುವರ್ಷ ನೌಕರಿಮಾಡಿ, 'ನಾ ರಾಜಸ್ಥಾನದಲ್ಲಿ' ಪ್ರವಾಸಕಥನ' ಬರೆಯುವಂತೆ ಆಯಿತು. ಪಶ್ಚಿಮ ಬಂಗಾಲದಲ್ಲಿ ಎರಡು ವರ್ಷ ನೌಕರಿಮಾಡಿ 'ವಂಗದರ್ಶನ' ಕೃತಿ ಹೊರಬರುವಂತೆ ಆಯಿತು. ಮುಂಬರುವ ವರ್ಷಗಳಲ್ಲಿ ಮೈಮುರಿದು ದುಡಿದು 'ವೈಜ್ಞಾನಿಕ ಛಾಯಾಚಿತ್ರಕಾರ'ನಾದೆ. ಅದರ ಜೊತೆಗೇ 'ಸಾಹಿತಿ' ಎನಿಸಿಕೊಳ್ಳುವಷ್ಟು ಬರವಣಿಗೆಯನ್ನೂ ಮಾಡಿದೆ. ಸ್ವಂತಕ್ಕೆ ತೃಪ್ತಿಯೆನಿಸುವಷ್ಟು ಛಾಯಾಗ್ರಹಣಮಾಡಿದೆ. ಹಣಗಳಿಕೆಯೇ ಜೀವನದ ಗುರಿ ಮಾಡಿಕೊಂಡಿದ್ದರೆ, ನನ್ನ ಜೀವನಕ್ಕೆ ಒಂದು ಅರ್ಥವೇ ಬರುತ್ತಿರಲಿಲ್ಲ!

ನೀನು ಪ್ರತಿಭೆಯ ಆಗರವಾಗಿರುವಿ. ಆದ್ದರಿಂದ ಕೇವಲ ಸಂಬಳ

ಎಣಿಸುವದೊಂದೇ ಜೀವನದ ಧ್ಯೇಯ! ಎಂದು ಪರಿಗಣಿಸದೇ ನಿನ್ನ ವ್ಯಕ್ತಿತ್ವದ ಸರ್ವತೋಮುಖ ಬೆಳವಣಿಗೆಯನ್ನು ಮಾಡಿಕೊಳ್ಳಬೇಕು, ಎನ್ನುವದೇ ನನ್ನ ಅಭಿಲಾಷೆ. ಇದನ್ನು ಸಾಧಿಸಲು ಭಾರತಕ್ಕೆ ಮರಳಿ ಬಂದು, ನಮ್ಮೊಂದಿಗೆ ಬೆರೆತು, ನಲಿಯುತ್ತ ಕೆಲಸ, ಹವ್ಯಾಸಗಳನ್ನು ಮುಂದರಿಸುತ್ತ, ವಿನೋದ, ಚೇಷ್ಟೆ, ಸರಸ, ಸಲ್ಲಾಪ ಮಾಡುತ್ತ ಇದ್ದರೆ, ಅದಕ್ಕಿಂತ ನೆಮ್ಮದಿಯ ಮಾತು ಬೇರೊಂದು ಇದೆಯೇ? ಆದ್ದರಿಂದ ನಿನಗೆ ಭಾರತದಲ್ಲಿ ತೀರ ಸಾದಾ, ಸರಳ ಜೀವನ ನಡೆಸುವದು ಸಾಧ್ಯವಾದೀತೇ? ಎಂದು ಆಳವಾಗಿ ಯೋಚಿಸಿ, ಕೊನೆಯ ನಿರ್ಧಾರವನ್ನು ಕೈಕೊಳ್ಳು. ನನಗಾಗಿ ಇಲ್ಲವೇ ನಿನ್ನ ಆಮ್ಮಾಳಿಗಾಗಿ ನೀನು ನಿನ್ನ ಭವಿಷ್ಯವನ್ನು ತ್ಯಜಿಸುವದು ನಮಗೆ ಬೇಕಾಗಿಲ್ಲ!

◆ ◆ ◆

೧೨. ಕಲಾವಿದನ ಕನಸು

ಇದೀಗ ನಿನ್ನೊಡನೆ ಫೋನಿನಲ್ಲಿ ಮಾತನಾಡಿದ್ದರಿಂದ ಎಷ್ಟೋ ನೆಮ್ಮದಿ ಅನಿಸಿತು. ಇನ್ನೆರಡು ವರ್ಷಗಳಲ್ಲಿ ಭಾರತಕ್ಕೆ ಮರಳಿ ಬಂದು ನನ್ನ ಚಟುವಟಿಕೆಗಳಲ್ಲಿ ಆಸ್ಥೆ ವಹಿಸಿ, ಅವನ್ನು ಮುಂದುವರಿಸಲಿದ್ದಿ, ಎಂಬ ಆಶ್ವಾಸನೆ ಹಿತವೆನಿಸಿತು. ಯಾರೇ ಒಬ್ಬರು ಪ್ರಾರಂಭಿಸಿದ ಕ್ರಿಯಾಶೀಲ ಕೆಲಸಗಳು ಆತನ ಜೀವಮಾನದಲ್ಲಿ ಮಾಡಿ ಮುಗಿಸಲಾದೀತು! ಎಂದು ಹೇಳಲಾಗದು. ಆದರೆ ಅವನ ವಂಶಜರೋ ಆಪ್ತಶಿಷ್ಯರೊ ಮುಂದುವರಿಸಿಕೊಂಡು ಹೋದರೆ ಆ ವ್ಯಕ್ತಿ ಪಟ್ಟ ಶ್ರಮ ಸಾರ್ಥಕವೆನಿಸುವದು. ಯಾವುದೇ ಕಲೆಯನ್ನು ಕರಗತ ಮಾಡಿಕೊಳ್ಳಲು ವಿಪರೀತ ಶ್ರಮ ವಹಿಸಲೇ ಬೇಕಾಗುವದು. ಆದರೆ ತನ್ನ ಸಾಧನೆಗಳನ್ನೆಲ್ಲ ಬಳಸಿಕೊಳ್ಳುವಷ್ಟು ಮಾನವನು ಸುದೀರ್ಘ ಆಯುಷ್ಯ ಪಡೆದು ಬಾರದಿರುವದೇ ಒಂದು ದೊಡ್ಡ ದುರಂತ. ಕುವೆಂಪು, ಮಾಸ್ತಿ, ಕಾರಂತರಂಥವರು ಇದಕ್ಕೆ ಅಪವಾದ ಇದ್ದಿರಬಹುದು. ಅಂತೆಯೇ ಈಗ ನಾನು ವಿಕಾಸನಷ್ಟು ಎಳೆಯನಾಗಿದ್ದರೆ, ಏನೆಲ್ಲ ಸಾಧಿಸಬಹುದಾಗಿತ್ತು! ಎಂದು ಹಂಬಲಿಸುವದುಂಟು.

ಇಂಥ ಕನವರಿಕೆಗೆ ಕಾರಣವಿಲ್ಲದಿಲ್ಲ. ನನ್ನ ಆ ವಯಸ್ಸಿಗೆ ಯಾವ ತರದ ಸವಲತ್ತುಗಳೂ ಇರಲಿಲ್ಲ. ಆರ್ಥಿಕ ಸುದೃಢತೆ ಇರಲಿಲ್ಲ. ಹುರಿದುಂಬಿಸುವವರೂ ಇರಲಿಲ್ಲ. ಅಂತೆಯೇ ನಾನು ಕಟ್ಟಿದ ಕನಸುಗಳನ್ನು ನನಸು ಮಾಡಲು ವಿಪರೀತ ದುಡಿಯಬೇಕಾಯಿತು. ಚಿತ್ರಕಲೆಯಲ್ಲಿ ಅತೀವ ಆಸಕ್ತಿ ಇದ್ದರೂ ಹೇಳಿಕೊಳ್ಳುವಂಥ ಕುಂಚ, ಬಣ್ಣಗಳು ನನ್ನಲ್ಲಿ ಇರಲಿಲ್ಲ. ಛಾಯಾಚಿತ್ರ ಕಲೆಯಲ್ಲಿ ಅಭಿರುಚಿ ಇದ್ದರೂ ಒಂದು ಕ್ಯಾಮರಾ ಇರಲಿಲ್ಲ. ನನ್ನ ಬರವಣಿಗೆಯಲ್ಲಿ ಆಸಕ್ತಿ ವಹಿಸುವವರೂ ಯಾರೂ ಇರಲಿಲ್ಲ. ಹೋಗಲಿ, ನನ್ನದೆಂಬ ಗುಡಿಸಲೂ ಇರಲಿಲ್ಲ. ಇವೆಲ್ಲವುಗಳಿಗಿಂತ ನನ್ನ ಭವಿಷ್ಯ ತೀರ ಅನಿಶ್ಚಿತವಾಗಿತ್ತು. ಹೀಗಿದ್ದರೂ ನಾನು ಧೃತಿಗೆಡದೇ ನನ್ನನ್ನು ನಂಬಿದವರಿಗೆ, ಒಂದಿಷ್ಟೂ ಕಳವಳ ಹುಟ್ಟುವಂತೆ ಮಾಡದೇ ನನ್ನ ಗುರಿಯತ್ತ ನಿಧಾನವಾಗಿ ಸಾಗಿದ್ದೇ ಮಹಾಸಾಧನೆ! ಇಂದು ನಮಗೆ ಇರುವ ಮನೆ, ಆಸ್ತಿ, ಆರ್ಥಿಕ ಸುಭದ್ರತೆ ಸಾಧಿಸಲು ಅದೆಷ್ಟು ಶ್ರಮಿಸಿದ್ದೇನೆ, ಎನ್ನುವದು ನಿನ್ನ ಅಮ್ಮಳಿಗೆ ಮಾತ್ರ ಗೊತ್ತು! ನೀನು ಕೂಡ ಹಣ್ಣಾಗುವ ತನಕ ನೌಕರಿ ಮಾಡದೇ, ಅಂದುಕೊಂಡಂತೆ ಬಡಬಗ್ಗರ ಏಳ್ಗೆಗೆ ದುಡಿಯಲು, ಇಲ್ಲವೇ ನಿನ್ನ ಹವ್ಯಾಸಗಳತ್ತ ಸಂಪೂರ್ಣ ತೊಡಗಿಸಿಕೊಳ್ಳಲು ಬರುವಂತೆ ಸುಭದ್ರತೆ ಮಾಡಿಕೊಳ್ಳಲು ಸಾಧ್ಯ! ಜೀವನದಲ್ಲಿ ಅತಿಸ್ವಾರ್ಥಿ ಆಗದಿದ್ದರೆ, ಏನೆಲ್ಲ ಸಾಧಿಸಬಹುದೆಂದು ಯತ್ನಿಸಿದಾಗಲೇ ತಿಳಿಯಬೇಕು.

ನನ್ನ ಹತ್ತಿರ ಇರುವ ಮಾಹಿತಿ, ಛಾಯಾಚಿತ್ರಗಳ ಸಂಗ್ರಹವನ್ನು ನೆನಪಿಸಿಕೊಳ್ಳುತ್ತ ಒಮ್ಮೆ ಜ್ಯೋತ್ಸ್ನಾ ಕೇಳಿದಳು, ''ಎಂದಾದರೂ ಇವನ್ನೆಲ್ಲ ಬಳಸಿಕೊಳ್ಳಲು

ಸಾಧ್ಯವಾದೀತೆ?'' ಅದಕ್ಕೆ ಉತ್ತರವಾಗಿ ನಾನು ಹೇಳಿದೆ. ''ಮಾನವನು ತಾನು ಅಜರಾಮರನೆಂಬಂತೆ ಹಣ ಹಾಗೂ ಆಸ್ತಿ-ಪಾಸ್ತಿಗಳನ್ನು ತನ್ನವನ್ನಾಗಿಸಲು ಹೆಣಗುತ್ತಿರುತ್ತಾನೆ. ಅವನ ಶ್ರಮದ ಫಲ, ಮಕ್ಕಳಿಗೆ ಲಭಿಸುತ್ತದೆ. ಅದರಂತೆ ನನ್ನ ಕಲಾಶ್ರಮದ ಲಾಭ, ಮಗನಿಗೆ ಸಿಗಬೇಕೆಂದು ಆಸೆ. ಆದರೆ ಅದೆಲ್ಲದರ ಲಾಭ ಪಡೆಯುವವದು ಅವನಿಗೇ ಸೇರಿದ್ದು.'' ಈ ಕುರಿತು ಗಂಭೀರವಾಗಿ ಯೋಚಿಸಿದರೂ, ಜ್ಯೋತ್ಸ್ನಾ 'ಸುಧಾ'ದ ಯುಗಾದಿ ವಿಶೇಷಾಂಕದಲ್ಲಿ 'ರಾಯರ ಉಯಿಲು' ಎಂಬ ಹಾಸ್ಯಲೇಖ ಪ್ರಕಟಿಸಿದ್ದಾಳೆ. ಅದರಲ್ಲಿ ಆಕೆಯ ಪತಿರಾಯ, ತನಗೆ ಅರವತ್ತು ತುಂಬಿದಾಗ, ತನ್ನ ಆಸ್ತಿ-ಪಾಸ್ತಿಗಳಾದ ಛಾಯಾಚಿತ್ರ ಸಂಗ್ರಹ, ನೆಗೆಟಿವ್‌ಗಳು, ಕಾವಿಚಿತ್ರಗಳು, ಹಳೆಯ ಪತ್ರಗಳು, ಪುಸ್ತಕಗಳು ಇತ್ಯಾದಿಗಳ ಬಗ್ಗೆ ಯಾರೂ ಆಸಕ್ತಿ ವಹಿಸದೇ ಇದ್ದುದನ್ನು ಕಂಡುಕೊಳ್ಳುತ್ತಾನೆ. ಆದ್ದರಿಂದ ಅವುಗಳ ವಿತರಣೆಯ ಬಗ್ಗೆ 'ಉಯಿಲು' ಬರೆದಿಡುತ್ತಾನೆ! ಈ ಲೇಖವನ್ನು ನೀನು ಓದಲೇ ಬೇಕು. ಇದರಂತೆ ನಿವೃತ್ತಿ ಯಾರಿಗೆ? ಎಂಬುದು ಒಳ್ಳೆಯ ಬರಹ, ಎರಡರ ಝುರಾಕ್ಸ ಪ್ರತಿಗಳನ್ನು ಕಳಿಸಿ ಕೊಡುತ್ತೇನೆ.

ನೊಬೆಲ್ ಪ್ರಶಸ್ತಿ ವಿಜೇತ, ಫ್ರೆಂಚ್ ಲೇಖಕ, ಆಲ್ಬರ್ಟಕಾಮುನ ಬಗ್ಗೆ ನೀನು ಅರಿತಿರಬೇಕು. ಫ್ರೆಂಚ್ ವಸಾಹತು ಆಗಿದ್ದ ಆಲ್ಜಿರಿಯದಲ್ಲಿ ಅವನು ಹುಟ್ಟಿ ನಂತರ ಪ್ಯಾರಿಸಿನಲ್ಲಿ ನೆಲೆಸಿದ. ಆತನ ಬರಹದಲ್ಲಿ, ಅಡಕವಾದ ಮಾನವನ ನಿರಂತರ ನಿರಾಶಾವಾದದ ಪ್ರತಿಪಾದನೆಯಿಂದ ಜಗತ್‌ಪ್ರಸಿದ್ಧನಾಗಿದ್ದಾನೆ. ಆದರೆ ಒಂದು ಕಾರ್ ಅಪಘಾತಕ್ಕೊಳಗಾಗಿ ಚಿಕ್ಕವಯಸ್ಸಿನಲ್ಲೆ ಮೃತಪಟ್ಟ. ಆ ಕಾರಿನಲ್ಲಿ ಸಿಕ್ಕ ಒಂದು ಚಿಕ್ಕ ಬ್ರೀಫ್‌ಕೇಸಿನಲ್ಲಿ, ಆತ ಆಗ ಬರೆಯುತ್ತಿದ್ದ ಆತ್ಮಕತೆಯ ಆಧಾರಿತ ಕಾದಂಬರಿಯ ನೂರು ಪುಟಗಳು ಸಿಕ್ಕಿದ್ದವು. ಅವನು ಮೃತಪಟ್ಟ ಮೂವತ್ತು ವರ್ಷಗಳ ನಂತರ ಅವನ ಮಗಳು ಮೂರುವರ್ಷಗಳ ಪರಿಶ್ರಮದಿಂದ ಅದನ್ನು ಅರ್ಥೈಸಿ ಪೂರ್ಣ ಮಾಡಿಕೊಳ್ಳುವಂತೆ ಆಯಿತು! ಈ ಕಾದಂಬರಿ, ಕಾಮು, ಆಲ್ಜಿರೀಯದಲ್ಲಿ ಪಟ್ಟ ಬವಣೆಯನ್ನು ನಿರೂಪಿಸುವದರಿಂದ ಸಾರ್ವಕಾಲಿಕ ಸಾಹಿತ್ಯಿಕ ಮೌಲ್ಯ ಉಳ್ಳದ್ದಾಗಿದೆ. ಆದ್ದರಿಂದ ಬ್ರಿಟಿಶ್ ಮತ್ತು ಅಮೇರಿಕನ್ ಪ್ರಕಾಶಕರು, ಅದನ್ನು ತಮ್ಮದನ್ನಾಗಿ ಮಾಡಿಕೊಳ್ಳಲು ತೀವ್ರ ಸ್ಪರ್ಧೆ ನಡೆಸಿದ್ದಾರೆ! ಇದರಂತೆ ಓರ್ವ ಬ್ರಿಟನಿನ ಛಾಯಾಚಿತ್ರಕಾರನ ಪ್ರತಿಗಳಿಗೆ, ಆತನ ಮರಣದ ನಂತರವೇ ಮಹತ್ವ ಬಂದಿತು. ಆತನು ಬಿಟ್ಟುಹೋದ ಆಲ್ಬಮ್‌ಗಳನ್ನು ಕೊಳ್ಳಲು ಅಮೇರಿಕನ್ ಧನವಂತನೋರ್ವನು ಮುಂದೆ ಬಂದಾಗ, ಅದು ದೇಶದ ಆಸ್ತಿಯಾಗಿದ್ದರಿಂದ ಬ್ರಿಟಿಶ್ ಸರಕಾರ, ತಾನೇ ಮುಂದಾಗಿ, ಅದನ್ನು ಉಳಿಸಿಕೊಳ್ಳಲು ಕೊಂಡುಕೊಂಡಿತು. ನಮ್ಮ ದೇಶದಲ್ಲಿ ಇಂಥ ಘಟನೆಗಳು ತೀರ ಕಡಿಮೆ! ಎಷ್ಟೆಂದರೂ ನಾವು ಅಭಿಮಾನಶೂನ್ಯರಲ್ಲವೇ?

ಮೇಲಿನದೆಲ್ಲ ಕೇವಲ ಮಾಹಿತಿಗಾಗಿ ಬರೆದಿದ್ದೇನೆ. ನನ್ನ ಸಂಗ್ರಹ ಅಂತಹ ಮೇಲ್ಮಟ್ಟದ್ದು! ಎಂಬ ಭ್ರಮೆ ನನಗಿಲ್ಲ. ಆದರೆ ಜನಸಾಮಾನ್ಯರಿಗೆ

ರುಚಿಸಬಹುದಾದಂತಹ ಕಲೆ ಹಾಗೂ ಸಾಹಿತ್ಯ ನಿರ್ಮಾಣಕ್ಕೆ ಅವನ್ನು ಧಾರಾಳವಾಗಿ ಬಳಸುವಂತಹವಿವೆ.

◆ ◆ ◆

೧೩. ಪತ್ರ-ದಾಖಲಾತಿ

ನಿನ್ನ ೧೮-೭-೯೯ರ 'ಆಲಸ್ಯದಿಂದ ಪತ್ರ ಬರೆಯಲಾಗಲಿಲ್ಲ' ಎಂಬ ಸಂದೇಶ ಹೊತ್ತ ಪತ್ರ ಮತ್ತು ಅದರೊಂದಿಗೆ ಕಳಿಸಿದ ನಾಲ್ಕು ವರ್ಣಚಿತ್ರಗಳು ಮುಟ್ಟಿವೆ. ಪುತ್ರರತ್ನನು ಸತ್ಯವನ್ನೇ ಬರೆದಿದ್ದಾನಲ್ಲ! ಎಂದು ಖುಷಿಯಾಯಿತು. ಬಿಡುವಿಲ್ಲದೇ ಪತ್ರ ಬರೆಯಲಾಗಲಿಲ್ಲ ಎಂದರೆ ನಾನು ನಂಬುತ್ತಿರಲಿಲ್ಲ. ಆ ಮಾತು ಬೇರೆ. ಲೆಕ್ಕಾಚಾರ ಬರೆಯಲು, ದಿನಚರಿ ಬರೆಯಲು, ಪತ್ರಗಳನ್ನು ಬರೆಯಲು, ಅಲಕ್ಷ್ಯ ಅಥವಾ ಆಲಸ್ಯ ಮಾಡಿದರೆ, ಅವು ಶಾಶ್ವತವಾಗಿ ನಮ್ಮ ಪಾಲಿಗೆ ಇಲ್ಲವಾಗಿ ಹೋಗುತ್ತವೆ, ಎಂಬ ಕಟುಸತ್ಯವನ್ನು ನೀನು ಈಗಾಗಲೇ ಕಂಡುಕೊಂಡಿರಬೇಕು. ಇಂದಿನ ದಿನಗಳಲ್ಲಿ ಮನೆ ತುಂಬ ರಾಶಿರಾಶಿಯಾಗಿ ಸಂಗ್ರಹವಾದ ಪತ್ರಗಳನ್ನೆಲ್ಲ ಜೋಡಿಸಿಡಲು ಪ್ರಾರಂಭಿಸಿದ್ದೇನೆ. ಪ್ರತಿ ಪತ್ರವೂ ತನ್ನದೇ ಆದ ಇತಿಹಾಸವನ್ನು ಹೇಳುತ್ತದೆ. ನೀನು ಹೊನ್ನಾವರದಿಂದ ಬರೆದ ಪತ್ರಗಳನ್ನು ಆಮ್ಮಾ ಓದಲಾರಂಭಿಸಿದರೆ ಮಾಡಬೇಕಾದ ಕೆಲಸ ಅಲ್ಲಿಗೇ ನಿಂತುಬಿಡುತ್ತದೆ! ಒಂದು ಪತ್ರದಲ್ಲಿ 'ಬಾಪ್ಪಾ ಮತ್ತು ನಿನಗೆ ಆಶ್ವಾಸನೆ ಕೊಟ್ಟಂತೆ ಮಕ್ಕಳ ಗೋಜಿಗೆ ಹೋಗದೇ, ಜಗಳಾಟದಲ್ಲೂ ಪ್ರವೇಶಿಸದೇ ನನ್ನಷ್ಟಕ್ಕೆ ಹಾರ್ಮೋನಿಯಂ ನುಡಿಸುತ್ತೇನೆ!' ಎಂದು ಬರೆದದ್ದರಿಂದ ಜ್ಯೋತ್ಸ್ನಾ ಈ ಔರಂಗಜೇಬ್, ನನ್ಮಗ, ಎಂದಿನಿಂದ ತಾನಸೇನ್ ಆದ? ಎಂದು ಗಹಗಹಿಸಿ ನಕ್ಕಳು. ಇನ್ನೊಂದು ಪತ್ರದಲ್ಲಿ ನಾನು ಪ್ರತಿ ಸಂಜೆ, ಮಾಲಕ್ಕಳ ಜೊತೆ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಸಮಸ್ಯೆಗಳ ಕುರಿತು ಚರ್ಚಿಸುತ್ತೇನೆ ಎಂದು ಬರೆದಿರುವಿ. ಹತ್ತು ಹನ್ನೆರಡರ ಪ್ರಾಯದಲ್ಲಿ ನಿನ್ನ ಅಭಿರುಚಿಗಳು ಹೀಗಿದ್ದವು! ಮೈಸೂರಿನಲ್ಲಿದ್ದಾಗ ಬರೆದ ಪತ್ರಗಳು ನಿನ್ನ ಸುತ್ತಲಿನ ಘಟನೆಗಳಲ್ಲಿಯ ಆಸಕ್ತಿಯನ್ನು ಮನದಟ್ಟಾಗಿ ಸೂಚಿಸುತ್ತವೆ. ಅಮೇರಿಕೆಯಲ್ಲಿ ವಿದ್ಯಾರ್ಥಿದಿನಗಳ ಪತ್ರಗಳು ಎಂತಹದೇ ಕಷ್ಟಕಾಲದಲ್ಲಿ ಜೀವನವನ್ನು ಎದುರಿಸುವ ನಿನ್ನ ಕೆಚ್ಚೆದೆಯ ಪರಿಚಯ ನೀಡುತ್ತವೆ. ನೌಕರಿ ಪ್ರಾರಂಭಿಸಿದ ದಿನಗಳಲ್ಲಿ ಬರೆದ ಪತ್ರಗಳು ನಿನ್ನ ಪರಿಸರದ ವ್ಯಕ್ತಿಗಳನ್ನು ಗಾಢವಾಗಿ ಪರಿಚಯಿಸುತ್ತವೆ. ಆದರೆ ಇತ್ತೀಚಿನ ಪತ್ರಗಳು ಮಾತ್ರ 'ಬಿಡುವಿದ್ದಾಗ ವಿವರವಾದ ಪತ್ರ ಬರೆಯುತ್ತೇನೆ' ಎಂದಿಷ್ಟೆ ಸಾರುತ್ತವೆ. ಪತ್ರ ಬರೆಯುವದರಲ್ಲಿ ವರ್ಷೇ ವರ್ಷೇ ನಿನ್ನದು ಅದೆಂತಹ ಸಾಧನೆ!

ಈ ತಿಂಗಳಲ್ಲಿ ನೀನು ಅಮೇರಿಕೆಗೆ ಹೋಗಿ ಸರಿಯಾಗಿ ನಾಲ್ಕು ವರ್ಷಗಳಾಗುತ್ತವೆ. ನಾನೂ ಆ ದೇಶದಲ್ಲಿ ನಾಲ್ಕು ವರ್ಷ ಇದ್ದೆ. ಧನಸಂಪಾದನೆ ಎಂದೂ ನನ್ನ ಉದ್ದೇಶವಾಗಿರದ್ದರಿಂದ, ಸಿಕ್ಕ ಅವಕಾಶಗಳನ್ನೆಲ್ಲ ಬಳಸಿ ಅಮೇರಿಕನ್‌ರನ್ನು ಅಭ್ಯಸಿಸಲು ಯತ್ನಿಸಿದ್ದೆ. ಅದರಿಂದಾಗಿ ಅಮೇರಿಕೆಯಿಂದ ಬರೆದ ಪ್ರತಿ ಪತ್ರವೂ ಸ್ವಾರಸ್ಯವಾದ ಸಮಾಚಾರವನ್ನು ಒಳಗೊಂಡಿರುತ್ತಿತ್ತು. ಪುಣ್ಯಕ್ಕೆ ಪ್ರತಿಯೊಂದು ಕಾಗದದ ಕಾರ್ಬನ್ ಪ್ರತಿಯನ್ನು ಇಟ್ಟುಕೊಂಡಿದ್ದೇನೆ. ಅವುಗಳನ್ನೆಲ್ಲ ಆಧರಿಸಿ ಎಷ್ಟೊಂದು ಲೇಖನ,

ಪುಸ್ತಕಗಳನ್ನು ಬರೆಯಬಹುದು ಗೊತ್ತೆ? ವಿರಾಮವಾಗಿ ಕುಳಿತು, ಒಂದೊಂದಾಗಿ ಓದಿ ಅವುಗಳಲ್ಲಿಯ ಮುಖ್ಯಾಂಶಗಳನ್ನು ಟಿಪ್ಪಣಿ ಮಾಡಿಕೊಳ್ಳಬೇಕು. ಆನಂತರ ಓದುಗರನ್ನು ರಂಜಿಸಬಹುದಾದ ಅಂಶಗಳನ್ನಷ್ಟೆ ಆರಿಸಿ ಪುಸ್ತಕ ಬರೆಯಬೇಕು. ಜೇನ್ ರೊಥ್‌ಳು ನನಗೆ ಬರೆದ ಪತ್ರಗಳಿಂದಲೇ ಒಂದು ಪುಸ್ತಕ ಬರೆಯಬಹುದು. ಅಲ್ಲದೇ ಅನೇಕ ಅಮೇರಿಕನ್ನರು ಬರೆದ ಪತ್ರಗಳೂ ನನ್ನ ಖಜಾನೆಯಲ್ಲಿವೆ.

ನಾನು ಮುಂದೆ ಅಮೇರಿಕಾದ ಅರಣ್ಯಖಾತೆಯವರ ನೆರವಿನಿಂದ ಪಡೆದ 'ಪರಿಸರ ರಕ್ಷಣೆಯ ತರಬೇತಿ' ಹಾಗೂ ಅರಣ್ಯ ಕೃಷಿ ಮಾಹಿತಿ, ಕನ್ನಡದಲ್ಲಿ ಒಂದು ಅಪರೂಪದ ಗ್ರಂಥಕ್ಕೆ ಮಾಹಿತಿ ಒದಗಿಸುವಂತೆ ಇದೆ. ಜೊತೆಗೆ ಅಮೇರಿಕನ್ ನಿತ್ಯಜೀವನದ ಆಗುಹೋಗುಗಳ ಕುರಿತು ಅನೇಕಾನೇಕ ಛಾಯಾಚಿತ್ರಗಳಿವೆ. ಅವುಗಳನ್ನು ಆಧರಿಸಿ, ಎಷ್ಟೊ ಬಿಡಿ ಲೇಖಗಳನ್ನು ಬರೆಯಬಹುದಾಗಿದೆ. ಈ ಎಲ್ಲ ವಿಚಾರಗಳನ್ನು ಎಂದು ಕಾರ್ಯರೂಪದಲ್ಲಿ ತರುವದು? ಎಂದು ತಿಳಿಯುತ್ತಿಲ್ಲ. ಸದ್ಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಹಾಗೂ ಕರ್ನಾಟಕ ಸಾಹಿತ್ಯ ಅಕಾಡೆಮಿಯವರು ನನ್ನನ್ನು ಲೇಖಕರ ಬಳಗಕ್ಕೆ ಸೇರಿಸಿಕೊಂಡಂತಿದೆ! ಪುಸ್ತಕ ಪ್ರಕಾಶನಕ್ಕೆ ಧನಸಹಾಯ ಕೋರುವವರ ಕೃತಿಗಳನ್ನು ಮತ್ತು ವಾರ್ಷಿಕ ಪಾರಿತೋಷಕಗಳನ್ನು ಕೊಡಮಾಡುವ ಕೃತಿಗಳ ಮೌಲ್ಯಮಾಪನಕ್ಕೆ ಪುಸ್ತಕಗಳನ್ನು ಕಳಿಸಲಾರಂಭಿಸಿದ್ದಾರೆ! ಈ ವರ್ಷ 'ವೈಚಾರಿಕ ಸಾಹಿತ್ಯ'ದ ನಿರ್ಣಾಯಕನನ್ನಾಗಿ ಮಾಡಿಕೊಂಡದ್ದರಿಂದ ಜ್ಯೋತ್ಸ್ನಾ ಸೋಜಿಗ ಪಟ್ಟಳು. ಹಿಂದೊಮ್ಮೆ ಗೌರೀಶ ಕಾಯ್ಕಿಣಿ ಅವರು ಸ್ವಾತಂತ್ರ್ಯೋತ್ತರ ಕನ್ನಡ ಸಾಹಿತ್ಯದಲ್ಲಿ ವೈಚಾರಿಕತೆ ಕುರಿತು ತಮ್ಮ ಪುಸ್ತಕದ ಪ್ರತಿ ಕಳಿಸಿದ್ದರು. ಅದರಲ್ಲಿ ನನ್ನ ಹೆಸರು ಸೇರ್ಪಡೆಯಾಗಿದೆಯೋ ನೋಡು! ಎಂದಾಗ ನಕ್ಕು ಬಿಟ್ಟಿದ್ದಳು. ಪ್ರವಾಸಕಥನ ಬರೆಯುವವನು ವಿಚಾರವಾದಿ ಹೇಗಾದಾನು? ಎಂದು ಅನಿಸಿರಬೇಕು. ಬಳಿಕ ಆ ಪುಸ್ತಕದಲ್ಲಿ ಮೂರುಕಡೆಯಲ್ಲಿ ನನ್ನ ಬರವಣಿಗೆ, ವಿಚಾರ ಸಾಹಿತ್ಯವನ್ನು ಹೇಗೆ ಪ್ರಚೋದಿಸುತ್ತದೆ! ಎಂದು ಬರೆದದ್ದನ್ನು ಅವಳೇ ಓದಿ ಹೇಳಿದಳು. ಈಗ ಸಾಹಿತ್ಯ ಅಕಾಡೆಮಿಯೂ 'ನಾನು ವಿಚಾರಮಾಡಬಲ್ಲವ'ನೆಂದು ಗುರುತಿಸಿದ್ದರಿಂದ ನೆಮ್ಮದಿಯಾಗಿದೆ!

ಇದು ಈ ಎರಡು ವಾರದಲ್ಲಿ ನಾನು ಬರೆಯುತ್ತಿರುವ ಮೂರನೆಯ ಪತ್ರ. ನನ್ನ ನೂರನೆಯ ಪತ್ರ! ಅಮೇರಿಕೆಯಲ್ಲಿರುವ ಮಗನಿಗೆ ನೂರು ಫೋನ್‌ಕರೆ ಮಾಡುವ ಪಿತರು ಇರಬಹುದು. ಪ್ರತಿದಿನವೂ ಪುತ್ರನ ಫೋನಿಗೆ ಕಾಯುವ ಮಾತೆಯರು ಇರಬಹುದು. ಆದರೆ ಎಷ್ಟೇ ಕೆಲಸವಿರಲಿ, ಪುತ್ರನ ಪತ್ರ ಬರಲಿ, ಬರದಿರಲಿ, ಗಟ್ಟಿಯಾಗಿ ಕುಳಿತು ಪತ್ರಗಳನ್ನು ಬರೆಯುವ ಪಿತರು ವಿರಳರೆಂದೇ ನನ್ನ ಭಾವನೆ. ಕೇವಲ ಪತ್ರಗಳ ಸಂಖ್ಯೆಯೇ ಮುಖ್ಯವಲ್ಲ. ಅವುಗಳಲ್ಲಿ ಸೇರಿಸಿದ ಮಾಹಿತಿ ವೈವಿಧ್ಯಮಯವಾದದ್ದು. ಜೀವನದ ಹಲವಾರು ಮೌಲ್ಯಗಳು, ಇನ್ನಿತರರ ಜೀವನದಿಂದ ನಾವು ಕಲಿಯಬಹುದಾದ ಪಾಠಗಳು, ಮೊದಲಾದವನ್ನು ಸೇರಿಸಲು ಬುದ್ಧಿಪೂರ್ವಕವಾಗಿ ಯತ್ನಿಸಿದ್ದೇನೆ. ಅವುಗಳನ್ನು ಓದಿದಾಗ ಮತ್ತು ನಂತರ ಅವು

ನಿನಗೆಷ್ಟು ಖುಷಿಕೊಟ್ಟವು? ಎಂದು ತಿಳಿಯದು! ಆದರೆ ಅವುಗಳನ್ನು ಬರೆಯುವಾಗ, ನನಗೆ ಅಪೂರ್ವ ಆನಂದ ಸಿಕ್ಕಿದ್ದು ನಿಜ. ಅವುಗಳಲ್ಲಿ ಒಂದೆರಡನ್ನು ಜ್ಯೋತ್ಸ್ನಾ ಪ್ರತಿ ಮಾಡಿಸಿ ಇಟ್ಟುಕೊಂಡಿದ್ದಾಳೆ. ಡಾ. ಮಾಸ್ತಿಯವರು, ಡಾ. ಹಾ.ಮಾ. ನಾಯಕರಂಥವರು, ಅದಾಗಲೇ ಈ ಪತ್ರಗಳನ್ನೆಲ್ಲ ಪುಸ್ತಕರೂಪದಲ್ಲಿ ತಂದು ಬಿಡುತ್ತಿದ್ದರು!

ನಿನ್ನಿಂದ ಎಷ್ಟೇ ಪತ್ರಗಳು ಬಂದರೂ ಜ್ಯೋತ್ಸ್ನಾಗೆ ತೃಪ್ತಿಯೆಂಬುದೇ ಇಲ್ಲ. ಇನ್ನು ಮುಂದೆ ನಾನೇ ನಿನ್ನ ಹೆಸರಿನಲ್ಲಿ ಪತ್ರ ಬರೆದು ಅಂಚೆಗೆ ಸೇರಿಸಿದರೆ ಹೇಗೆ? ಎಂದು ವಿಚಾರ ಮಾಡಲಾರಂಭಿಸಿದ್ದೇನೆ. ಇದಕ್ಕೆ ನಿನ್ನ ಆಕ್ಷೇಪಣೆ ಏನೂ ಇರಲಿಕ್ಕಿಲ್ಲವೆಂದು ಖಂಡಿತ ಗೊತ್ತು. ಆದರೆ ಜ್ಯೋತ್ಸ್ನಾ, ಈ ಏರ್ಪಾಡು ಒಪ್ಪಿಕೊಂಡಾಳೇ? ಎಂಬ ಅನುಮಾನ ಇದ್ದೇ ಇದೆ!

◆ ◆ ◆

೧೪. ಕಾದಿರಿಸಿದ ನಿಧಿ

ಖರ್ಚಿಗೆ ಕಡಿವಾಣ ಹಾಕಿ ನೀನು ಉಳಿತಾಯದ ಮೇಲೆ ಜೋರು ಕೊಟ್ಟಿರುವಿ, ಎಂದು ತಿಳಿದು ಆನಂದವಾಯಿತು. ಉಳಿತಾಯ ಮಾಡಿದ್ದು 'ದೇವನಿಧಿ' ಎಂದು ಅದನ್ನು ಮುಟ್ಟದೇ ಅದರ ಇರುವನ್ನೇ ಮರವಿನ ಖಾತೆಗೆ ಜಮಾ ಮಾಡಿದರೆ ಅದು ಬೆಳೆಯುತ್ತ ಹೋಗುತ್ತದೆ. ನಮ್ಮ ಆರ್ಥಿಕ ಸುಭದ್ರತೆಗೆ ಇದೇ ಸೂತ್ರವನ್ನು ಸದಾಕಾಲ ಬಳಸುತ್ತಿರುತ್ತೇನೆ. ಇದರಿಂದಾಗಿ ನೆಮ್ಮದಿಯ ನಿವೃತ್ತ ಜೀವನವನ್ನು ನಡೆಸುವಂತೆ ಆಗಿದೆ. ನಮ್ಮ ವೈವಾಹಿಕ ಜೀವನದಲ್ಲಿ, ಹೊಸದರಲ್ಲಿಯೇ ಇಬ್ಬರಲ್ಲಿ ಒಬ್ಬರ ಸಂಬಳವನ್ನು ಉಳಿತಾಯ ಮಾಡಬೇಕು ಎಂಬ ನಿರ್ಧಾರವನ್ನು ಕೈಕೊಂಡಿದ್ದೆವು. ನಾನು ಪ್ಲಾಸಿಯ ನೌಕರಿಗೆ ಹೋಗುವ ಮೊದಲು, ಅತ್ಯಂತ ಪ್ರತಿಕೂಲ ಪರಿಸ್ಥಿತಿಯಲ್ಲೂ ಎರಡು ವರ್ಷ ಸೇವೆ ಸಲ್ಲಿಸಿ ಹನ್ನೆರಡು ಸಾವಿರ ರೂಪಾಯಿಗಳ ಉಳಿತಾಯ ಮಾಡುವದು, ಎಂದು ನಿರ್ಧರಿಸಿದ್ದೆ. ನಾನು ಮಾಡಿದ್ದು ಇಪ್ಪತ್ತೇ ತಿಂಗಳ ನೌಕರಿ. ಉಳಿಸಿದ್ದು ಹದಿನಾರು ಸಾವಿರ ರೂಪಾಯಿಗಳೆಂದರೆ ನನಗೇ ನಂಬಲಾಗಲಿಲ್ಲ! ಸ್ವಯಂಪಾಕ, ಮಿತವ್ಯಯದ ಜೀವನಗಳಿಂದ ಮೊದಲಿನಿಂದಲೂ ಕೊಂಚವಾದರೂ ಉಳಿತಾಯ ಮಾಡುವ ರೂಢಿಯನ್ನು ನನ್ನದಾಗಿ ಮಾಡಿಕೊಂಡದ್ದರಿಂದ, ಬಿಕ್ಕಟ್ಟಿನ ದಿನಗಳಲ್ಲಿ ಬಹಳ ನೆರವಾಗಿದೆ. ಇಂದು ನಾವು ಮೂವರೂ ಹಣಕಾಸಿನ ಬಗ್ಗೆ ತಲೆ ಕೆಡಿಸಿಕೊಳ್ಳಬೇಕಾದ ಪ್ರಸಂಗವಿಲ್ಲ. ನಂನಮ್ಮ ಹವ್ಯಾಸಗಳತ್ತ ಗಮನ ಹರಿಸುತ್ತ, ಅರ್ಥಪೂರ್ಣವಾದ ಜೀವನ ನಡೆಸುವ ಆರ್ಥಿಕ ಸುಭದ್ರತೆ ನಮ್ಮದಾಗಿದೆ. ನೀನು ಭಾರತಕ್ಕೆ ಮರಳಿದ ನಂತರ ಭಾರಿ ಮೊತ್ತ ತರುವಂಥ ನೌಕರಿಗಾಗಿ ಪರದಾಡಬೇಕಿಲ್ಲ. ತಕ್ಕಮಟ್ಟಿನ ಸಂಬಳದ ನೌಕರಿ ಹಿಡಿದರೆ ಸಾಕು, ನೆಮ್ಮದಿಯ ಜೀವನ ನಡೆಸಬಹುದು. ಜೀವನದ ಉದ್ದಕ್ಕೂ ನಾವು ಮೂವರೂ ಯಾವಾವ ಬಲವಾದ ಕಾರಣಗಳಿಗಾಗಿ ದೂರದೂರವೇ ಇರುವಂತೆ ಆಯಿತು. ಜೀವನದ ಸಂಜೆಯಲ್ಲಾದರೂ ಮಗನೊಂದಿಗೆ ನಾಲ್ಕು ದಿನ ಹಾಯಾಗಿ ಇರಬೇಕು ಎಂದು ಎಲ್ಲ ತಂದೆ-ತಾಯಿಗಳು ಹಂಬಲಿಸುವದು ತೀರ ಸ್ವಾಭಾವಿಕ. ಆದರೆ ಈ ಹಂಬಲಕ್ಕಾಗಿ ನಿನ್ನ ಭವಿಷ್ಯಕ್ಕೆ ಅಡ್ಡಿ - ಆತಂಕಗಳನ್ನು ಒಡ್ಡುವ ಮನಸ್ಸು ನಮಗಿಲ್ಲ. ಆದ್ದರಿಂದ ನಮ್ಮ ಸರಳ ಜೀವನ ನಿನಗೂ ಒಪ್ಪಿಗೆಯಾದರೆ ಯಾವ ಗೌಜು-ಗೊಂದಲದಲ್ಲೂ ಬೀಳದೇ ನೆಮ್ಮದಿಯಾಗಿ ಬಾಳುವದು ಸಾಧ್ಯವಿದೆ. ಈ ಕುರಿತು ಆಳವಾಗಿ ವಿಚಾರಮಾಡಿ ಒಂದು ನಿರ್ಧಾರಕ್ಕೆ ಬಂದರೆ ಅದರಂತೆ ನಡೆಯಲು ಸುಲಭವಾಗುತ್ತದೆ.

ಅಗ್ಗದಲ್ಲಿ ಜಮೀನು ಕೊಂಡು, ಬೆಲೆ ಬಂದಾಗ ಮಾರಿ ಲಾಭ ಮಾಡಿಕೊಳ್ಳುವ ವರ್ಗಕ್ಕೆ ನಾವು ಸೇರಿದವರಲ್ಲ. ಹೆಬ್ಬಾಳದ ಸೈಟ್ ಮೇಲೆ ಮೂರು ಬಾರಿ ಅತಿಕ್ರಮಣ ನಡೆದು ತುಂಬ ಕಿರುಕುಳ ಎದುರಿಸಬೇಕಾಯ್ತು. ಅದರಿಂದ ಅದನ್ನು ಮಾರಲೇ ಬೇಕಾಗಿ ಬಂದಿತು. ಅದರಿಂದ ಲಾಭವೂ ಆಯಿತು. ಆ ಮಾತು ಬೇರೆ! ಆದರೆ ಹೀಗೆ

ಮಾಡುವದನ್ನು ಮುಂದರಿಸುವ ಮನಸ್ಸಿಲ್ಲ. ಆದ್ದರಿಂದ ನಮ್ಮೆಲ್ಲರಿಗೆ ಬಳಸಲು ಬರುವಂತಹ, ಇಲ್ಲವೇ ನಮ್ಮದನ್ನಾಗಿಯೇ ಉಳಿಸಿಕೊಳ್ಳಲು ಬರುವಂತಹ ಆಸ್ತಿಯನ್ನು ಸಿಕ್ಕಾಗ, ಖರೀದಿಸಿದರಾಯಿತು. ಈಗಿನ ಶಶಿಕಿರಣದ ಮನೆ, ಇಂದು, ಮುಂದೆ ಸಹ ಉತ್ತಮ ವಾಸದ ಮನೆ, ಎನ್ನುವದರಲ್ಲಿ ಎರಡು ಮಾತಿಲ್ಲ. ಧಾರವಾಡ ಹೊಯ್ಸಳ ನಗರದ ಸೈಟು ಅತಿ ಕಡಿಮೆ ಬೆಲೆಗೆ ಸಿಕ್ಕಿತ್ತು. ಆದರೆ ಮನೆ ಕಟ್ಟಿದರೂ ವಾಸ ಮಾಡುವವರು ಯಾರು? ಆಪ್ತರಿಗೋ ನಿಕಟವರ್ತಿಗಳಿಗೋ ಇರಗೊಟ್ಟರೆ, ಅದು ನಮ್ಮದಾಗಿ ಉಳಿಯುವ ಸಾಧ್ಯತೆ ತೀರ ಕಡಿಮೆ!

ಹೊನ್ನಾವರದ ನಾಗರಿಕರಲ್ಲಿ ಹಣದ ಹೊಳೆ ಹರಿಯಲಾರಂಭಿಸಿದೆ, ಎಂದು ತೋರುತ್ತದೆ! ಬೆಂಗಳೂರು ಬೆಲೆಗೂ ಅಲ್ಲಿ ಆಸ್ತಿ ಕೊಳ್ಳುವವರಿದ್ದಾರೆ. ರೈಲು ಮಾರ್ಗ ಸಿದ್ಧವಾಗುತ್ತಿರುವದರಿಂದ ಅದರ ಲಾಭ ಪಡೆಯಲು, ಕಿರಾಣಿ, ಜವಳಿ ಅಂಗಡಿಯವರು, ಟ್ಯಾಕ್ಸಿ ಓಡಿಸುವವರು, ಸಿಮೆಂಟ ಉಕ್ಕಿನ ವ್ಯಾಪಾರಿಗಳೆಲ್ಲ ಅಲ್ಪಾವಧಿಯಲ್ಲಿ ಸಿರಿವಂತರಾಗಲಾರಂಭಿಸಿದ್ದಾರೆ. ಕೊಂಕಣ ರೇಲ್ವೆ ಓಡಾಡಲಾರಂಭಿಸಿದಾಗ, ಬೆಲೆಗಳೆಲ್ಲ ಗಗನಕ್ಕೆ ಏರುವದು ಖಂಡಿತವೆಂದು ಧನಿಕರೆಲ್ಲ ಪೈಪೋಟಿಯಿಂದ ಜಮೀನು ಮನೆಗಳನ್ನು ತಮ್ಮವನ್ನಾಗಿಸಿ ಕೊಳ್ಳಲಾರಂಭಿಸಿದ್ದಾರೆ. ಹೊನ್ನಾವರದ ರೇಲ್ವೆ ನಿಲ್ದಾಣ ಕರ್ಕಿಯಲ್ಲಿ ಎಂದು ನಿರ್ಧರಿಸಿದ್ದರಿಂದ, ಅಲ್ಲಿ ಹಾಳು ಬಿದ್ದ ಭೂಮಿಗೆಲ್ಲ ಬಂಗಾರದ ಬೆಲೆ ಬಂದಿದೆ. ನಿನ್ನ ಬರ್ಮಿಂಗ್‌ಹ್ಯಾಮ್ ಗೆಳೆಯ, ವಿ. ಆರ್. ಜಯರಾಜನು, ಬೆಂಗಳೂರಿನ ಭೂಮಿಯ ಬೆಲೆ ನ್ಯೂಯಾರ್ಕ ಮಹಾನಗರದಕ್ಕಿಂತ ಹೆಚ್ಚು! ಎಂದು ವಿಸ್ಮಯದಿಂದ ಉದ್ಗರಿಸಿದ್ದ. ಆದ್ದರಿಂದ ಬೆನ್ನು ಮುರಿದು ದುಡಿದು ಉಳಿಸಿದ ಹಣವನ್ನು ಏನೇನೂ ಪ್ರತಿಫಲವಿಲ್ಲದ ಆಸ್ತಿಯಲ್ಲಿ ತೊಡಗಿಸುವ ಮನಸ್ಸಿಲ್ಲ. ಉಳಿತಾಯವನ್ನು ಹಣದ ರೂಪದಲ್ಲಿ ಇಟ್ಟರೆ ಅದನ್ನು ಅವಕಾಶ ಸಿಕ್ಕಾಗ ಬೇರೆ ರೂಪದಲ್ಲಿ ಪರಿವರ್ತಿಸಲು ಬರುತ್ತದೆ. ಮನೆ ಬೇಕೇ ಬೇಕು! ಎಂದಾಗ ಅದನ್ನು ಕಟ್ಟಲು ತೊಡಗಿಸಬಹುದು. ಸಣ್ಣ ಪ್ರಮಾಣದಲ್ಲಿ ಸಾಫ್ಟವೇರ್ ಸಿದ್ಧಪಡಿಸಿ ದೊಡ್ಡ ಕಂಪನಿಗಳಿಗೆ ಪೂರೈಸಬಹುದು. ಬೇರೆ ಏನೂ ಇಲ್ಲದಿದ್ದರೂ ಬ್ಯಾಂಕಿನಲ್ಲಿಟ್ಟು ಬಡ್ಡಿಯನ್ನು ಪಡೆಯಬಹುದು. ಆದ್ದರಿಂದ ಈಗಲೇ ಇದ್ದಷ್ಟು ಹಣವನ್ನು ಹೇಗೆ ಬಳಸುವದು? ಎಂಬ ಗೊಂದಲದಲ್ಲಿ ಬೀಳದೇ ಉಳಿತಾಯ ಮಾಡುವದು ಅತಿ ಮುಖ್ಯ. ಬ್ಯಾಂಕಿನಲ್ಲಿ ಹಣವಿದ್ದೂ ಅದಕ್ಕೆ ಕೈ ಚಾಚದೇ ಇರುವದಕ್ಕೆ ಗಟ್ಟಿ ಮನಸ್ಸು ಬೇಕಾಗುತ್ತದೆ. ಒಮ್ಮೆ ಇಂಥ ಹಣ-ಕಾಸಿನ ಶಿಸ್ತನ್ನು ಕಲಿತರೆ, ಅದರ ಲಾಭದ ಅರಿವಾಗಿ, ಅದನ್ನೆ ನಮ್ಮದನ್ನಾಗಿ ಮಾಡಿಕೊಂಡು ಬಿಡುತ್ತೇವೆ. ನೀನು ಈಗಿದ್ದ ನೌಕರಿ ಬಿಟ್ಟು ಬೇರೊಂದು ನೌಕರಿಗೆ ಸೇರಲಿದ್ದಿಯಾದ್ದರಿಂದ ಮುಂಬರುವ ದಿನಗಳಿಗಾಗಿ ಬ್ಯಾಂಕಿನ ಮೊತ್ತ ಘಟ್ಟಿಯಾಗಿರುತ್ತದೆ. ಯಾವ ಕಳವಳ, ಆತಂಕಗಳೂ ಇರುವದಿಲ್ಲ. ದುಡ್ಡೇ ದೊಡ್ಡಪ್ಪ! ಅಲ್ಲದಿದ್ದರೂ, ಅವನನ್ನು ಪೂರ್ತಿಯಾಗಿ ಕಡೆಗಣಿಸುವಂತೆ ಇಲ್ಲ ಅಲ್ಲವೇ?

◆ ◆ ◆

೧೫. ಸೊಸೆಯ ಶೋಧದಲ್ಲಿ

ನಿನ್ನನ್ನು ನೀನೇ ಕಂಡುಕೊಳ್ಳಲು ಪ್ರಾರಂಭಿಸಿದ ಪ್ರಯತ್ನದ ಕುರಿತಾದ ನಿನ್ನ ೨೫-೨-೧೯೯೪ರ ಪತ್ರ ಓದಿ ಅತೀವ ಆನಂದವಾಯಿತು. ಇದಕ್ಕಿಂತ ಅಭಿಮಾನದ ವಿಷಯ ಇನ್ನೊಂದಿಲ್ಲ. ಮಾನವನು ಬುದ್ಧಿಜೀವಿ. ಅಂತೆಯೇ ಅವನು ತಾನು ಕೈಕೊಳ್ಳುವ ಪ್ರತಿ ವಿಷಯದ ಕುರಿತು ಬುದ್ಧಿಯನ್ನೂ ಉಪಯೋಗಿಸಬೇಕು, ಮುಂದಾಗಿ ವಿಚಾರ ಮಾಡಲೇ ಬೇಕು. ಹಾಗೆ ಮಾಡಿದಾಗ ಮಾತ್ರ ಜೀವನಕ್ಕೊಂದು ಅರ್ಥಬರುತ್ತದೆ. ತೃಪ್ತಿ-ನೆಮ್ಮದಿಗಳನ್ನು ನಮ್ಮವಾಗಿಸಲು ಸಾಧ್ಯವಾಗುತ್ತದೆ. ನನ್ನ ಜೀವನನೌಕೆಯ ಚುಕ್ಕಾಣಿಯನ್ನು ಕಳೆದ ನಲವತ್ತು ವರ್ಷಗಳಿಂದ ನಾನೇ ನಿಯಂತ್ರಿಸುತ್ತ ಬಂದಿದ್ದೇನೆ. ಅಬ್ಬರದ ತೆರೆಗಳಿಗೆ ಅದು ಉರುಳದಂತೆ, ಬಂಡೆಗಲ್ಲಿಗೆ ಅಪ್ಪಳಿಸಿ ನುಚ್ಚು ನೂರಾಗದಂತೆ. ಅತ್ಯಂತ ಮುಂಜಾಗ್ರತೆಯಿಂದ ನಡೆಸಿಕೊಂಡು ಬಂದಿದ್ದೇನೆ. ಅಂತೆಯೇ ನಮ್ಮದೊಂದು ಅಪರೂಪದ ಕುಟುಂಬ! ಎಂದು ಇನ್ನಿತರರು ಪರಿಗಣಿಸುವಂತಾಗಿದೆ.

ಜ್ಯೋತ್ಸ್ನಾಳನ್ನು ಬೀಳ್ಕೊಳ್ಳುವ ಸಮಾರಂಭದಲ್ಲಿ, ನನ್ನ ಸುತರಾಂ ಪರಿಚಯವಿಲ್ಲದವರು, ಕಂಡರೂ ಅರಿಯದವರು ಕೂಡ ತಮ್ಮ ಭಾಷಣದಲ್ಲಿ ''ನಮ್ಮ ಮ್ಯಾಡಂ ಅವರು ತಮ್ಮ ಯಜಮಾನರ ಸಹಕಾರದಿಂದ, ಪ್ರಭಾವದಿಂದ, ಬೆಂಬಲದಿಂದ, ಅತ್ಯಂತ ದಕ್ಷ ಆಡಳಿತಗಾರರಾಗಲು ಸಾಧ್ಯವಾಯಿತು. ಯಾವ ಸಾಂಸಾರಿಕ ಸಮಸ್ಯೆಗಳೂ ಬಾಧಿಸಲಿಲ್ಲ..... ಟ್ರಾನ್ಸಫರ್ ಮಾಡಿದೆಡೆಯೆಲ್ಲ ಹೋಗಿ ಬಂದರು!'' ಎಂದೆಲ್ಲ ಹೇಳಿದರಂತೆ.

ನಿನ್ನ ಅಪ್ಪ ಅತ್ಯಂತ ಸ್ವಾಭಿಮಾನಿ, ಎಂದು ಇದಾಗಲೇ ನೀನು ಅರಿತಿರಬೇಕು. ಈತನಕ ಯಾರ ಹತ್ತಿರವೂ ಒಂದು ಪೈಸಾದ ಸಹಾಯ ಬೇಡಿದವನಲ್ಲ. ತಂದೆ, ಸೋದರರು, ಪತ್ನಿ, ಪುತ್ರರಿಗೆ ಕ್ವಚಿತ್ತಾಗಿ ಕೂಡ ಹಣಕ್ಕಾಗಿ ಕೇಳಿದವನಲ್ಲ. ಇದರ ಅರ್ಥ ಆತನಿಗೆ ಹಣದ ಕೊರತೆ ಎಂದೂ ಉಂಟಾಗಲಿಲ್ಲ ಎಂದರ್ಥವಲ್ಲ. ಆದರೆ ಅಂಥ ದಿನಗಳು ಬಂದಾಗ ವಿಚಲಿತನಾಗದೇ, ಮುಂಬರುವ ದಿನಗಳಿಗಾಗಿ ಶಾಂತಚಿತ್ತನಾಗಿ ಕಾಯುವದನ್ನು ರೂಢಿಸಿಕೊಂಡಿರುವವ. ಎಂದೂ ಒಳ್ಳೆಯ ಊಟಕ್ಕಾಗಿ, ಅತ್ಯುತ್ತಮ ಬಟ್ಟೆ-ಬರೆಗಳಿಗಾಗಿ ಹಂಬಲಿಸಿದವನಲ್ಲ. ಆದರೆ ಸಂಸಾರದ ಜೀವನಾವಶ್ಯಕತೆಗಳನ್ನು ಎಂದೂ ಅಲಕ್ಷಿಸಿದವನಲ್ಲ. ಖರ್ಚಿನಲ್ಲಿ ಕಡಿತಮಾಡಿ, ಅಲ್ಪ ಪ್ರಮಾಣದಲ್ಲಿ ಉಳಿತಾಯ ಮಾಡಿ, ಸಂಚಿತ ಹಣವನ್ನು ಮನೆ ಕೊಳ್ಳಲು, ಕೊಂಚ ಜಾಗ ಕೊಳ್ಳಲು ತೊಡಗಿಸಿದ. ಈ ಮುಂದಾಲೋಚನೆಯಿಂದಾಗಿ ನಿವೃತ್ತ ಜೀವನವನ್ನು ನೆಮ್ಮದಿಯಿಂದ ಕಳೆಯುವಂತೆ ಆಗಿದೆ. ಅನೇಕಾನೇಕ ನಮ್ಮ ಸಂಬಂಧಿಕರಿಗೆ ನಮ್ಮನ್ನು ಕಂಡಾಗ ತಾವೂ ನಮ್ಮಂತೆ ಇರಬೇಕು, ಅನಿಸುವದು ಸ್ವಾಭಾವಿಕ. ಆದರೆ ಅದಕ್ಕಾಗಿ ನಾವು ಮಾಡಿದ ತ್ಯಾಗ ಹಾಗೂ ತೆತ್ತ ಮುಂದಾಲೋಚನೆಯ ಬೆಲೆಯ ಕಲ್ಪನೆ ಅವರಾರಿಗೂ ಬರಲು ಸಾಧ್ಯವಿಲ್ಲ.

ಸ್ಥಾಯಿ ಆಸ್ತಿಯಲ್ಲಿ ನಿನ್ನ ಉಳಿತಾಯವನ್ನು ತೊಡಗಿಸುವ ನಿನ್ನ ವಿಚಾರಕ್ಕೆ ಸುಸ್ವಾಗತ. ಕೇವಲ ಒಂದು ದಶಕದ ಹಿಂದೆ ಶಶಿಕಿರಣದ ಈ ಮನೆಗೆ ನಾವು ಕೊಟ್ಟ ಹಣ ೧.೫ ಲಕ್ಷ ಮಾತ್ರ! ಇಂದು ಅದರ ಹತ್ತೂವರೆ ಪಟ್ಟು ತೆತ್ತರೂ ಈ ಸ್ಥಳದಲ್ಲಿ ಇಂಥ ಸುಂದರ, ಸುಭದ್ರ ಮನೆ ಸಿಗಲಿಕ್ಕಿಲ್ಲ. ಹೆಬ್ಬಾಳದ ಸೈಟಿನ ಇತಿಹಾಸ ನಿನಗೆ ತಿಳಿದೇ ಇದೆ. ಈ ದಿನಗಳಲ್ಲಿ ಹೊನ್ನಾವರದಲ್ಲಿಯೂ ಆಸ್ತಿ-ಪಾಸ್ತಿಗಳ ಬೆಲೆ ಗಗನಕ್ಕೇರಿದೆಯಂತೆ. ಚೌಕಮಾರ್ಗದ ಅಂಗಡಿಯೊಂದು ಮೂರುವರೆ ಲಕ್ಷಕ್ಕೆ ಮಾರಾಟವಾಗಿದೆಯಂತೆ. ಅಲ್ಲಿ ಆಗೀಗ ಸಿದ್ಧವೇ ಆದ ಇಮಾರತು ಇದ್ದ ಹಿತ್ತಿಲಿನ ಮನೆ ಮಾರಾಟಕ್ಕೆ ತೆಗೆಯುವ ಸಾಧ್ಯತೆ ಇದ್ದೇ ಇದೆ. ಅಂತ ಸಂದರ್ಭ ಬಂದಾಗ ತಿಳಿಸಲು ತುಳಸುವಿಗೆ ವಿನಂತಿಸಿಕೊಂಡಿದ್ದೇನೆ.

ಈಗಲೇ ನಿನ್ನ ಹತ್ತಿರ ಅಷ್ಟು ಹಣ ಇಲ್ಲವೆಂದು ನನಗೆ ಖಂಡಿತ ಗೊತ್ತು. ಆದ್ದರಿಂದ ಸದ್ಯ ನನ್ನ ಉಳಿತಾಯದ ಹಣ ತೊಡಗಿಸಿ ಅಂಥ ಮನೆ ಸಿಕ್ಕಾಗ ನಿನ್ನ ಹೆಸರಿಗೆ ಕೊಂಡುಕೊಳ್ಳಬೇಕೆಂದಿದ್ದೇನೆ. ಅಂದರೆ ನಿನಗೆ ಅಷ್ಟೊಂದು ಹಣವನ್ನು ಝುಕ್ಕಿಸಿ ಉಳಿತಾಯ ಮಾಡಲೇ ಬೇಕಾಗುತ್ತದೆ! ಇದು ನನ್ನ ವಿಚಾರ. ಹೀಗೆ ಮಾಡಿದರೆ ನಿನಗೆ ಹೊನ್ನಾವರ, ಧಾರವಾಡ, ಬೆಂಗಳೂರು ಇಲ್ಲವೇ ಬರ್ಮಿಂಗ್‌ಹ್ಯಾಮ್‌ಗಳಲ್ಲಿ ಯಾವುದಾದರೂ ಒಂದು ಊರಿನಲ್ಲಿ ಸ್ಥಾಯಿಯಾಗಿ ವಾಸಿಸಲು ಬರುತ್ತದೆ. ಯಾವುದೇ ಆಸ್ತಿ ಬೇಡ ಎಂದೆನಿಸಿದರೆ ಅಥವಾ ಯಾವುದೇ ಕಾರಣಕ್ಕೆ ಹಣದ ಉಬ್ಬರ ಕಾಣಿಸಿಕೊಂಡರೆ, ಲಾಭ ಮಾಡಿಕೊಂಡು ಜಾಗ ಮಾರುವದೂ ಸಾಧ್ಯವಾಗುತ್ತದೆ. ಜೀವನದ ಅನೇಕಾನೇಕ ಸವಲತ್ತುಗಳು ನಿನಗೆ ಹುಟ್ಟಾ ಬಂದಿರುವದರಿಂದ ಸಾರ್ಥಕ ಬಾಳನ್ನು ನಡೆಸಲು ಯಾವ ಅಡ್ಡಿ-ಆತಂಕಗಳೂ ಬರಲಾರವು! ಎಂದು ನನ್ನ ಅನಿಸಿಕೆ. ಇದ್ದ ಚೂರು ಆಸ್ತಿ-ಪಾಸ್ತಿಯ ಮೇಲ್ವಿಚಾರಣೆ ನಡೆಸಿದರೇ ನೆಮ್ಮದಿಯ ಜೀವನ ತೂಗಿಸಿಕೊಂಡು ಹೋಗಲು ಸಾಧ್ಯವಿದೆ. ಇನ್ನಿತರರಿಗೆ ಅಲ್ಪ ಸ್ವಲ್ಪ ನೆರವನ್ನೂ ನೀಡಬಹುದು. ಇವರಲ್ಲಿ ಅಸಹಾಯಕರನ್ನು ದೋಚುವವರಿಂದ ಬೇರ್ಪಡಿಸುವದನ್ನು, ಕಲಿಯುವದು ಅತಿ ಮುಖ್ಯ. ತಮ್ಮ ಲಾಭಕ್ಕಾಗಿ ನಮ್ಮ ಪರಿಚಯ, ಸ್ನೇಹ, ಆತ್ಮೀಯತೆಗಳನ್ನು ಬಯಸುವವರನ್ನು ಗುರುತಿಸಿ, ಅಂಥವರು ಹತ್ತಿರ ಸುಳಿಯದಂತೆ ಮಾಡಿದ್ದರಿಂದ ಇಂದು ನಾವು ನೆಮ್ಮದಿಯಿಂದ ಇರುವಂತಾಗಿದೆ. ಮತ್ತೆ ಕೆಲದಿನಗಳಿಂದ ಜ್ಯೋತ್ಸ್ನಾಳಲ್ಲಿ ಅನಾರೋಗ್ಯ ಕಾಣಿಸಿಕೊಂಡಿದೆ. ಆಗಾಗ ನಿನ್ನನ್ನು ನೆನೆಸಿಕೊಳ್ಳುತ್ತಿರುತ್ತಾಳೆ. ಆದ್ದರಿಂದ ಹೋದಾವಾರ ನಿನಗೆ ಬರೆದ ಪತ್ರದಲ್ಲಿ ಅವಳು ನಿನಗೆ ಭಾರತಕ್ಕೆ ಹಿಂದಿರುಗಿ ಬರುವಂತೆ ಸೂಚಿಸಿದ್ದಾಳೆ. ಇದು ಮಾತೃಹೃದಯದ ಅನಿಸಿಕೆಯೇ ಹೊರತು, ವ್ಯಾವಹಾರಿಕ ಸೂಚನೆಯಲ್ಲ ಎಂದು ಬೇರೆ ಹೇಳಬೇಕಿಲ್ಲ. ಕಷ್ಟಪಟ್ಟು ದೊರಕಿಸಿದ ನೌಕರಿ ಬಿಟ್ಟು ಹಾಗೆಯೇ ಹಿಂದಿರುಗಿ ಬರಲು ಸಾಧ್ಯವೇ? ಅದೂ ಮೈತುಂಬ ಸಾಲ ಇರುವಾಗ? ಆದರೆ ಹಣಗಳಿಕೆಯ ಯಂತ್ರವಾಗಿ ಶಾಶ್ವತವಾಗಿ ಅಮೇರಿಕೆಯಲ್ಲಿ ನೆಲೆಸುವದೂ ಸರಿಯಲ್ಲ. ಆದ್ದರಿಂದ ನಿನ್ನ ಭವಿಷ್ಯದ ಬಗ್ಗೆ ಒಂದು ಖಚಿತವಾದ ನಿರ್ಣಯಕ್ಕೆ ಬಂದು ಅದಕ್ಕೆ ಅನುಗುಣವಾಗಿ,

ಕಾರ್ಯೋನ್ಮುಖಿಯಾಗುವದು ಸರ್ವದೃಷ್ಟಿಯಿಂದ ಕ್ಷೇಮಕರ. ನಿನ್ನ ಕನಸುಗಳನ್ನೆಲ್ಲ ನನಸು ಮಾಡಲು ನೀನು ಕೈಕೊಳ್ಳುವ ಕ್ರಮಗಳೆಲ್ಲ ನನಗೆ ಸರ್ವಸಮ್ಮತವೆಂದು ಬೇರೆ ಹೇಳಬೇಕೇ?

ನೀನು ಅಮೇರಿಕೆಯ ವಿಶ್ವವಿದ್ಯಾಲಯದಿಂದ ಮಾಸ್ಟರ್ಸ ಪದವಿ ಪಡೆದು, ವಿಳಂಬವಾಗದೇ ನೌಕರಿ ಗಿಟ್ಟಿಸಿ, ಕಾರು ಕೊಂಡು ಓಡಾಡುತ್ತಿರುವ ಸಮಾಚಾರ, ಊರಿನಲ್ಲಿ ಕಾಡುಗಿಚ್ಚಿನಂತೆ ಹಬ್ಬಿದೆ! ಅಂತೆಯೇ ಕನ್ಯಾಪಿತೃಗಳೆಲ್ಲ ನಿನ್ನನ್ನು ಅಳಿಯನನ್ನಾಗಿ ಮಾಡಿಕೊಳ್ಳಲು ಪೈಪೋಟಿ ನಡೆಸಿದ್ದಾರೆ. ವಶೀಲಿ ಹಚ್ಚುತ್ತಿದ್ದಾರೆ. ಮೊನ್ನೆ ಬಂದ ಪ್ರದೀಪನು ಮೂವರು ಕನ್ಯೆಯರ ಜಾತಕ, ಫೋಟೋಗಳನ್ನು ತಂದಿದ್ದಾನೆ. ಒಬ್ಬಳು ನಮ್ಮೂರಿನ ಜನಪ್ರಿಯ ಡಾಕ್ಟರ... ರ ಪುತ್ರಿ. ಬಿ. ಡಿ. ಎಸ್. ಮುಗಿಸಲಿದ್ದಾಳೆ. ಭರತ ನಾಟ್ಯ ಕಲಿತಿದ್ದಾಳೆ. ಪ್ರಥಮ, ದ್ವಿತೀಯ ವಿಶ್ವವಿದ್ಯಾಲಯ ಪರೀಕ್ಷೆಗಳಲ್ಲಿ ರ್‍ಯಾಂಕ್ ಗಿಟ್ಟಿಸಿದ್ದಾಳೆ. ಫೋಟೋದಲ್ಲಿ ಚೆಲುವೆಯಾಗಿ ಕಾಣಿಸುತ್ತಾಳೆ. ಎರಡನೆಯವಳು.... ಭಟ್ಟರ ಮಗಳು. ಐದು ಅಡಿ, ಎರಡಂಗುಲ ಎತ್ತರ. ಎಸ್. ಎಸ್. ಎಲ್. ಸಿ. ಪಾಸು ಮಾಡಿದ್ದಾಳೆ. ವರ್ಣಚಿತ್ರದಲ್ಲಿ ತೆಳ್ಳಗೆ ಬೆಳ್ಳಗೆ ಚೆನ್ನಾಗಿದ್ದಾಳೆ. ಮೂರನೆಯವಳು... ಅವಳ ಅಕ್ಕ. ನಿನ್ನೊಡನೆ ಬಾಲ್ಯದಲ್ಲಿ ಕ್ರಿಕೆಟ್ ಆಡಲು ಬರುತ್ತಿದ್ದಳು. ಬಿ. ಎಸ್. ಸಿ. ಮೊದಲ ವರ್ಷ ಓದುತ್ತಿದ್ದಾಳೆ. ಅವಳಿಗೆ ಹದಿನೆಂಟು ವರ್ಷ ಮಾತ್ರ. ಯಾರನ್ನೂ ಸೊಸೆ ಮಾಡಿಕೊಳ್ಳುವಂತೆ ಇಲ್ಲವಾದರೂ ಮಗನಿಗೆ ಜಾತಕಗಳು ಬರಲಾರಂಭಿಸಿವೆ! ಎಂದು ಜ್ಯೋತ್ಸ್ನಾ ಸಂತೋಷದಲ್ಲಿದ್ದಾಳೆ. ಕೆಲ ದಿನಗಳ ಹಿಂದೆ, ಈ ವಿಚಾರದಲ್ಲಿ ನಿರಾಸೆ ವ್ಯಕ್ತಪಡಿಸಿದ್ದಳು.

ಒಂದು ವಾರದ ಹಿಂದೆ ನಾನು ಲ್ಯಾಬಿಗೆ ಹೋಗಿದ್ದಾಗ ಮನೀಷಾ ಪೈ ತಂದೆ, ನಮ್ಮ ಮನೆಗೆ ಬಂದು, ''ತಮ್ಮ ಮಗಳನ್ನು ಸೊಸೆ ಮಾಡಿಕೋ! ಅವಳು ನಿಮ್ಮ ಮಗನು ಇಲ್ಲಿ ಕೆಲಕಾಲ ನೌಕರಿ ಮಾಡಿದ ಕಂಪನಿಯಲ್ಲಿ ಸಹೋದ್ಯೋಗಿಯಾಗಿದ್ದಳು.!'' ಎಂದೆಲ್ಲ ಹೇಳಿ, ಮಗನಿಗೆ ಫೋನಿಸಿದರೆ ಅವನು ತಕ್ಷಣ ಒಪ್ಪಿಕೊಂಡು ಬಿಡುತ್ತಾನೆ! ಎಂಬಂತೆ ಮಾತನಾಡಿ ಹೋದರಂತೆ. ಎರಡು ದಿನಗಳ ಬಳಿಕ, ರಸ್ತೆಯಲ್ಲಿ ಸಿಕ್ಕಾಗ, 'ವಿಕಾಸನು ಏನೆಂದ?' ಎಂದು ಕೇಳಿದರು. ''ಸದ್ಯ ಸಂಸಾರಸ್ಥನಾಗುವ ವಿಚಾರವಿಲ್ಲ'' ಎಂದು ಹೇಳಿದ್ದಾನೆ ಎಂದೆ. ಮತ್ತೆ ಕೊರೆತ ಆರಂಭಿಸಿದಾಗ, ಮನಸ್ಸು ಬದಲಾಯಿಸಿದರೆ ಫೋನಮಾಡಿ ತಿಳಿಸುವದಾಗಿಯೂ ಹೇಳಿದ್ದಾನೆ! ಎಂದು, ನಾನು ಮುಂದುವರಿದೆ. ಅವಳ ತಾಯಿಯ ಮನೆಯ ಪರಿಚಯ ನನಗೆ ಚೆನ್ನಾಗಿ ಗೊತ್ತು! ಹುಡುಗಿಯ ಬಗ್ಗೆ ನಿನಗೂ ಗೊತ್ತು.

ತುಳಸೀದಾಸನು ಇಲ್ಲಿಗೆ ಬಂದಾಗ ಮಾಲಿ, ಮಂಗಲಾ ನಮ್ಮ ಮನೆಯಲ್ಲಿ ಸೇರಿದ್ದರು. ಆಗ ವಿಕಾಸನಿಗೆ ಎಂತಹ ಕನ್ಯೆಬೇಕು? ಎಂದು ಅವರೆಲ್ಲ ಒಕ್ಕೊರಳಿನಿಂದ ಪ್ರಶ್ನಿಸಿದ್ದರು. ''ವಿಕಾಸನ ಬೇಕು-ಬೇಡ ಅರಿತುಕೊಂಡು, ಮಾತೃಹೃದಯದಿಂದ ಅವನನ್ನು ಸಂಭಾಳಿಸಿಕೊಂಡು, ಸಂಸಾರ ನಡೆಸಬಲ್ಲ ಆರೋಗ್ಯವಂತ ಕನ್ಯೆ ಬೇಕು'' ಎಂದು ಒಂದೇ ವಾಕ್ಯದಲ್ಲಿ ಉತ್ತರಿಸಿದ್ದೆ. ಅರ್ಥಾತ್, ಕನ್ಯೆ ಅತಿ ಹೆಚ್ಚು ಕಲಿತಿರಬೇಕೆಂದಿಲ್ಲ.

ಅತಿ ಸುಂದರಿಯಾಗಬೇಕೆಂದಿಲ್ಲ. ಅತ್ಯಾಧುನಿಕಳಾಗಿರುವ ಅವಶ್ಯಕತೆ ಇಲ್ಲ. ವರದಕ್ಷಿಣೆ - ಆಡಂಬರದ ಮದುವೆ ಕೂಡ ಬೇಕೆಂದಿಲ್ಲ. ಇಂದಿನ ದಿನಗಳಲ್ಲಿ ಒಳ್ಳೆಯ ವರಗಳು ಸಿಗುವದು ವಿರಳವಾದಂತೆ, ಒಳ್ಳೆಯ ವಧುಗಳೂ ಕ್ವಚಿತ್ತಾಗಲಾರಂಭಿಸಿದ್ದಾರೆ! ಎಲ್ಲಿ ನೋಡಿದರೂ ವಿರಸದಾಂಪತ್ಯಗಳು ಕಂಡು ಬರುತ್ತಿವೆ. ಕೆಲ ನವವಿವಾಹಿತ ಕನ್ಯೆಯರೇ ವಿವಾಹ ವಿಚ್ಛೇದನಕ್ಕೆ ಮುಂದುವರಿದದ್ದು ಇದೆ. ಅವರಿಗೆ ಜೀವನವೇ ಮಕ್ಕಳಾಟದಂತೆ ಕಂಡಿರಬೇಕು. ನಮ್ಮ ಭಾಸ್ಕೇರಿ ಕಾಮತ ಕುಟುಂಬದ ವರಮಹಾಶಯರೆಲ್ಲ ಗಡಿಬಿಡಿಯಿಂದ ಮದುವೆ ಮಾಡಿಕೊಂಡವರೇ! ಹೀಗಾಗಿ ಅವರಾರಿಗೂ ಪಸಂದಾದ ಪತ್ನಿ ಸಿಕ್ಕಿಲ್ಲ! ಎಂಬುದು ಪ್ರದೀಪನ ವಾದ.

'ವಿಕಾಸನ ಮದುವೆಯನ್ನು ಮಾಡಿ ಮುಗಿಸಿಬಿಡು. ಇಲ್ಲವಾದರೆ ಅವನು ಅಲ್ಲಿಯವಳನ್ನು ಮಾಡಿಕೊಳ್ಳಬಹುದು' ಎಂದು ಬುದ್ಧಿವಾದಕ್ಕೆ ಏನೇನೂ ಕೊರತೆ ಇಲ್ಲ. ಇಂಥವರೆಲ್ಲ ಯಾವಳೋ ಕನ್ಯೆಯ ಉದ್ಧಾರಕ್ಕಾಗಿಯೇ ಈ ಬೋಧನೆ ಮಾಡುತ್ತಿದ್ದಾರೆ, ಎಂದೂ ಗೊತ್ತು. ಇನ್ನೆರಡು ವರ್ಷಗಳ ಕಾಲ ಮದುವೆ ಆಗುವ ಮನಸ್ಸು ವಿಕಾಸನಿಗಾಗಲಿ, ಮಾಡುವ ತರಾತುರಿ ನಮಗಾಗಲಿ ಇಲ್ಲ. ಅವನಿಗೆ ಯೋಗ್ಯಳೆಂದು ಕಂಡ ಕನ್ಯೆಯನ್ನು ವರಿಸಲು ಅವನು ಸಂಪೂರ್ಣ ಸ್ವತಂತ್ರ! ಅವನು ಸಂಸಾರದಲ್ಲಿ ಸುಖಿಯಾಗಿರಬೇಕೆಂದು ನಮ್ಮ ಸರ್ವ ಪ್ರಯತ್ನ. ನಾವು ಆರಿಸಿದ ವಧು ಮಾತ್ರ ಅವನಿಗೆ ಸುಖ-ಸಂತೋಷಗಳನ್ನು ತರುತ್ತಾಳೆ, ಎಂಬ ಭ್ರಮೆ ನಮಗಿಲ್ಲ.' ಎಂಬ ಚುಟುಕಿನ ಉತ್ತರದಿಂದ ಇಂಗು ತಿಂದ ಮಂಗನಂತೆ ಜೋಲು ಮುಖ ಹಾಕಿ ಹಿಂದಿರುಗುತ್ತಾರೆ. ಅದೆಷ್ಟೋ ಕನ್ಯಾಪಿತೃಗಳು ಬಂಧುಗಳ ಮುಖಾಂತರ ಯತ್ನಿಸಿ ವಿಫಲರಾಗುತ್ತಿದ್ದಾರೆ. ಮೋಜಿನ ಮಾತೆಂದರೆ ಕನ್ಯೆಯರು ಹೇಗೆಗೇ ಇರಲಿ ವರನು ಮಾತ್ರ ಅತ್ಯುತ್ತಮನಾಗಿರಬೇಕು! ನಮ್ಮ ಮಗನು ವಿರಳರಾದ ವರರಲ್ಲಿ ಸೇರ್ಪಡೆಯಾಗಿದ್ದಾನೆ, ಎಂದು ಜ್ಯೋತ್ಸ್ನಾ ಸಡಗರಪಟ್ಟಳು.

ನಾವು ಯಾವ ಪಾಲಕರಿಗೂ ಆಶ್ವಾಸನೆ ನೀಡಿಲ್ಲ. ಆಸೆ ತೋರಿಸಿಲ್ಲ. ಓಡಾಡುವಂತೆಯೂ ಮಾಡುತ್ತಿಲ್ಲ. ಮನೆಗೆ ಬಂದವರ ವಿಳಾಸ ಬರೆದುಕೊಂಡು, ಚಹಾ-ಕಾಫಿ ಕುಡಿಸಿ, ಸಮಯ ಬಂದಾಗ ನಾವೇ ಅವರೊಂದಿಗೆ ಸಂಪರ್ಕ ಬೆಳೆಸುವದಾಗಿ ಹೇಳಿ ಬೀಳ್ಕೊಳ್ಳುತ್ತೇವೆ. ಇಷ್ಟಾದರೂ, ಎಷ್ಟೊಂದು ಜನ ಫೋನ ಮೂಲಕ, ಪರಿಚಯದವರ ಮೂಲಕ ಕಾಡುತ್ತಾರೆ, ಕೀಟಲೆ ಕೊಡುತ್ತಾರೆ, ಯಾರಯಾರದೋ ವಶೀಲಿ ಹಚ್ಚುತ್ತಾರೆ. ಇಲ್ಲದ ಪರಿಚಯ, ನೆಂಟಸ್ತಿಕೆ ಹೇಳಿಕೊಳ್ಳುತ್ತಾರೆ. ಒಮ್ಮೊಮ್ಮೆ ಹೀಗೆ ಬಂದವರನ್ನು ಸಾಗ ಹಾಕುವದು ಕಷ್ಟದ್ದಾಗುತ್ತದೆ!

ಎಂತಹ ಸೀತೆ, ಸಾವಿತ್ರಿಯನ್ನು ಹುಡುಕಿ ಸೊಸೆ ಮಾಡಿಕೊಂಡರೂ ಸಂಸಾರದಲ್ಲಿ ಸಾಮರಸ್ಯಕ್ಕಾಗಿ ಯತ್ನಿಸುವದು ಅತಿ ಮುಖ್ಯ. ನಾವು ಮಗನನ್ನು ಮುದ್ದಿಸಿದಷ್ಟೆ ಸೊಸೆಯೂ ನಮ್ಮವಳೆಂದೇ ಕಾಣಲು ಕಲಿಯಬೇಕು. ಅವಳಲ್ಲಿಯ ಕುಂದು-ಕೊರತೆಗಳನ್ನು ಹುಡುಕುವ ಬದಲಾಗಿ, ಅವಳ ಸಾಧನೆಗಳನ್ನು ಗುರುತಿಸಲು ಕಲಿಯಬೇಕು. 'ಬಂದವಳೂ ಪತಿಯ ಅವಶ್ಯಕತೆಗಳನ್ನು ಗುರುತಿಸಿ ಅನುರೂಪ

ಪತ್ನಿಯಾಗಲು ಸರ್ವಪ್ರಯತ್ನ ಮಾಡಬೇಕು' ಎಂದು ನಿರೀಕ್ಷಿಸುವಾಗ, ಅವಳು ತನ್ನ ಒಡಹುಟ್ಟಿದವರನ್ನೆಲ್ಲ ಹಿಂದೆ ಬಿಟ್ಟು ಹೊಸ ಜೀವನದ ಬೆನ್ನಟ್ಟಿ ಬಂದಿದ್ದಾಳೆಂದು ಮರೆಯಕೂಡದು. ಸಂಕ್ಷಿಪ್ತವಾಗಿ ಹೇಳಬೇಕೆಂದರೆ ವೈವಾಹಿಕ ಜೀವನ ಸುಖಮಯವಾಗಬೇಕಿದ್ದರೆ, ಒಬ್ಬರನ್ನೊಬ್ಬರು ಸರಿಯಾಗಿ ಅರಿತುಕೊಂಡು ಹೊಂದಾಣಿಕೆ ಮಾಡಿಕೊಳ್ಳಲೇ ಬೇಕು. ನಿನ್ನ ಅಪ್ಪ, ಅಮ್ಮ ತೀರ ವಿರುದ್ಧವಾದ ಹಿನ್ನೆಲೆಯಲ್ಲಿ ಬೆಳೆದವರು! ಹೀಗಾಗಿ ಇಬ್ಬರೂ ಸಾಮರಸ್ಯದಿಂದ ಜೀವಿಸಬೇಕಾದರೆ ಬಹಳಷ್ಟು ಗುದ್ದಾಡಬೇಕಾಯಿತು. ಇಂದಿಗೂ ಈ ಹೊಂದಾಣಿಕೆಯ ಪ್ರಯತ್ನ ನಡೆದೇ ಇದೆ. ಅಂತೆಯೇ ಇನ್ನಿತರರಿಂದ ''ಭಲೇ ಜೋಡಿ!'' ಎಂದು ಬೆನ್ನು ತಟ್ಟಿಸಿಕೊಳ್ಳುತ್ತಿದ್ದೇವೆ. ನಲವತ್ತು ವರ್ಷಗಳ ಬಳಿಕ ಭೇಟಿಯಾದ ಸಹಪಾಠಿ ಶಿವಪ್ಪನಾಯ್ಕನ ಮಾತುಗಳು ಇಲ್ಲಿ ಹೆಚ್ಚು ಸಮಂಜಸ ಎನಿಸಬಹುದೇನೋ! ''ನಿನ್ನ ಪ್ರೇಯಸಿಗೆ ಪತ್ರಗಳು'' ನನಗೆ ತುಂಬ ಸೇರಿತು. ಸಹಧರ್ಮಿಣಿ ಬರೆದ ಮುನ್ನುಡಿ ಒಂದು ತೂಕ ಹೆಚ್ಚೇ ಸೇರಿತು. ರುಕ್ಮಿಣಿಯಲ್ಲೇ ರಾಧೆಯನ್ನು ಕಾಣುವ ಮತ್ತು ಪಡೆಯುವ ಭಾಗ್ಯ ತೀರ ಕೆಲವರ ಪಾಲಿಗಷ್ಟೆ ಬರುತ್ತದೆ. ಈ ವಿರಳರಲ್ಲಿ ನೀನೊಬ್ಬನೆಂದು ನಿನ್ನನ್ನು ಭಾಗ್ಯವಂತನೆನ್ನುವೆ!

◆ ◆ ◆

ವಿಕಾಸನು ೧೯೯೭ರಲ್ಲಿ ತನ್ನ ಸಹಪಾಠಿ, ಸಹೋದ್ಯೋಗಿ, ದಕ್ಷಿಣ ಕೋರಿಯ ಸಂಜಾತೆ, ಹಿಯ್ಯೊಂಗ್ ಕಿಮ್‌ಳನ್ನು ವಿವಾಹವಾದ. ಕಿಮ್, ಕಂಪ್ಯುಟರ ಗಣಿತಶಾಸ್ತ್ರದಲ್ಲಿ ಡಾಕ್ಟರೇಟ್ ಪಡೆದಿದ್ದಾಳೆ. ಕಾಮತ್ ವೆಬ್ ಸೈಟ್‌ದ ನಾಲ್ಕು ಆಧಾರ ಸ್ತಂಭಗಳಲ್ಲಿ ಒಬ್ಬಳು.

29.1.1994

೧೬. ಷಷ್ಠ್ಯಬ್ದಿಯ ಸವಿ

ಇಂದು ನನಗೆ ಸರಿಯಾಗಿ ಅರವತ್ತು ತುಂಬಿದವು. ಉಳ್ಳವರು, ಈ ದಿನವನ್ನು 'ಶಾಂತಿ-ಹೋಮ' ಏರ್ಪಡಿಸಿ ಆಚರಿಸುತ್ತಾರೆ. ಪ್ರಚಾರ - ಪ್ರಸಿದ್ಧಗಳಿಗಾಗಿ ಅದ್ದೂರಿಯ ಏರ್ಪಾಡು ಆಗುತ್ತದೆ. ಆಪ್ತ-ಮಿತ್ರರಿಗೆ ಭೋಜನ ಕೂಟ, ಉಡುಗೊರೆಗಳ ವಿನಿಯೋಗ ಮಾಡಿ ಬೆನ್ನು ಚಪ್ಪರಿಸಿಕೊಳ್ಳುತ್ತಾರೆ..... ಹೋಟೇಲಿನ ಮಾಲಕರು ಇಪ್ಪತ್ತೊಂದು ಲಕ್ಷ ರೂಪಾಯಿಗಳನ್ನು ಬಳಸಿ ತಮ್ಮೂರಾದ ಉತ್ತರ ಕನ್ನಡ ಜಿಲ್ಲೆಯ ವೆಂಕಟಾಪುರದಲ್ಲಿ ದೊಡ್ಡ ಉತ್ಸವವನ್ನು ಏರ್ಪಡಿಸಿದ್ದರು. ಈ ಸಮಾರಂಭಕ್ಕೆ ಹಾಜರಿದ್ದ ನಮ್ಮ ನೆಂಟರ ಬಾಯಿಂದ ಅದರ ವರ್ಣನೆ ಕೇಳುವದೇ ಮೋಜಾಗಿತ್ತು. ಅವರ ತುತ್ತೂರಿ ಊದುವದು ಮುಗಿದ ನಂತರ ''ಆ ಹಣವನ್ನು ಬಡಕೊಂಕಣಿ ಹುಡುಗರ ವಿದ್ಯಾರ್ಜನೆಗೆ ಸಹಾಯವಾಗುವಂತೆ ಬಳಸಬಾರದಿತ್ತೆ? ಅವರಂತೆಯೇ ಬಡತನದಿಂದ ಕಷ್ಟಪಟ್ಟು ಶಿಕ್ಷಣಕ್ಕೆ ಪರದಾಡುವ ಎಳೆಯರು ಎಷ್ಟೊಂದಿಲ್ಲ?'' ಎಂದು ನಾನು ಅನ್ನದೇ ಇರಲಿಲ್ಲ.

ನಾನು ಷಷ್ಠ್ಯಬ್ದಿಯ ದಿನ ನನ್ನ ಸ್ವಭಾವಕ್ಕೆ ಅನುಗುಣವಾಗಿ ಮನೆಯ ಶಾಂತ, ಏಕಾಂತದ ''ಕಮ್ಮಟ''ದಲ್ಲಿ ಕುಳಿತು, ಪುತ್ರನಿಗೆ ಪತ್ರ ಬರೆದು ಜನ್ಮದಿನ ಆಚರಿಸುತ್ತಿದ್ದೇನೆ. ಜ್ಯೋತ್ಸ್ನಾ ಹೊನ್ನಾವರದಲ್ಲಿದ್ದಾಳೆ. ಊಟ-ತಿಂಡಿಯಲ್ಲಿ ವ್ಯತ್ಯಾಸವಿಲ್ಲ. ಎಂದಿನ ಸ್ವಯಂಪಾಕ. ಅನ್ನ, ಬೇಳೆ, ಮೊಸರು, ಉಪ್ಪಿನಕಾಯಿಯ ಊಟ, ಅದ್ದೂರಿಯ ಆಚರಣೆಯಲ್ಲಿ ವಿಶ್ವಾಸವಿಲ್ಲದವರೂ ಈ ಹೊತ್ತಿನಲ್ಲಿ ತಮ್ಮ 'ಗೌರವಗ್ರಂಥ'ವನ್ನು ಇತರರು ಹೊರತರುವಂತೆ ನೋಡಿಕೊಳ್ಳುತ್ತಾರೆ. ಈ ಎಲ್ಲ ಆಚರಣೆಗಳಿಂದ ಹರದಾರಿ ದೂರವಿದ್ದ ನಾನು 'ನಡೆದು ಬಂದ ದಾರಿ'ಯನ್ನು ನೆನಪಿಸಿಕೊಳ್ಳುತ್ತ ನನ್ನ ಯತ್ನ-ಯಶಸ್ಸುಗಳನ್ನು ನಿನ್ನೊಂದಿಗೆ ಹಂಚಿಕೊಳ್ಳುತ್ತಿದ್ದೇನೆ.

ಈರ್ವರು ಅಕ್ಕಂದಿರ ಬಳಿಕ ನಾನು ಭೂಮಿಯ ಮೇಲೆ ಅವತರಿಸಿದ್ದರಿಂದ ಕಾಕಾ-ಕಾಕಿಯರಿಗೆ ಹೆಚ್ಚಿನ ಸಂತೋಷವಾಗಿತ್ತು. ಆದರೆ ಅಪರೂಪದ ಮಗನೆಂದು ಯಾವ ಸವಲತ್ತನ್ನೂ ಕೊಡಮಾಡಲಿಲ್ಲ. ಚಿಕ್ಕಂದಿನಲ್ಲಿ ಯಕೃತ್ತಿನ ತೊಂದರೆಯಿಂದಾಗಿ ನನ್ನ ಆರೋಗ್ಯ ಅಷ್ಟೊಂದು ಚೆನ್ನಾಗಿರುತ್ತಿರಲಿಲ್ಲ. ಶಾಲೆಯಲ್ಲಿ ಕಲಿಸುವ ಪಾಠಕ್ಕಿಂತ ನನ್ನ ಸುತ್ತಮುತ್ತ ನಡೆಯುವ ಘಟನೆಗಳಲ್ಲಿ ಹೆಚ್ಚಿನ ಆಸ್ಥೆಯಿತ್ತು. ಮಳೆಯ ನೀರು, ಏರಿಯ ಮೇಲಿನಿಂದ, ಗಟಾರದಲ್ಲಿ, ರಸ್ತೆಯ ಮೇಲೆ ಹೇಗೆ ಹರಿಯುತ್ತದೆ? ಎಂದು ನೋಡುತ್ತ ನಿಲ್ಲುವದು, ತಾಮಟಕಾರನು (ತಾಮ್ರದ ಕೆಲಸಗಾರ), ತನ್ನ ಬಡಿತಗಳಿಂದಲೇ ತಗಡನ್ನು ತಾಮ್ರದ ಚೊಂಬು ಕೊಡಪಾನಗಳನ್ನಾಗಿ ಹೇಗೆ ಪರಿವರ್ತಿಸುತ್ತಾನೆ? ಎಂದು ವಿಸ್ಮಯ ಪಡುವದು, ಗುಡಿಗಾರನು ಉಕ್ಕಿನ ಚಾಣದಿಂದ ಶ್ರೀಗಂಧದಲ್ಲಿ ದೇವ-ದೇವತೆಗಳ ಮೂರ್ತಿಗಳನ್ನು ಹೇಗೆ ಕಟೆಯುತ್ತಾನೆ? ಎಂದು ವೀಕ್ಷಿಸುವದು, ಸುವರ್ಣಕಾರರ ಆಭರಣ ರಚನೆ, ಕಂಚುಗಾರರ ಎರಕ ಹೊಯ್ದು

ಜಾಗಟೆ, ತಾಳ, ಸಮೆಗಳ ತಯಾರಿಕೆ, ದರ್ಜಿಗಳ ಮಿಶನ್ ತಿರುಗಿಸುತ್ತ ಜರುಗಿಸುವ ಬಟ್ಟೆ-ಜೋಡಣೆಯ ಚಮತ್ಕಾರ, ಮೊದಲಾದವನ್ನು ಬೆಪ್ಪಾಗಿ ನಿಂತು ನೋಡುವದು ನನಗೆ ಪ್ರಿಯವಾಗಿದ್ದವು. ಗಣೇಶನ ವಿಗ್ರಹ ತಯಾರಿಕೆ, ಕಾವಿಕಲೆಯ ಚಿತ್ರ ನಿರ್ಮಾಣಗಳಂತೂ ನನಗೆ ತುಂಬ ಇಷ್ಟವಾಗಿದ್ದವು. ನಾನೊಬ್ಬ ನಿರುಪದ್ರವಿ ಪ್ರಾಣಿಯಾಗಿದ್ದರಿಂದ ಆಯಾ ಕಲಾಕಾರರೆಲ್ಲ ಆತ್ಮೀಯರಾಗಿ ಮಾತನಾಡಿಸುವದೇ ಅಲ್ಲದೇ ಚಿಕ್ಕಪುಟ್ಟ ಚಟುವಟಿಕೆಗಳಲ್ಲಿ ಪಾಲುಗೊಳ್ಳಲು ಆಮಂತ್ರಿಸುತ್ತಿದ್ದರು. ಪಾಸ್ಕುನ ಮಶೀನು ಬಳಸಿ ಹೊಲಿಗೆ ಮಾಡಿದ್ದೇನೆ. ಗಣಪತಿಯ ವಿಗ್ರಹಕ್ಕೆ ಬಣ್ಣ ಬಳಿದಿದ್ದೇನೆ. ಇಂದು ಇವೆಲ್ಲ ಅಭಿಮಾನದಿಂದ ನೆನಪಿಸಿಕೊಳ್ಳುವ ಘಟನೆಗಳಾಗಿವೆ.

ಶಾಲೆ, ಕಾಲೇಜು, ವಿಶ್ವವಿದ್ಯಾಲಯ, ಅಮೇರಿಕೆಗಳಲ್ಲಿ ನಾನೆಂದೂ ಪುಸ್ತಕದ ಹುಳುವಾಗಲೇ ಇಲ್ಲ. ತಿಳಿಯದ ವಿಷಯವನ್ನು ಪರೀಕ್ಷೆಗಳಲ್ಲಿ ಹೆಚ್ಚಿನ ಗುಣ ಪಡೆಯುವದಕ್ಕಾಗಿ ಕಂಠಪಾಠ ಮಾಡಿರಲಿಲ್ಲ. ಅರಿತುದನ್ನು ಶಾಶ್ವತವಾಗಿ ನನ್ನದನ್ನಾಗಿ ಮಾಡಿಕೊಂಡಿದ್ದೇನೆ. ಇಂದಿನ ರ್‍ಯಾಂಕ್ ಪಡೆದವರನ್ನು ಕಂಡಾಗ ನಾನು ಎಷ್ಟೋ ವಾಸಿ! ಎಂದು ಅನಿಸುತ್ತದೆ. ಕಪಟರಹಿತ ವರ್ತನೆ, ಸತತೋದ್ಯೋಗ, ಸರಳ ವ್ಯವಹಾರಗಳಿಂದ ನನ್ನ ಶಿಕ್ಷಕರೆಲ್ಲ ನನ್ನನ್ನು ಮೆಚ್ಚಿಕೊಳ್ಳುತ್ತಿದ್ದರು. ನನ್ನ ವಿದ್ಯಾಜೀವನದ ಯಶಸ್ಸಿಗೆ ಇವೇ ಮುಖ್ಯಕಾರಣವೆಂದು ನನ್ನ ಅನಿಸಿಕೆ. ನನ್ನಂತೆ ಡಾಕ್ಟರೇಟ ಮಾಡಲು ಅಮೇರಿಕೆಗೆ ಬಂದ ಧಾರವಾಡದ ಇನ್ನೊಬ್ಬ ವಿದ್ಯಾರ್ಥಿಯನ್ನು ಒಂದಿಷ್ಟು ಮುಲಾಜು ಇಲ್ಲದೇ ಮೂರೇ ತಿಂಗಳಲ್ಲಿ ವಾಪಸ್ ಕಳಿಸಿದ್ದರು. ಸ್ನಾತಕೋತ್ತರ ಪದವಿ ಪಡೆಯಲು ಕೀಟಶಾಸ್ತ್ರ ವಿಭಾಗ ಸೇರಿದ ಎಂಟು ಜನ ಅಮೇರಿಕನ್ ವಿದ್ಯಾರ್ಥಿಗಳನ್ನು ಒಂದು ಸೆಮೆಸ್ಟರ್ ಮುಗಿಯುವದರೊಳಗಾಗಿ ಮನೆಗೆ ಹಿಂದಿರುಗುವಂತೆ ಅಪ್ಪಣೆ ಕೊಡಿಸಿದರು. ಡಾಕ್ಟರೇಟ ಪದವಿಗಾಗಿ ನಾಲ್ಕು ವರ್ಷ ಮಣ್ಣು ಹೊತ್ತ ಜಿಮ್ ಕಾರ್ಟಮನ್‌ಗೆ ಕೊನೆಗೂ ಪಿ. ಎಚ್. ಡಿ. ಸಿಗದೇ ಹೋದದ್ದು ದೊಡ್ಡ ದುರಂತ. ಇದನ್ನೆಲ್ಲ ಪರಿಗಣಿಸಿದಾಗ, ನನಗೆ ಶಿಷ್ಯವೇತನದ ಜೊತೆಗೆ ಪದವಿ ದೊರಕಿದ್ದು ದೊಡ್ಡ ಸಾಧನೆ! ಅನಿಸುತ್ತದೆ. ನಾನು ಕಲಿಸಿದ ವಿದ್ಯಾರ್ಥಿಗಳು, ಇಂದಿಗೂ ಬಂದು ಭೇಟಿಯಾಗುತ್ತಾರೆ, ಎಂದರೆ, ನಾನೊಬ್ಬ ನೆನಪಿಟ್ಟ ಶಿಕ್ಷಕನಾಗಿದ್ದರಿಂದ, ಎಂದು ಭಾವಿಸಿದ್ದೇನೆ. ಜೋಬನೇರ (ರಾಜಸ್ಥಾನ)ದಲ್ಲಿದ್ದ ಜೆ. ಎನ್. ಸಚಾನರು ಕಾಲು ಶತಮಾನದ ನಂತರ ನನ್ನನ್ನು ಹುಡುಕಿಕೊಂಡು ಬಂದರೆಂದರೆ, ಒಳ್ಳೆಯ ಸಹೋದ್ಯೋಗಿ! ಎನಿಸಿರಬೇಕು. ಪ್ಲಾಸಿಯಲ್ಲಿದ್ದ ಪ್ರಧಾನ ಬಾಬು, ಇಂದಿಗೂ ಬೆಂಗಳೂರಿಗೆ ಬಂದಾಗ, ತಪ್ಪದೇ ಭೇಟಿಯಾಗುತ್ತಾನೆಂದರೆ ನಾನೊಬ್ಬ ಒಳ್ಳೆಯ ಮೇಲ್ವಿಚಾರಕ ಅನಿಸಿರಬೇಕು. ವೈಜ್ಞಾನಿಕ ಛಾಯಾಗ್ರಹಣ, ಬರವಣಿಗೆಯ ಬಗ್ಗೆ ಬೇರೆ ಬರೆಯಬೇಕಾಗಿಯೇ ಇಲ್ಲ!

Old age is full of regrets. (ಇಳಿ ವಯಸ್ಸು ಪಶ್ಚಾತ್ತಾಪಗಳ ಆಗರ) ಎಂದು ವಯಸ್ಕರು ಆಗಾಗ ಗೊಣಗುವದನ್ನು ಕೇಳಿದ್ದೇನೆ. ತೀರ ಚಿಕ್ಕ ವಯಸ್ಸಿನಿಂದಲೂ, ಪ್ರತಿಯೊಂದು ಕೆಲಸವನ್ನು ಸಾರಾಸಾರ ವಿಚಾರ ಮಾಡಿ, ಮುಂದಾಲೋಚನೆಯಿಂದ,

ಕೈಗೊಳ್ಳುತ್ತಿದ್ದೆ. ನನಗಿರುವ ಅಡಚಣಿಗಳನ್ನು ಗಮನಿಸುತ್ತಿದ್ದೆ. ನನ್ನ ಅರವತ್ತು ವರ್ಷಗಳ ಜೀವನದಲ್ಲಿ ಪಶ್ಚಾತ್ತಾಪ ಪಡುವಂತಹ ಒಂದೇ ಒಂದು ಘಟನೆಯನ್ನು ಎದುರಿಸಿಲ್ಲ ಎಂದರೆ ಯಾರೂ ನಂಬಲಿಕ್ಕಿಲ್ಲ! ಆದರೆ ಇದು ಸತ್ಯ. ಇಂದು ನಾನು ತಿರುಗಿ ಮೊದಲಿನಿಂದ ಜೀವನ ನಡೆಸುವಂತಿದ್ದರೆ ಇದಕ್ಕಿಂತ ಬೇರೊಂದು ಜೀವನವನ್ನು ಅಪೇಕ್ಷಿಸಲಾರೆ. ಸದಾಕಾಲವೂ ನನಗೆ ಮಾನಸಿಕ ಶಾಂತಿ, ವ್ಯಕ್ತಿ ಸ್ವಾತಂತ್ರ್ಯಗಳು ಅತ್ಯಂತ ಪ್ರಿಯವಾದವುಗಳು. ಇವುಗಳನ್ನು ನನ್ನವನ್ನಾಗಿ ಮಾಡಿಕೊಳ್ಳಲು ಅಧಿಕಾರ, ಐಶ್ವರ್ಯ ಆಧುನಿಕ ಆಕರ್ಷಣೆಗಳು, ವಿನೋದಾವಳಿಗಳು, ಆಪ್ತೇಷ್ಟರ ಭೇಟಿಗಳನ್ನು ಬುದ್ಧ್ಯಾಪೂರ್ವಕವಾಗಿ ದೂರವಿಟ್ಟೆ. ಇಷ್ಟಾದರೂ ನನ್ನ ಬಗ್ಗೆ ಅಭಿಮಾನ ಇಟ್ಟುಕೊಂಡವರ ಸಂಖ್ಯೆಗೇನೂ ಕಡಿಮೆ ಇಲ್ಲ. ಅದೆಷ್ಟೊ ಜನರಿಗೆ ನನಗಿರುವ ಚಿತ್ತಶಾಂತಿ ನೋಡಿದಾಗ, ತಮಗೂ ಬೇಕು ಅನಿಸುತ್ತದಂತೆ! ಆದರೆ ಅದನ್ನು ಸಾಧಿಸಲು ನಾನು ಕೈಕೊಂಡ ಹೋರಾಟದ ಕಲ್ಪನೆ ಅವರಿಗೆ ಇದ್ದಂತಿಲ್ಲ. ನನ್ನನ್ನು ಸುಲಭವಾಗಿ ಯಾರಿಂದಲೂ ಅರ್ಥಮಾಡಿಕೊಳ್ಳಲು ಆಗುವದಿಲ್ಲ. ಇಷ್ಟಾದರೂ ಮೂರು ದಶಕಗಳ ಕಾಲ, ಯಶಸ್ವಿ ಸಂಸಾರ ನಡೆಸಿಕೊಂಡು ಬರಲು ಸಕಲ ರೀತಿಯಿಂದ ನೆರವಾದ ಪತ್ನಿಯ ಸಹಕಾರವೂ ಅಸಾಧಾರಣವೆಂದೇ ತಿಳಿದಿದ್ದೇನೆ. ಒಬ್ಬನೇ ಮಗನಿದ್ದರೂ, ಅವನನ್ನು ಮುದ್ದಿಸಿ, ಅಟ್ಟಕ್ಕೇರಿಸಿ, ತಾನು ಅದ್ವಿತೀಯ! ಎಂಬ ಭಾವನೆ ಮೂಡದಂತೆ ಸಕಲ ಪ್ರಯತ್ನ ಮಾಡಿದ್ದೇವೆ. ಗೆಳೆಯರು, ಪಾಲಕರೆಲ್ಲರು ತಮ್ಮ ಮಕ್ಕಳಿಗೆ ಕೊಡಮಾಡುವ ಸವಲತ್ತುಗಳನ್ನು ನೋಡಿದಾಗ, ಮಗನಿಗೆ ತಾನು ಇವುಗಳಿಂದ ವಂಚಿತನಾಗಿದ್ದೇನೆ, ಅನಿಸಿರಬೇಕು. ಆದರೆ ಇಂದಲ್ಲ ನಾಳೆ, ತನ್ನ ತಂದೆ ಅದೆಷ್ಟು ಮುಂದಾಲೋಚನೆಯಿಂದ ನಡೆದುಕೊಂಡಿದ್ದಾನೆ, ಜೀವನದ ಮೌಲ್ಯಗಳನ್ನು ನಾನಾಗಿ ತಿಳಿದುಕೊಳ್ಳುವಂತೆ ಮಾಡಿದ್ದಾನೆ, ಎಂದು ಪ್ರಶಂಸೆ ಮಾಡದಿರಲಾರ! ನಾನು ಸಾಧ್ಯವಾದಲ್ಲೆಲ್ಲ ಇನ್ನೊಬ್ಬರನ್ನು ಸುಖಿಯಾಗಿಸಲು ಯತ್ನಿಸಿದ್ದೇನೆ. ಯಾರೂ ನೊಂದುಕೊಳ್ಳುವಂತೆ ಮಾಡಿದ ನೆನಪೇ ಇಲ್ಲ. ಶಾನಭಾಗರು ನನ್ನ ಮೇಲೆ ದ್ವೇಷ ಸಾಧಿಸಲು ಎಷ್ಟೊಂದು ಯತ್ನಿಸಿದರು! ನಾನು ಅವರ ಒಳಿತನ್ನೇ ಬಯಸಿದ್ದೇನೆ. ಕೊನೆಯ ಗಳಿಗೆಯಲ್ಲಿ ಹಿಂದಿನದೆಲ್ಲ ಮರೆತು ಬಿಡಲು ತುಳಸಿದಾಸನ ಹತ್ತಿರ ಹೇಳಿ ಕಳಿಸಿದರಂತೆ. ದೇಸಾಯಿ ಅವರಿಗೂ ಈ ಮಾತು ಅನ್ವಯಿಸುತ್ತದೆ.

''ಅರವತ್ತರ ಅರುಳು ಮರುಳು'' ಎಂಬ ಗಾದೆ ಇದೆ. ಈವಾಗ ಬಾಲಿಶ ಬುದ್ಧಿ ಬರುವದು ನಿಜವೇ? ಕಳೆದ ಆರು ದಶಕಗಳಲ್ಲಿ ಜೀವನದ ಸಂಪೂರ್ಣ ಸ್ವಾದವನ್ನು ಪಡೆದಿದ್ದೇನೆ. ಆದ್ದರಿಂದ ಮುಂಬರುವ ಜೀವನಕ್ಕಾಗಿ ತಲೆ ಕೆಡಿಸಿಕೊಳ್ಳಲಿಲ್ಲ! ಸರ್ವಿಸಿನ ಹೆಚ್ಚು ಕಾಲ ದೂರವೇ ಇರುತ್ತಿದ್ದ ಪತ್ನಿ ನಿವೃತ್ತಿಯ ಬಳಿಕ ಜೊತೆಗಿದ್ದು ಜೀವನ ನಡೆಸಲಾರಂಭಿಸಿದ್ದರಿಂದ - ಇವರಿಬ್ಬರೂ ಹೇಗೆ ಹೊಂದಿಕೊಳ್ಳುವರೋ! ಎಂದು ಕೆಲವರಿಗಾದರೂ ಕಳವಳ ಆಗಿದ್ದಿರಬೇಕು. ಮಗನು ಹಿಂತಿರುಗಿ ಬಂದರೆ ಮೂವರು ಮೂರು ದಿಕ್ಕಿನಲ್ಲಿ ಯೋಚಿಸುವವರು, ಒಟ್ಟಿಗೆ ಹೇಗೆ ಬದುಕಬಲ್ಲರು? ಎಂದು ನಮ್ಮ 'ಹಿತ-ಚಿಂತಕ'ರಿಗೆ ಯೋಚನೆಗೆ ಇಟ್ಟುಕೊಂಡಿರಬೇಕು. ಪುತ್ರನು ಹೇಗೂ

ಹೊಂದಿಕೊಂಡಾನು! ಎಂದು ಇಟ್ಟುಕೊಳ್ಳೋಣ. ಅವನ ವಿವಾಹದ ನಂತರ ಬರುವ ಸೊಸೆ, ಹಳೆಯ ವಿಚಾರಗಳ ಅತ್ತೆ-ಮಾವಂದಿರಿಗೆ ಹೊಂದಿಕೊಳ್ಳುವದು ನಿಜವೇ? ಎಂದು ಕಂಗಾಲಾಗಿರಬೇಕು. ಅನೇಕ ಸಲ ಸಣ್ಣ ಕಾರಣಗಳಿಗೆ ನಮ್ಮಲ್ಲಿ ವಾದ ವಿವಾದಗಳು ನಡೆಯುವದರಿಂದ ಇನ್ನಿತರರಿಗೆ ನಮ್ಮಲ್ಲಿ ಜೀವನದ ದೃಷ್ಟಿಕೋನದ ಬಗ್ಗೆ ಒಮ್ಮತವಿದೆ, ಎಂದು ಅರಿವಾಗುವದೇ ಇಲ್ಲ! ಜ್ಯೋತ್ಸ್ನಾಳ ಓದುಗಾರಿಕೆಯ ಹವ್ಯಾಸಕ್ಕೆ ನಾನು ಎಂದೂ ಅಡ್ಡಿ-ಆತಂಕಗಳನ್ನು ಒಡ್ಡಲು ಸಾಧ್ಯವೇ? ನನ್ನ ಛಾಯಾಗ್ರಹಣ, ಬರವಣಿಗೆ, ಚಿತ್ರಕಲೆಗಳ 'ಚಟ'ಕ್ಕೆ ಪತ್ನಿ-ಪುತ್ರರು ಆಕ್ಷೇಪವೆತ್ತಲು ಎಂದಾದರೂ ಸಾಧ್ಯವೇ? ಅದರಂತೆ ಪುತ್ರನ ಪ್ರತಿಭೆ ಅರಳಲು ನಾವು ಪ್ರೋತ್ಸಾಹಿಸದೇ ಇರುತ್ತೇವೆಯೇ? ಬರುವ ಸೊಸೆ ಕೂಡ ನಮ್ಮ ಜೀವನದ ರೀತಿ-ನೀತಿಗಳಿಗೆ ಹೊಂದಿಕೊಳ್ಳುವ ಸಾಧ್ಯತೆ ಬಲವಾಗಿದೆ. ಇಷ್ಟಾಗಿ ಹೊಂದಿಕೊಳ್ಳದ ಸ್ವಭಾವವಾಗಿದ್ದರೆ 'ನಿನ್ನ ಪತಿಯೊಂದಿಗೆ ನೀನು ಸುಖವಾಗಿರಮ್ಮ!' ಎಂದು ಬೆಂಗಳೂರು ಮನೆಯನ್ನು ಅವರಿಬ್ಬರಿಗೆ ಬಿಟ್ಟುಕೊಟ್ಟು, ನಾವಿಬ್ಬರೂ ಇನ್ನಾವುದೇ ಸ್ಥಳದಲ್ಲಿಯೊ ಹೊಸ ಅಧ್ಯಾಯ ಪ್ರಾರಂಭಿಸಲು ನಮ್ಮ ಅಭ್ಯಂತರವಿಲ್ಲ. ಮಗ-ಸೊಸೆ ಜೊತೆಗಿರಲು ಇಷ್ಟಪಟ್ಟರೆ ಅದು ಮಾನ್ಯ. ಲೇಖನ, ಪುಸ್ತಕಗಳನ್ನು ಪ್ರಕಟಿಸಲೇ ಬೇಕು, ಎಂಬ ಹಂಬಲವಿಲ್ಲ. ಧನ ಸಂಗ್ರಹ ಮಾಡಬೇಕೆಂಬ ಕನಸು ಇಲ್ಲ. ಖ್ಯಾತಿಯ ಹಪಾಪಿ ಇಲ್ಲ. ಜನಸಾಮಾನ್ಯರೊಡನೆ ಬೆರೆತು ಅವರ ಆಚಾರ, ವಿಚಾರ, ಆಸೆ-ಆಕಾಂಕ್ಷೆಗಳನ್ನು ಅರಿಯುವದು ನನಗೆ ಅತ್ಯಂತ ಪ್ರಿಯವಾದದ್ದು. ಈ ಕೆಲಸಕ್ಕೆ ಕ್ಯಾಮರಾ, ಫಿಲ್ಮ ಕೂಡ ಬೇಕೆಂದಿಲ್ಲ. ಹಾದಿ ಹೋಕರನ್ನು ನೋಡುತ್ತ ಅವರ ಚಲನ, ವಲನ ವೀಕ್ಷಿಸುತ್ತ ಗಂಟೆಗಟ್ಟಲೆ ಕಳೆದರೆ ಏನೋ ಆನಂದ ನನಗೆ. ಇಂಥ ನಿರಪಾಯಕಾರಿ ಹವ್ಯಾಸಗಳಿದ್ದವನಿಗೆ ಕೀಟಲೆಕೊಡಲು ಎಂಥವರಿಗೂ ಹೆಚ್ಚಿನ ಪರಿಶ್ರಮ ಮಾಡಬೇಕಾಗುತ್ತದೆ! ಅರವತ್ತರ ಹೊಸಲು ದಾಟಿ ಅತ್ತ ಹೆಜ್ಜೆ ಇಡುತ್ತಿದ್ದಾಗ ಬಂದ ಕೆಲ ವಿಚಾರಗಳನ್ನು ಬರೆಯಲು ಯತ್ನಿಸಿದ್ದೇನೆ.

◆ ◆ ◆

೧೭. ನಿವೃತ್ತಿ ಸುಖ

ನೌಕರಿಗಾಗಿ ನಡೆದ ತುರುಸಿನ ಸ್ಪರ್ಧೆಯಲ್ಲಿ ನಮ್ಮ ಮಗ ಯಶಸ್ವಿಯಾಗಿದ್ದಾನೆಂದು ನಮ್ಮೀರ್ವರಿಗೂ ಅತೀವ ಅಭಿಮಾನದ ಸಂಗತಿ. ಇಷ್ಟೊಂದು ಕಷ್ಟಪಟ್ಟು ದೊರಕಿಸಿದ ನೌಕರಿಯನ್ನು ಸರಿಯಾಗಿ ಸಂಭಾಳಿಸಿಕೊಂಡು ಹೋಗು. ಪ್ರಾರಂಭದಲ್ಲಿಯೇ ನೀನು ಸಂಬಳದಲ್ಲಿ ಹೆಚ್ಚಳ ಕೇಳದೇ ಇದ್ದದ್ದು ಒಳ್ಳೆಯದಾಯಿತು. ಮುಂದೆ ಅವರಾಗಿ ಕೊಡದಿದ್ದರೆ ನೀನಾಗಿಯೇ ಕೇಳಬಹುದಾಗಿದೆ. ದಕ್ಷರೀತಿಯಿಂದ ದುಡಿಯುವವನಿಗೆ ಹೆಚ್ಚಿನ ವೇತನ ಕೇಳುವ ಅಧಿಕಾರ, ತನ್ನಷ್ಟಕ್ಕೆ ಪ್ರಾಪ್ತವಾಗಿ ಬಿಡುತ್ತದೆ. ಉತ್ಪನ್ನ ಹೆಚ್ಚಿಸಿಕೊಳ್ಳುವದರ ಜೊತೆಗೆ ಬಂದ ಸಂಬಳದ ಸರಿಯಾದ ಬಳಕೆ ಹಾಗೂ ಉಳಿತಾಯಗಳನ್ನು ರೂಢಿಸಿಕೊಳ್ಳಬೇಕು. ಇಲ್ಲವಾದರೆ ಕತ್ತೆಯಂತೆ ದುಡಿದು, ದುಂದುಗಾರನಾಗಿ, ಬಂದ ಸಂಬಳವನ್ನೆಲ್ಲ ಖರ್ಚು ಮಾಡುತ್ತ ಹೋದರೆ ಏನು ಸಾಧಿಸಿದಂತಾಯಿತು? ನಮಗಾಗಿ, ಅದಕ್ಕೂ ಹೆಚ್ಚಾಗಿ ನನಗಾಗಿ, ನಿನ್ನಿಂದ ಏನನ್ನೂ ಕೇಳುತ್ತಿಲ್ಲ. ಅಪೇಕ್ಷಿಸುತ್ತಿಲ್ಲ. ಆದರೆ ನಿನ್ನದು, ನೆಮ್ಮದಿಯ ಜೀವನವಾಗಬೇಕಾದರೆ, ಈಗಿನಿಂದಲೇ, ಇನ್ನಿತರ ಶಿಸ್ತುಗಳ ಜೊತೆಗೆ ಹಣಕಾಸಿನ ಶಿಸ್ತನ್ನು ಕಲಿಯಲೇಬೇಕು. ಇಲ್ಲದಿದ್ದರೆ, ಎಷ್ಟು ಹಣ ಗಳಿಸಿದರೂ ಸಾಲದಾಗುತ್ತದೆ. ಕೈ ಸದಾಕಾಲ ಬರಿದಾಗಿಯೇ ಇರುತ್ತದೆ. ನಮ್ಮದು ಕೊಡುವ ಕೈ ಆಗದಿದ್ದರೆ ಅಡ್ಡಿಯಿಲ್ಲ. ಬರಿಗೈ ಆಗಬಾರದು. ಬೇಡುವ ಕೈ ಅಂತೂ ಸದಾ ತ್ಯಾಜ್ಯ!

* * *

ನಾವಿಬ್ಬರೂ ಮುದುಕರಾಗುತ್ತಿದ್ದೇವೆಂದು ನೀನು ಕಾಳಜಿ ಮಾಡಬಾರದು. ಹಣ್ಣೆಲೆ ಉದುರುವದು, ಚಿಗುರೆಲೆ ಚಿಗುರುವದು ಪ್ರಕೃತಿಯ ನೇಮ. ಇಂದಿಗೂ ನಾನು ದೃಢಕಾಯನಾಗಿಯೇ ಇದ್ದೇನೆ. ಇಂದಿನ ದಿನಗಳಲ್ಲಿ ನಾನು ಕಡಿಮೆ ಲ್ಯಾಬಿಗೆ ಹೋಗುವದು, ರಾತ್ರೆ ಬಸ್ಸಿನಲ್ಲಿ ಹಿಂದಿರುಗುವದು, ವೃದ್ಧಾಪ್ಯದಿಂದ ಅಲ್ಲ. ಜ್ಯೋತ್ಸ್ನಾ ನಿವೃತ್ತಿ ಪಡೆದು ಮನೆಯಲ್ಲಿದ್ದಾಗ ಸಾಧ್ಯವಿದ್ದಷ್ಟು ಜೊತೆಕೊಡುವ ಏಕ ಮಾತ್ರ ಉದ್ದೇಶದಿಂದ ಹೀಗೆ ಮಾಡುತ್ತಿದ್ದೇನೆ. ಇಂದಿಗೂ ಊರೆಲ್ಲ ಕಾಲು ನಡಿಗೆಯಲ್ಲಿ ಸುತ್ತುವ ಹುಮ್ಮಸ ನನ್ನಲ್ಲಿದೆ. ಜ್ಯೋತ್ಸ್ನಾಳು ಎರಡುವಾರ ಮೈಸೂರಿಗೆ ಹೋಗಿದ್ದಾಗ, ನಾನು ಮಾಡಿ ಮುಗಿಸಿದ ಕೆಲಸಗಳನ್ನು ನೋಡಿ ಅವಳೇ ಆಶ್ಚರ್ಯಪಡುವಂತೆ ಆಗಿತ್ತು. ನಾವಿಬ್ಬರೂ ಸತತೋದ್ಯೋಗಿಗಳಾಗಿದ್ದರಿಂದ ನಮ್ಮ ಸಾಧನೆಗಳು ಹಲವಾರು. ಆದರೆ ನನ್ನ ಹೆಚ್ಚಿನ ಚಟುವಟಿಕೆಗಳೆಲ್ಲ ಯಾವ ಧನಸಂಪಾದನೆಗಾಗಿ ಮಾಡುವಂತಹವಲ್ಲ, ಎಂದು ನಿನಗೆ ಬೇರೆ ಹೇಳಬೇಕಿಲ್ಲ!

ಇತ್ತೀಚೆಗೆ ನನ್ನ ಚಟುವಟಿಕೆಗಳೆಲ್ಲ ಕನ್ನಡಮಯವಾಗಿದ್ದರಿಂದ ಇಂಗ್ಲಿಷ್ ಮರೆಯಬಾರದು! ಎಂದು ದಿನಚರಿಯನ್ನು ಇಂಗ್ಲಿಷಿನಲ್ಲಿ ಬರೆಯಲು ಪ್ರಾರಂಭಿಸಿದ್ದೇನೆ. ಗ್ಯಾಝೆಟಿಯರ್‌ಗೆ, ಸಂಪಾದಕರ ಕೋರಿಕೆಯಂತೆ, ಕೊಡಗು ಜಿಲ್ಲೆಯ ಕುರಿತಾದ

ಒಂದು ಅಧ್ಯಾಯವನ್ನು ಕನ್ನಡದಿಂದ ಇಂಗ್ಲಿಷಿಗೆ ಅನುವಾದಿಸಿದೆ. ಮಿಥಿಕ್ ಸೊಸಾಯಟಿಯ ತ್ರೈಮಾಸಿಕ ಜರ್ನಲ್‌ಗೆ Attitude of our Ancestors Towards Animals ಎಂಬ ಲೇಖ ಕೇಳಿದ್ದರಿಂದ ಬರೆದು ಕೊಟ್ಟಿದ್ದೆ. ಈ ಒಂಬತ್ತು ಪುಟದ ಲೇಖ ಪ್ರಕಟವಾಗಿದೆ. ಅಲ್ಲದೇ March of Karnatakaದ ರಾಜ್ಯೋತ್ಸವ ಸಂಚಿಕೆಯಲ್ಲಿ ಒಂದು ಲೇಖ ಪ್ರಕಟವಾಗಿದೆ.

ಚಿತ್ರಾಪುರತಸಾರಸ್ವರ 'ರವಿಕಿರಣ್' (SUNBEAM) ಎಂಬ ಮಾಸಿಕಪತ್ರಿಕೆ ಹೊರಬರುತ್ತಿರುವ ವಿಚಾರ ನಿನಗೆ ತಿಳಿದಿರಲು ಸಾಕು. ಮಠಕ್ಕೆ ವಂತಿಗೆ ಕೊಟ್ಟವರ ಹೆಸರುಗಳನ್ನು ಹೊತ್ತ ನೂರಾರು ಪುಟಗಳನ್ನು ಅದು ಹೊಂದಿರುತ್ತಿತ್ತು. ಔಷಧಕ್ಕೆ ಒಂದೆರಡು ಲೇಖಗಳಿದ್ದರೆ ಪುಣ್ಯ! ನಂತರ ಬಡಕಲಾಗುತ್ತ ಬಂದು ಆಂತರಿಕ ಕಲಹಗಳಿಂದ ನಿಂತೇ ಹೋಗಿತ್ತು. ಈಗ ತಿರುಗಿ ಪ್ರಾರಂಭಿಸಿದ್ದಾರೆ. ಅದರ ಸಂಪಾದಕರು ನನಗೂ, ಜ್ಯೋತ್ಸ್ನಾಳಿಗೂ ಇಂಗ್ಲಿಷ್‌ದಲ್ಲಿ ಲೇಖಗಳಿಗಾಗಿ ಪೀಡಿಸಿದ್ದರಿಂದ ಕೊಟ್ಟೆವು. ಮೊದಲ ಸಂಚಿಕೆಯಲ್ಲಿಯೇ ಅವೆರಡೂ ಪ್ರಕಟವಾಗಿವೆ. ಮೊನ್ನೆ ನಮ್ಮಲ್ಲಿ ಇಳಿದುಕೊಂಡ ಈ ಸಂಪಾದಕರನ್ನು ಹುಡುಕಿಕೊಂಡು ಬಂದವರಿಗೆ, ಮಾಡಿದ ಫೋನುಗಳಿಗೆ ಲೆಕ್ಕವಿಲ್ಲ! ಯಾರೂ ಕೊಂಡು ಓದದ ಆ ಪತ್ರಿಕೆಯನ್ನು ಸುಧಾರಿಸಲು ಇತ್ತ ಸಲಹೆಗಳಿಗೆ ತುದಿಮೊದಲಿಲ್ಲ! ಇನ್ನಷ್ಟು ಲೇಖಗಳಿಗಾಗಿ ನಮ್ಮಿಬ್ಬರಿಗೂ ಕೇಳಿದರೂ ನಾವು ಆಸಕ್ತಿ ತೋರಿಸಲಿಲ್ಲ. ನಾಡಕರ್ಣಿಗೆ ವಿಚಾರಿಸಿದಾಗ 'ಆರ್ಥಿಕ ಲಾಭವಿಲ್ಲದೇ ನಾನು ಏನೂ ಬರೆಯುವದಿಲ್ಲ!' ಎಂದು ಕಡ್ಡಿಮುರಿದಂತೆ ಹೇಳಿಬಿಟ್ಟರಂತೆ. ಇತರ ಕೆಲವರು ತಾವು, ತಮ್ಮ ಪತ್ನಿ, ಮಗಳು ಬರೆದ ಲೇಖ, ಕವಿತೆಗಳನ್ನು ಕಂತೆಕಂತೆಯಾಗಿ ಕೊಟ್ಟರಂತೆ. ಅವಾವವೂ ಪ್ರಕಟಗೊಳ್ಳುವ ಯೋಗ್ಯತೆ ಹೊಂದಿಲ್ಲವಂತೆ. ಹೀಗಾಗಿ ನಾವೇ ತಲಾ ಎರಡೆರಡು ಚಿಕ್ಕಲೇಖಗಳನ್ನು ಕೊಟ್ಟೆವು. ಆ ಬಳಿಕ ಅವರಿಂದ ಏನೂ ಸಮಾಚಾರವಿಲ್ಲ!

ಈಗ ಭಾರತದಲ್ಲಿ ವಿವಿಧ ಚಾನೆಲ್‌ಗಳ ಟಿವಿ ಕಾರ್ಯಕ್ರಮಗಳು ಅಲ್ಲದೇ ಸ್ಟಾರ್, ಝೀಡ್, ಸಿ.ಎನ್.ಎನ್.ಗಳ ಸೇವೆಯೂ ಲಭ್ಯವಾಗಲಾರಂಭಿಸಿದ್ದರಿಂದ ಓದುವವರೆಲ್ಲ ಕೇಳುಗರೂ, ನೋಡುಗರೂ ಆಗಲಾರಂಭಿಸಿದ್ದಾರೆ! ಗೊಡ್ಡು ಲೇಖಕರಿಗೆ ಭವಿಷ್ಯವೇ ಇಲ್ಲ! ಎಂದು ವೃತ್ತ ಪತ್ರಿಕೆಗಳು ಸಾರಿದವು. ಅಂತೆಯೇ ಕೆಲ ಲೇಖಕ-ಲೇಖಕಿಯರು ತಾವೂ ಮೇಕಪ್ ಹಾಗೂ ಬಣ್ಣಬಣ್ಣದ ಉಡುಪು ತೊಟ್ಟು ಟೆಲಿವಿಜನ್ ಕ್ಯಾಮರಾ ಎದುರಿಸಬೇಕಾಗಬಹುದು! ಎಂದು ಭ್ರಮಿಸಿದ್ದಾರೆ. ಆದರೆ ಅಮೇರಿಕೆಯಲ್ಲಿ ಮೂರು ದಶಕಗಳ ಹಿಂದೆಯೇ ಇಂಥ "ಪ್ರಸಾರ ಕ್ರಾಂತಿ" ಆದಾಗ, ಪುಸ್ತಕಗಳಿಗಾಗಲಿ, ವೃತ್ತಪತ್ರಿಕೆ - ಚಲಚ್ಚಿತ್ರಗಳಿಗಾಗಲಿ ಯಾವ ಪೆಟ್ಟೂ ಬಿದ್ದಿರಲಿಲ್ಲ. ಅವಕ್ಕೆ ತಂತಮ್ಮ ಸ್ಥಾನ, ಇದ್ದೇ ಇದೆ! ಎಂದು ಕಂಡುಕೊಂಡಿದ್ದೆ. ಅಲ್ಲದೇ ಬರವಣಿಗೆಯನ್ನು ಜೀವನೋಪಾಯ ಮಾಡಿಕೊಳ್ಳದಿದ್ದವರಿಗೆ ಯಾವ ಹಾನಿಯೂ ಇಲ್ಲ.

ಜ್ಯೋತ್ಸ್ನಾ, ನಿವೃತ್ತಿಯಾದ ಮೇಲೆ, ಏನೋ ಕಳೆದುಕೊಳ್ಳುತ್ತಿದ್ದೇನೆ! ಎಂದು ಭಾವಿಸಿದ್ದಳು. ಆದರೆ ಹಿಂದೆಂದಿಗಿಂತಲೂ ವ್ಯವಸ್ಥಿತ ಜೀವನ ರೂಢಿಸಿಕೊಂಡು

ಬಿಟ್ಟಿದ್ದಾಳೆ. ಈ ಅರ್ಧವರ್ಷದ ನಿವೃತ್ತಿ ಜೀವನದ ಪರಿ ಬರೆಯಲೇ? ನಾನು ಎಂದಿನಂತೆ ಬೆಳಿಗ್ಗೆ ಮೂರು ಗಂಟೆಗೆ ಎದ್ದು ಕೆಲಸ ಪ್ರಾರಂಭಿಸಿಬಿಡುತ್ತೇನೆ. ಮಗನಿಗೆ ಪತ್ರ ಬರೆಯುವದು ಇದರಲ್ಲಿಯೇ ಸಮಾವೇಶವಾಗುತ್ತದೆ. ನಾಲ್ಕುವರೆಗೆ ಜ್ಯೋತ್ಸ್ನಾಳನ್ನು ಎಬ್ಬಿಸುತ್ತೇನೆ. ಇಬ್ಬರೂ ಹೊಗೆಯಾಡುವ ಕಾಫಿ ಸವಿದು, ಸರಿಯಾಗಿ ಐದುಗಂಟೆಗೆ ತಿರುಗಾಡಲು ಹೋಗುತ್ತೇವೆ. ಅದೆಷ್ಟು ಜನ ಪತಿ, ಪತ್ನಿಯರು, ಒಂಟಿಯಾಗಿಯೇ ತಿರುಗಾಡಲು ಹೋಗುತ್ತಿರುತ್ತಾರೆ. ಆರುಗಂಟೆಗೆ ಜ್ಯೋತ್ಸ್ನಾಳ ಸಂಧಿವಾತದ 'ತೇಲಮಾಲಿಸು' ನಡೆಯುತ್ತದೆ. ನಂತರ ಇಬ್ಬರೂ ಸೇರಿ ನಾಶ್ತಾ ತಯಾರಿಸಿ ಕತ್ತರಿಸಿ ಹೊಡೆಯುತ್ತೇವೆ. ಬಳಿಕ ದಿನಪತ್ರಿಕೆಯ ವಾಚನ. ನಂತರ ಹತ್ತಿರದ ತಿರುಗಾಟ (ವರ್ತನೆಯ) ವಾಚನಾಲಯಕ್ಕೆ ಹೋಗಿ ಜ್ಯೋತ್ಸ್ನಾ ಕನ್ನಡ, ಇಂಗ್ಲಿಷ್ ಪತ್ರಿಕೆಗಳನ್ನು ತರುತ್ತಾಳೆ. ಸ್ವಾರಸ್ಯಕರ ಸುದ್ದಿ ಸಂಗತಿಗಳನ್ನು 'ನಿರಕ್ಷರಿ'ಯಾದ ನನಗೆ ಓದಿ ಹೇಳುತ್ತಾಳೆ! ಹನ್ನೊಂದುವರೆಗೆ ಮಧ್ಯಾಹ್ನದೂಟ. ಮಗನ ಪತ್ರ ಬರುವದಿಲ್ಲವೆಂದು ಗೊತ್ತಿದ್ದರೂ, ಮನೆಯ ಅಂಚೆ ಪೆಟ್ಟಿಗೆಯಲ್ಲಿ ನಿನ್ನಮ್ಮ ಕೈಯಾಡಿಸಿ ಬರುವದುಂಟು. ಆಮೇಲೆ ಸುಖನಿದ್ರೆ. ಚಹ-ಸರಬರಾಜು. ನಂತರ ಜ್ಯೋತ್ಸ್ನಾಳ ಓದುಬರಹ, ಪತ್ರ ಲೇಖನಗಳು ಸಾಗುತ್ತವೆ. ಫೋನಿನಲ್ಲಿ ಕೆಲವರೊಡನೆ ಗಂಭೀರ ಚರ್ಚೆ ನಡೆಯುತ್ತದೆ. ನಾನು ನಾಲ್ಕು ಗಂಟೆಗೆ ಲ್ಯಾಬಿಗೆ ಹೊರಡುತ್ತೇನೆ. ಹಿಂದಿರುಗುವಾಗ ತರಕಾರಿ, ಹಣ್ಣುಹಂಪಲು, ಕಾಳು-ಕಡಿಗಳನ್ನೆಲ್ಲ ಹೊತ್ತು ತರುತ್ತೇನೆ. ಚಪಾತಿ ಪಲ್ಯ ಮಾಡಿ ಟೊಮಟೊ, ಸೌತೆಕಾಯಿ, ಮೂಲಂಗಿ, ಗಜ್ಜರಿಗಳಲ್ಲಿ ಒಂದರ ಕೋಸಂಬರಿ ಮಾಡಿದರೆ ಸಂಜೆಯ ಊಟದ ತಯಾರಿ ಆದಂತೆಯೇ! ರೇಡಿಯೋ ವಾರ್ತೆ ಕೇಳಿ ಒಂಬತ್ತುವರೆಗೆ ಮಲಗುವದೆಂದರೆ ಒಂದು ಯಶಸ್ವಿದಿನ ಮುಕ್ತಾಯವಾದಂತೆ. ಇದಕ್ಕಿಂತ ಸುಖದ ನಿವೃತ್ತಿಯ ಜೀವನ ಹೇಗಿರುತ್ತದೆ, ಎಂದು ನನ್ನಿಂದ ಊಹಿಸಲೂ ಸಾಧ್ಯವಿಲ್ಲ.

ಬರವಣಿಗೆಯಲ್ಲೂ ಹಿಂದೆ ಬಿದ್ದಿಲ್ಲ. ಜ್ಯೋತ್ಸ್ನಾಳ, 'ಆಕಾಶವಾಣಿ ಮತ್ತು ಸಾಮಾಜಿಕ ವಿಕಾಸ, ಶಿಲ್ಪಗಳಲ್ಲಿ ವ್ಯಕ್ತಿಚಿತ್ರಣ, ಗಣರಾಜ್ಯದಲ್ಲಿ ಸಮೂಹಮಾಧ್ಯಮಗಳು' ಎಂಬ ಗಂಭೀರ ಲೇಖಗಳು ಪ್ರಕಟವಾದರೆ ಕರ್ಮವೀರ, ಮಯೂರ, ಸುಧಾಗಳಲ್ಲಿ ಹಾಸ್ಯಲೇಖಗಳು ಪ್ರಕಟವಾಗಿವೆ. ಡಾ. ರಮಾಕಾಂತ ಜೋಶಿ ಮನೆಗೇ ಬಂದು ಜ್ಯೋತ್ಸ್ನಾಳ ಸಂಶೋಧನಾಧಾರಿತ ಪುಸ್ತಕವೊಂದನ್ನು ಸಾಮಾನ್ಯರಿಗೆ ರುಚಿಸುವಂತೆ ಬರೆದುಕೊಡಲು ಬಿನ್ನವಿಸಿಕೊಂಡಿದ್ದಾರೆ. ಅದೆಷ್ಟೋ ಸಲ ಅವರಿವರ ಭಿಡೆಗೆ ಬಿದ್ದು ಸಣ್ಣ ಲೇಖಗಳನ್ನು ಬರೆದು ಕೊಡಲು ನಿನ್ನಮ್ಮ ವಿಪರೀತ ದುಡಿಯುವದುಂಟು! ಯಾವುದೊ ಜಾಹೀರಾತು ಕಂಪನಿಯ ಯುವತಿ ಕೇಳಿದಳೆಂದು ಮಾನಸೋಲ್ಲಾಸ ಆಧಾರಿತ ಸ್ಕ್ರಿಪ್ಟ್ ಒಂದನ್ನು ದೂರದರ್ಶನಕ್ಕಾಗಿ ಬರೆದುಕೊಡಲು ಒಪ್ಪಿಕೊಂಡಿದ್ದಾಳೆ.

ನನಗೆ ನವಕರ್ನಾಟಕದವರು 'ಜೀವಲೋಕ ಮಾಲೆ' ವಿಭಾಗಕ್ಕೆ ೧) ಪ್ರಾಣಿ ಪ್ರಪಂಚದ ವಿಸ್ಮಯಗಳು, ೨) ಪಕ್ಷಿಲೋಕದ ವೈಚಿತ್ರ್ಯಗಳು ೩) ಕೀಟಲೋಕದ ಕೌತುಕಗಳು ಎಂದು ನೂರು ನೂರು ಪುಟದ ಮೂರು ಪುಸ್ತಕಗಳನ್ನು ಮಕ್ಕಳಿಗಾಗಿ

ಬರೆದುಕೊಡಲು ಕೇಳಿಕೊಂಡಿದ್ದಾರೆ. ಈ ಕುರಿತು ನನ್ನಲ್ಲಿ ಸಾಕಷ್ಟು ಮಾಹಿತಿ ಇರುವದರಿಂದ ಬಿಡುವಾದಾಗ ಬರೆದುಕೊಡಲು ಒಪ್ಪಿಕೊಂಡಿದ್ದೇನೆ.

ನಾನು ಇದಾಗಲೇ ನಿನಗೆ ಬರೆದಂತೆ, ನಮಗೆ ಈಗ ಕೊರತೆ ಇರುವದು ಪ್ರಕಾಶಕರದ್ದಲ್ಲ. ಅವರು ನಿರೀಕ್ಷಿಸಿದ ವೇಗದಲ್ಲಿ ನಮ್ಮ ಲೇಖ, ಪುಸ್ತಕಗಳ ಹಸ್ತಪ್ರತಿಗಳು ಸಿದ್ಧವಾಗದೇ ಇರುವದು!

ಮೊನ್ನೆ 'ಸುಧಾ' ವಾರಪತ್ರಿಕೆಯ ಆನಂದರು ಭೇಟಿಯಾಗಿದ್ದರು. ತಮ್ಮ ಪತ್ರಿಕೆಗೆ ಬರೆಯುವದನ್ನು ನಿಲ್ಲಿಸಿದ್ದೀರಿ! ಎಂದು ಆಪಾದಿಸಿದರು. ''ಹಾಗೆ ಮಾಡಿದ ನಂತರ ನನ್ನ ಎಂಟು ಪುಸ್ತಕಗಳು ಪ್ರಕಟವಾಗಿವೆ!'' ಎಂದಾಗ ಅವರಿಗೆ ನಂಬುವದೇ ಕಷ್ಟವಾಯಿತು. ಅಂತೂ ಹೀಗೆ ಸಾಗಿದೆ ನಮ್ಮ ನಿವೃತ್ತ ಜೀವನ.

◆ ◆ ◆

೧೮. ಕೃಷ್ಣನ ಕನವರಿಕೆ

ಇಂದು ಸಂಜೆ ನಮ್ಮ ಕರೆಗಂಟೆ ಕಿರುಚಿಕೊಂಡಾಗ, ಕನಕನ ಕಿಂಡಿಯಿಂದ ಇಣುಕಿ ನೋಡಿದೆ. ನಿನ್ನ ಕಾಲೇಜ ಗೆಳೆಯ ಕೃಷ್ಣ ನಿಂತಿದ್ದ! ತಕ್ಷಣ ಅವನನ್ನು ಗುರುತು ಹಿಡಿದು ಒಳಗೆ ಬರಮಾಡಿಕೊಂಡಾಗ ಅವನಿಗಾದ ಆಶ್ಚರ್ಯ ಅಷ್ಟಿಷ್ಟಲ್ಲ. ನಮ್ಮ ಮನೆಯ ಹತ್ತಿರವೇ ಇರುವ ಅವನ ಅಂಕಲ್ ಮನೆಗೆ ಬಂದಿದ್ದನಂತೆ. ''ನಿಮ್ಮಿಬ್ಬರನ್ನೂ ಭೇಟಿಮಾಡಿ ಹೋಗೋಣ ಎಂದು ಬಂದೆ'' ಎಂದು ಹೇಳಿದ. ಚಹಾ-ಕಾಫಿ-ಷರಬತ್ ಏನೂ ಬೇಡವೆಂದ. ನೀವಿಬ್ಬರೂ ಮೈಸೂರಿನಲ್ಲಿ ಇಂಜಿನಿಯರಿಂಗ್ ಓದುತ್ತಿದ್ದಾಗ, ವರ್ಗಗಳಿಗೆ ಚಕ್ಕರ್ ಹಾಕಿ, ಅಮೇರಿಕೆಗೆ ಹೋಗಲು ಬೆಂಗಳೂರಿನಲ್ಲಿ ಅಭ್ಯಾಸ ಮಾಡಿ, ಪರೀಕ್ಷೆಕೊಟ್ಟು ನಿಮ್ಮೆಲ್ಲರಿಗಿಂತ ಮೊದಲು ಅಲ್ಲಿಗೆ ಹಾರಿದ್ದನಲ್ಲವೇ? ಆ ಕನಸನ್ನು ನನಸಾಗಿಸಿದ ಅಭಿಮಾನ, ಸಂತೋಷಗಳು ಅವನವಾಗಿ ಉಳಿದಿವೆ, ಅನಿಸಲೇ ಇಲ್ಲ! ಅಮೇರಿಕೆಯಲ್ಲಿ ಅನಿರೀಕ್ಷಿತ ಹಲವಾರು ಸಮಸ್ಯೆಗಳು ಅವನನ್ನು ಕಾಡುತ್ತಿವೆ, ಎಂದೆನಿಸಿತು. ಅವುಗಳಲ್ಲಿ ನೌಕರಿಯ ಅಭದ್ರತೆ, ಹಣಕಾಸಿನ ಸುರಕ್ಷತೆ ಇಲ್ಲದಿರುವದು, ಮುಖ್ಯ ಅನಿಸಿತು. ಇಲ್ಲಿ ಅವನ ವಿವಾಹಕ್ಕೆ ಮನೆಯವರು ಒತ್ತಾಯಿಸುತ್ತಿದ್ದಾರೆ. ತನ್ನ ಸಮಸ್ಯೆಗಳನ್ನು ಎಷ್ಟು ವಿವರಿಸಿ ಹೇಳಿದರೂ ತನ್ನವರಿಗೆ ಅರ್ಥವೇ ಆಗುತ್ತಿಲ್ಲ! ಎಂದು ನೊಂದು ಹೇಳಿದ. ಭಾರತಕ್ಕೆ ಹಿಂದಿರುಗಿ ಬಂದು ತನ್ನವರೊಡನೆ ಒಂದಾಗಿ ಬದುಕಲೂ ಅವನ ಒಪ್ಪಿಗೆ ಇದ್ದಂತೆ ಅನಿಸಲಿಲ್ಲ. ಇಲ್ಲಿಯ ಕೊರತೆಗಳನ್ನೆಲ್ಲ ಹಿಗ್ಗಿಸಿ ಹೇಳಿದ. ಸಾಫ್ಟವೇರ್ ಇಂಜಿನಿಯರುಗಳಿಗೆ ತುಂಬ ಬೇಡಿಕೆ ಉಂಟಲ್ಲ? ಎಂದಾಗ ಒಪ್ಪಿಕೊಂಡ.

ಮುಂದಿನ ವರ್ಷ ವಿಕಾಸನು ಹಿಂದಿರುಗಿ ಬಂದು ನಮ್ಮೊಡನೆ ಇರಲು ನಿಶ್ಚಯಿಸಿದ್ದಾನೆ, ಎಂದರೆ ಅವನಿಗೆ ನಂಬಿಕೆ ಹುಟ್ಟಲೇ ಇಲ್ಲ. ನಾನೇ ಅವನಿಗೆ ಸಂತೈಸುವಂತೆ. ''ಸದ್ಯ ಹಾಗೆ ಬರೆದಿದ್ದಾನೆ. ಮುಂದೆ ಮನಸ್ಸು ಬದಲಾಗದು! ಎಂದು ಹೇಳಲಿಕ್ಕಾಗದು. ಅವನು ಸಾಮಾನು, ಸರಂಜಾಮುಗಳೊಂದಿಗೆ ಬಂದು ಇಳಿದಾಗಲೇ ನೂರಕ್ಕೆ ನೂರು ಸತ್ಯವೆಂದು ನಂಬಬೇಕು'' ಎಂದು ವಿವರಿಸಿದೆ. ಅವನು ಇನ್ನೂ ಮೂರುವಾರ ಬೆಂಗಳೂರಿನಲ್ಲಿ ಇರುತ್ತಾನಂತೆ. ಬರುವಾಗ ಕೆಲ ಇಲೆಕ್ಟ್ರಾನಿಕ್ಸ ಸಾಮಾನುಗಳನ್ನು ತಂದದ್ದರಿಂದ ಕಸ್ಟಮ್ಸ್‌ದವರು ಸುಲಿದು ತಿಂದರಂತೆ. ಬರುವಾಗ ತುಂಬಿ ತಂದ ಸೂಟಕೇಸ್, ತಿರುಗಿ ಹೋಗುವಾಗ ಖಾಲಿ ಇರುವದರಿಂದ ''ವಿಕಾಸನಿಗೆ ಏನು ಕೊಟ್ಟರೂ ಒಯ್ದು ತಲುಪಿಸುತ್ತೇನೆ. ಆತ ಬಲು ಸಂಕೋಚದ ವ್ಯಕ್ತಿ!'' ಎಂದು ಹೇಳಿದ. ಆತನಿಗೆ ತೊಂದರೆ ಆಗದಂತೆ ಒಂದೇ ಕವರು. ಅದರಲ್ಲಿ ನಿನ್ನ ಬಾಲ್ಯದ ಕೆಲವು ಫೋಟೊಗಳು ಹಾಗೂ ಇತ್ತೀಚೆಗೆ ಪ್ರಕಟವಾದ ನಮ್ಮ ಲೇಖಗಳ ಝುರಾಕ್ಸ ಪ್ರತಿಗಳು ಮುಂತಾದವನ್ನು ಹಾಕಿ ಕಳಿಸಬೇಕೆಂದಿದ್ದೇನೆ.

* * *

ಇಂದು ಮತ್ತೆ ಬಂದ. ತನ್ನನ್ನು ಅರ್ಥಮಾಡಿಕೊಳ್ಳದ ತಂದೆ-ತಾಯಿಗಳ ಧೋರಣೆಗೆ ಬೇಸತ್ತ ವಿಚಾರ ಹೇಳಿದ. ಎಲ್ಲರೂ ಮದುವೆ ಮಾಡಿಕೊಂಡೇ ಹೋಗು!

ಎಂದು ದುಂಬಾಲು ಬಿದ್ದು, ಕನ್ಯೆಯೊಬ್ಬಳನ್ನು ನೋಡಿಟ್ಟಿದ್ದಾರೆ. ಆದರೆ ಆಕೆ ಅತಿ ಸಿರಿವಂತ ಕುಟುಂಬದವಳು. ತನ್ನ ತಂದೆ ಸರಕಾರಿ ನೌಕರಿ, ವರ್ಗಾವರ್ಗಿಗಳಲ್ಲಿ ಸುಭದ್ರ ಆರ್ಥಿಕ ನೆಲೆ ಹೊಂದದೇ ಕಷ್ಟದಲ್ಲಿ ಸಂಸಾರ ಸಾಗಿಸಿದವರು. ಇಂಥ ಹಿನ್ನೆಲೆಯ ತಾನು ಅಂಥ ಹುಡುಗಿಯನ್ನು ಮದುವೆಯಾದರೆ ಅಮೇರಿಕೆಯಲ್ಲಿ ಕಸ ಮುಸುರಿ ಹೊರಗೆಲಸಗಳನ್ನೆಲ್ಲ ತೂಗಿಸಿಕೊಂಡು ಹೋಗುವದು ಸಾಧ್ಯವೇ? ಎಂದು ಈತನು ಹೌಹಾರಿ ಹೋಗಿದ್ದಾನೆ! ಈಗಲೇ ಭಾರತದಲ್ಲಿ ಇರುವದೆಲ್ಲ ಕಳಪೆ. ಅಮೇರಿಕೆಯಲ್ಲಿ ಇದ್ದುದೆಲ್ಲ ಅಮೃತ! ಎಂಬ ವಾದ ಹೂಡುತ್ತಾನೆ. ಅದನ್ನು ಒಪ್ಪಿಕೊಳ್ಳುವದು ಸಾಧ್ಯವಿಲ್ಲ. ಎರಡೂ ದೇಶಗಳಲ್ಲಿ ಜೀವನದ ಮೌಲ್ಯಗಳೇ ಬೇರೆ. ಅವನ್ನು ಹೋಲಿಸುವದೂ ಕಷ್ಟದ್ದು. ಭಾರತದಲ್ಲಿ ಲಕ್ಷಾಂತರ ಸರಕಾರಿ ನೌಕರರು ಬರೇ ಆಫೀಸಿಗೆ ಹೋಗಿ ಬರುತ್ತಾರೆ, ಎಂಬ ಒಂದೇ ಕಾರಣಕ್ಕಾಗಿ ಸಂಬಳ ಪಡೆದು ಸಂಸಾರಮಾಡಿ ಬದುಕುತ್ತಾರೆ. ಅಂಥವರು ಅಮೇರಿಕೆಯ ಸ್ಪರ್ಧಾ ಜೀವನದಲ್ಲಿ ಮುಂದೆ ಬರುವದು ಸಾಧ್ಯವೇ? ಅಲ್ಲಿ ಪ್ರತಿಯೊಬ್ಬರೂ ತನ್ನಲ್ಲಿರುವ ಉತ್ತಮವಾದುದನ್ನು ಕೊಡದಿದ್ದರೆ 'ನಾಲಾಯಕ್ ನಿರುದ್ಯೋಗಿ'ಯಾಗಿ ಸರಕಾರಿ ಸಹಾಯಧನದ ಮೇಲೆ ಜೀವನ ಮಾಡುವ ಪ್ರಸಂಗ ಬರುತ್ತದೆ. ಕೃಷ್ಣನ ಈಗಿನ ನಿಲುವು ನೋಡಿದರೆ ಅವನು ಇಷ್ಟು ಬೇಗ ಮದುವೆಯನ್ನೂ ಮಾಡಿಕೊಳ್ಳುವದಿಲ್ಲ, ಭಾರತಕ್ಕೂ ಮರಳಿ ಬರುವಂತೆ ತೋರುವದಿಲ್ಲ.

ಅವನ ಹತ್ತಿರ ನಿನಗೆ ತಲುಪಿಸಲು ಒಂದು ಕವರು ಕೊಟ್ಟಿದ್ದೆ. ಆತ ಆ ಕವರನ್ನು ಇಲ್ಲಿಯೇ ಬಿಟ್ಟು ಹೊರಟಿದ್ದ. ಕರೆದು ಅವನ ಕೈಗೆ ಕೊಡಬೇಕಾಯಿತು. ನಿನಗಿಂತ ಆತ ಹೆಚ್ಚಿನ ಮರಗುಳಿ ಎಂದು ತೋರಿಸಿಕೊಂಡ!

◆ ◆ ◆

೧೯. 'ಮೆಚ್ಚಿಗೆ' ಎಂಬ ಮಾಯೆ

ಮೆಚ್ಚಿಗೆ, ಪ್ರಶಂಸೆಯ ಒಂದು ಮುಖ. ಮುಖಸ್ತುತಿಯಿಂದ ದೂರ ಇರಲು ಸಾಧ್ಯವಾದವರಿಗೂ ಮೆಚ್ಚಿಗೆಯ ಮಾತುಗಳಿಂದ ದೂರ ಇರುವದು ಆಗುವದಿಲ್ಲವೆಂದು ತೋರುತ್ತದೆ. ಇಂದಿನ ದಿನಗಳಲ್ಲಿ ಸ್ವಸ್ತುತಿ, ಆತ್ಮ ಪ್ರಶಂಸೆಗಳಲ್ಲಿ ತೊಡಗಿರುವವರು ಹೆಚ್ಚಾಗಿ ಕಂಡು ಬರುವದರಿಂದ, ನನ್ನ-ನಮ್ಮ ಬರವಣಿಗೆಯನ್ನು ಗೌರವಾನ್ವಿತರಾದ ಗೌರೀಶ ಕಾಯಕಿಣಿ, ಅವರು ಮೆಚ್ಚಿ, ಪತ್ರ ಬರೆದು ತಿಳಿಸುವ ಸೌಜನ್ಯ ತೋರಿದಾಗ ಸ್ವಲ್ಪ 'ಜಂಬ' ಬಂದರೆ ಹೊಟ್ಟೆಯೊಳಗೆ ಹಾಕಿಕೊಳ್ಳಬಹುದು, ಎಂದು ತೋರುತ್ತದೆ! ಅವರ ೪-೧೧-೧೯೯೪ರ ಪತ್ರ ಹೀಗಿದೆ:

ಪ್ರಿಯ ಜ್ಯೋತ್ಸ್ನಾನಂದ ಕೃಷ್ಣರಿಗೆ -

ಆತ್ಮೀಯ ಪ್ರೀತಿಯ ಆಶೀರ್ವಂದನೆಗಳು. ದಯಮಾಡಿ ಕ್ಷಮಿಸಿರಿ. ನಿಮ್ಮ ಕೃತಿಗಳನ್ನು ಕಣ್ತುಂಬಿ ಓದಿನೋಡಿ, ಅಷ್ಟೇ ನೋಡಿ, ಓದಿ, ವಿನಾ ಕಾರಣ ಕಾಲಹರಣದಿಂದ ನಿಮಗೆ ಸಾಕಷ್ಟು ಅನ್ಯಾಯ ಮಾಡಿದೆನು. ಇದಕ್ಕೆ ನೀವೇ excuse ಮಾಡಬೇಕೇ ಹೊರತು ನನ್ನಲ್ಲಿ ಬೇರೆ excuse ಇಲ್ಲ ಇದಕ್ಕಾಗಿ!

ನಿಮ್ಮ ಎರಡೂ ಕೃತಿಗಳನ್ನು ನಾನು ತುಂಬ ಮೆಚ್ಚಿಕೊಂಡೆ. ಪ್ರವಾಸವೂ ಒಂದು ಶಿಕ್ಷಣ. ದೇಶ-ವಿದೇಶ ಪರ್ಯಟನವೂ ಒಂದು ಸಂಸ್ಕಾರ. ಇದೇ ನಿಜವಾದ 'ವಿದ್ಯಾ' - ವಿದ್ಯಾಲಯದ ವಸ್ತುಪಾಠ. ಇದಕ್ಕೆ ಉತ್ತಮ ಮತ್ತು ಆತ್ಮೀಯ ನಿದರ್ಶನ, ಡಾ. ಕೃಷ್ಣಾನಂದರ ಕೃತಿಗಳು. ಈ 'ಮಧ್ಯಪ್ರದೇಶದ ಮಡಿಲಲ್ಲಿ' ಎಷ್ಟು ಮಾರ್ಮಿಕವೋ ಅಷ್ಟೆ Charmic ಆಗಿದೆ. ನೋಡಿದ್ದನ್ನೂ, ಕೇಳಿದ್ದನ್ನೂ, ಎಲ್ಲವನ್ನೂ ವರ್ಣರಂಜಿತವಾಗಿ ನಿರೂಪಿಸುವ ಅವರ ಕಲಾಪ್ರಜ್ಞೆ, ಅವರ ಜೀವನ ಜಿಜ್ಞಾಸೆ, ಜೀವನೋಲ್ಲಾಸಗಳಿಂದ ಒಡಗೂಡಿದ ಶಾಸ್ತ್ರೋಕ್ತ ಮಾಹಿತಿಗೆ ಹೆಚ್ಚಿನ ಮತ್ತು ನೆಚ್ಚಿನ ಬಣ್ಣವೇರಿಸಿದೆ. ವರ್ಣನೆ, ಬರಿ ಚನ್ನಣೆಯ ಬೆಡಗಾಗಿಲ್ಲ. ನಿರಾಮಯವಿದ್ದಷ್ಟೆ ನಿತ್ಯ ಆಸಕ್ತಿಗೆ ಆಹ್ಲಾದದಂತಿದೆ. ಲೇಖಕರ ರಕ್ತಗತವಾದ ಹಕ್ಕಿನೋಟ. ಕೀಟನೋಟಗಳು, ಇಲ್ಲಿ ಅನುಭವವನ್ನು ಕೂಡ ನೋವು, ಕನಿಕರಗಳಷ್ಟೇ ಮನೋಹರವಾಗಿ ರೂಪಿಸಿ, ಪ್ರವಾಸದ ದಿನಚರಿಯನ್ನು ಕಾದಂಬರಿಯಂತೆ, ರಮ್ಯವೂ, ರಸಿಕವೂ ಆಗಿ ರಂಜನೆಗೊಳಿಸಿವೆ. ವಿವರಗಳ ವಿನ್ಯಾಸ, ವರ್ಣನೆಯ ಔಚಿತ್ಯ ಮತ್ತು ಪ್ರಸನ್ನ ನಿವೇದನೆಯ ಶೈಲಿ ಇವುಗಳ ಜೊತೆಗೆ ಛಾಯಾಗ್ರಾಹೀ ಕುಶಲತೆ ಹಾಗೂ ಬಹುಮುಖವಾದ ತೀವ್ರ ಹಾಗೂ ಸೂಕ್ಷ್ಮ ಜಿಜ್ಞಾಸೆ ಕೂಡಿಕೊಂಡು ಈ ಪುಸ್ತಕ ಕೂಡ ಅವರ ಇತರ ಕೃತಿಗಳಂತೆಯೇ ಓದುಗರಿಗೆ ಒಂದು ಔತಣವಾಗಿ ಅವರ ಕಾಯಕ ಕೃತಕೃತ್ಯವಾಗಿದೆ. ಹಾರ್ದಿಕ ಹರ್ಷದ ಅಭಿನಂದನೆಗಳು.

'ಶುಭ್ರಜ್ಯೋತ್ಸ್ನಾ ಪುಲಕಿತ'ವಾದ 'ಹೀಗಿದ್ದೇವೆ ನಾವು!' ಇದೂ ಶ್ರೀಮತಿ ಕಾಮತರ ಇನ್ನೊಂದು ಪುಲಕಿತಗೊಳಿಸುವ ನಿರ್ಮಿತಿ. 'ಯಾಮಿನಿ'ಯ ಯಾತನೆಗೆ ಉತ್ತಮ ಉಪಹಾರ. ಹಗಲಿಗೆ ಉಪಾಹಾರವೂ ಹೌದು. ಸಂಸಾರದ ಸ್ವಾರಸ್ಯವು

ಪುನಃ ಇಲ್ಲಿ ಕೌಟುಂಬಿಕ ಸತ್ಕಥಾ ವಿನೋದವಾಗಿ ಅರಳಿದೆ. ಆದರೆ ಬಹುಶಃ ಈ ಲೇಖನ ಅದಕ್ಕಿಂತ ಪೂರ್ವಭಾವಿಯಾಗಿರಲು ಸಾಕು. ಇಲ್ಲಿ ವಿನೋದ ತುಂಬ ರೋಚಕ. ಲೇಖಿಕೆಗೆ ಅದರ ಆವಿಷ್ಕಾರ, ಒಂದು ವಾಕ್‌ಶಿಲ್ಪ ವಿವರವಾಗಿ ಎಸಳು ಎಸಳಾಗಿ ಅವತರಿಸಲು ಸಾಕಷ್ಟು ಅವಕಾಶ ಇದ್ದು ಲೇಖಗಳು, ಅಲ್ಲಲ್ಲಿ ತುಸು ಲಂಬಾಯಮಾನವಾಗಿವೆ. ಆದರೆ ಲೇಖನಿ ನಡೆಸುವ ಕೈ ಅದರ ಹಿಂದಿನ ಹೃದಯ ಚಾತುರ್ಯದಷ್ಟೆ ಆಪ್ಯಾಯಮಾನವಾಗಿ ತುಂಬಿ ಬಂದಿದೆ. ನಿತ್ಯ ಬದುಕಿನ ವ್ಯಂಗ್ಯಗಳನ್ನು ಸುಖಕರವಾಗಿ, ಅಷ್ಟೇ ನವಿರಾಗಿ, ನಗೆ ಮುಗಳು ತುಂಬಿ ಲೇಖಿಕಿ ಬಿಂಬಿಸಿದ್ದಾಳೆ. ಜ್ಯೋತ್ಸ್ನಾರ ವಿನೋದ, ಅದರ ಭಾಷೆಯ ಜಾಣತನದಂತೆಯೇ ಚಿಂತನದ ಭಾಷಾವಿಷ್ಕಾರದಲ್ಲಿಯೂ ಇದೆ. ಒಂದಕ್ಕಿಂತ ಒಂದು circumstantial ಅಷ್ಟೆ saturational ಆಗಿವೆ - ಹಾಸ್ಯಸಂದರ್ಭಗಳಿಗಿಂತ ಈ ದಾಂಪತ್ಯದ ಸುಲಲಿತವಾದ, ಸುಸಂಸ್ಕೃತವಾದ, ಸಾಂಸಾರಿಕ ಸ್ವಾರಸ್ಯ ಬಹುಮುಖವಾಗಿ ವ್ಯಕ್ತವಾಗಿದೆ! ಅದಕ್ಕೂ ಹಾರ್ದಿಕ ಧನ್ಯವಾದಗಳು.

ನಿಮ್ಮವನೇ ಗೌರೀಶ ಕಾಯಕಿಣಿ.

ಶ್ರೀ ಗೌರೀಶರ ಹಸ್ತಾಕ್ಷರ ಓದುವದು ತುಂಬ ಕಷ್ಟ! ಅದೆಷ್ಟೋ ಸಲ ಅವರು ಬರೆದ ಕನ್ನಡ ಶಬ್ದಗಳನ್ನು ಇಂಗ್ಲಿಷ್ ಎಂದೂ, ಇಂಗ್ಲಿಷ್ ಶಬ್ದಗಳನ್ನು ಕನ್ನಡವೆಂದೂ ಭ್ರಮಿಸಿ, ಅರ್ಥಮಾಡಿಕೊಳ್ಳಲು ಯತ್ನಿಸಿದ್ದೂ ಉಂಟು! ಈ ಒಂದು ಪತ್ರವನ್ನು ಅರ್ಥೈಸಲು ನಮ್ಮಿಬ್ಬರಿಗೂ ಸಾಕುಬೇಕಾಯಿತು. ಅವರ ಪಾಂಡಿತ್ಯ, ಕವಿತ್ವ, ವಿನೋದ ಪ್ರಜ್ಞೆಗಳು ಪೈಪೋಟಿಯಿಂದ ಬರವಣಿಗೆಯಲ್ಲಿ ಇಣುಕುವದರಿಂದ ಕಷ್ಟ! 'ಯಾಮಿನಿ ಯಾತನೆ (ನಿದ್ರಾಹೀನತೆ) ಉಪಹಾರ (ಸ್ನ್ಯಾಕ್) ಉಪಹಾರಗಳ ಶ್ಲೇಷೆ ತಿಳಿದುಕೊಳ್ಳುವವರು ಕಡಿಮೆ. ಆದರೆ ಅತ್ಯಂತ ತ್ರೋಟಕವಾಗಿ ನಮ್ಮಿಬ್ಬರ ಕೃತಿಗಳನ್ನು ವಿಮರ್ಶಿಸಿ ಹಾರೈಸಿದ್ದಾರೆ. ಗೌರೀಶರ ಅನೇಕ ಪತ್ರಗಳು ನನ್ನ ಖಜಾನೆಯಲ್ಲಿ ಇವೆ. ಅವುಗಳನ್ನೆಲ್ಲ ಒಂದೊಂದಾಗಿ decipher ಮಾಡಿ ಬರೆದು ಇಡುವ ದೊಡ್ಡ ಯೋಜನೆ ಇದೆ. ಕಳೆದ ಮೂವತ್ತು ವರ್ಷಗಳಲ್ಲಿ ನಮಗೆ ಯಾರು, ಯಾರಿಂದಲೋ ಬಂದ ಚಿತ್ರ, ವಿಚಿತ್ರ ಪತ್ರಗಳೆಲ್ಲ ಸೇರಿದ ದೊಡ್ಡ ಸಂಗ್ರಹವೇ ಆಗಿಬಿಟ್ಟಿದೆ! ಅವುಗಳಲ್ಲಿ ಬಹುಸಂಖ್ಯಾಕವು, ಮೆಚ್ಚಿಗೆ ಸೂಚಿಸಿ, ಬೆನ್ನು ತಟ್ಟಿ ಬರೆದವುಗಳು. ಕೆಲವು ಬೈದು ಬರೆದವುಗಳು. ಯಾವ ತಾರತಮ್ಯವನ್ನೂ ತೋರಿಸದೇ ಎಲ್ಲವನ್ನೂ ಸಂರಕ್ಷಿಸಿ ಇಟ್ಟಿದ್ದೇನೆ. ಅವುಗಳಲ್ಲಿಯ ಸಾಹಿತ್ಯಾಂಶಗಳನ್ನು ಗುರುತಿಸಿ, ಅರ್ಹವಾದವುಗಳನ್ನು ಪ್ರಕಟಿಸುವ ವಿಚಾರ ಇದ್ದುದರಿಂದ, ಅವುಗಳ ಝುರೋಕ್ಸ ಪ್ರತಿಗಳನ್ನು ಪಡೆದು ಸಂಪಾದಿಸಬೇಕಾಗಿದೆ. ಕುವೆಂಪು, ಕಾರಂತ, ರಾಜರತ್ನಂ, ಶಂ. ಬಾ. ಜೋಶಿ, ಎಂ. ಕೆ. ಇಂದಿರಾ, ಅನುಪಮಾ ನಿರಂಜನ, ಭೈರಪ್ಪ, ಗಿರೀಶ ಕಾರ್ನಾಡ, ರಾಮಚಂದ್ರ ಕೊಟ್ಟಲಗಿ, ಕೀರ್ತಿನಾಥ ಕುರ್ತಕೋಟಿ, ಜಿ. ಬಿ. ಜೋಶಿ, ಡಾ. ಜಿ. ಎಸ್. ಆಮೂರ, ಎಚ್ಚೆಸ್ಕೆ, ಎನ್ಕೆ, ನಿರಂಜನರು, ಕೆ.ವಿ. ಸುಬ್ಬಣ್ಣ ಎ. ಎನ್. ಮೂರ್ತಿರಾಯರು, ವಿ. ಜಿ. ಭಟ್, ಚದುರಂಗ, ಡಾ. ಶಿವರುದ್ರಪ್ಪ, ಡಾ. ಪ್ರಭುಶಂಕರ, ಡಾ. ಕೆ. ಸಿ. ಶಿವಪ್ಪ

ಮೊದಲಾದವರ ಪತ್ರಗಳಿವೆ. ಇವುಗಳನ್ನೆಲ್ಲ ಸಂಪಾದಿಸಿ ಪ್ರಕಟಿಸಿದರೆ, ಓದುಗರಿಗೆ ರುಚಿಸಬಹುದು ಅಲ್ಲವೇ? ಜೊತೆಗೆ ನಾವು ಹಿರಿಯರು ಎಂದು ನಂಬಿದವರ ಸಣ್ಣತನವನ್ನು ಅರಿಯುವಂತೆ ಆಗುತ್ತದೆ. ಮಾಡಬೇಕಾದ ಕೆಲಸ ಬೆಟ್ಟದಷ್ಟಿದೆ. ಅಲ್ಪಾಯು ಮಾನವನ ಜೀವಮಾನದಲ್ಲಿ ಅದೆಷ್ಟು ಕೆಲಸ ತಾನೆ ಮಾಡಿ ಮುಗಿಸಲಾದೀತು? ಆದರೆ ಇಂತಹ ಚಟುವಟಿಕೆಗಳಲ್ಲಿ ತೊಡಗಿಕೊಂಡರೆ ಗೆಲುವಾಗಿರಲು ಸಾಧ್ಯವಾಗುತ್ತದೆ. ನಾವು ಮಾಡುವ ಪ್ರತಿಯೊಂದು ಕೆಲಸಕ್ಕೂ ಬಹುಮಾನ ರೂಪದ ಪ್ರತಿಫಲ ಸಿಗಲೇಬೇಕು, ಎಂಬ ನಿಯಮ ಇಲ್ಲವಲ್ಲ!

◆ ◆ ◆

೨೦. ಹಳೆಯ ಗೆಳೆಯರು

ನೀನು ನನಗೆಂದು ಕಳಿಸಿದ ಟೀಶರ್ಟ್ ನೋಡಿ ನಾವಿಬ್ಬರೂ ಮನಸ್ವಿ ನಕ್ಕೆವು! ನಿನ್ನಪ್ಪ, ಉಳಿದವರಿಗಿಂತ ದಪ್ಪಗೆ ಇರಬಹುದು. ಆನೆ ಮರಿಯಂತೆ ಇದ್ದಿರಬಹುದು. ಆದರೆ ಈ ಟೀಶರ್ಟ್ ಒಂಟಿಸಲಗಕ್ಕೂ ಬಹುಶಃ ಸಡಿಲಾಗಬಹುದು! ಶ್ರವಣಬೆಳಗೊಳದ ಬಾಹುಬಲಿ ನಿನ್ನ ಕಣ್ಣೆದುರು ಬಂದಿರಬೇಕಲ್ಲವೇ?

ನಿನ್ನೆ, ನನ್ನ ಕಾಲೇಜ ಸ್ನೇಹಿತ ಡಾ. ಎಸ್. ಪಿ. ಆಚಾರ್ಯನು ನನ್ನನ್ನು ಹುಡುಕಿಕೊಂಡು ಬಂದಿದ್ದ. ಈತ ಮೊದಲಿನಿಂದಲೂ ಕಲಿಯುವದರಲ್ಲಿ, ಸಂಶೋಧನೆಯಲ್ಲಿ ಎತ್ತಿದ ಕೈ. ಆದರೆ ವ್ಯಾವಹಾರಿಕತೆಯಲ್ಲಿ ಅತಿ ಹಿಂದೆ. ಆತನ ಪತ್ನಿ ಆ ಕೊರತೆ ತುಂಬಿದಳು. ಆಚಾರ್ಯನು ಪದವಿಯನ್ನು ಕುಮಟಾ ಕಾಲೇಜಿನಲ್ಲಿ ಪಡೆದು ಸ್ನಾತಕೋತ್ತರ ಪದವಿಗೆ ಧಾರವಾಡದಲ್ಲಿ ಓದಿದ. ಡಾ. ನರಗುಂದಕರರ ಮೇಲ್ವಿಚಾರಣೆಯಲ್ಲಿ ಡಾಕ್ಟರೇಟ್ ಮುಗಿಸಿ, ಪುಣೆಯ ಎನ್. ಸಿ. ಎಲ್‌ದಲ್ಲಿ ಕೆಲಕಾಲ ಸಂಶೋಧನೆ ನಡಿಸಿ, ಅಮೇರಿಕೆಯ ಪರ್ಡುವಿಶ್ವವಿದ್ಯಾಲಯದಲ್ಲಿ ನೊಬೆಲ್ ಪ್ರಶಸ್ತಿ ವಿಜೇತ ಪ್ರಾಧ್ಯಾಪಕರೊಂದಿಗೆ ಸಂಶೋಧನೆಯಲ್ಲಿ ಪಾಲುಗೊಂಡ. ಹಿಂದಿರುಗಿ ಬಂದ ಬಳಿಕ ಮುಂಬೈಯಲ್ಲಿ 'ಆಚಾರ್ಯ ಕೆಮಿಕಲ್ಸ್' ಎಂಬ ಔಷಧಿಗಳನ್ನು ತಯಾರಿಸಲು ಬೇಕಾಗುವ ಮೂಲ ರಸಾಯನಗಳನ್ನು ಉತ್ಪಾದಿಸಲಾರಂಭಿಸಿದ. 'ಜಾಕ್ ಪಾಟ್' ತನ್ನದಾಗಿಸಿಕೊಂಡು ಬಿಟ್ಟ! ಮೊನ್ನೆ ದೇಶದಲ್ಲಿ ಹಠಾತ್ತಾಗಿ ಪ್ಲೇಗು ಪೀಡೆ ಕಾಣಿಸಿಕೊಂಡಾಗ ಆತನ ಟೆಟ್ರಾಸ್ಯಾಕ್ಲಿನ್‌ಗೆ ವಿಪರೀತ ಬೇಡಿಕೆ ಬಂದು ಕಾಸಿನ ಕೊಳ್ಳೆ ಹೊಡೆಯುವಂತೆ ಆಯಿತು! ಆದರೆ ದೈವ ಒಂದು ಕೊಟ್ಟರೆ, ಇನ್ನೊಂದನ್ನು ಕೊಟ್ಟಿರುವದಿಲ್ಲ. ಆತನಿಗೆ ಆರೋಗ್ಯದ ಕಿರಿಕಿರಿ ಮೊದಲಿನಿಂದಲೂ ಇತ್ತು. ಅದಾಗಲೇ ಹೃದಯಬೇನೆ ಕಾಣಿಸಿಕೊಂಡು ಬೈಪಾಸ್ ಶಸ್ತ್ರಚಿಕಿತ್ಸೆಯೂ ಆಗಿದೆ. ಆರೋಗ್ಯದ ಬಗ್ಗೆ ಸದಾ ಕಳವಳ ಪಡುವ ಪತ್ನಿ ಆತನನ್ನು ನೆರಳಿನಂತೆ ಹಿಂಬಾಲಿಸಿ ಹೋಗುತ್ತಿರುತ್ತಾಳೆ. ನಿನ್ನೆಯೂ ಜೊತೆಯಲ್ಲಿದ್ದಳು. ಆಚಾರ್ಯನಿಗೆ ವಿಪರೀತ ಮರೆವು. ಅಂತೆಯೇ ಎಲ್ಲವನ್ನೂ ಆಕೆ ಜ್ಞಾಪಕದಲ್ಲಿ ಇಟ್ಟುಕೊಂಡು, ಪತಿಗೆ ನೆರವಾಗುತ್ತಿದ್ದಿರಬೇಕು.

ಆಚಾರ್ಯನು ನನಗಿಂತ ಮೂರು ತಿಂಗಳಿಗೆ ಕಿರಿಯನಾದರೂ ಮೂವತ್ತು ವರ್ಷಗಳಿಗೆ ಹಿರಿಯನಂತೆ ಕಾಣುತ್ತಾನೆ! ಆತನ ಗಡ್ಡ, ಮೀಸೆ, ಇದ್ದ ತಲೆಗೂದಲು ಅಷ್ಟೆ ಅಲ್ಲ- ಕಣ್ಣೆವೆ, ಹುಬ್ಬುಗಳೂ ಬೆಳ್ಳಗಾಗಿವೆ. ಪತ್ನಿ ಉಷಾಳಿಗೆ ಸದಾ ಗಂಡನ ಬೋಳು ತಲೆ ನೋಡಿಯೋ ಏನೋ, ನನ್ನ ತಲೆತುಂಬ (!) ಕೂದಲು ನೋಡಿ ಖುಷಿಯಾಯಿತು. ಸಾಲದ್ದಕ್ಕೆ ಒಂದೂ ನೆರೆತಿಲ್ಲ! ಎಂದು ಉದ್ಗರಿಸಿದಳು. ಅದಕ್ಕೆ ಆಚಾರ್ಯನು 'ಕಾಮತನು ಸದಾ ಸುಖಿ, ಹಸನ್ಮುಖಿ, ವಯಸ್ಸೆಂಬುದು ಅವನನ್ನು ಕಾಡುವದೇ ಇಲ್ಲ!'' ಎಂದು ವಿವರಣೆ ಕೊಟ್ಟ. ಜ್ಯೋತ್ಸ್ನಾಗೋ, ಪತಿಯದು ಬೊಕ್ಕತಲೆ! ಎಂಬ ದುಃಖ ಸದಾ ಕಾಡುತ್ತಿರುತ್ತದೆ. ಹಿಂದಿನ ಸಲ ನಿನ್ನ ಸೋದರ

ಮಾವ, ಪ್ರಕಾಶನು ಇಲ್ಲಿಗೆ ಬಂದಾಗ ಎಂದಿನಂತೆ ತನ್ನ ಗೋಳನ್ನು ಹೇಳಿಕೊಂಡಳು. ಅವನು, ''ಹೋಗೇ! ಭಾವನಿಗೆ ಇನ್ನೂ ಬೈತಲೆ ತೆಗೆದು ಬಾಚಿಕೊಳ್ಳುವಷ್ಟು ಕೂದಲಿದೆ! ಬಕ್ಕತಲೆ ಹೇಗಿರುತ್ತದೆ ಗೊತ್ತಿಲ್ಲವೇ?'' ಎಂದು ತಾಮ್ರದ ತಂಬಿಗೆ ಡಬ್ಬು ಹಾಕಿದಂತಿದ್ದ ಒಬ್ಬಿಬ್ಬರ ಪರಿಚಿತರ ತಲೆಗಳನ್ನು ಜ್ಞಾಪಿಸಿದ್ದ.

ಆಚಾರ್ಯನಿಗೆ ನಾನು ಬರೆದ ಪುಸ್ತಕಗಳು ಬಹಳ ಇಷ್ಟವಾಗಿದ್ದರಿಂದ ತನ್ನಲ್ಲಿ ಇಲ್ಲದ ಇತರ ಪುಸ್ತಕಗಳನ್ನು ಒಯ್ಯಲು ಬಂದಿದ್ದ! ''ನಾನೂ ಅಮೇರಿಕೆಗೆ ಹೋಗಿದ್ದೆ'', 'ಸಂಸಾರದಲ್ಲಿ ಸ್ವಾರಸ್ಯ' ಅಪರೂಪದ ಪುಸ್ತಕಗಳೆಂದ. ೧೯೯೦ರಿಂದ ಈಚೆಗೆ ಪ್ರಕಟವಾದ ನಮ್ಮಿಬ್ಬರ ಪುಸ್ತಕಗಳ ಒಂದೊಂದು ಪ್ರತಿ ಕೊಟ್ಟಾಗ ಅವನಿಗೆ ಖುಷಿಯೋ ಖುಷಿ! ಜೀವನದ ಸಾರ್ಥಕತೆಯನ್ನು ಅವನು ಹಣಗಳಿಕೆಯಿಂದ ಅಳೆಯುತ್ತಿಲ್ಲವೆಂದು ನನಗೆ ಆನಂದವಾಯಿತು. ಮುಂದಿನ ವರ್ಷ ನೀನು ಭಾರತಕ್ಕೆ ಮರಳಲಿರುವಿ, ಎಂದು ಹೇಳಿದಾಗ ಅವರಿಬ್ಬರಿಗೂ ಆನಂದ, ಆಶ್ಚರ್ಯ. ಏಕೆಂದರೆ ಅವರ ಏಕಮಾತ್ರ ಪುತ್ರನು, ತಂದೆಯ ಔಷಧಿ ನಿರ್ಮಾಣದ ಸಾಮ್ರಾಜ್ಯದಲ್ಲಿ ಎಳ್ಳಷ್ಟೂ ಆಸಕ್ತಿ ವಹಿಸದೇ ತನ್ನದೇ ಪ್ರತ್ಯೇಕ ರಾಜ್ಯ ಕಟ್ಟುವ ಸನ್ನಾಹದಲ್ಲಿ ಇದ್ದದ್ದು, ತಿಳಿಯಿತು. ಸಾಫ್ಟ್‌ವೇರ್ ಓದಿದ ಆತ ಇತರರಂತೆಯೇ ಅಮೇರಿಕೆಗೆ ಹೊರಟು ಹೋದರೆ ಆಶ್ಚರ್ಯವಿಲ್ಲ.

ಹಿಂದೆ ಆಚಾರ್ಯನು ಚಿಕ್ಕಮನೆಯಲ್ಲಿ ವಾಸವಾಗಿದ್ದಾಗ ಮನೆ ತುಂಬ ಜನರಿದ್ದರಂತೆ. ಈಗ ದೊಡ್ಡಮನೆ ಕೊಂಡಿದ್ದಾನೆ. ಆದರೆ ವಾಸಮಾಡುತ್ತಿದ್ದವರು ಗಂಡ-ಹೆಂಡತಿ ಮಾತ್ರವಾಗಿ ವಿಪರೀತ ಬೇಸರಕ್ಕಿಟ್ಟುಕೊಂಡಿದೆಯಂತೆ. ಹಿರಿಯ ಇಬ್ಬರು ಹೆಣ್ಣು ಮಕ್ಕಳು - ಅಳಿಯಂದಿರು ಅಮೇರಿಕೆಯಲ್ಲಿದ್ದಾರೆ. ರಜಾದಿನಗಳಲ್ಲಿ ತಮ್ಮೊಂದಿಗೆ ಕೆಲ ದಿನ ಬಂದು ಇರುವಂತೆ ತುಂಬ ಆಗ್ರಹಿಸಿದರು. ಊಟ ಮಾಡಿ ಹೋಗಿರೆಂದು ಎಷ್ಟು ಹೇಳಿದರೂ ಇಳಿದುಕೊಂಡಿದ್ದ ನೆಂಟರ ಮನೆಯಲ್ಲಿ ಕಾಯುತ್ತಿದ್ದಾರೆಂದು ಬರೇ ಕಷಾಯ ಕುಡಿದು ಹೊರಟರು. ಸಿಹಿಮೂತ್ರ, ರಕ್ತದೊತ್ತಡಗಳಿಂದಲೂ ಆಚಾರ್ಯನು ಹಣ್ಣಾಗಿದ್ದಾನೆ.

ಆಚಾರ್ಯನಿಗೆ, ತುಂಬ ಬುದ್ಧಿವಂತನಿದ್ದು ಲಕ್ಷ್ಮಿ ಒಲಿದರೂ ಆರೋಗ್ಯ ಕೈಕೊಟ್ಟದ್ದಾದರೆ, ಕೇಶವನಿಗೆ ವಿಧಿಯೇ ಪುನಃ ಪುನಃ ಕೈಕೊಟ್ಟ ಕತೆ, ಹೃದಯವಿದಾರಕವಾಗಿದೆ. ಆತನ ಕುಟುಂಬದ ಏರಿಳಿತಗಳೆಲ್ಲ ನನ್ನ ಕಣ್ಣಮುಂದೆ ನಡೆದ ಘಟನೆಗಳು. ಆತನ ತಂದೆ ಊರಿನ ಮುನ್ಸಿಪಾಲ್ಟಿಯಲ್ಲಿ ಗುಮಾಸ್ತರಿದ್ದರು. ಮನೆತುಂಬ ಮಕ್ಕಳು, ಮೈ ತುಂಬ ಸಾಲಗಳೇ ಅವರ ಆಸ್ತಿ! ಸಂಸಾರ ಸಾಗಿಸುವದರಲ್ಲಿ ಹಣ್ಣಾದ ವ್ಯಕ್ತಿ. ಒಮ್ಮೆ ಆಫೀಸಿನ ಲೆಕ್ಕಾಚಾರದಲ್ಲಿ ಕೇವಲ ಎಂಬತ್ತು ರೂಪಾಯಿಗಳು ಕಡಿಮೆ ಬಂದವಂತೆ. ಹಣಕಾಸಿನ ಹೊಣೆ ಅವರದಾಗಿದ್ದರಿಂದ 'ದುರ್ಬಳಕೆ'ಯ ಆಪಾದನೆಗೆ ಒಳಗಾದರಂತೆ. ಅದನ್ನು ಎದುರಿಸುವ, ಅವಮಾನ ತಾಳಲಾರದೆ ಆತ್ಮಹತ್ಯೆ ಮಾಡಿಕೊಂಡರು. ಪುಣ್ಯಕ್ಕೆ ನಗರಸಭೆಯ ಹಿರಿಯರು ಆತನ ಸ್ಥಳಕ್ಕೆ ಆಗತಾನೇ ಮ್ಯಾಟ್ರಿಕ್ ಪಾಸಾದ ಕೇಶವನನ್ನು ನೇಮಿಸಿಕೊಂಡರು. ಸ್ವಭಾವತಃ ಕೇಶವ ಚುರುಕು.

ಅಲ್ಲದೇ ಪರಿಶ್ರಮಕ್ಕೆ ಬಗ್ಗದವ. ಸೋದರ ಮಾವನ ಆಸ್ತಿಯ ದೇಖರೇಖಿ ಇವನ ಪಾಲಿಗೆ ಬಂದಿತ್ತು. ಹಗಲು-ರಾತ್ರಿ ದುಡಿದು, ಹೆಚ್ಚಿನ ಆಸಕ್ತಿಯಿಂದ ತೋಟ, ಮನೆಗಳನ್ನು ರೂಪಿಸಿದ. ನೌಕರಿಯನ್ನೂ ನಿಷ್ಠೆಯಿಂದ ಮಾಡಿದ. ಸೋದರರಿಗೆಲ್ಲ ಶಿಕ್ಷಣ ಕೊಡಿಸಿದ. ಅರ್ಬನ್ ಬ್ಯಾಂಕಿನಿಂದ ಸಾಲ ಪಡೆದು ಒಂದು ಜಿನಸಿ ಅಂಗಡಿಯನ್ನು ಪ್ರಾರಂಭಿಸಿದ. ಸೋದರಿಯರ ಮದುವೆ ಮಾಡಿದ.

ನಗರ ಪಾಲಿಕೆಯ ನೌಕರರಿಗೆಲ್ಲ ವರ್ಗಾವರ್ಗಿಯ ಕಾನೂನು ಅಸ್ತಿತ್ವದಲ್ಲಿ ಬಂದಿತು. ಕೇಶವನನ್ನು ಸಿರ್ಸಿಗೆ ವರ್ಗಾಯಿಸಿದರು. ನೌಕರಿಯನ್ನೂ ಜೊತೆಗೆ ತನ್ನ ಮಾವಿನಕುರ್ವೆಯ ತೋಟ, ಹೊನ್ನಾವರದ ಅಂಗಡಿಗಳ ಹೊಣೆಯೊಂದಿಗೆ ನಿಭಾಯಿಸುವದು ಕಠಿಣವೆನಿಸಿದಾಗ, ರಾಜೀನಾಮೆ ಕೊಟ್ಟ.

ಮುಂದೆ ಹೊನ್ನಾವರದ ತಾರಿಬಾಗಿಲ ಬಳಿ ಭೂಮಿಯನ್ನು ಖರೀದಿಸಿ ಕಟ್ಟಡ ಕಟ್ಟಿಸಿದ್ದು ಆತನ ದಿಟ್ಟಹೆಜ್ಜೆ. ಅಲ್ಲಿ ಕೊಬ್ಬರಿ ಹಿಂಡಿ, ಎಣ್ಣೆ ತೆಗೆಯುವ ಮಿಲ್, ಅವಲಕ್ಕಿ, ಹಿಟ್ಟು ಮಾಡುವ ಯಂತ್ರಗಳ ಗಿರಣಿ ಹಾಕಿದ. ಒಂದು ಚಹಾ ಅಂಗಡಿ ತೆಗೆದ. ಗ್ರಾಮಸ್ಥರಿಂದ ತೆಂಗಿನಕಾಯಿಗಳನ್ನು ಖರೀದಿಸಿ, ಕೊಬ್ಬರಿ ಒಣಗಿಸಿ, ಎಣ್ಣೆಮಾಡಿ, ಅದನ್ನು ಮಾರಿದ ಬಳಿಕ ಅವರಿಗೆಲ್ಲ ಹಣ ಸಂದಾಯ ಮಾಡುವದು ಅವನ ರೂಢಿ. ಇದರಿಂದ ಆತ ಅನುಕೂಲವಂತನಾದ. ಅವಿಭಕ್ತ ಕುಟುಂಬ ಮುಂದರಿದು ಎಲ್ಲರೂ ಸುಸ್ಥಿತಿಯನ್ನು ಕಾಣುವಂತೆ ಆಯಿತು. ಸೋದರರಲ್ಲಿ ಒಬ್ಬನನ್ನು ಡಾಕ್ಟರ್ ಮಾಡಿದ. ಉಳಿದವರ ಮಕ್ಕಳಿಗೂ ನೆರವು ನಿಲ್ಲಿಸಲಿಲ್ಲ. ಮಕ್ಕಳನ್ನೂ ವಿವಿಧ ವೃತ್ತಿಗಳಲ್ಲಿ ತೊಡಗಿಸಿದ.

ಮುಂದೆ ಇನ್ನೊಂದು ತೋಟ ಖರೀದಿಸಿದ. ನಂತರ ಕಾಲೇಜಿಗೆ ಹೋಗುವ ರಸ್ತೆಯಲ್ಲಿ ಮನೆ ಕಟ್ಟಿಸಿದ. ಹೆಣ್ಣು ಮಕ್ಕಳಿಗೂ ಚೆನ್ನಾಗಿ ಓದಿಸಿ ಮದುವೆ ಮಾಡಿಕೊಟ್ಟ. ಆತನ ಮಗನೊಬ್ಬ ನಿನ್ನ ಸಹಪಾಠಿ ಆಗಿದ್ದನಲ್ಲವೇ? ಅಂತೂ ಕೇಶವನ ಯಶಸ್ಸು ಅನೇಕರಿಗೆ ಸಹಿಸಲಾರದ ಸತ್ಯವಾಗಿತ್ತು. ಆದ್ದರಿಂದ ಏನಾದರೊಂದು ಕಿರುಕುಳ ಕೊಡುತ್ತಲೇ ಇರುತ್ತಿದ್ದರು. ಒಂದು ರಾತ್ರಿ ಗೋಡೌನಿನ ಹಂಚು ತೆಗೆದು ಎಣ್ಣೆಯ ಡಬ್ಬಿಗಳನ್ನೆ ಕದ್ದು ಪರಾರಿಯಾಗಿದ್ದರು!

ನಾಲ್ಕು ದಶಕಗಳ ಅವನ ಕಠಿಣ ಪರಿಶ್ರಮ, ಎರಡು ವಾರಗಳ ಹಿಂದೆ ಎಲ್ಲವೂ ಭಸ್ಮವಾಯಿತು, ಎಂದು ನಂಬುವದು ಕಷ್ಟವಾಗುತ್ತದೆ. ರಾತ್ರೆ ಒಂಭತ್ತುವರೆಗೆ ಅವನ ಗೋಡೌನಿಗೆ ಬೆಂಕಿ ಹತ್ತಿಕೊಂಡಿತು. ಅಲ್ಲಿ ಎರಡುನೂರಕ್ಕೂ ಹೆಚ್ಚು ಎಣ್ಣೆಯ ಡಬ್ಬಗಳು ದಾಸ್ತಾನು ಆಗಿದ್ದವು. ಬೆಂಕಿ ಬಲುಬೇಗ ಹರಡಿಕೊಂಡಿತು. ಊರಲ್ಲಿ ಒಂದೇ ಒಂದು ಅಗ್ನಿಶಾಮಕ ವಾಹನ ಇಲ್ಲದ್ದರಿಂದ ಕಾರವಾರದಿಂದ ತರಲು ವ್ಯವಸ್ಥೆ ಮಾಡಲಾಯಿತು. ಆದರೆ ದುರ್ದೈವದಿಂದ ಅದು ಬಿಣಗಾ ಬಳಿ ಅಪಘಾತಕ್ಕೆ ಈಡಾಗಿ ಈರ್ವರು ಮೃತಪಟ್ಟರು. ಬೆಂಕಿ ಉರಿಯುತ್ತಲೇ ಇತ್ತು. ಕುಂದಾಪುರದಿಂದ ಅಗ್ನಿ ಶಾಮಕ ಬರುವದರೊಳಗಾಗಿ ಆತನ ಕಿರಾಣಿ ಅಂಗಡಿ, ಚಹದಂಗಡಿಗಳೂ ಸೇರಿ ಕೇಶವನ ಕನಸು-ನನಸುಗಳೆಲ್ಲ ಸಂಪೂರ್ಣ ಭಸ್ಮವಾಗಿದ್ದವು. ಬೆಂಕಿಯ ಜ್ವಾಲೆಯ ಪ್ರಕೋಪಕ್ಕೆ

ಆತನ ತೋಟದ ತೆಂಗಿನ ಮರಗಳೆಲ್ಲ ಸುಟ್ಟು ನಿಂತವು. ಮೂವತ್ತು ಲಕ್ಷ ರೂಪಾಯಿಗಳ ಆಸ್ತಿ-ಪಾಸ್ತಿಯೆಲ್ಲ ಅಗ್ನಿದೇವನಿಗೆ ಅರ್ಪಿಸಿದಂತೆ ಆಯಿತು.

ಈ ನಾಶವಾದ ಸೊತ್ತಿನಲ್ಲಿ ಕೇಶವನ ಸ್ವಂತದ್ದು ಅಷ್ಟೇ ಅಲ್ಲದೇ ಇನ್ನಿತರ ಗಿರಾಕಿಗಳ ಎಣ್ಣೆ, ಕೊಬ್ಬರಿ, ಅವಲಕ್ಕಿ ಭತ್ತಗಳೆಲ್ಲ ಇದ್ದವಂತೆ. ಈಗ ಅವರಿಗೆ ಪರಿಹಾರ ಕೊಡುವದೇ ಆತನಿಗೆ ದೊಡ್ಡ ತಲೆನೋವಾಗಿದೆ. ಜಿಲ್ಲೆಯ ಎಂ. ಎಲ್. ಎ. - ಆತ ಮಂತ್ರಿಯೂ ಹೌದು, ಮೊಸಳೆ ಕಣ್ಣೀರು ಸುರಿಸಿ ಹೋದನಂತೆ. ಈ ಇಳಿವಯಸ್ಸಿನಲ್ಲಿ ಕೇಶವನಿಗೆ ಎಂಥ ದೊಡ್ಡ ಆಘಾತ ನೋಡು. ಆತನ ಹೊನ್ನಾವರ ಕಟ್ಟಡ ಉದ್ಘಾಟನೆಯ ಹೊತ್ತಿಗೆ ನಾನು ಅಲ್ಲಿದ್ದೆ. ಅನೇಕ ಬಾರಿ ಅವನ ಮನೆಗೆ ಹೋಗಿ ಆತಿಥ್ಯ ಸ್ವೀಕರಿಸಿದ್ದೇನೆ. ಆತನ ಮಡದಿ, ತುಂಬ ಒಳ್ಳೆಯ ಗೃಹಿಣಿ. ಇಂದಿನ ದಿನಗಳಲ್ಲಿ ಅವಳೇ ಕೇಶವನಲ್ಲಿ ಚೈತನ್ಯ ತುಂಬಬೇಕು. ಮನುಷ್ಯರ ಸತ್ವಪರೀಕ್ಷೆ ಕಷ್ಟಕಾಲದಲ್ಲಿಯೇ ಆಗುತ್ತದೆ.

◆ ◆ ◆

- - - - - - -

ಡಾ. ಎಸ್. ಪಿ. ಆಚಾರ್ಯ ೧೯೯೭ರಲ್ಲಿ ಹಾಗೂ ಕೇಶವ ತೇಲಂಗ ೨೦೦೨ರ ಸೆಪ್ಟೆಂಬರದಲ್ಲಿ ನಿಧನ ಹೊಂದಿದರು.

೨೧. ಅರಸಿ ಬಂದ ಪ್ರಶಸ್ತಿ

ಇಂದು ನಿನಗೆ ಇಪ್ಪತ್ತೆಂಟು ವರ್ಷಗಳು ತುಂಬಿದವು. ಮುಂದಿನ ಹುಟ್ಟುದಿನ ಬರುವದರೊಳಗೆ ನಿನ್ನ ಜೀವನದ ಸಕಲ ಅನಿಶ್ಚಿತತೆಗಳನ್ನು ದೂರ ಮಾಡಿಕೊಂಡು ನೆಮ್ಮದಿಯ ಜೀವನ ನಡೆಸಲು ಸಾಧ್ಯವಾಗಲಿ ಎಂದು ಹಾರೈಸುತ್ತೇನೆ. ನೀನು 'ಹಸಿರು ಕಾರ್ಡು' ಪಡೆಯುವದರ ಬಗ್ಗೆ, ನೌಕರಿಯನ್ನು ಬದಲಿಸುವ ಅವಶ್ಯಕತೆ ಬಗ್ಗೆ, ಭಾರತಕ್ಕೆ ಬರುವದರ ಬಗ್ಗೆ, ವಿವಾಹದ ಬಗ್ಗೆ - ನಮಗೆ ನಿನ್ನ ನಿಲವು ಏನಿದೆ? ಎಂಬುದು ಖಚಿತವಾಗಿ ಇನ್ನೂ ತಿಳಿಯದು! ನಿನ್ನ ಭವಿಷ್ಯದ ಬಗ್ಗೆ ಅನೇಕಾನೇಕ ಜನ, ನೂರಾರು ಪ್ರಶ್ನೆಗಳನ್ನು ಕೇಳುತ್ತಾರೆ. ನಾವು ಹಾರಿಕೆಯ ಉತ್ತರ ಕೊಡದೇ ಬೇರೆ ಏನೂ ಮಾಡುವಂತಿಲ್ಲ. ನಮಗೇ ಅರಿಯದ ವಿಷಯದ ಬಗ್ಗೆ ಅವರಿಗೆ ವಿವರಣೆ ಕೊಡುವದಾದರೂ ಹೇಗೆ?

೧೯೯೪ರಲ್ಲಿ ನನಗೆ ಅರವತ್ತು ವರ್ಷಗಳು ತುಂಬಿದವಲ್ಲವೇ? ಇದೇ ಒಂದು ಸಾಧನೆ ಎಂದು ಬಹುಸಂಖ್ಯಾತರು ಷಷ್ಟ್ಯಬ್ದಿಯನ್ನು ವಿಜೃಂಭಣೆಯಿಂದ ಆಚರಿಸುತ್ತಾರೆ. ನನ್ನ ಗೆಳೆಯ, ಡಾ. ಎಸ್. ಪಿ. ಆಚಾರ್ಯ, ಮುಂಬೈಯ ವಡಾಲಾದ ಕಲ್ಯಾಣ ಮಂಟಪದಲ್ಲಿ, ಆಮಂತ್ರಣ ಪತ್ರಿಕೆಯನ್ನು ಮುದ್ರಿಸಿ ದೊಡ್ಡ ಪ್ರಮಾಣದಲ್ಲಿ ಆಚರಿಸಿದ್ದ. ನಮ್ಮಿಬ್ಬರಿಗೂ ಆತ್ಮೀಯ ಆಮಂತ್ರಣ ಪತ್ರವನ್ನೂ ಬರೆದಿದ್ದ. ಹುಟ್ಟಿ ಬರುವದೇ ದೊಡ್ಡ ಸಾಧನೆ ಎಂದು ತಿಳಿಯದವನಿಗೆ, ಅರವತ್ತು ವರ್ಷ ಜೀವಿಸುವದೇ ಮಹಾಸಾಧನೆ! ಎಂದು ಅರ್ಥವಾಗದ ನನಗೆ ಈ ಆಚರಣೆಯಲ್ಲಿ ವಿಶ್ವಾಸ ಹುಟ್ಟದು. ನಾವು ಹುಟ್ಟಿ ಬಂದ ಬಳಿಕ ಏನನ್ನು ಸಾಧಿಸಿದೆವು? ಎಂಬುದು ಮುಖ್ಯ.

ನನ್ನ ಗತಜೀವನದ ''ಸಾಧನೆ''ಗಳನ್ನು ನೆನಪಿಸಿಕೊಳ್ಳಲು ಯತ್ನಿಸಿದೆ. ಇನ್ನಿತರರು ಯೋಚಿಸುವಂತೆ, ಆಚರಿಸುವಂತೆ ಜೀವನ ನಡೆಸದೇ ಇರುವದರಲ್ಲೇ ನನಗೆ ಅಚಲವಾದ ವಿಶ್ವಾಸ. ನನ್ನ ಅನಿಸಿಕೆ ಸರಿಯಾಗಿಯೇ ಇದೆ! ಎಂಬುದನ್ನು ಪುಷ್ಟೀಕರಿಸುವಂತೆ, ಶ್ರೀ ಗೌರೀಶ ಕಾಯಕಿಣಿ ಪ್ರತಿಷ್ಠಾನದ ೧೯೯೪ರ ಪ್ರಶಸ್ತಿಯನ್ನು ನನಗೆ ಕೊಡಲು ನಿರ್ಧರಿಸಿರುವದಾಗಿ ಘೋಷಣೆ ಹೊರಟಿದೆ! ಎಂದಿನಂತೆ ಈ ಪ್ರಶಸ್ತಿಯನ್ನು ವೈಯಕ್ತಿಕವಾಗಿ ಪಡೆಯುವ ಮನಸ್ಸು, ಎಳ್ಳಷ್ಟು ಇರಲಿಲ್ಲ. ಆದರೆ ಸನ್ಮಾನ - ಪ್ರಶಸ್ತಿಗಳ ಸಮಸ್ತ ಕಾರ್ಯಕ್ರಮವೇ ನನ್ನ ಸುತ್ತಲೂ ಹೆಣೆದುಕೊಂಡಿರುವದರಿಂದ ನಾನು ಹೋಗದೇ ಇರಲು ಸಾಧ್ಯವೇ ಇರಲಿಲ್ಲ. ನನ್ನನ್ನು ಒಪ್ಪಿಸಲು ಕುಮಟಾದಿಂದ ಡಾ. ಎಮ್. ಜಿ. ಹೆಗಡೆ, ಗೋಕರ್ಣದಿಂದ ಪ್ರೊ. ವಿ. ಎನ್. ಹೆಗಡೆ, ನಮ್ಮ ಮನೆಗೇ ಆಗಮಿಸಿದ್ದರು. ಇದಕ್ಕಾಗಿ ನಾನು ಕುಮಟಾ - ಹೊನ್ನಾವರಕ್ಕೆ ಹೊರಡಲೇಬೇಕಾಯಿತು.

ಹೊನ್ನಾವರದಲ್ಲಿ ಪ್ರತಿದಿನ ಮುಂಜಾನೆ ನಾನು-ತುಳಸಿದಾಸ, ಪನ್‌ಭಟ್ಟರ ಅಂಗಡಿಯಿಂದ ಕಾಕಿಯವರಿಗೆ ನಾಶ್ತಾ ಕಟ್ಟಿಸಿಕೊಂಡು ಕಾಸರಕೋಡಿಗೆ ಹೋಗಿ

ಕೊಟ್ಟುಬರುವ ವಾಡಿಕೆ ಹಾಕಿಕೊಂಡಿದ್ದೆವು. ಎಂದಿನಂತೆ ೧೮-೨-೯೫ರ ಬೆಳಿಗ್ಗೆ ಭಟ್ಟರ ಅಂಗಡಿಗೆ ಹೋದಾಗ, 'ಇಂದಿನ ವೃತ್ತ ಪತ್ರಿಕೆಯಲ್ಲಿ ನಿಮ್ಮ ಫೋಟೋ ಬಂದಿದೆ! ಎಂದು ಹೇಳಿದಾಗ ನಂಬುವದೇ ಕಷ್ಟವಾಯಿತು. ಹೌದು 'ಉದಯವಾಣಿ, ಪ್ರಜಾವಾಣಿ, ಸಂಯುಕ್ತ ಕರ್ನಾಟಕ, ಕನ್ನಡ ಪ್ರಭ, ಚುನಾವಣೆ' ಮುಂತಾದ ಪತ್ರಿಕೆಗಳು, ನನ್ನ ಭಾವಚಿತ್ರ ಕೊಟ್ಟು ಕಿರುಪರಿಚಯ ಪ್ರಕಟಿಸಿದ್ದವು! ರಾತ್ರೆ ಬೆಳಗಾಗುವದರೊಳಗೆ, ''ನಾನೂ ಅಮೇರಿಕೆಗೆ ಹೋಗಿದ್ದೆ''ಯಿಂದ ನಾನೊಬ್ಬ ಲೇಖಕನಾದಂತೆ. ಹೊನ್ನಾವರದಲ್ಲಿ ಕಣ್ಣು ಮುಚ್ಚಿ ತೆರೆಯುವದರೊಳಗೆ, ಮಹಾನ್ ವ್ಯಕ್ತಿ ಆಗಿಬಿಟ್ಟಿದ್ದೆ! ಸಾಣ್ಣಾರ ಮಗ, ಸೋಡಾ ಅಂಗಡಿ ಪುತ್ತು, ಚಹದಂಗಡಿ ಅಪ್ಪಾ, ಪುರಸಯ್ಯ, ಬೊಮ್ಮ ಪೈಗಳ ಮಗ, ಜನ್ನ, ಆರ್. ಜಿ. ಶಾನಭಾಗ ಮೊದಲಾದವರೆಲ್ಲ ರಸ್ತೆಯಲ್ಲಿ ಸಿಕ್ಕಿ ಮಾತನಾಡಿಸಿದರು. ಈ ಸಮಾಚಾರ ಓದಿದ, ಹೊನ್ನಾವರ ಕಾನೂನು ಕಾಲೇಜಿನವರು ತಮ್ಮ ವಾರ್ಷಿಕ ಸಮ್ಮೇಳನಕ್ಕೆ ಅಧ್ಯಕ್ಷನಾಗುವಂತೆ ಒತ್ತಾಯಿಸಿದರು. ನನ್ನ ಅನುಕೂಲಕ್ಕೆ ತಕ್ಕಂತೆ, ಒಂದು ವಾರ ಮೊದಲೇ ಕಾರ್ಯಕ್ರಮ ಏರ್ಪಡಿಸುವದಾಗಿ ಹೇಳಿದರು. ಯಾವ ಕುಂಟು ನೆಪವೂ ಅವರೆದುರು ನಡೆಯಲಿಲ್ಲ, ಒಪ್ಪಿಕೊಳ್ಳಲೇ ಬೇಕಾಯಿತು. ಸರಿ! ಹೊನ್ನಾವರದ ಧೀಮಂತರು, ಲೇಖಕರು, ಸೇರಿ ಕಟ್ಟಿದ 'ಆಶಯ' ಬಳಗದವರಿಗೂ ನಾನಿಲ್ಲಿ ಬಂದ ವಿಚಾರ ತಿಳಿದು ತಮ್ಮಲ್ಲಿ ಅನೌಪಚಾರಿಕ ಮಾತುಕತೆಗೆ ಬರಬೇಕು! ಎಂದು ಒತ್ತಾಯಿಸಿದರು. ಈ ಕಾರ್ಯಕ್ರಮವೂ ಅತ್ಯಂತ ಯಶಸ್ವಿಯಾಯಿತು. ನಿಮ್ಮ ಭಾಷಣವನ್ನು ಧ್ವನಿ ಮುದ್ರಣ ಮಾಡಿಕೊಂಡಿದ್ದರೆ ಒಳ್ಳೆಯದಿತ್ತು! ಎಂದು ಹಲವರು ಚಡಪಡಿಸಿದರು. ಅಲ್ಲಿ ನೆರೆದ ಹಲವರು, ವಿಕಾಸನು ನನ್ನ ಸಹಪಾಠಿ, ಆತ್ಮೀಯ, ಚಡ್ಡಿ ದೋಸ್ತ! ಎಂದೆಲ್ಲ ಬಂದು ಪರಿಚಯಿಸಿಕೊಂಡು ಅಭಿಮಾನಪಟ್ಟರು.

ಆ ದಿನ ಅಂದರೆ ೨೫-೨-೯೫ರಂದು ಬೆಳಿಗ್ಗೆ ಕಾನೂನು ಕಾಲೇಜಿನಲ್ಲಿ ನನ್ನನ್ನು 'ವಿಶೇಷ ಮಹಾನ್' ವ್ಯಕ್ತಿಯಾಗಿ ಮಾಡಿಬಿಟ್ಟರು! ನೂರ ಐವತ್ತು ಸರ್ಟಿಫಿಕೇಟುಗಳಿಗೆ ಸಹಿಮಾಡಿ ವಿತರಿಸುವ ಹೊಣೆಹೊತ್ತೆ. ಪ್ರಿನ್ಸಿಪಾಲರು ಮಾಡಿದ ಸ್ತುತಿ, ಉಬ್ಬಿ ಹೋಗುವಂತೆ ಇತ್ತು. ನನ್ನ ಅಧ್ಯಕ್ಷೀಯ ಭಾಷಣದಲ್ಲಿ ನನ್ನ ಪ್ರವಾಸ-ಪ್ರೀತಿಯನ್ನು, ಬಾಲ್ಯದಿಂದಲೂ ಬೆಳೆಸಿಕೊಂಡ ಬಗೆಯನ್ನು, ಇಂಥ ಹವ್ಯಾಸದಿಂದಾಗಿ ಜೀವನದಲ್ಲಿ ಲವಲವಿಕೆಯನ್ನು ಬೆಳೆಸಿಕೊಳ್ಳಲು ಹೇಗೆ ಸಾಧ್ಯ? ಎಂಬುದನ್ನು ಸೋದಾಹರಣವಾಗಿ ಹೇಳಿದೆ.

ಪ್ರಶಸ್ತಿ ಪ್ರದಾನದ ದಿನ (೨೬-೨-೯೫) ಬೆಳಿಗ್ಗೆ ಯಾವ ಔಪಚಾರಿಕತೆಗೂ ಕಾಯದೇ ಗಜಾನ ದ್ವಿಚಕ್ರವಾಹನದ ಮೇಲೆ ಪೀಲಿಯನ್ ಸವಾರನಾಗಿ ಕುಮಟಾದ ಸುಮಿತ್ರಾ ಮನೆಗೆ ಬಂದಿಳಿದೆ. ಅಲ್ಲಿ ಊಟ-ವಿಶ್ರಾಂತಿ ಮುಗಿಸಿ ಸಮಾರಂಭದ ಸ್ಥಳಕ್ಕೆ ಅದೇ ವಾಹನದಲ್ಲಿ ಹೋದೆವು. ಅಲ್ಲಿ ಅದೆಷ್ಟು ಜನ ನನ್ನನ್ನು ಜ್ಯೋತ್ಸ್ನಾಳನ್ನು ವಿಚಾರಿಸಿದರು. ಬಂದವರೆಲ್ಲ ಶಿಕ್ಷಕರು, ಅಧ್ಯಾಪಕರು, ಧೀಮಂತರು, ಸಾಹಿತ್ಯಾಸಕ್ತರಾಗಿದ್ದರು. ಅವರ ಸಾನ್ನಿಧ್ಯದಲ್ಲಿ ಹಾರ ಹಾಕಿ, ಹಣ್ಣು ಹಂಪಲ ನೀಡಿ,

ಹಮ್ಮಿಣಿ ಕೊಟ್ಟು, ಸರಸ್ವತಿ ವಿಗ್ರಹ ಹಾಗೂ ಕಟ್ಟು ಹಾಕಿದ ಪ್ರಶಸ್ತಿ ಕೊಟ್ಟಾಗ, ಅರವತ್ತು ವರ್ಷದ ಶ್ರಮ ಸಾರ್ಥಕವೆನಿಸಿತು. ಡಾ. ಎಮ್. ಜಿ. ಹೆಗಡೆ, ಅತಿಥಿಯಾಗಿ ಬಂದಿದ್ದ ಕವಿ, ಬಿ. ಎ. ಸನದಿ, ಪ್ರಿನ್ಸಿಪಾಲ ನಾರಾಯಣರಾವ್ ಅವರೆಲ್ಲ ನನ್ನ ಬರವಣಿಗೆಯನ್ನು ವಿವರವಾಗಿ ವಿಮರ್ಶಿಸಿ, ಮೆಚ್ಚಿಗೆಯನ್ನು ವ್ಯಕ್ತಪಡಿಸಿದಾಗ, ನಾನು ನಿಜಕ್ಕೂ ಇಷ್ಟು ಒಳ್ಳೆಯ ಲೇಖಕನೇ? ಎಂದು ಅನಿಸದೇ ಇರಲಿಲ್ಲ. ನನ್ನ ಕೃತಜ್ಞತಾ ಭಾಷಣದಲ್ಲಿ ನಾನು ಲೇಖಕನಾಗಿದ್ದು ಕೇವಲ ಆಕಸ್ಮಿಕ! ಎಂದು ಹಿನ್ನೆಲೆ ಕೊಟ್ಟೆ. ನಮ್ಮ ಮಗನಿಗೆ ಕನ್ನಡದಲ್ಲೆ ಪ್ರಾಥಮಿಕ - ಮಾಧ್ಯಮಿಕ ಶಿಕ್ಷಣ ಕೊಡಿಸಿದ್ದರಿಂದ ಇಂದು ಅವನು ಕನ್ನಡ-ಇಂಗ್ಲಿಷ್ ಎರಡೂ ಭಾಷೆಗಳಲ್ಲಿ ಪರಿಣತನಾಗಲು ಸಾಧ್ಯವಾಗಿದೆ! ಎಂದು ವಿವರಿಸಿದೆ. ನಾನು ಮೂರೂ ಸಭೆಗಳಲ್ಲಿ ಮಾಡಿದ ಭಾಷಣಗಳನ್ನು, ವಿವಿಧ ಪತ್ರಿಕೆಗಳು ವರದಿ ಮಾಡಿವೆ. ಆಯ್ದ ಕೆಲವನ್ನು ನಿನಗೆ ಕಳಿಸಿದ್ದೇನೆ. ನನ್ನ ಷಷ್ಠ್ಯಬ್ದಿ ಆಚರಣೆ, ತಂತಾನೆ ಸಾಹಿತ್ಯಾಸಕ್ತರಿಂದ ನೆರವೇರಿದ ಕಲ್ಪನೆ ನಿನಗೆ ಬರುವಂತಿದೆ!

ಇಂದಿನ ದಿನಗಳಲ್ಲಿ ನಿನ್ನಿಂದ ವಿವರವಾದ ಯಾವ ಪತ್ರಗಳೂ ಬರುತ್ತಿಲ್ಲ. ನಿನಗೇ ಪತ್ರಗಳಲ್ಲಿ ವಿಶ್ವಾಸವಿಲ್ಲದಿದ್ದರೆ, ನನಗಾದರೂ ಎಲ್ಲಿ ಬೇಕು? ಎಂದು ಪೂರ್ಣವಿರಾಮ ಹಾಕಬೇಕೆಂದಿದ್ದೆ. ಜ್ಯೋತ್ಸ್ನಳೇ ಅತ್ತೂ ಕರೆದೂ ಈ ಪತ್ರ ಬರೆಯುವಂತೆ ಮಾಡಿದ್ದಾಳೆ.

◆ ◆ ◆

೨೨. ಆತ್ಮೀಯರ ಆತಿಥ್ಯ

ಈ ಸಲದ ಹೊನ್ನಾವರದ ಭೇಟಿ ಚಿಕ್ಕದಾಗಿದ್ದರೂ ಸ್ಮರಣೀಯವಾಗಿತ್ತು. ಗಜಾ, ತುಳಸೀದಾಸ, ಪ್ರದೀಪರು ರಾಶಿ ರಾಶಿಯಾಗಿ ಮೀನು ಖರೀದಿಸಿ ತರುತ್ತಿದ್ದರು. ಅವನ್ನು ಸ್ವಚ್ಛಮಾಡಿ ಕೊಯ್ದು, ತೊಳೆದು ಸಿದ್ಧ ಮಾಡಿದ ಮೇಲೆ ಅದಕ್ಕೆ ಬೇಕಾಗುವ ವಿವಿಧ ಮಸಾಲೆಗಳ ರೆಸಿಪಿ ಹೇಳಿ ಮಾಡಿಸಿ, ಪಳದ್ಯ ಮಾಡುವ, ಅಥವಾ ಹುರಿಯುವ ಕೆಲಸ ನನ್ನದು. ಅಂತೆಯೇ ಮತ್ಸ್ಯಪ್ರಕಾರಗಳಲ್ಲಿ ಸಿಂಹಪಾಲು ನನಗೇ ಮೀಸಲು! ಒಂದು ದಿನ ಗಜಾನು ಇನ್ನೂ ಉಸಿರಾಡುವಷ್ಟು ತಾಜಾ ಇದ್ದ 'ಶೆವಟೊ'ವನ್ನು ಅರವತ್ತೈದು ರೂಪಾಯಿ ಕೊಟ್ಟು ತಂದಿದ್ದನು. ಎಂಥ ಸ್ವಾದಿಷ್ಟವಾಗಿತ್ತು!

ಈ ರವಿವಾರ ರಾಶಿ ರಾಶಿ ಪಾಂಪ್ಲೇಟ್, ಇಸವಣ, ಸುಂಗಟಗಳನ್ನು ಕಾಸರಕೋಡಿನಲ್ಲಿ ತುಳಸಿದಾಸನು ಖರೀದಿಸಿ ತಂದಿದ್ದನು. ಅವುಗಳ ಹೊಸ ಹೊಸ, ಕೆಡದಂತಹ ವ್ಯಂಜನಗಳನ್ನು ಪ್ರಯೋಗದಿಂದ ಯೋಜಿಸಲು ಕಲಿತೆ. ತಾಜಾ ಬಂಗುಡೆಗಳಿಗೆ ಬೆಳ್ಳುಳ್ಳಿ, ಕೋತಂಬರಿ, ಹುಣಿಸೆ ಹಣ್ಣು, ಮೆಣಸಿನ ಕಾಯಿ ರುಬ್ಬಿ ಸವರಿ ಇಟ್ಟು ಅಕ್ಕಿ ಹಿಟ್ಟಿನಲ್ಲಿ ಹೊರಳಾಡಿಸಿ, ತೆಂಗಿನೆಣ್ಣೆ ಬಿಟ್ಟು ತವಾ ಮೇಲೆ ಹುರಿದವಕ್ಕೆ ಭಾರೀ ಬೇಡಿಕೆ ಬಂದಿತು. ಇನ್ನೊಂದು ದಿನ ದೊಡ್ಡ ಏಡಿಗಳು ಮನೆಗೆ ಬಂದವು. ಅವುಗಳ 'ಸುಕಾ' ಮಾಡಿ ಹೊಡೆದದ್ದಾಯ್ತು. ನನಗೆ ಇವುಗಳೆಲ್ಲ ತಿನ್ನಲು ದೊರೆತವು ಎನ್ನುವದಕ್ಕಿಂತ ಹೆಚ್ಚಾಗಿ, ಇವರೆಲ್ಲ ನನ್ನ ಬಗ್ಗೆ ಅದೆಷ್ಟು ಪ್ರೀತಿ-ಕಳಕಳಿಗಳನ್ನು ಇಟ್ಟುಕೊಂಡಿದ್ದಾರೆಂದು ಸಂತೋಷವಾಯಿತು.

ಗಜಾನು ಒಂದು ಹಿರೋಪೆನ್ ಹಾಗೂ ನೇಲ್‌ಕಟರ್‌ಗಳನ್ನು ಉಡುಗೊರೆಯಾಗಿ ಕೊಟ್ಟಿದ್ದಾನೆ. ಇದಲ್ಲದೇ ಕೆಲವು ತೀರ ಹಳೆ ಕಾಷ್ಟದ ಉಬ್ಬು ಚಿತ್ರಗಳನ್ನು ನೆನಪಿನಿಂದ ತಂದಿದ್ದಾನೆ. ಗುಣವಂತೆಯ ತೇರು, ಹಳೆಯದಾದ್ದರಿಂದ, ಅದನ್ನು ''ಕಂಡೆಮ್'' ಮಾಡಲು, ನಿರ್ಧರಿಸಿದ್ದರು. ಅದಕ್ಕೆ ಜೋಡಿಸಿದ್ದ ಕೊರೆದ ತುಂಡುಗಳನ್ನು ಹೊಳೆಗೆ ಹಾಕಲು ಒಯ್ದಾಗ, ಕೆಲವನ್ನು ಗಜಾನು ಹೊತ್ತು ತಂದ, ತುಂಬ ಚೆನ್ನಾಗಿವೆ. ಹೊನ್ನಾವರದ ತೆಂಗಿನಕಾಯಿ, ಅರ್ಧಕ್ವಿಂಟಲ್ ಅಕ್ಕಿಯೂ ನನ್ನ ಜೊತೆಗೇ ಬೆಂಗಳೂರಿಗೆ ಬಂದವು. ಅಂತೂ ಈ ಬಾರಿಯ ಹೊನ್ನಾವರ ಭೇಟಿ ಲಾಭದಾಯಕವಾಗಿ ಪರಿಣಮಿಸಿತು!

ಇಲ್ಲಿ ಪ್ರತಿದಿನವೂ ಧಾರ್ಮಿಕರು ದೇವಸ್ಥಾನಕ್ಕೆ ಹೋಗುವಂತೆ, ಮಾಲಿ ನಮ್ಮ ಮನೆಗೆ ಬರುತ್ತಾಳೆ. ಬರುವಾಗ ಅಣ್ಣಾ-ವೈನಿ ಅವರಿಗೆ ಏನಾದರೂ ತಿಂಡಿ-ತಿನಸುಗಳನ್ನು ತರದೇ ಇರುವದಿಲ್ಲ. ದಿನ ದಿನ ಶಿರಾ, ಉದ್ದಿನ ದೋಸೆ, ಇಡ್ಲಿಗಳ ರುಬ್ಬಿದ ಹಿಟ್ಟು, ಹಪ್ಪಳ, ಸಂಡಿಗೆ ಇತ್ಯಾದಿ. ಜ್ಯೋತ್ಸ್ನಾ ಪರ ಊರಿಗೆ ಹೋದಾಗಲಂತೂ ಅಣ್ಣನಿಗಾಗಿ ಏನೇನು ಕಟ್ಟಿಕೊಂಡು ಬರುತ್ತಾಳೆಂದು ಹೇಳುವದು ಅಸಾಧ್ಯ! ಅವುಗಳನ್ನು ತಿಂದು ಜೀರ್ಣಿಸಿಕೊಳ್ಳುವದೇ ಅಸಾಧ್ಯವಾದಾಗ ನಾನು

ಅಡಿಗೆ ಮಾಡಿಕೊಳ್ಳುವದು ದೂರವೇ ಉಳಿಯಿತು! ಎಷ್ಟುದಿನ ಮಾಲಿ ಹೀಗೆ ಮಾಡುತ್ತ ಇರಬಹುದು? ಎಂದು ಜ್ಯೋತ್ಸ್ನಾ ಸೋಜಿಗ ಪಟ್ಟಾಗ, ''ಅವಳ ತವರಿನವರು ಅವಳ ಆತಿಥ್ಯ ಪಡೆಯುವದು ತೀರ ವಿರಳವಂತೆ! ಅಂತೆಯೇ ಕೆಲಮಟ್ಟಿಗಾದರೂ ಅದರ ಕೊರತೆಯನ್ನು ತುಂಬಿ ತರಲು, ಈ ರೀತಿಯ ತಿಂಡಿಗಳನ್ನು ತಂದುಕೊಡುತ್ತಾಳೆ. ಕೆಲದಿನಗಳ ಬಳಿಕ ಅವಳಿಗೇ ಇದು ಬೇಸರಕ್ಕೆ ಇಟ್ಟುಕೊಂಡಾಗ, ಅವಳೇ ಮಂಗಳ ಹಾಡಿ ಬಿಡಬಹುದು! ಎಂದು ಸಮಾಧಾನ ಹೇಳಿದೆ. ಅವಳ ಮಗ ಇದ್ದದ್ದು ಬಿದ್ದದ್ದು ತೀರ ತೀರ ಸಾದಾ ಅಡಿಗೆಯನ್ನು ಯಾಕೆ ಮಾಮಾ-ಮಾಮಿಗೆ ಒಯ್ದುಕೊಡುತ್ತೀ?'' ಎಂದು ಮೂದಲಿಸಿದನಂತೆ. ಚಿಕನ್, ಮಟನ್, ಬಿರಿಯಾನಿ, ಮೀನುಗಳಷ್ಟೆ ಕೊಡ - ತರುವ ಅಡಿಗೆಗಳು ಎಂದು ಅವನು ನಂಬಿದಂತಿದೆ!

*   *   *

ಎಚ್. ವಿ. ಕೃಷ್ಣಮೂರ್ತಿ ಅವರೊಂದಿಗೆ ಅವರ ಊರಾದ ಹೂಗೊಪ್ಪಲಿಗೆ ಹೋಗಿದ್ದೆ. ತಾಳಗುಪ್ಪಾದ ಹತ್ತಿರ ಅದೊಂದು ಚಿಕ್ಕ ಹಳ್ಳಿ. ನಾಲ್ಕು ಹವ್ಯಕರ ಮನೆಗಳು. ಅವುಗಳಲ್ಲಿ ಒಂದು ಕೃಷ್ಣಮೂರ್ತಿಯವರದು. ಜನಸಂಖ್ಯೆ ಹೆಚ್ಚಾಗಿ ಕೃಷಿಕ ನಾಮಧಾರಿಗಳದ್ದೇ. ಅವರೆಲ್ಲ ಕಾರ್ತಿಕ ಹುಣ್ಣಿಮೆಯ ಭೂಮಿ ಪೂಜೆಯನ್ನು ಬಲು ಉತ್ಸಾಹದಿಂದ ನೆರವೇರಿಸುತ್ತಾರೆ. ಮನೆಗಳನ್ನೆಲ್ಲ ಸಾರಿಸಿ ರಂಗವಲ್ಲಿಯಿಟ್ಟು ಬೆತ್ತದ ಬುಟ್ಟಿಗಳಿಗೆಲ್ಲ ಅಕ್ಕಿಹಿಟ್ಟಿನಿಂದ ಸುಂದರವಾದ ಚಿತ್ತಾರಗಳನ್ನು ರಚಿಸುತ್ತಾರೆ. ಮಸಾಲೆ ಅನ್ನ, ಸೊಪ್ಪಿನ ಪಲ್ಯ ಮುಂತಾದ್ದನ್ನು ಅವುಗಳಲ್ಲಿಟ್ಟು ನಸುಕಿನಲ್ಲಿಯೇ ಹೊಲಗಳಿಗೆ ಹೋಗಿ ಭೂಮಿ ತಾಯಿಗೆ ಉಣಬಡಿಸುವ ಪದ್ಧತಿ ಕುತೂಹಲಕಾರಿಯಾಗಿದೆ. ಆಮೇಲೆ ಮನೆ ಮನೆಯವರೆಲ್ಲ ಹೊಸ ಬಟ್ಟೆ ಧರಿಸಿ, ತಂತಮ್ಮ ಹೊಲಗಳಲ್ಲಿ ಹಬ್ಬದೂಟ ಮಾಡುತ್ತಾರೆ. ಕೃಷಿಕರ ಈ ಹಬ್ಬವನ್ನು ಹೋಮ ಹವನಗಳನ್ನು ಮಾಡುವ ಹವ್ಯಕರೂ ತಮ್ಮದನ್ನಾಗಿಸಿದ್ದು ವೈಶಿಷ್ಟ್ಯ! ನಾವೆಲ್ಲ ಕೃಷ್ಣಮೂರ್ತಿಯವರ ಅಡಿಕೆತೋಟದಲ್ಲಿ ಸವತೆಕಾಯಿ ಕಡುಬಿನ ಊಟ ಮಾಡಿ ತೇಗಿದೆವು. ನಾನು ಅಲ್ಲಿದ್ದ ನಾಲ್ಕು ದಿನ ವಿವಿಧ ಪ್ರಕಾರದ ಅಡಿಗೆ ಮಾಡಿ ಬಡಿಸಿದರು. ಇತರ ಕುಟುಂಬದವರೂ ಆಮಂತ್ರಿಸಿ ಯಥೇಷ್ಟ ಆತಿಥ್ಯ ಮಾಡಿದರು. ಈ ಅವಕಾಶ ಹುಸಿಹೋಗಗೊಡದೇ, ಅವರಲ್ಲಿರುವ ಹಳೇ ಆಭರಣ, ನಾಣ್ಯಗಳು, ಪಾತ್ರೆ ಪಡಗ, ತಾಳೇ ಗರಿ, ಕಡತಗಳ ಛಾಯಾಗ್ರಹಣ ಮಾಡಿದೆ. ಕೇರಳದಿಂದ ಬಂದು ಹೂಗೊಪ್ಪಲಿನಲ್ಲಿ ಬೀಡು ಬಿಟ್ಟ ಒಂದು ಕುಟುಂಬದ ವಂಶಾವಳಿಯ ವಿವರಗಳನ್ನು ಪಡೆಯುವಲ್ಲಿ ಸಕಲ ಸಹಾಯ ಮಾಡುವದಾಗಿ ಆಶ್ವಾಸನೆ ಪಡೆದಿದ್ದೇನೆ!

ನಾಡಕಲಿಸೆಯ ಹೊಯ್ಸಳ ಕಾಲೀನ ನೀಲಕಂಠೇಶ್ವರ ದೇವಾಲಯ ಹಾಗೂ ಇತರೆಡೆ ಅಪರೂಪದ ಉಬ್ಬು ಶಿಲ್ಪಗಳಿದ್ದುವನ್ನೆಲ್ಲ ಕ್ಲಿಕ್ಕಿಸಿದೆ. ಅದೇ ಹಳ್ಳಿಯಲ್ಲಿ ಕೃಷ್ಣಮೂರ್ತಿಯ ದೊಡ್ಡಮ್ಮನ ಮಗಳ ಮನೆಯಲ್ಲಿ ಭರ್ಜರಿ ಭೋಜನದ ಏರ್ಪಾಡು ಮಾಡಿದ್ದರು. ಅವಳ ಕೃಷಿಕ ಯಜಮಾನರು ಐದು ಎಕರೆ ಅನಾನಸಿನ ತೋಟ

ಮಾಡಿದ್ದಾರೆ. ವಿದೇಶಗಳಲ್ಲಿ ಮಾರಾಟವಾಗುತ್ತಿವೆಯಂತೆ.

* * *

ಇಲ್ಲಿಂದ ಒಯ್ದ ಲಿಂಬೇಹಣ್ಣಿನ ಉಪ್ಪಿನಕಾಯಿಗೆ ಒಳ್ಳೆಯ ಬೇಡಿಕೆ ಬಂದಿತೆಂದು ತಿಳಿದು ಸಂತೋಷವಾಯಿತು. ಬೆಂಗಳೂರು, ಮೈಸೂರುಗಳಿಂದ ಅಮೇರಿಕೆಗೆ ಹೋಗುವ, ನಿನ್ನ ಖಾಸ ಗೆಳೆಯರಿದ್ದರೆ ತಿಳಿಸು. ಇನ್ನಷ್ಟು ಉಪ್ಪಿನಕಾಯಿಯನ್ನು ಮಾಡಿ ಕಳಿಸಿಕೊಡುತ್ತೇನೆ. ಅಮೇರಿಕೆಯಲ್ಲಿ ಬೇಡೇಕರ ಮತ್ತು ಇತರ ಕಂಪನಿಗಳ ಉಪ್ಪಿನಕಾಯಿ ಸಿಕ್ಕೇ ಸಿಗುತ್ತದೆ. ನ್ಯೂಯಾರ್ಕ ನಗರದಲ್ಲಿ ಸಿಕ್ಕ ಹಲವಾರು ಭಾರತೀಯ ಮಸಾಲೆಯ ಸಾಮಾನುಗಳು ಬರ್ಮಿಂಗ ಹ್ಯಾಮದಲ್ಲೂ ಸಿಗುತ್ತಿದ್ದರೆ ಆಶ್ಚರ್ಯವಿಲ್ಲ. ನಿನಗೆ ಕೆಲಸಕೊಡದ ಮೊಟೇಲ ಮಾಲಕನಿಗೆ ವಿಚಾರಿಸಿದರೆ ವಿವರಗಳು ತಿಳಿಯಬಹುದು!

ನಾನು ಹಾಕಿದ ಲಿಂಬೇಹಣ್ಣಿನ ಉಪ್ಪಿನಕಾಯಿ ಹೊನ್ನಾವರದ ಮಕ್ಕಳಿಗೆ ಭಾರಿ ಪ್ರೀತಿ ಗೊತ್ತೆ? ಪ್ರತಿ ಊಟಕ್ಕೂ ಹೋಡಬಾಪ್ಪಾರ ಉಪ್ಪಿನಕಾಯಿಯ ಹೋಳು ಕೇಳಿ ಹಾಕಿಸಿಕೊಂಡು ಚೀಪುತ್ತಿದ್ದುದನ್ನು ಕಂಡಾಗ, ಮಾಡಲು ವಹಿಸಿದ ಶ್ರಮ ಸಾರ್ಥಕವಾಯಿತು, ಅನಿಸುತ್ತಿತ್ತು. ತಾಯಂದಿರು ಅದರಲ್ಲಿಯ ಹಸಿಮೆಣಸಿನಕಾಯಿ ಇಷ್ಟಪಡುತ್ತಾರೆ. ಮೊನ್ನೆ ಮುಲ್ಕಿಯವರು ಕೇಳಿ ಒಯ್ದ ಭರಣಿಯನ್ನೆ ರೆಫ್ರಿಜಿರೇಟರಿನಲ್ಲಿಟ್ಟು ಸ್ವಲ್ಪ ಸ್ವಲ್ಪವೇ ಬಳಸುತ್ತಿದ್ದಾರಂತೆ. ಅಮೇರಿಕೆಯಲ್ಲಿ ಕ್ಯಾನ್ ಮಾಡಿದ ಬೇಯಿಸಿದ ಹಲವಾರು ಕಾಳು ಹಾಗು ಬೆಳೆಗಳು ಸಿಗುತ್ತವೆ. ಅದಕ್ಕೆ ಈರುಳ್ಳಿ ಒಗ್ಗರಣೆ, ಉಪ್ಪು, ಖಾರ, ಲಿಂಬೇರಸ ಸೇರಿಸಿದರೆ ಒಳ್ಳೆ ಹುಳಿಯಾಗುತ್ತದೆ. ಮುಳ್ಳುರಹಿತ ಕ್ಯಾನ್ಡ್ 'ಟ್ಯೂನಾ' ಇಲ್ಲವೇ ಮಾಂಸ ಹುರಿದು ಅನ್ನಕ್ಕೆ ಸೇರಿಸಿದರೆ ಪಲಾವ್ ಆಗುತ್ತದೆ. Minced meatಗೂ ಈರುಳ್ಳಿ, ಬೆಳ್ಳುಳ್ಳಿ, ಹಸಿವಠಾಣೆ ಮುಂತಾದವನ್ನು ಹುರಿದು ಸೇರಿಸಿ ಉಪ್ಪುಖಾರ ಹಾಕಿದರೆ 'ಖೀಮಾ' ಆಗುತ್ತದೆ. ಬ್ರೆಡ್ ಜೊತೆ, ಅನ್ನದ ಜೊತೆ ತಿನ್ನಬಹುದು. ನಿನ್ನ ಸ್ನೆಹಿತರಾರಾದರೂ ಹೋಗುವವರಿದ್ದರೆ ಮಸಾಲೆಪುಡಿಗಳನ್ನು ಕಳಿಸಿಕೊಡುತ್ತೇನೆ. ನಾಲಿಗೆಯ ರುಚಿಯ ಅಡಿಗೆ ಮಾಡಿಕೊಳ್ಳಲು ಅಲ್ಲಿ ವೇಳೆಯ ಅಭಾವವೆಂದು ನನಗೆ ಗೊತ್ತು. ಆದರೂ ಎಂದಾದರೊಮ್ಮೆ ನಾಲಿಗೆಯನ್ನು ತೃಪ್ತ ಪಡಿಸಿಕೊಳ್ಳಬೇಕಲ್ಲ? ಸುಲಭದಲ್ಲಿ ರುಚಿಯನ್ನು ಪಡೆಯಲು ಸಾಧ್ಯ!

ಅಮೇರಿಕೆಯ ಪೌಷ್ಟಿಕ ಆಹಾರ ಸೇವಿಸಿಯೇ ನಾನು ದಪ್ಪವಾಗಲು ಪ್ರಾರಂಭಿಸಿದೆ. ನಿನ್ನ ತೂಕವು ಹೆಚ್ಚಾದರೆ ಚಿಂತೆಯಿಲ್ಲ. ಆದರೆ ಹೊಟ್ಟೆ ಬಾರದಂತೆ ನೋಡಿಕೋ. ಒಮ್ಮೆ ಹೊಟ್ಟೆ ಬಂದರೆ ಕರಗಿಸುವದು ತುಂಬ ಕಷ್ಟ! ನೀನು ದಪ್ಪವಾದಾಗ ಹೇಗೆ ಕಾಣಿಸುತ್ತಿ? ಎಂದು ಜ್ಯೋತ್ಸ್ನಾಳಿಗೆ ನೋಡುವಂತಾಗಲು ಒಂದು ಫೋಟೋ ಕಳಿಸು.

◆ ◆ ◆

೨೩. ನಗರದ ನಿಸರ್ಗ

ಈ ದಿನಗಳಲ್ಲಿ ನಮ್ಮ ಮನೆಯ ಸುತ್ತಮುತ್ತಲು ಬಂಡಿಪುರ - ನಾಗರಹೊಳೆಯ ವಾತಾವರಣವಿದೆ. ಮಲ್ಲೇಶ್ವರಂ, ಕೆಲ ರಸ್ತೆಗಳ ಉದ್ದ-ಅಗಲಕ್ಕೂ ಅರಣ್ಯ ಖಾತೆಯವರು ನೆಟ್ಟು ಬೆಳೆಸಿದ ಗುಲ್‌ಮೊಹರ ಮರಗಳು ನವವಧುವಿನಂತೆ ಅಸಂಖ್ಯಾತ ಬಿಳಿ, ಕೇಸರಿ, ರಕ್ತವರ್ಣ ಹೂಗಳನ್ನು ಹೊತ್ತುಬಳಕುತ್ತ, ನಾಚುತ್ತ ನಿಂತಿವೆ. ಮರಗಳು ರಸ್ತೆ ಅಂಚಿನಲ್ಲಿ ನಿಂತರೂ, ಅವುಗಳ ರೆಂಬೆಗಳು ನಮ್ಮ ಮನೆಯ ಗ್ಯಾಲರಿಗೂ ಕೈಚಾಚಿ ಬಂದಿವೆ. ಒಂದು ಟೊಂಗೆಯಂತೂ ಅಸಂಖ್ಯಾತ ಹೂಗಳನ್ನು ತಳೆದು ನಮ್ಮ ಕೈಗೆ ಎಟಕುವಷ್ಟು ವಾಲಿದೆ. ಈ ಮರ, ಹೂಗಳನ್ನು ನೋಡುತ್ತ ಕೂಡ್ರುವದೇ ಸುಖ! ಈಗ ಕಾಗೆಯಂತಹ ನಯನಾಜೂಕು ಅರಿಯದಂತಹ ಹಕ್ಕಿಗಳೂ ರಸಿಕತೆಯನ್ನು ವ್ಯಕ್ತಪಡಿಸಲಾರಂಭಿಸಿವೆ. ಎಲೆಗಳ ಮರೆಯಲ್ಲಿ ಅವಿತು, ಕುಳಿತು, ತೀರ ಮೆಲು ಧ್ವನಿಯಲ್ಲಿ ಪ್ರಿಯತಮೆಯನ್ನು ಕೂಗಿ ಕರೆಯುತ್ತವೆ. 'ಅವಳು' ಕಿವಿಯ ಮೇಲೆ ಹಾಕಿಕೊಳ್ಳದಿದ್ದಾಗ, ಕಾಕರಾಜ ಗರಿಯಬಿಚ್ಚಿ, ಪುಚ್ಛ ಹರವಿ, ನವಿಲನ್ನು ನೆನಪಿಗೆ ತರುವಂತೆ ನರ್ತಿಸಿತು. ತಂದೆಯಾಗಲಿರುವ ಕಾಕರಾಜ, ತನ್ನ ಭಾವಿ ಸಂತತಿಗೆ ಗೂಡುಕಟ್ಟಲು ಏನು ಬಳಸುತ್ತದೆ, ಏನು ಇಲ್ಲ, ಎಂದು ಹೇಳಲು ಬರುವದಿಲ್ಲ. ಒಂದು ಕಾಗೆ ಜಡ್ಡಾಗಿ ಮಲಗಿದ ಎಮ್ಮೆ ಕರುವಿನ ಕೂದಲುಗಳನ್ನು ಕಿತ್ತು, ಕಿತ್ತು ಒಯ್ಯುತ್ತಿರುತ್ತದೆ. ಇನ್ನೊಂದು ರಸ್ತೆ ಬದಿಗೆ ನಿಂತ ಕತ್ತೆಮರಿಯ ಬೆನ್ನನ್ನೇ ಕುಕ್ಕಲಾರಂಭಿಸಿತು!

'ಶಶಿಕಿರಣ'ದ ಸುತ್ತಮುತ್ತಲಿರುವ ವೃಕ್ಷಗಳು, ಗೂಡುಕಟ್ಟಲು ಅಷ್ಟೊಂದು ಸುರಕ್ಷಿತವಲ್ಲವೆಂದು, ಅವು ನಗರಕರರ ಬೃಹತ್ ಮಾವಿನ ಮರವನ್ನು ತಮ್ಮದನ್ನಾಗಿ ಮಾಡಿಕೊಂಡಿವೆ. ಅವುಗಳ ಗೂಡಿನಲ್ಲಿ ಮೊಟ್ಟೆ ಇಡಲು ಹವಣಿಸುವ ಕೋಗಿಲೆಗೂ ಕಾಗೆಗಳಿಗೂ ಆಗಾಗ ಘೋರ ವಾಗ್‌ಯುದ್ಧವಾಗುತ್ತಿರುತ್ತದೆ. ಇಷ್ಟಾದರೂ ಕಾಗೆ, ಗಂಡು ಕೋಗಿಲೆಯನ್ನು ಓಡಿಸಿಕೊಂಡು ಹೋದಾಗ. ಹೆಣ್ಣು ತನ್ನ ಮೊಟ್ಟೆಯನ್ನು ಕಾಗೆಯ ಗೂಡಿನಲ್ಲಿ ಸೇರಿಸದೇ ಬಿಡುವದಿಲ್ಲ. ಗೂಡುಗಳು ಇರುವ ಮರದ ಹತ್ತಿರ ಹದ್ದು ಹಾರಾಡಿದರೆ, ಕಾಗೆಗಳ ಸೈನ್ಯವೇ ಅದನ್ನು ಅಟ್ಟಿಸಿಕೊಂಡು ತಮ್ಮ ಸರಹದ್ದನ್ನೇ ದಾಟಿ ಹೋಗುವಂತೆ ಮಾಡುತ್ತವೆ. ಕೆಂಪು ಮೂತಿಯ ಕೋತಿಗಳು ಹಿಂಡು ಕಟ್ಟಿಕೊಂಡು 'ಹಿಂದಿವಾಲಾ'ರಿಗೆ ದರ್ಶನ ಕೊಟ್ಟು, ಅವರು ನೀಡುವ ಬಾಳೆಹಣ್ಣು ಮಿಠಾಯಿಗೆ ಆಸೆ ಪಟ್ಟು ಬರುವದುಂಟು. ಅಂತಹ ಸಮಯದಲ್ಲಿ ಮೊಟ್ಟೆಗಳನ್ನು ಕಾಯುತ್ತಿರುವ ಕಾಗೆಗಳು, ಅವುಗಳ ಮೈಗೆಲ್ಲ ಕುಕ್ಕಿ ಪಲಾಯನ ಮಾಡುವಂತೆ ಮಾಡುವವು. ಇಂದಿನ ದಿನಗಳಲ್ಲಿ ಕೋಗಿಲೆಗಳಿಗೆ ಕಾಮಜ್ವರದಿಂದ ರಾತ್ರಿಯಿಡೀ ನಿದ್ರೆ ಬರುವಂತೆ ಕಾಣುವದಿಲ್ಲ. ಅಂತೆಯೇ ವಿಪರೀತ ಸೆಕೆಯಿಂದ ನಿದ್ರೆಬಾರದವರಿಗೆ ಸ್ವಲ್ಪ ಜೊಂಪು ಹತ್ತುವದರಲ್ಲಿ ಇದ್ದಾಗ, ಈ ಕೋಕಿಲವೃಂದ ತಮ್ಮ ಪ್ರಣಯಕಲಹ,

ಪ್ರೇಮ ಗೀತಗಳನ್ನು ಪ್ರಾರಂಭಿಸಿ ಬಿಡುವವು! ಬೆಳಗಿನ ಜಾವವೇ ಗಂಡು ಬಾರ್‌ಬೆಟ್‌ಗಳು ಮರಗಳ ತುತ್ತ ತುದಿಯೇರಿ, ನಮಾಜ್‌ಗೆ ಬರಲು ಕರೆ ಕೊಡುವ 'ಮುಆಜ್ಜಿನ್' ನಂತೆ, ಕೊಟರ್! ಕೊಟರ್, ಎಂದು ಕರೆ ಕೊಡಲಾರಂಭಿಸುವವು. ಒಂದು ಕಿರಚಲಾರಂಭಿಸಿದರೆ ಹತ್ತಾರು ಧ್ವನಿಕೂಡಿಸುವದು, ಅವುಗಳ ಅಭ್ಯಾಸ. ಇಂದಿನ ದಿನಗಳಲ್ಲಿ ನೆಲದಲ್ಲಿ, ಸುದೀರ್ಘ ಸುಖನಿದ್ರೆಯಲ್ಲಿದ್ದ ಸಾಯಕೆಡಾಗಳು ಮೇಲಕ್ಕೆ ಬಂದು ಏಕಪ್ರಕಾರವಾಗಿ ಕಿರ್ ಗುಡುತ್ತಿರುತ್ತವೆ. ಬೆಳಗಿನ ನಾಲ್ಕೂಮುಕ್ಕಾಲು ಗಂಟೆಗೆ, ನಾವಿಬ್ಬರೂ ತಿರುಗಾಟಕ್ಕೆ ಹೊರಟಾಗ, ದೀಪಗಳೂ ಇಲ್ಲದಾಗ, ಯಾವುದೋ ಅರಣ್ಯದಲ್ಲಿ ಇದ್ದ ಭಾಸವಾಗುತ್ತದೆ. ಮುಂಜಾನೆಯ ಆರುಗಂಟೆಯ ನಂತರ, ಮಲ್ಲೇಶ್ವರಂ, ಬೇರೆಯೇ ರೂಪ ತಳೆದುಬಿಡುತ್ತದೆ. ಅಂತೆಯೇ ನಮ್ಮ ಮುಂಜಾನೆಯ ತಿರುಗಾಟಕ್ಕೆ ಎಂತಹ ಬೆಲೆಯನ್ನು ತೆತ್ತಲೂ ಸಿದ್ಧರಿರುತ್ತೇವೆ.

ಇಂತಿ ನಿನ್ನ ಬಾಪ್ಪಾ

◆ ◆ ◆

೨೪. ನಿನ್ನ ಬಾಲ್ಯದ ನೆನಪು

ಸುಮಿತ್ರಾ, ನಿನ್ನನ್ನು ನೆನಪಿಸಿಕೊಂಡದ್ದರಿಂದ, ಅವಳ ಹಿಂದಿನ ಪತ್ರಗಳನ್ನು ಓದಲಾರಂಭಿಸಿದಾಗ ಅವಳ ೯-೬-೧೯೬೯ರ ಪತ್ರದಲ್ಲಿ ನಿನ್ನ ಬಗ್ಗೆ ಬರೆದದ್ದು ತುಂಬಾ ಸ್ವಾರಸ್ಯಕಾರಿ ಅನಿಸಿತು. ''ವಿಕಾಸನು ಇಲ್ಲಿ (ಹೊನ್ನಾವರದಲ್ಲಿ) ಆರಾಮಾಗಿದ್ದಾನೆ. ಇಲ್ಲಿ ಬಂದ ಮೇಲೆ ಮೈಯಿಂದ ಸುಧಾರಿಸಿದ್ದಾನೆ. ಅವನಿಗೆ ಯಾವುದೇ ಒಂದು ವಸ್ತು ಒಂದೇ ಒಂದು ಸಲ ಹೇಳಿದರೆ ಸರಿ, ನೆನಪಿನಲ್ಲಿ ಇರುತ್ತದೆ. ನನ್ನ ಮದುವೆಯ ಹೊತ್ತಿನಲ್ಲಿ ಅವನು ನನ್ನನ್ನು ನೋಡಿದ್ದು ಎಲ್ಲರನ್ನೂ ಅಕ್ಕ ಎಂದು ಕರೆಯುತ್ತಾರೆ. ಮಾಲಿ, ಮಂಗಲಾ, ಪುಷ್ಪ, ಸುಮಿತ್ರಾರನ್ನು ಬೇರೆ ಬೇರೆಯಾಗಿ ನೆನಪಿಡುತ್ತಾನೆ. ನನ್ನವರನ್ನು ಭಾವಜಿ, ಭಾವಜಿ, ಎಂದು ಕರೆಯಹತ್ತಿದ್ದ. ತುಳಸಿದಾಸನನ್ನಂತೂ ತುಂಬಾ ಹಚ್ಚಿಕೊಂಡು ಬಿಟ್ಟಿದ್ದಾನೆ. ಬೆಳಿಗ್ಗೆ ಎದ್ದ ಕೂಡಲೇ ಕಾಕಾ? ಕಾಕಾ? ಎಂದು ಅವನನ್ನು ಹುಡುಕುತ್ತಾನೆ. ಎಲ್ಲರನ್ನೂ ಕೇಳುತ್ತಾನೆ. ಅವನೇ ಹಲ್ಲು ತಿಕ್ಕಬೇಕು. ಅವನೇ ಸ್ನಾನ ಮಾಡಿಸಬೇಕು. ಅವನಿಗೆ ಶಾಲೆಗೆ ಹೋಗಲೂ ಬಿಡುವದಿಲ್ಲ. ವಿಕಾಸನನ್ನು ಅಡಗಿಸಿದಾಗಲೇ ತುಳಸಿದಾಸನು ಶಾಲೆಗೆ ಹೋಗಬೇಕು. ಕೆಲವೊಮ್ಮೆ ಅಳುತ್ತಾನೆ. ರಾತ್ರೆ ಅವನು ಅಭ್ಯಾಸಕ್ಕೆ ಮಾಳಿಗೆಯ ಮೇಲೆ ಹೋಗಿ ಕುಳಿತರೂ ಅಲ್ಲಿಯೇ ಹೋಗುತ್ತಾನೆ. ಮಾವಿನ ಹಣ್ಣು, ಮೀನು ರುಚಿಯಿಂದ ತಿನ್ನುತ್ತಾನೆ.... ಈಗ ಸುಮಾರಷ್ಟು ಮಾತನಾಡಲು ಕಲಿತಿದ್ದಾನೆ. ಯಾರ ಯಾರ ಚಪ್ಪಲಿ ಯಾವುದು? ಸೀರೆ ಯಾವದು? ಎಂದು ಅವನಿಗೆ ಸರಿಯಾಗಿ ಗುರುತು ತಿಳಿಯುತ್ತದೆ. ನಮ್ಮ ಮನೆಯನ್ನು ಎಷ್ಟು ದೂರದಿಂದ ಕೇಳಿದರೂ ಸರಿಯಾಗಿ ಬೊಟ್ಟು ಮಾಡಿ ತೋರಿಸುತ್ತಾನೆ. ದಾರಿಗಳು ಕೂಡ ಸರಿಯಾಗಿ ನೆನಪಿನಲ್ಲಿ ಉಳಿಯುತ್ತವೆ. ಅಂಗಡಿಗೆ ಹೋಗುವ ದಾರಿಯನ್ನು ತೋರಿಸುತ್ತಾನೆ. ಬೇರೆ ದಾರಿಯಿಂದ ಒಯ್ದರೆ, ಈ ರಸ್ತೆ ಅಲ್ಲಾ! ಅಲ್ಲಾ! ಎನ್ನುತ್ತಾನೆ.''

ನನ್ನ ಸಂಗ್ರಹದಲ್ಲಿ ಇರುವ ಹಿಂದಿನ ಪತ್ರಗಳನ್ನು ಸರಿಯಾಗಿ ಸಂಶೋಧಿಸಿದರೆ ನೀನು ಆಮ್ಮಾರ ಗರ್ಭದಲ್ಲಿದ್ದಾಗ ಪ್ರಾರಂಭಿಸಿದ ಚಟುವಟಿಕೆಗಳಿಂದ ಪ್ರಾರಂಭಿಸಿ ಇಂದಿನವರೆಗೆ ಎಲ್ಲವನ್ನೂ ಸರಿಯಾಗಿ ಜೋಡಿಸುವಂತೆ ಇದೆ. ಹೊಟ್ಟೆಯಲ್ಲೇ ನೀನು ದೀಪಾವಳಿಗೆ ಪಟಾಕ್ಷಿ ಹಾರಿಸಿದಾಗೊಮ್ಮೆ ಬೆಚ್ಚಿ ಬೀಳುತ್ತಿದ್ದಿ. ಆಗ ಜ್ಯೋತ್ಸ್ನಾಳು, ಮುಂದಿನ ದೀಪಾವಳಿಗೆ ನೀನೇ ಪಟಾಕ್ಷಿ ಸುಡುವಿಯಂತೆ. ಸದ್ಯ ಬೆಚ್ಚಗೆ ಮಲಗಿರು! ಎಂದು ತಿಳಿಹೇಳುತ್ತಿದ್ದಳಂತೆ. ನೀನು ಹೊನ್ನಾವರದಲ್ಲಿದ್ದಾಗ ಯಾರಿಂದ ಪತ್ರ ಬಂದರೂ ಅದರಲ್ಲಿ ನಿನ್ನ ಕುರಿತು ಪ್ರಸ್ತಾಪವಿಲ್ಲದೇ, ಆ ಪತ್ರ ಮುಗಿಯುತ್ತಲೇ ಇರಲಿಲ್ಲ. ನಂತರ ನೀನು ಬರೆದ ಪತ್ರಗಳಲ್ಲಿ ಅದೆಷ್ಟೊ ಮೋಜಿನ ವಿಷಯಗಳು ಇರುತ್ತಿದ್ದವು. ಹಿಂದಿನ ಪತ್ರಗಳನ್ನು ಓದಲು ಮೋಜಾಗಿರುತ್ತದೆ. ಆದರೆ ಅವನ್ನು ಎಷ್ಟು ಜನ ಕಾದಿರಿಸುತ್ತಾರೆ?

ವಿಕಾಸ! ನಿನಗಿಂದು ವರುಷಗಳು ತುಂಬಿದವು ಎರಡು ★
ಎಲ್ಲೆಲ್ಲೂ ನಿನ್ನ ಆಟಿಗೆಗಳ ಹರಡು!
ನಮಗೆಲ್ಲ ನೀ ಅತಿ ಹರುಷ ತಂದಿರುವೆ
ಆದರೇನು? ನನ್ನಿಂದ ನೀ ಬಲು ದೂರ ಇರುವೆ.
ಅಮ್ಮ ಆಸ್ಪತ್ರೆಯಲ್ಲಿ, ಅಪ್ಪ ರೈಲಿನಲ್ಲಿ
ಹಬ್ಬವಿಲ್ಲ, ಸಂಭ್ರಮವಿಲ್ಲ, ನಿನ್ನ ನೆನಪೇ ಸಡಗರ!
ನಿನ್ನ ಕೀರ್ತಿ ಹರಡಿದೆ ದಿಲ್ಲಿಯಿಂದ ಬೆಂಗಳೂರವರೆಗೆ
ನಿನಗಾಗಿ ಹಂಬಲಿಸುವ ತಂದೆಯಿಂದ ಅಜ್ಜನವರೆಗೆ
ಮಗು, ಬೆಳೆಯಬೇಕು ನೀನು ಬಿಡದೆ ಹೆಮ್ಮರವಾಗಿ
ನೀಡಬೇಕು ನೆರಳ ಸಾವಿರ ಹಾದಿ ಹೋಕರಿಗಾಗಿ!
ರೇಲು ತಪ್ಪಿದೆ. ಒಬ್ಬನೇ ಕೂತಿರುವೆ ದಿಲ್ಲಿಯ ರೇಲು ನಿಲ್ದಾಣದಲಿ
ಲೆಕ್ಕವಿಲ್ಲದ ಪಯಣಿಗರು ಓಡುತಿಹರು ಅಲ್ಲಿಂದ ಇಲ್ಲಿ, ಇಲ್ಲಿಂದಲ್ಲಿ!
ನಾನೂ ಹೊರಟಿರುವೆ ಅರಿಯದಾ ನಾಡಿಗೆ ಅತ್ತಿಂದ ಇತ್ತ ಎಲ್ಲಿಗೋ!
ಆದರೂ ನೆಲಸಿರುವೆ ನೀನು ಸದಾ ನನ್ನೊಡನೆ
ಮನದಲಿ, ತಿರುಗುವ ಸಂಸಾರ ಚಕ್ರದೊಡನೆ.

ಈ ಪತ್ರ ಬರೆಯಲು ಪ್ರಾರಂಭಿಸುತ್ತಿದ್ದಂತೆ, ನನ್ನ ನೆನಪಿನ ದೋಣಿ ಮೂವತ್ತು ವರ್ಷಗಳ ಹಿಂದೆ ಓಡಲಾರಂಭಿಸಿದೆ. ಆಮ್ಮಾಳ ಚೊಚ್ಚಲು ಬಾಣಂತನದಲ್ಲಿಯೇ ಮಗನನ್ನು ಪಡೆದ ಉಲ್ಲಾಸ. ಮಗನಿಗೆ ನಾನು ಸೂಚಿಸಿದ ಹೆಸರಿನದೇ ನಾಮಕರಣ. 'ವಿಕಾಸ್ ಸಿಂಗ್!' ಎಂದು ಜೈಪುರದಲ್ಲಿ, ವೀರರ ನಾಡಾದ ರಾಜಸ್ಥಾನದಲ್ಲಿ ಹುಟ್ಟಿದ ಮಗು ವೀರಾಧಿವೀರನಾಗಲಿ! ಎಂದು ಬಾಬಾ ಹಾರೈಸಿದ್ದರು. ಅಂದಿನ ನಮ್ಮ ಸಡಗರ, ಸಂಭ್ರಮಗಳಿಗೆ ಪಂಚಮಹಾಭೂತಗಳೇ ಸಾಕ್ಷಿಯಾಗಿದ್ದವು. ಮಗ ತಂದೆಯಂತೆ ಶಾಂತಿ ಪ್ರಿಯ! ಹಟಮಾರಿಯಲ್ಲ, ಸಿಟ್ಟು ಮಾಡದೇ ಸರಿಕರನ್ನು ಸಂಭಾಳಿಸುತ್ತಾನೆ! ಎಂದು ಕಾಕಿಯವರು ಭವಿಷ್ಯ ನುಡಿದಿದ್ದರು. ಗುಂಡಗೆ, ಮುದ್ದು ಮುದ್ದಾಗಿದ್ದ ವಿಕಾಸ ಅಕ್ಕಪಕ್ಕದವರ ಅತಿ ಅಕ್ಕರೆಯಿಂದ ಬೆಳೆಯಲಾರಂಭಿಸಿದ. ಅವನ ಚಟುವಟಿಕೆಗಳ ಬಗ್ಗೆ ಆಪ್ತೇಷ್ಟರಿಗೆ ಬರೆದದ್ದೇ ಬರೆದದ್ದು, ಆತನ ಹಲವು ಭಂಗಿಗಳನ್ನು ಕ್ಲಿಕ್ಕಿಸಿ, ದೂರದೂರದ ನೆಂಟರಿಗೆಲ್ಲ ಕಳಿಸಿದ್ದೇ ಕಳಿಸಿದ್ದು. ಸಾಕಷ್ಟು ಜನ, ಈ ಪತ್ರಗಳನ್ನು ಛಾಯಾಚಿತ್ರಗಳನ್ನು ರಕ್ಷಿಸಿಕೊಂಡು ಬಂದಿದ್ದಾರೆ.

- - - - - - -

★ ವಿಕಾಸನಿಗೆ ಎರಡು ವರ್ಷ ತುಂಬಿದ ದಿನ ನನ್ನ ಹರ್ನಿಯಾ ಆಪರೇಶನ್ ಆಗಿ ಆಸ್ಪತ್ರೆಯಲ್ಲಿದ್ದೆ. ಅದೇ ರಾತ್ರಿ ಕಾಮತರು ಹೊಸ ನೌಕರಿಯ ಆರ್ಡರ್ ಹೊತ್ತು ಜಯಪುರದಿಂದ ದಿಲ್ಲಿ ಮಾರ್ಗವಾಗಿ ಪ್ಲಾಸಿಗೆ ಹೊರಟಿದ್ದರು. ಜನಜಂಗುಳಿಯ ನಡುವೆ, ಟ್ರೇನು ತಪ್ಪಿಸಿಕೊಂಡಾಗ, ಮುಂದಿನ ಟ್ರೇನಿಗೆ ಕಾಯುತ್ತ ಕುಳಿತ ತಂದೆಯ ಉದ್ಗಾರ. ಇಲ್ಲಿದೆ - ಸಂ -

ಈಗ 'ಶಶಿಕಿರಣ'ದ ಮನೆಯ ಮುಂದಿನ ಬೀದಿಯಲ್ಲಿ ತಾರಾಳನ್ನು ಹೋಲುವ ಹುಡಿಗೆಯೊಬ್ಬಳು. ಒಂದು ವರ್ಷದ ಮಗುವನ್ನು ಸೊಂಟದ ಮೇಲೆ ಎತ್ತಿಕ್ಕೊಂಡು, ಜಗತ್ತಿನ ಪರಿಚಯ ಮಾಡಿಕೊಡುತ್ತ ಆಡಿಸುತ್ತಿರುತ್ತಾಳೆ. ಹೀಗಾಗಿ ಪ್ರತಿದಿನವೂ ನಿನ್ನ ಬಾಲ್ಯವನ್ನು ನೆನಪಿಸುತ್ತಾರೆ - ಆ ಎಳೆಯರು. ಜ್ಯೋತ್ಸ್ನಾಳನ್ನು ಕರೆದು ತೋರಿಸಿದಾಗ, ಆಗಿನ ನಿನಗೂ ಈ ಗುಂಡಗೆ, ಕೆಂಪಗೆ ಇರುವ ಸಿಂಧಿ ಮಗುವಿಗೂ ಇರುವ ಸಾಮ್ಯವನ್ನು ನೆನಪಿಸಿಕೊಂಡು ಅತ್ಯಾಶ್ಚರ್ಯ ಪಟ್ಟಳು!

ರವಿವಾರ ಬಂತೆಂದರೆ ಟೆಲಿಫೋನಿನ ಕಿಂಕಿಣಿ ಸದ್ದಿಗೆ ಕಿವಿಗೊಟ್ಟೇ ಇರುತ್ತೇನೆ. ಎಂಟು ಮೂವತ್ತು ಆಯಿತೆಂದರೆ, ಕಣ್ಣು, ಬುದ್ಧಿ-ಹೃದಯಗಳು ಚುರುಕಾಗಿ ಕಿವಿಯೊಂದಿಗೆ ಸಹಕರಿಸುತ್ತವೆ. ೯ ಗಂಟೆಯಾಯಿತೆಂದರೆ ಎಲ್ಲೋ ದೂರದಲ್ಲಿ ನಿನ್ನ ಧ್ವನಿ ಕೇಳಿಸುತ್ತಿರುವ ಭಾಸ! ಒಂಬತ್ತುವರೆ ಆಯಿತೆಂದರೆ ಇನ್ನೇನು, ವಿಕಾಸನ ಫೋನು ಬರಲಾರದು, ಎಂದು ನಿಟ್ಟುಸುರು ಬಿಟ್ಟು ಕೆಲಸಕ್ಕೆ ತೊಡಗುತ್ತೇನೆ.

ಹೋದ ರವಿವಾರ ವೇಳೆ ಮೀರಿತ್ತು. ಹೆಚ್ಚಿನ ನಿರಾಶೆಯಿಂದ ಅಡಿಗೆ ಮನೆಗೆ ಮರಳಿದ್ದೆ. ಆದರೆ ನಿನ್ನ ಧ್ವನಿ ಕೇಳಿದೊಡನೆ ನಿರುತ್ಸಾಹ ಮಾಯವಾಗಿ ಬಿಟ್ಟಿತು. ಈ ಪತ್ರ ನಿನ್ನ ಜನ್ಮದಿನದಂದು ತಲುಪುತ್ತದೋ ಇಲ್ಲವೋ! ಆದರೂ ನಿನ್ನ ಮುಂಬರುವ ದಿನಗಳು, ಸುಖ-ನೆಮ್ಮದಿಗಳಿಂದ ಕಳೆಯಲಿ, ನಿನ್ನಿಂದ ಹೆಚ್ಚೆಚ್ಚು ರಚನಾತ್ಮಕ ಕಾರ್ಯಗಳಾಗಲಿ, ಎಂದು ಹಾರೈಸುತ್ತೇನೆ.

ಮೊನ್ನೆ ನಿನ್ನ ಹಳೇ ಪುಸ್ತಕ-ಫ್ಯಾಲುಗಳನ್ನು ಜೋಡಿಸಿ ಇಡುತ್ತಿದ್ದಾಗ, ನೀನು ಬರೆದ ''ಸುನೀತ-ಸರಪಣಿ- ಎರಡನೆಯ ಮಣಿ' ಎಂಬ ಕಿರುಪದ್ಯ ದೊರಕಿತು. ಅದರ ಪ್ರತಿಯನ್ನು ಬರೆಯುತ್ತಿದ್ದೇನೆ.

ಶರಾವತಿ ದಡದಲ್ಲಿ ಮುಚ್ಚಂಜೆ (ಮುಸ್ಸಂಜೆ)

ಆಹಾ! ಇದೆಂಥ ಹೊಂಬಣ್ಣದ ಉಸುಕು!
ಮಣ್ಣಲ್ಲಿದ್ದು, ಭೂಮಾತೆಯ ಸುವರ್ಣ ಮುಸುಕು!
ಚಿರತೆಯಂತೆ ಓಡುವ ಹಾಯ್ ಹಡಗಗಳು
ವಿಮಾನದಂತೆ ತೇಲುವ ದೋಣಿಗಳು
ಮೀನಿನಂತೆ ಈಜುವ ಕಿರಿ ನಾವೆಗಳು
ಕಣ್ಮನಗಳನು ಸೆಳೆಯುವವು.
ಕವಿದ ಮಂಕನು ಕಳೆಯುವವು
ಭಯದಿಂ ಓಡುವ ಮೀನುಗಳು
ನಿರ್ಭಯ ಚಲಿಸುವ ಕೂರ್ಮಗಳು
ಕಾರ್ಯ ನಿರತ ಏಡಿಗಳು
ಸನ್ನೆಯ ಮಾಡಿ ಕರೆಯುವವು.

ಅತ್ತಲೊ ಮುಳುಗುವ ಮಣಿ
ಉದಯದ ಹೊಳಪಿನ ಚಂದ್ರಮಣಿ

ದೂರದ ಕಾರ್ಖಾನೆಯ ಚಿಮಣಿ
ಗಳು ಕಣ್ಣಿಗೆ ಹಬ್ಬವ ಕೊಡುತಿಹವು!

ಯಾವುದೋ ಪದ್ಯದಿಂದ ''ಸ್ಫೂರ್ತಿ'' ಪಡೆದು ಇದನ್ನು ಬರೆದಿರಬಹುದಾಗಿದೆ. ಆದರೆ, ಇದನ್ನು ಬರೆದಾಗ ನೀನು ಕೇವಲ ೧೩ ವರ್ಷದ ಬಾಲಕನಿದ್ದಿ. ಆಗ ನಿಸರ್ಗದ ಚೆಲುವು ಗ್ರಹಿಸುವ ಕಣ್ಣು ಇತ್ತು, ವಯಸ್ಸಿಗೆ ಮೀರಿದ ಶಬ್ದ-ಸಂಪತ್ತು ಇತ್ತು. ಬರೆಯುವ ಉತ್ಸಾಹವೂ ಇತ್ತು - ಶಾಲಾಬಾಲಕನಿದ್ದಾಗ, ಕಾಲೇಜಿಗೆ ಬರುವ ಹೊತ್ತಿಗೆ ಇವನ್ನು ಒಂದೊಂದಾಗಿ ಮರೆತು, ಮೈಸೂರು ಇಂಜನಿಯರಿಂಗ್ ಕಾಲೇಜು ಸೇರಿಕೊಂಡಾಗ, ಸ್ನೇಹಿತರೊಂದಿಗೆ ಬರೇ ಇಂಗ್ಲೀಷ್ ಕೊಚ್ಚುತ್ತಿದ್ದ ದಿನಗಳು ನೆನಪಾದವು. ಆದರೆ ಮೊನ್ನೆ ನೀನು ಕಳಿಸಿದ ೧೯೬೩ರ ವರ್ಷದ ನೆನಪಿನಾವಳಿ ಓದಿ, ಕನ್ನಡ ಭಾಷೆಯ ಮೇಲೆ ನಿನ್ನ ಹಿಡಿತ ಇನ್ನೂ ಉಳಿಸಿಕೊಂಡ ಬಗ್ಗೆ ಹೆಮ್ಮೆ-ಸಂತೋಷಗಳು ಮರುಕಳಿಸಿದವು. ನೀನೂ ಒಂದು ಡಾಯರಿ ಬರಿ. ದಿನಾಲು ಬರೆಯಲು ಸಾಧ್ಯವಾಗದಿದ್ದರೂ ಬಿಡುವಿದ್ದಾಗೊಮ್ಮೆ ಬರಿ. ವರ್ಷಗಳ ನಂತರ ಅದು ನಿನ್ನ ಚಿಕ್ಕಪುಟ್ಟ ಸಾಧನೆಗಳನ್ನೂ ಉಲ್ಲೇಖಿಸುವ ಅಪೂರ್ವ ದಾಖಲೆಯಾಗಿ ಉಳಿಯುತ್ತದೆ. ಭೇಟಿ ಮಾಡಿದ ವ್ಯಕ್ತಿಗಳು ಸಂಭವಿಸಿದ ಘಟನೆಗಳು, ಬೆಳೆಸಿಕೊಂಡ ಹಾಬಿಗಳು, ಮುಂತಾದವನ್ನು ಕಿರಿದಾಗಿ ಟಿಪ್ಪಣಿಸದಿದ್ದರೆ ಮನಃಪಟಲದಿಂದ ಬೇಗ ಮರೆಯಾಗಿಬಿಡುತ್ತವೆ. ಹೊರ ದೇಶದಲ್ಲಿದ್ದಾಗ ಪರವೂರಲ್ಲಿದ್ದಾಗ ಪ್ರತಿದಿನವೂ ಹೊಸ ಅನುಭವವೇ! ಇಂದು ತೀರ ಸಾಮಾನ್ಯ ವಿಷಯವೆಂದು ತೋರಿದ್ದು ಮುಂದೊಮ್ಮೆ ಅಪೂರ್ವದ ಘಟನೆಯೆಂದು ಭಾಸವಾಗುವದುಂಟು. ನನ್ನ 'ಕಲಕತ್ತಾ ಡಾಯರಿ' ಓದಿದಾಗೊಮ್ಮೆ ನನಗೇ ಪ್ರತಿಬಾರಿ ಆಶ್ಚರ್ಯವಾಗಿ ಬಿಡುತ್ತದೆ. ಪ್ರತಿದಿನವನ್ನೂ ಸಾರ್ಥಕವಾಗಿ ಬದುಕಿದೆನೇ? ಎಂದು. ಕಳೆದ ದಿನಗಳು ಮರಳಿ ಬರುವದಿಲ್ಲ. ಮಿಂಚಿನ ಘಟನೆಗಳೂ ಅಷ್ಟೆ.

ನೀನು ರೇಖಿಸಿದ ನೆನಪಿನ ದೋಣಿಯಲ್ಲಿ ಮುಂಬರುವ ಕಿರಿಯರು ತೇಲಿ ಆನಂದಿಸುವಂತೆ ಆಗಲಿ!

ನಿನ್ನ ಹಾಸ್ಯ ಪ್ರಜ್ಞೆ ಜೋರಾಗಿರುವದರಿಂದ, ನಿನಗೆ, ಕುಂಚ, ಪೆನ್ಸಿಲ್, ಪೆನ್ನುಗಳ ಹಿಡಿತ ಸಾಧಿಸಿರುವದರಿಂದ, ಬೇರೆಯೇ ಒಂದು ಕಲಾಮಾಧ್ಯಮ (Art-form) ನೀನು ಸಾಧಿಸಬೇಕು, ಎಂಬುದು ನನ್ನ ಕನಸು! ಅದನ್ನು ನನಸಾಗಿಸುವಿಯಲ್ಲವೇ?

ನೀನು ಬರೆದಿರುವ! ಬರೆದಿರಬಹುದಾದ (ಬರೆದಾಗ ನಾನು ಓದಿದ ನೆನಪಿಲ್ಲ!) ಇತರ ಸುನೀತಗಳಿಗಾಗಿ ಹುಡುಕುತ್ತಿದ್ದೇನೆ. ದ. ರಾ. ಬೇಂದ್ರೆ ಅವರು ನಿಧನರಾದಾಗ ನೀನು ಮಾಡಿದ ರೇಖಾಚಿತ್ರ, ಹಾಗೂ ಬರೆದ ಕಿರಿ ಪ್ರಬಂಧ ಸಿಕ್ಕಿದೆ. ನಿನ್ನ ಸ್ಕೂಲಿನಲ್ಲಿ ಅದನ್ನು ಓದಿ ಹೇಳಿ ಎಲ್ಲರ ಮೆಚ್ಚಿಗೆ ಪಡೆದದ್ದು ನೆನಪಿದೆ! ೧೯೬೩ in Retrospeet ಮಾದರಿಯಲ್ಲಿ ನಿನಗೆ ತಮಾಷೆಯಾಗಿ ಕಂಡ ನೋಟಗಳನ್ನು ಜೋಡಿಸಿಡು. ಚಿತ್ರಿಸಿಡು, Sketch bookನಲ್ಲಿ ಗುರುತು ಹಾಕಿಕೊ.

◆ ◆ ◆

೨೫. ಯೋಚನೆ - ವಿವೇಚನೆ

ಇಂದಿನ ದಿನಗಳಲ್ಲಿ ವೇಳೆಯ ಅಭಾವದಿಂದ ನಿನ್ನ ಪತ್ರ ಬರವಣಿಗೆ ಕುಂಠಿತವಾಗಿದೆ ಎಂದು ತಿಳಿದು ಮೋಜೆನಿಸಿತು. ಯಾರಿಗೇ ಆಗಲಿ, ಪತ್ರ ಲೇಖನಕ್ಕೆ ಮೂರು, ನಾಲ್ಕು ತಾಸು ಸತತ ವಿರಾಮ ಸಿಗುವದು ತೀರ ಅಪರೂಪ. ಅಲ್ಪಸ್ವಲ್ಪ ವಿರಾಮ ಸಿಕ್ಕಾಗಲೆಲ್ಲ ಬರೆಯುತ್ತ ಹೋದರೆ ಪತ್ರ, ಸಿದ್ಧವಾಗಿಯೇ ಬಿಡುತ್ತದೆ! ಸ್ಯಾರೆ ಕ್ರ್ಯೂಸ್‌ದಲ್ಲಿ ಬಿಡುವಿಲ್ಲದ ದುಡಿಮೆಯ ದಿನಗಳಲ್ಲಿ ಪತ್ರಲೇಖನವೇ ನನಗೆ ವಿರಾಮವನ್ನು ನೀಡುತ್ತಿತ್ತು. ಅಂದು ಬರೆದ ಪತ್ರಗಳಿಗೆ ಕೊನೆಮೊದಲಿಲ್ಲ. ಅವುಗಳೆಲ್ಲ ಈಗ ಇತಿಹಾಸ - ಸಾಹಿತ್ಯದ ಭಾಗಗಳಾಗಿವೆ. ಬರೆಯುತ್ತಿದ್ದ ಪ್ರತಿಯೊಂದು ಪತ್ರದ ಪ್ರತಿ ಕಾದಿಟ್ಟದ್ದರಿಂದ ನಾನಿಂದು ಪತ್ರ - ಸಾಹಿತ್ಯದ ಧನಿಕನಾಗಿ ಹೋಗಿದ್ದೇನೆ! ಅವಕಾಶ ಸಿಕ್ಕಾಗ ಅವುಗಳನ್ನೆಲ್ಲ ಸಂಪಾದಿಸಿ ಪ್ರಕಟಿಸುವ ವಿಚಾರ ಇಟ್ಟುಕೊಂಡಿದ್ದೇನೆ. ನಾನು ಜ್ಯೋತ್ಸ್ನಾ ದೂರ ದೂರದ ಊರುಗಳಲ್ಲಿ ಇರುವ ದಿನಗಳಲ್ಲಿ, ದಿನಕ್ಕೊಂದು ಪತ್ರ ಬರೆಯುವ ಸಂಕಲ್ಪ ಮಾಡಿಕೊಳ್ಳದೇ ಇದ್ದಿದ್ದರೆ, ನಮ್ಮ ಪತ್ರ ಸಂಗ್ರಹ ಬೆಳೆಯುತ್ತಲೇ ಇರಲಿಲ್ಲ. 'ಪ್ರೇಯಸಿಗೆ ಪತ್ರಗಳು' ಸಾಹಿತ್ಯ ಲೋಕಕ್ಕೆ ಪತ್ರ ಲೇಖನವೆಂಬ ಹವ್ಯಾಸದ ಕೊಡುಗೆ! ಅದೆಷ್ಟೋ ಓದುಗರು ನಾವು ಇವನ್ನು ನಿಜವಾಗಿ ಬರೆದ ಪತ್ರಗಳು ಎಂದು ಇಂದಿಗೂ ನಂಬುವದಿಲ್ಲ! ಪತ್ರರೂಪದ ಸಾಹಿತ್ಯ ಎನ್ನುವವರಿದ್ದಾರೆ... ನಿನಗೆ ಈಗ ಇರುವ ಜವಾಬ್ದಾರಿ ಎಂದರೆ ನೌಕರಿ ಮಾಡುವದು ಒಂದೇ. ನಾಳೆ ಸಂಸಾರಿ ಆದಿ, ಎಂದರೆ ಪತ್ರಬರವಣಿಗೆಯ ಗತಿ ಏನು? ಎಂದು ನನಗೆ ಈಗಲೇ ದಿಗಿಲಾಗಿದೆ. ನನ್ನ ಮಟ್ಟಿಗೆ ಹೇಳುವದಾದರೆ ಹತ್ತು ಫೋನ ಕರೆಗಳಿಗಿಂತ ಒಂದು ಪತ್ರ ಲೇಸು. ಪತ್ರ ಬರೆಯುವದು, ಫೋನ ಕರೆಯಷ್ಟು ಸುಲಭ ಸಾಧ್ಯವಾದುದಲ್ಲ. ಅಂತೆಯೇ ಹೊನ್ನಾವರದ ಬಂಧುಗಳು ಆಗೀಗ ಬರೆಯುತ್ತಿದ್ದ ಪತ್ರಗಳಿಗೆ ತಿಲಾಂಜಲಿ ಕೊಟ್ಟು ಫೋನಿಗೆ ಶರಣು ಹೋಗಿದ್ದಾರೆ. ಈಗ ಹೊನ್ನಾವರಕ್ಕೆ ಎಸ್. ಟಿ. ಡಿ. ಸವಲತ್ತು ಬಂದಿದ್ದರಿಂದ ಅಂಗಡಿಯಿಂದಲೇ ಫೋನು ಮಾಡಬಹುದಾಗಿದೆ!

ಕ್ರಿಯಾತ್ಮಕ ಚಟುವಟಿಕೆಗಳಿಗಾಗಿ ಶಾಂತ ಚಿತ್ತನಾಗಿರುವದು ಅತ್ಯವಶ್ಯ. ಅಂತೆಯೇ ಜಂಜಾಟದ ಜೀವನದಿಂದ ದೂರ ಇರಲು ಯತ್ನಿಸುತ್ತ ಬಂದಿದ್ದೇನೆ. ಯತ್ನಿಸುತ್ತಲೇ ಇದ್ದೇನೆ. ಅಂತೆಯೇ ನನಗೆ ಯಾರನ್ನು ಕಂಡರೂ ಆಗದು! ಎಂಬ ಆಪಾದನೆ ಇದ್ದೇ ಇದೆ. ಜೀವನದಲ್ಲಿ ಏನಾದರೂ ಸಾಧಿಸಬೇಕು, ಎಂಬ ಸಂಕಲ್ಪ ಮಾಡಿಕೊಂಡರೆ ಇವನ್ನೆಲ್ಲ ಸಹಿಸಿಕೊಳ್ಳದೇ ಬೇರೆ ಮಾರ್ಗವಿಲ್ಲ. ಅನೇಕರು, ನಾನು ನೆಮ್ಮದಿಯಿಂದ, ಸುಖವಾಗಿ ಬಾಳಿ ಬದುಕುತ್ತಿದ್ದೇನೆ. ತಮಗೂ ಇಂತಹ ಅವಕಾಶ ಸಿಕ್ಕಿದ್ದಿದ್ದರೆ! ಎಂದು ಹಾತೊರೆಯುತ್ತಾರೆ. ಆದರೆ ಇಂಥ ಬೌದ್ಧಿಕ ಜೀವನಕ್ಕಾಗಿ ನಾನು ಎಂತಹ ಕಠಿಣಶಿಸ್ತು ಪಾಲಿಸುತ್ತ ಬಂದಿದ್ದೇನೆ, ಎಂಬ ಕಲ್ಪನೆ ಇನ್ನಿತರರಿಗೆ ಬರುವದು ಸಾಧ್ಯವೇ ಇಲ್ಲ! ಮನೆ ತುಂಬ ಮಕ್ಕಳಿದ್ದು ಮನೆಯಲ್ಲೂ ಚಿಕ್ಕಂದಿನಿಂದ ನನಗೆ ಒಂಟಿತನವೇ ಸೇರುತ್ತಿತ್ತು.

ಮಾಳಿಗೆಯ ನನ್ನ ಕೋಣೆಯಲ್ಲಿ ಉರಿಯುವ ದೀಪವನ್ನು ನೋಡಿ ಕಾಕಾರು, ರಾತ್ರಿಯಾಯಿತು, ಇನ್ನು ಮಲಗು, ಎಂದು ಸೂಚಿಸಿದರೆ, ಇವನು ಎಲ್ಲೊ ಬಡಿಗರ ಕುಟುಂಬದಲ್ಲಿ ಹುಟ್ಟಬೇಕಾದವನು ಕಾಮತ ಕುಲದಲ್ಲಿ ಜನಿಸಿದ್ದಾನೆ! ಎಂದು ಕೋಣೆಯಿಂದ ಬರುತ್ತಿದ್ದ ಸದ್ದು ಕೇಳಿ ಕಾಕಿಯವರು ಗೊಣಗಿದ್ದು ಇದೆ. ಕುಮಟಾದ ಕ್ಯಾನರಾ ಕಾಲೇಜಿನ ಹಾಸ್ಟೇಲಿನಲ್ಲಿ ಇರಬೇಕಾದರೆ, ಉಳಿದೆಲ್ಲ ಸಹವಾಸಿಗಳು ಹರಟೆಯಲ್ಲಿ ತೊಡಗಿದ್ದಾಗ ಕಾಮತನು ಕೆಲಸದಲ್ಲಿ ಮೈಮರೆತಿರುತ್ತಿದ್ದ. ಎಂದು ಮೊನ್ನೆ ಮನೆಗೆ ಬಂದ ಹೃಷಿಕೇಶ ಕಲ್ಯಾಣಪುರನು ಜ್ಯೋತ್ಸ್ನಾಗೆ ಹೇಳುತ್ತಿದ್ದ. ಇದೇ ಪ್ರವೃತ್ತಿಯನ್ನು ಜೀವನದುದ್ದಕ್ಕೂ ನಡೆಸಿದ್ದರಿಂದ ಏನೆಲ್ಲ ಸಾಧಿಸುವಂತಾಯಿತು. ಸತತೋದ್ಯೋಗಿಯಾಗಿ ಸಾಧಿಸಿದ್ದು ಮುಖ್ಯವಲ್ಲದೇ ಗಳಿಸಿದ ಹಣ ಮುಖ್ಯವಲ್ಲ. ನಿನಗೆ ದೈವದತ್ತವಾಗಿ ಬಂದ ಬುದ್ಧಿ, ಹಾಸ್ಯಪ್ರವೃತ್ತಿ, ರೂಢಿಸಿಕೊಂಡ ಸುಂದರ ಹಸ್ತಾಕ್ಷರ, ಕನ್ನಡ-ಇಂಗ್ಲಿಷ ಭಾಷೆಗಳ ಮೇಲಿನ ಪ್ರಭುತ್ವಗಳನ್ನು ಬಳಸಿದರೆ ನೀನು ಏನೆಲ್ಲ ಸಾಧಿಸಬಹುದು ಗೊತ್ತೇ? ಹಲವರು ನಿಮ್ಮಪ್ಪನನ್ನು ಶಿವರಾಮ ಕಾರಂತ, ಬಿ. ಜಿ. ಎಲ್. ಸ್ವಾಮಿಯವರಂತೆಯೇ ಬಹುಮುಖ ಪ್ರತಿಭೆ ಉಳ್ಳವರೆಂದು ಕರೆದದ್ದುಂಟು. ನೀನು ಯತ್ನಿಸಿದರೆ ಆ ಇಬ್ಬರು ಪ್ರಚಂಡರನ್ನು ಮೀರಿಸಬಲ್ಲೆ, ಎಂಬ ವಿಶ್ವಾಸ ನನಗಿದೆ! ಅಂತೆಯೇ ನೀನು ಜೀವನದಲ್ಲಿ ಏನನ್ನು ಸಾಧಿಸಬೇಕೆಂದಿರುವಿ, ಎಂದು ಗುರುತಿಸಿ ಕಾರ್ಯ ಪ್ರವೃತ್ತನಾಗು. ಕೈತುಂಬ ಸಂಬಳ ತರುವ ಉಚ್ಚ ಅಧಿಕಾರಿಯಾಗಬೇಕು, ಎಂದಿದ್ದರೆ, ಅದನ್ನೂ ಮಾಡಬಹುದು.

★ ★ ★

ಜ್ಯೋತ್ಸ್ನಾಳ ಅಮೇರಿಕೆಯ ಭೇಟಿ ಮತ್ತು ನಿನ್ನ ತವರು ಮನೆಯ ಹಂಬಲ, ಒಂದು ಹಾಸ್ಯಲೇಖಕ್ಕೆ ವಸ್ತು ಆಗಬಲ್ಲದು. ನೀವಿಬ್ಬರೂ ಲಂಡನ್ ವಿಮಾನ ನಿಲ್ದಾಣದಲ್ಲಿ ಭೇಟಿ ಆಗಿ, ಜ್ಯೋತ್ಸ್ನಾಳು ತಾನು ಮಗನನ್ನು ನೋಡಲು ಅಮೇರಿಕೆಗೆ ಹೊರಟಿರುವದಾಗಿಯೂ ನೀನು ಆವಮ್ಮಾರ ದರ್ಶನಕ್ಕೆ ಬೆಂಗಳೂರಿಗೆ ಹೋಗಿಬರುತ್ತೇನೆಂದು ಹೇಳಿಕೊಂಡರೆ ಹೇಗೆ ಇರುತ್ತದೆ? ಎರಡುವಾರದ ರಜೆಯ ನಂತರ ನೀನು ಬರ್ಮಿಂಗಹ್ಯಾಮಿಗೆ ಹಿಂತಿರುಗುವಾಗ, ಮಗನಿಲ್ಲದ ಅಮೇರಿಕೆ, ಅಮ್ಮನಿಗೆ ಬೇಜಾರಕ್ಕಿಟ್ಟು ಅವಳು ಬೆಂಗಳೂರಿಗೆ ಹಿಂತಿರುಗುವಂತಿರಬೇಕು.

ಮಾನವನ ಅನಿಸಿಕೆ, ಭಾವನೆಗಳು ಮತ್ತು ವ್ಯಾವಹಾರಿಕತೆ, ಪರಸ್ಪರ ವಿರುದ್ಧ ಚಟುವಟಿಕೆಗಳಾಗಿವೆ. ಕೇವಲ ಭಾವನಾಪ್ರಧಾನ ಜೀವನ ನಡೆಸಿದರೆ, ಹಗಲೆಲ್ಲ ಹಾಸ್ಯಾಸ್ಪದರಾಗುವ ಸಂಭವ ಜಾಸ್ತಿ! ಕುಟುಂಬದ ಎಲ್ಲ ಸದಸ್ಯರು ಒಟ್ಟಿಗೇ ಇರಬೇಕು. ಅದಿಲ್ಲದಿದ್ದರೆ ಒಂದೇ ನಗರದಲ್ಲಾದರೂ ಇರಬೇಕು. ಅತಿದೂರವಿದ್ದವರು, ಎರಡು ದಿನಕ್ಕೊಮ್ಮೆಯಾದರೂ ಫೋನಿಸಬೇಕು. ವಾರಾಂತ್ಯಕ್ಕೆ ಭೇಟಿ ತಪ್ಪಬಾರದು. ಮದುವೆ-ಮುಂಜಿಗಳಿಗೆ ಎಲ್ಲರೂ ಸೇರಲಿಕ್ಕೇ ಬೇಕು. ಇವೆಲ್ಲ ಕುಟುಂಬದವರು, ಕಾರ್ಯಗತಮಾಡಬೇಕೆನ್ನುವ ಚಟುವಟಿಕೆಗಳು. ಮದುವೆಗೆ ಹೋದರೆ, ಅಲ್ಲಿ ಕೊಡಮಾಡುವ ಉಡುಗೊರೆಗಳಿಂದ ಹೋಗಿ ಬರುವ ಖರ್ಚಾದರೂ ಹುಟ್ಟುತ್ತದೆ!

ಎಂದು ಲೆಕ್ಕಾಚಾರ ಹಾಕುವವರದು ಇನ್ನೊಂದು ವರ್ಗ. ಇವೆರಡರಲ್ಲಿ ಸಮತೋಲನ ಕಾಯ್ದುಕೊಂಡು ಹೋಗುವದು ಜಾಣತನ. ಆದರೆ ಇದಕ್ಕೊಂದು ಅಳತೆಗೋಲಿಲ್ಲ; ಅದನ್ನು ಸಾಧಿಸುವದು ಅಷ್ಟು ಸುಲಭವೂ ಅಲ್ಲ. ನಾನು ವ್ಯಾವಹಾರಿಕತೆಗೆ ಜೋರು ಕೊಟ್ಟು ನಡೆದುಕೊಂಡರೆ, ಜ್ಯೋತ್ಸ್ನಾ ಭಾವನಾಪ್ರಧಾನಳಾಗಿ ಬಿಡುತ್ತಾಳೆ. ಅಂತೆಯೇ ಅವಳು ಎಂದಿನಿಂದಲೋ ಅಮೇರಿಕೆಗೆ ಹೋಗಿ ಬರುತ್ತೇನೆ, ಎಂದು ಹೇಳುತ್ತ ಬಂದರೂ ನಾನೆಂದೂ ವಿರೋಧಿಸಲೇ ಇಲ್ಲ. ನಿವೃತ್ತಿಯ ನಂತರ ಅವಳು ಹೊರಡುವದು ಖಚಿತ! ಎನಿಸಿದ್ದರಿಂದ ಹೋಗಿ ಬರುವ ಖರ್ಚಿನ ಹಣವನ್ನು ಉಳಿತಾಯ ಖಾತೆಯಲ್ಲಿಯೇ ಇಟ್ಟುಕೊಂಡಿದ್ದೆ. ಯಾರೋ ಪರಿಚಿತನಿಂದ ಹೊರಡಲು ಬೇಕಾಗುವ ಕಾಗದ ಪತ್ರಗಳನ್ನು ಮಾಡಲು ಪ್ರಯತ್ನಿಸಿದ್ದರಿಂದ ಮತ್ತು ಅವನು ಸಕಾಲದಲ್ಲಿ ಕೈಕೊಟ್ಟದ್ದರಿಂದ ಹೊರಡುವ ದಿನವನ್ನು ಮುಂದೂಡುತ್ತ ಇರಬೇಕಾಯಿತು. ನಂತರ ಸಂಧಿವಾತದ ಕಾಟ ಪ್ರಾರಂಭವಾಯಿತು. ಕೈಬೆರಳು, ಕಾಲು ಗಂಟುಗಳ ನೋವು ಜಾಸ್ತಿಯಾಯಿತು. ಫಿಝಿಯೋಥೆರಾಪಿ ಪ್ರಾರಂಭವಾಯ್ತು. ಎಡಗೈ ಕಿರು ಶಸ್ತ್ರಚಿಕಿತ್ಸೆಯೂ ಆಯಿತು. ನಡುವೆ ಕಂಠ ಬಿರುಕುಬಿಟ್ಟು ಅಪಸ್ವರ ಹಾಡಲಾರಂಭಿಸಿತು. ತಜ್ಞರಿಂದ ಅದಕ್ಕೂ ಚಿಕಿತ್ಸೆಯಾಯಿತು. ಎಲೊಪಥಿ, ಹೋಮಿಯೋಪಥಿ, ಆಯುರ್ವೇದಿಕ್ ಚಿಕಿತ್ಸೆಗಳೆಲ್ಲವೂ ಪರಿಶೀಲಿಸಿ ಆಯಿತು. ವಯಸ್ಸಿನಿಂದ ಕಾಣಿಸಿಕೊಳ್ಳುವ ವ್ಯಾಧಿಗಳನ್ನೆಲ್ಲ ಔಷಧೋಪಚಾರದಿಂದ ಹೊಡೆದೋಡಿಸುವದು ಸುಲಭದ ಕೆಲಸವಲ್ಲ. ಬಾಬಾರು ತಮ್ಮ ತೊಂಭತ್ತನೆಯ ವಯಸ್ಸಿನಲ್ಲಿಯೂ ಗಟ್ಟಿ ಮುಟ್ಟಾಗಿರುವಂತೆ, ಎಲ್ಲರಿಂದಲೂ ಅದು ಸಾಧ್ಯವೇ? ಆರೋಗ್ಯದ ಕಿರಿಕಿರಿಯಿಂದಾಗಿ ಜ್ಯೋತ್ಸ್ನಾಳ ಅಮೇರಿಕಾ ಪಯಣ ಹಿಂದೇಟು ಹಾಕಲಾರಂಭಿಸಿದೆ. ನಾನು ಮನಸ್ಸು ಮಾಡಿದ್ದರೆ ಅಮೇರಿಕೆಯ ಪ್ರವಾಸ ಸುಲಭಸಾಧ್ಯವಾಗಿತ್ತು! ಎಂಬ ಅವಳ ಆಪಾದನೆ ಸದಾಕಾಲ ಇದ್ದೇ ಇದೆ. ಆದರೆ ಊಟಿಯಿಂದ ಹಿಂದಿರುಗುವಾಗ ಆದ ಅಪಘಾತದಲ್ಲಿ ಸಾವನ್ನು ಸ್ಪರ್ಶಿಸಿ ಬಂದದ್ದರಿಂದ, ಕೈಕಾಲುಗಳನ್ನು ಗಟ್ಟಿ ಮುಟ್ಟಾಗಿ ಇಟ್ಟುಕೊಳ್ಳುವದು ಅತಿ ಮುಖ್ಯ ಎಂಬ ನಿರ್ಧಾರಕ್ಕೆ ಬಂದಿದ್ದೇನೆ. ಆದ್ದರಿಂದ ಅನವಶ್ಯಕವಾಗಿ ಎಲ್ಲಿಯೂ ಪ್ರಯಾಣ ಮಾಡುವದೇ ಇಲ್ಲ. ಡಾ. ಶೇಷಶಾಸ್ತ್ರಿ ಅನಂತಪುರಕ್ಕೆ ಬಂದರೆ, ಆಂಧ್ರಪ್ರದೇಶದ ಮಹತ್ವದ ಸ್ಥಳಗಳನ್ನೆಲ್ಲ ಸುತ್ತಾಡಿಸುತ್ತೇನೆ, ಎಂದು ಅನೇಕಸಲ ಹೇಳಿದರೂ ಹೋಗಲಿಲ್ಲ.

ಈ ಹಿಂದೆಯೇ ಸೂಚಿಸಿದಂತೆ, ನೀನು ಭಾರತಕ್ಕೆ ಬರುವದನ್ನು ಅಮೇರಿಕೆಯ ಭೇಟಿಯೊಂದಿಗೆ ಜೋಡಿಸುವದು ಸರಿಯಲ್ಲ. ಇಂದಿನ ದಿನಗಳಲ್ಲಿ ಅಮೇರಿಕೆಗೆ ಹೋಗುವದು ಅಮೃತಸರಕ್ಕೆ ಹೋಗುವದಕ್ಕಿಂತ ಸುಲಭ! ಈಗ ಬೆಂಗಳೂರಿನಿಂದ ನೇರ ಸಿಂಗಪುರಕ್ಕೆ ವಿಮಾನ ಉಡ್ಡಾಣ ಪ್ರಾರಂಭವಾದದ್ದರಿಂದ, ತುಂಬ ಜನ 'ಫಾರಿನ್-ರಿಟರ್ನ' ಆಗಿಬರುತ್ತಿದ್ದಾರೆ. ಹೊನ್ನಾವರದ ಕೂಡ್ಲ ದಂಪತಿ, ಪ್ರಭಾಕರ ದಂಪತಿಗಳೂ ಹೋಗಿ ಬಂದಿದ್ದಾರೆ ಎಂದರೆ ನಂಬುತ್ತಿಯಷ್ಟೆ! ಲಂಡನ್,

ನ್ಯೂಯಾರ್ಕ್‌ಗಳಿಗೆ ನೇರ ಬೆಂಗಳೂರಿನಿಂದ ಹಾರುವ ದಿನಗಳು ದೂರವಿಲ್ಲ. ಅಮೇರಿಕೆಗೆ ಹೋಗಿಬರುವದು ಸುಲಭವಾಗುತ್ತಿದೆ. ಅಲ್ಲದೇ ನೀನು ಚತುರ್ಭುಜನಾದ ಮೇಲೆ ಇನ್ನೂ ಅವಶ್ಯಕ ಪಯಣವಾಗಿಬಿಡುತ್ತದೆ. ಈಗ ನೀನು ಭಾರತಕ್ಕೆ ಬರಲು ಯತ್ನಿಸಿದ್ದರಿಂದ ಮರಳಿ ಹೋಗುವಾಗ ಅಮ್ಮನನ್ನು ಕರೆದೊಯ್ಯ ಬಹುದು. ಈ ವಿಚಾರ ಅವಳೊಂದಿಗೆ ಚರ್ಚಿಸಿನೋಡು. ನನ್ನ ವಿಚಾರಗಳಿಗೆ ಅವಳು ಸಂಪೂರ್ಣ ಸಮ್ಮತಿಸುತ್ತಾಳೆ, ಎಂದು ಹೇಳಲಾಗದು. ಅವಳ ಅನಿಸಿಕೆಗಳನ್ನು ಅರಿತುಕೊಳ್ಳುವದು ಅತಿಮುಖ್ಯ. ಅಮೇರಿಕೆಗೆ ಹೊರಡುವ ಮುನ್ನ ಏನೇನು ಮಾಡಬೇಕು? ಎಂದು ಅವಳಿಗೆ ವಿವರಿಸು. ಇಂದಿನ ದಿನಗಳಲ್ಲಿ ಅನೇಕ ಕಟ್ಟುಪಾಡುಗಳನ್ನು ಸಡಲಿಸಿದ್ದಾರೆ, ಎಂದು ಕೇಳಿದ್ದೆ. ಆದ್ದರಿಂದ ಅದಕ್ಕೆ ಅನುಗುಣವಾಗಿ ಕಾಗದ ಪತ್ರಗಳನ್ನು ಹೊಂದಿಸಿಕೊಳ್ಳುವದು ಜಾಣತನವಲ್ಲವೇ? ಅಮೇರಿಕೆಗೆ ಹೋಗದಿದ್ದರೆ ಜೀವನ ಅಪೂರ್ಣ! ಎಂಬ ವಿಚಾರಸರಣಿ ನನಗೆ ಸಮ್ಮತವಿಲ್ಲ.

◆ ◆ ◆

೨೬. ನಮ್ಮೆಲ್ಲರ ಬಾಬಾ

ಇಂದು ನಮ್ಮೆಲ್ಲರ ಬಾಬಾರಿಗೆ ತೊಂಭತ್ತು ವರ್ಷಗಳು ತುಂಬಿದವು. ಅವರ ಈ ಸುಧೀರ್ಘ ಜೀವಾವಧಿಯ ಒಂದೂ ಮೂರಾಂಶ ಭಾಗ (ಅಂದರೆ ಕಳೆದ ಮೂವತ್ತು ವರ್ಷಗಳಲ್ಲಿ) ಮಾತ್ರ ಅವರ ವ್ಯಕ್ತಿತ್ವವನ್ನು ಪರಿಚಯಿಸಿಕೊಳ್ಳುವ ಅವಕಾಶ ದೊರಕಿತು. ಅವರ ಅನೇಕಾನೇಕ ಸಾಧನೆಗಳನ್ನು ನನ್ನವನ್ನಾಗಿ ಮಾಡಿಕೊಂಡಿದ್ದರೆ... ಎಂದು ಹಳಹಳಿಸಿದ್ದೂ ಇದೆ. ಮುತ್ತಿನಂತಹ ಅಕ್ಷರಗಳು! ನೋಡಿದರೇ ಖುಷಿಯಾಗಿ ಬಿಡುತ್ತದೆ. ಅದೆಷ್ಟೊ ಸಲ ಅವರು ಕಾಗದದ ಉಳಿತಾಯಕ್ಕಾಗಿ, ಹಳೆಯ ಕ್ಯಾಲಂಡರ, ಆಮಂತ್ರಣ ಪತ್ರಿಕೆಗಳ ಮೇಲೆ ಬರೆದಿರುತ್ತಾರೆ. ಅವುಗಳನ್ನು ನಾನು ಜೋಪಾನವಾಗಿ ಕಾದಿರಿಸಿದ್ದೇನೆ. ಅದರಂತೆ ಮೂರು ದಶಕಗಳಲ್ಲಿ ನಮಗೆ ಬರೆದ ಪತ್ರಗಳ ದೊಡ್ಡ ಸಂಗ್ರಹವೇ ಇದೆ. ಈ ಹಿರಿಯ ವಯಸ್ಸಿನಲ್ಲಿಯೂ ಹದಿವಯಸ್ಸಿನವರಂತೆ ಏಕಪ್ರಕಾರವಾದ ಅಕ್ಷರಗಳನ್ನು ಮೂಡಿಸುವಲ್ಲಿ ಅವರದು ಎತ್ತಿದ ಕೈ. ಪ್ರತಿ ಸಾರೆ ನಾನು ಬರೆಯುವಾಗಲೂ ಬಾಬಾರಂತಹ ಸುಂದರ ಅಕ್ಷರಗಳು ನನ್ನವು ಆಗಬಾರದಿತ್ತೆ? ಅನಿಸದೇ ಇರುವದಿಲ್ಲ. ಹಾಗಿದ್ದರೆ ನನ್ನ ಲೇಖ, ಪುಸ್ತಕಗಳನ್ನು ಜ್ಯೋತ್ಸ್ನಾಳಿಂದ ಪ್ರತಿಮಾಡಿಸುವ ಇಲ್ಲವೇ ಬೆರಳಚ್ಚು ಮಾಡಿಸುವ ಕಷ್ಟ ತಪ್ಪುತ್ತಿತ್ತು. ಅವರಂತೆ ಶಬ್ದಕೋಶ ಬಳಸುವದನ್ನು ಮೊದಲಿನಿಂದ ರೂಢಿಸಿಕೊಂಡಿದ್ದರೆ, ಅಕ್ಷರದೋಷ ಮತ್ತು ವ್ಯಾಕರಣ ದೋಷಗಳು ಇರುತ್ತಿರಲಿಲ್ಲ.

ಇಂಗ್ಲಿಷ್, ಸಂಸ್ಕೃತ, ಕನ್ನಡ, ಹಿಂದಿ ಮೊದಲಾದ ಭಾಷೆಗಳಲ್ಲಿ ಅವರ ಪರಿಣತಿ ಅದ್ವಿತೀಯ. ನಿವೃತ್ತರಾದ ನಂತರ ಬಂಗಾಲಿ ಭಾಷೆಯನ್ನೂ ತಮ್ಮದನ್ನಾಗಿ ಮಾಡಿಕೊಂಡರೆಂದರೆ ಯಾರಿಂದಲಾದರೂ ನಂಬುವದು ಸಾಧ್ಯವೆ? ತಮಗೆ ಒಪ್ಪಿಗೆಯಾಗಿ, ಕೈಕೊಂಡ ಕೆಲಸಗಳನ್ನು ಓರಣವಾಗಿ ಮಾಡುವದರಲ್ಲಿ ಬಾಬಾರು ಹೆಸರುವಾಸಿ. ಅದು ಅಂಚೆ ಕಾರ್ಡಿನಲ್ಲಿ ಪತ್ರ ಬರೆಯುವದಿರಲಿ, ವೇದ, ಉಪನಿಷತ್ತು, ಭಗವದ್ಗೀತೆಯ ಆಧಾರಿತ ಲೇಖವಿರಲಿ, ಒಂದೇ ಒಂದು ಸೂಕ್ತವಾದ ಶಬ್ದದ ಹುಡುಕಾಟಕ್ಕಾಗಿ ವಹಿಸುವ ಶ್ರಮದ ಪರಿವೆಯನ್ನು ಅವರು ಎಂದೂ ಮಾಡಿದವರಲ್ಲ. ಇದರಿಂದಾಗಿ ಜ್ಯೋತ್ಸ್ನಾಳು ಕೈಕೊಂಡ ಸಂಶೋಧನಾಭ್ಯಾಸ, ಪ್ರೊ. ಜಿ. ಎಸ್. ದೀಕ್ಷಿತರ ಭಾಷಾಂತರದ ಕೆಲಸಗಳಿಗೆ ಅವರಿಂದ ಬಹಳಷ್ಟು ನೆರವು ಪಡೆಯುವಂತೆ ಆಯಿತು.

ದಿನವೂ ಮುಂಜಾನೆ ಐದುಗಂಟೆಗೇ ಪ್ರಾರಂಭಿಸಿ, ನಡುರಾತ್ರಿಯ ತನಕ ಅವರು ಓದುತ್ತ, ಬರೆಯುತ್ತಲೇ ಇರುವದು ಅತ್ಯಂತ ವಿಸ್ಮಯಕಾರಿ! ನನ್ನ ದಿನದ ಓದು ಕೆಲವೇ ನಿಮಿಷಗಳಿಗೆ ಸೀಮಿತವಾಗಿದ್ದರೆ, ಅವರದು ಹಲವು ಗಂಟೆಗಳಿಗೆ ಅಂಟಿಕೊಂಡಿರುತ್ತದೆ! ಬಾಬಾರು ನಿರುಪದ್ರವಿ. ಎಲ್ಲಿಯೇ ಇರಲಿ, ಹೇಗೇ ಇರಲಿ, ಹೊಂದಿಕೊಂಡು ಹೋಗುವವರು. ಊಟ-ತಿಂಡಿಗಳಿಗೆ ಗೃಹಿಣಿಯರನ್ನು

ಕಾಯಿಸಿದವರಲ್ಲ. ಅವುಗಳಲ್ಲಿಯ ನ್ಯೂನತೆಗಳನ್ನು ಗಣನೆಗೆ ತಂದುಕೊಂಡವರಲ್ಲ. ಚಹಾ-ಕಾಫಿ ಬಿಸಿಯಾಗಿದ್ದು ಸಿಹಿಯಾಗಿದ್ದರೆ, ಅನ್ನ-ವ್ಯಂಜನಗಳು ಮೆತ್ತಗೆ ಸೌಮ್ಯವಾಗಿದ್ದರೆ ಅದೇ ಅವರಿಗೆ ಮೃಷ್ಟಾನ್ನ. ಸ್ನಾನಕ್ಕಾಗಿ ಎಂದಿಗೂ ಯಾರಿಂದಲೂ ಹೇಳಿಸಿಕೊಂಡವರಲ್ಲ. ತಮ್ಮ ಬಟ್ಟೆ-ಬರೆಗಳನ್ನು ತಾವೇ ಒಗೆದುಕೊಂಡವರು. ಗರಿಗರಿಯಾದ ಶುಭ್ರ ಬಟ್ಟೆ-ಬರೆಗಳನ್ನು ತೊಟ್ಟಾಗ ಬಾಬಾರು ವಿಶ್ವವಿದ್ಯಾಲಯದ ಪ್ರಾಧ್ಯಾಪಕರಿಗೆ ಏನೂ ಕಡಿಮೆ ಇಲ್ಲದ ವ್ಯಕ್ತಿತ್ವ ಹೊಂದಿರುತ್ತಾರೆ. ಅವರ ಆರೋಗ್ಯ ಎಂತಹವರಿಗೂ ಹೊಟ್ಟೆಕಿಚ್ಚು ಹುಟ್ಟಿಸುವಂತಹದ್ದೆ! ಹಿಂದೆ ಹಾಕಿ ಬಂದ ದೀರ್ಘ ಬಾಳಿನಲ್ಲಿ ಒಂದೇ ಒಂದು ಚಿಕ್ಕ ಆಪರೇಶನ್ ಕಂಡಿದ್ದಾರೆ ಪ್ರೊಸ್ಟೇಟ್ ಗ್ಲಾಂಡಿನದು. ಅದೂ ಅತ್ಯವಶ್ಯ ಇತ್ತು ಎಂದಲ್ಲ. ''ಮುದುಕ''ನಾದ ನಂತರ ತೊಂದರೆ ಕೊಡಬಾರದು ಎಂದು! ಆಗವರಿಗೆ ಎಪ್ಪತ್ತಾರರ ಪ್ರಾಯ. ಅಂದ್ರೆ ಈಗ ಮುದುಕರಾಗಿಲ್ಲ ಎಂದು ನಿಮ್ಮ ಅಂಬೋಣವೇ? ಎಂದು ಭಾಯ್ಯಾ ಅವರನ್ನು ವಿಚಾರಿಸಿದರಂತೆ! ಈ ವಯಸ್ಸಿನಲ್ಲಿಯೂ ತಮ್ಮ ಕಿರಿಯ ಮೊಮ್ಮಗಳಿಗೆ ಓದಿಸುವ ಉತ್ಸಾಹ. ಮೊನ್ನೆ ಬೇಕಾದ ಪುಸ್ತಕಗಳನ್ನು ಹುಡುಕಲು ಉಷಾಳ ಮನೆಯಿಂದ ನಮ್ಮ ಮನೆಗೆ ಪಾದಚಾರಿಯಾಗಿಯೇ ಬಂದಿದ್ದರೆಂದರೆ ನಂಬುವದು ಕಷ್ಟ. ಇಂದಿನ ಹತ್ತೊಂಭತ್ತು ವರ್ಷದ ಹುಡುಗರಿಗೆ ಬಾಬಾರ ತೊಂಬತ್ತು ವರ್ಷದ ಬಲ, 'ಚಿಕಾಟಿ'ಗಳು ಇರುವದಿಲ್ಲ. ಮನೆಯಿಂದ ಹೊರಬೀಳಬೇಕಾದರೆ ಅವರಿಗೆ ದ್ವಿಚಕ್ರವಾಹನ ಬೇಕೇ ಬೇಕಾಗುತ್ತದೆ.

ಬಾಬಾರು, ತಮ್ಮ ಸಾಧನೆಗಳನ್ನು ಮುಂಬರುವ ಪೀಳಿಗೆಗಳಿಗೂ ತಲುಪುವಂತೆ ಮಾಡಬಹುದಾಗಿತ್ತು. ತಾವು ಓದಿ ಮೆಚ್ಚಿಕೊಂಡ ಅಸಂಖ್ಯಾತ ಪುಸ್ತಕಗಳ ಸಾರವನ್ನು ಕನ್ನಡದಲ್ಲಿ ಬರೆದಿಡುತ್ತ ಬಂದಿದ್ದರೆ, ಸಾಹಿತ್ಯ ಲೋಕಕ್ಕೆ ಅದೇ ದೊಡ್ಡ ಕೊಡುಗೆಯಾಗಿ ಬಿಡುತ್ತಿತ್ತು. ಸಂಸ್ಕೃತದಲ್ಲಿರುವ ಅಪಾರ ಸಾಹಿತ್ಯದ ಪರಿಚಯ, ಆ ಭಾಷೆ ಅರಿಯದ ಬಹಳಷ್ಟು ಜನರಿಗೆ ಲಭ್ಯವಿಲ್ಲ. ಆದ್ದರಿಂದ ಅದರಲ್ಲಿಯ ಕೆಲವನ್ನಾದರೂ ಕನ್ನಡ, ಇಂಗ್ಲಿಷ್ ಭಾಷೆಗಳಿಗೆ ಅನುವಾದಿಸಬಹುದಿತ್ತು. ಇಂಗ್ಲಿಷಿಗೆ ಪರಿವರ್ತಿಸಿದ್ದರೆ, ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲೂ ಬೇಡಿಕೆ ಬರಬಹುದಾಗಿತ್ತು.

ಕೇವಲ ಲೇಖನ, ಪುಸ್ತಕ ಬರೆಯುವವರಷ್ಟೇ 'ಶಾಣ್ಯಾರು!' ಎಂದು ನಾನು ಎಂದೂ ತಿಳಿಯಲಿಲ್ಲ. ಆದರೆ ಬಾಬಾರಲ್ಲಿ ವಿದ್ವತ್ ಪೂರ್ಣ ಬರಹಗಾರನಾಗಲು ಬೇಕಾಗುವ ಸಕಲ ಸಾಮರ್ಥ್ಯಗಳೂ ಹುದುಗಿಕೊಂಡಿವೆ. ಅದನ್ನು ಅವರೇ ಅರಿತುಕೊಂಡಿಲ್ಲ! ಹಾಸ್ಯಲೇಖಗಳನ್ನು, ಮಕ್ಕಳಿಗಾಗಿ ಕಥೆಗಳನ್ನು, ಕೆಲವು ಬಿಡಿ ಬರಹಗಳನ್ನು ಬರೆದಿದ್ದಾರೆ. ಆದರೆ ಅವುಗಳಲ್ಲಿ ಬಹುಸಂಖ್ಯಾತ ಪ್ರಕಟವಾಗಿಲ್ಲ. ಪ್ರಕಟಗೊಂಡವನ್ನು ಕಾದಿರಿಸಿಲ್ಲ. ಗೌರವಧನ, ಸಂಪತ್ತಿಗೆ ಬಾಬಾರು ಎಂದೂ ತಲೆ ಕೆಡಸಿಕೊಂಡವರಲ್ಲ. ದೊಡ್ಡ ಗ್ರಂಥ ಭಾಂಡಾರವೇ ಅವರ ಸಂಪತ್ತು. ಎಳೆಯರಿಗೆ ಓದಿನ ಅಭಿರುಚಿ ಹುಟ್ಟಿಸಲು ಸದಾ ಸಿದ್ಧರು. ಆದರೆ ಅವರ ಶಿಷ್ಯಂದಿರು ಯಾರೂ ಅದನ್ನು ತಮ್ಮದನ್ನಾಗಿಸಿಕೊಂಡಂತೆ ತೋರುವದಿಲ್ಲ. ಅವರ ಓದಿಸುವಿಕೆಯ ಲಾಭ

ಪಡೆದವರೂ ಅದರ ಶ್ರೇಯಸ್ಸನ್ನು ಬಾಬಾರಿಗೆ ಕೊಡಲು ಸಿದ್ಧರಿಲ್ಲ. ಒಟ್ಟಿನಲ್ಲಿ ಬಾಬಾರು ತೀರ ಅಪೂರ್ವದ ವ್ಯಕ್ತಿ. ಅವರಂಥವರು ಇನ್ನೊಬ್ಬರಿಲ್ಲ. ಮುರಾರಜಿ ದೇಸಾಯಿ ಅವರಂತೆ. ಇವರೂ ಶತಾಯುಷಿಯಾಗಿರಲಿ! ಎಂಬುದೇ ಆಶಯ.

◆ ◆ ◆

- - - - - - -

ನಮ್ಮ ಬಾಬಾ ಶ್ರೀ ಗಣೇಶ ವಿಶ್ವೇಶ್ವರ ಬುರ್ಡೆ ತಮ್ಮ ೯೬ನೇ ವಯಸ್ಸಿನಲ್ಲಿ ೨೦-೭-೨೦೦೨ರಂದು ನಿಧನರಾದರು.

೨೭. ಮೋಡಗಳ ಮಾಯಾಲೋಕ

ಮನೆಯಲ್ಲಿ ವಿದ್ಯುತ್ ಪೂರೈಕೆ ನಿಂತೊಡನೆ ಬೆಡ್‌ರೂಮಿನ ಬಾಲ್ಕನಿಗೆ ಧಾವಿಸಿ ಗಗನವಿಹಾರಿಗಳಾದ ಮೋಡಗಳ ವೀಕ್ಷಣೆ ಪ್ರಾರಂಭಿಸಿದ್ದೇನೆ. ನನ್ನ ಮೊದಲಿನ ಸ್ಥಳವಾದ ಡ್ರಾಯಿಂಗ್ ರೂಮಿನ ಬಾಲ್ಕನಿಯ ಎದುರು ರಸ್ತೆಯಲ್ಲಿ ಪ್ಯಾಪು ಒಡೆದು ಕಕ್ಕಸು ನೀರು ರಸ್ತೆಯಿಡೀ ಹರಿಯುತ್ತಿರುವದರಿಂದ ಅಲ್ಲಿ ಕುಳಿತು ಬರಹೋಗುವವರನ್ನು ನೋಡುವದಾಗುವದಿಲ್ಲ! ನಿತ್ಯ ನೂತನವಾದ ಈ ಮೋಡಗಳತ್ತ ಇಷ್ಟು ದಿನ ಏಕೆ ಲಕ್ಷ್ಯಹರಿಸಲಿಲ್ಲ? ಎಂದು ಈಗ ಅನಿಸುತ್ತಿದೆ. ಎಮ್. ಎಫ್. ಹುಸೇನರ ತೈಲಚಿತ್ರ ಒಂದಕ್ಕೆ ಹನ್ನೆರಡು ಲಕ್ಷ ರೂಪಾಯಿಗಳ ಮೌಲ್ಯವೆಂದೇ ಟಿಕೀಟು ಕೊಂಡು ಅದನ್ನು ನೋಡಲು ಹೋಗುವವರು, ಕೇವಲ ಹನ್ನೆರಡು ನಿಮಿಷ ಮೌನವಾಗಿ ಈ ಮೋಹಕ ಮೋಡಗಳ ವಿನ್ಯಾಸವನ್ನು ವೀಕ್ಷಿಸುವದಿಲ್ಲ. ಈ ವೀಕ್ಷಣೆ ರೂಢಿಸಿಕೊಂಡರೆ, ಚಿತ್ರಸಂಪತ್ತಿನ ವೀಕ್ಷಣೆಯ ಆನಂದವನ್ನು ಪಡೆಯಬಹುದಾಗಿದೆ. ಈ ಮೋಡಗಳು ಅತ್ಯಂತ ಚಂಚಲವಾಗಿರುವದರಿಂದ ಎಲ್ಲೂ ಸ್ಥಾಯಿಯಾಗಿರಲಾರವು!

ನಮ್ಮ ಕಣ್ಣೆದುರಿನಲ್ಲೇ ಮೇಘ ಮಾಯಾಂಗನೆಯರು, ತಮ್ಮ ವೇಷಭೂಷಣ, ಅಲಂಕಾರಗಳನ್ನು ಬದಲಿಸುತ್ತ ವಿವಿಧ ಪಾತ್ರಗಳನ್ನು ನಿರ್ವಹಿಸುತ್ತಲೇ ಇರುತ್ತಾರೆ. ಇದಕ್ಕೆ ಅವರು ಗ್ರೀನ್‌ರೂಂ ಕೇಳುವದಿಲ್ಲ, ರಂಗಸ್ಥಳ ಬೇಕೆನ್ನುವದಿಲ್ಲ. ಅವುಗಳ ನೃತ್ಯಕ್ಕೆ ಮೃದಂಗ, ಕೊಳಲು ಬೇಕಿಲ್ಲ. ತಾತೈ! ಎನ್ನುವ ನಟ್ಟುವಾಂಗವೂ ಬೇಕಿಲ್ಲ. ಆದರೂ ಸರ್ವಾಲಂಕಾರ ಮಾಡಿಕೊಂಡು ಗೆಜ್ಜೆಯ ನಾದ ಹೊರಡಿಸುತ್ತ ನರ್ತಿಸುವವರಿಗಿಂತ, ನಾಜೂಕಿನ ನೃತ್ಯಕೂಟ ನಡೆಸಿರುತ್ತವೆ. ಒಮ್ಮೆ ಐರಾವತದಂತೆ ಬೃಹದಾಕಾರ ತಳೆದರೆ, ಇನ್ನೊಮ್ಮೆ ಒಂಟೆಯಂತೆ ಬಡಕಲಾಗಿ ಎತ್ತರವಾಗಿಬಿಡುತ್ತವೆ. ಮಗುದೊಮ್ಮೆ ಕಾದಾಟಕ್ಕೆ ಇಳಿದ ಗೂಳಿಗಳನ್ನು ನೆನಪಿಗೆ ತರುತ್ತವೆ. ಚಿಗರೆಯಂತೆ ನಾಗಾಲೋಟ ಹಾಕುವವೂ ಕಾಣಸಿಗುತ್ತವೆ. ನಕಾಶೆಯೆಂದರೆ ಮೂಗು ಮುರಿಯುವವರು, ಮೋಡಗಳನ್ನು ಅಭ್ಯಸಿಸಬೇಕು. ಒಮ್ಮೆ ಏಶಿಯ ಖಂಡದಂತೆ ಬೃಹದಾಕಾರ ತಳೆದರೆ ಮರುಗಳಿಗೆಯಲ್ಲೇ ಶ್ರೀಲಂಕಾ ಗೋಚರಿಸುತ್ತದೆ! ಕೆಲವೊಮ್ಮೆ ಒಂದನ್ನೊಂದು ಅಗಲಿ ಉತ್ತರ ಮತ್ತು ದಕ್ಷಿಣ ಅಮೇರಿಕೆಗಳಾಗಿ ಬಿಡುವವು. ಗ್ರೀನಲಂಡ್, ಮಾಡಗಾಸ್ಕರ, ಸಿಸಿಲಿಗಳನ್ನು ಸುಲಭವಾಗಿ ಗುರುತಿಸಬಹುದು.

ಈ ಮೋಡಗಳ ವರ್ಣಸಂಯೋಜನೆ ಅಪೂರ್ವವಾದದ್ದು. ಒಮ್ಮೆ ಅವು ಹಿಮದ ರಾಶಿಯ ಭ್ರಮೆ ಹುಟ್ಟಿಸಿದರೆ, ಇನ್ನೊಮ್ಮೆ ಶುಭ್ರ, ಜಲದಷ್ಟು ಪಾರದರ್ಶಕವಾಗಿರುತ್ತವೆ. ಭೂಮಾತೆಯ ಬಾಯಾರಿಕೆಯನ್ನು ನಿವಾರಿಸುವ ಅರ್ಹತೆ ಹೊತ್ತು ಹೊರಟ ಮೋಡಗಳು ಕರಿಯಣ್ಣನಂತಿದ್ದರೆ, ಗಗನ ಮಂಡಲವು ಶುಭ್ರ ಇರುವಾಗ ಆವರಿಸುವ ನೀಲಿವರ್ಣವು, ಕಲಾಕಾರರಿಗೆ ಅತ್ಯಂತ ಆಕರ್ಷಕ. ಸೂರ್ಯೋದಯ ಹಾಗೂ ಸೂರ್ಯಾಸ್ತದ ಹೊತ್ತಿಗೆ ಮೋಡಗಳೆಲ್ಲ ಝಗಝಗಿಸುವ ಸುವರ್ಣ ವರ್ಣ

ತಳೆದಿರುತ್ತವೆ. ಆ ಹೊಳಪು, ಆ ಮಿಂಚು ಎಂಥ ಚತುರ ಅಕ್ಕಸಾಲಿಗನೂ ತನ್ನ ಕಸಬಿನಲ್ಲಿ ಬಿಂಬಿಸಲಾರ. ಇಂಥ ಮೋಡಗಳ ಸೌಂದರ್ಯ, ಕಡಲ ನೀರಿನಲ್ಲಿ ಅದರ ಪ್ರತಿಬಿಂಬದಲ್ಲಂತೂ ವರ್ಣಿಸಲಾಗದಷ್ಟು ಅಪೂರ್ವ ಅನುಭವ!

ಅಪರೂಪಕ್ಕೆ ಸೂರ್ಯದೇವನು ರಕ್ತದೋಕುಳಿ ಆಡಿದನೋ ಎಂದು ಅನುಮಾನ ಪಡುವಷ್ಟು ಮೋಡಗಳು ಕೆಂಪಾಗಿ ಕಾಣುತ್ತಿರುತ್ತವೆ. ಮಳೆಗಾಲದ ಹುಣ್ಣಿಮೆರಾತ್ರಿಯಲ್ಲಿ ಮೋಡಗಳು ಚಂದ್ರನೊಡನೆ ಮುಟ್ಟಾಟದಲ್ಲಿ ತೊಡಗಿರುತ್ತವೆ. ಆಗ ಮೇಘರಾಶಿಗಳು ತಿಳಿಹಳದಿ ವರ್ಣವನ್ನು ತಳೆದಿರುತ್ತವೆ. ಆದರೆ ಅವು ತಮ್ಮ ಮುಖದ ಕಳೆಯನ್ನು ಬದಲಿಸಲು ಹೆಚ್ಚು ಸಮಯ ತೆಗೆದುಕೊಳ್ಳುವದಿಲ್ಲ. ಚೀತ್ಕಾರದ ಧ್ವನಿಯಲ್ಲಿ ಗುಡುಗುತ್ತ, ಕಣ್ಣುಗಳಿಂದ ಮಿಂಚು ಹೊರಹಾಕುತ್ತ ಏಕ ಪ್ರಕಾರವಾಗಿ ಮಳೆಯನ್ನು ಸುರಿಸಲಾರಂಭಿಸುತ್ತವೆ. ಇವುಗಳ ಕೃಪಾಕಟಾಕ್ಷದಿಂದಾಗಿ ಭೂಮಂಡಲದಲ್ಲಿ ಅತಿವೃಷ್ಟಿ, ಅನಾವೃಷ್ಟಿಗಳು ಸಂಭವಿಸಿ, ಮಂತ್ರಿ ಮಹೋದಯರಿಗೆಲ್ಲ ತಮ್ಮ ಜೇಬುಗಳನ್ನು ತುಂಬಿಸಿಕೊಳ್ಳಲು ಸಾಧ್ಯವಾಗುವದು!

ಇನ್ನು, ಈ ಮೋಹಕ ಮೋಡಗಳ ಛಾಯಾಗ್ರಹಣವೋ ಕಾಲೇಜು ವಿದ್ಯಾರ್ಥಿನಿಯರನ್ನು ಕ್ಲಿಕ್ಕಿಸುವದಕ್ಕಿಂತ ಬಿಗಿಯಾದದ್ದು! ಹಕ್ಕಿ ಹಾಗೂ ಹೆಣ್ಣುಗಳಂತೆ ಅವುಗಳ ಭಾವ ಹಾಗೂ ಚಲನವಲನಗಳನ್ನು ಮೊದಲು ಆಳವಾಗಿ ಅಭ್ಯಸಿಸಬೇಕು. ಸ್ವಚಾಲಿತ ಕ್ಯಾಮರಾಗಳ ಕಣ್ಣಿಗೆ ಇವು ಸುಲಭವಾಗಿ ಮಣ್ಣು ಎರಚುವವು. ಪ್ರಕೃತಿಗಿಂತ ಎಷ್ಟೋ ಪಾಲು ಇವು ತೇಜಃಪುಂಜವಾಗಿರುವದರಿಂದ ಬೇರೆಯೇ ರೀತಿಯಲ್ಲಿ ಇವನ್ನು ಸೆರೆಹಿಡಿಯಬೇಕಾಗುತ್ತದೆ. ಈ ಕಾರಣಕ್ಕಾಗಿ ಸರ್ವಸಾಧಾರಣ ಜನರು ತೆಗೆದ ಸೃಷ್ಟಿ ಸೌಂದರ್ಯದ ಛಾಯಾಚಿತ್ರಗಳಲ್ಲಿ ಮೋಡಗಳು ಮೂಡುವದೇ ಇಲ್ಲ! ಅವುಗಳನ್ನು ಮೂಡಿಸಲು ಹಳದಿ, ಕಿತ್ತಳೆ ಇಲ್ಲವೇ ಕೆಂಪು ಫಿಲ್ಟರ್‌ಗಳನ್ನು ಬಳಸಬೇಕಾಗುತ್ತದೆ. ಇಲ್ಲವೇ ಮೋಡಗಳನ್ನೇ ಪ್ರತ್ಯೇಕವಾಗಿ ಕ್ಲಿಕ್ಕಿಸಿ, ನಂತರ ಕತ್ತಲೆ ಕೋಣೆಯಲ್ಲಿ ಅವುಗಳನ್ನು ಹೊಂದಿಸಿಕೊಳ್ಳಬೇಕಾಗುತ್ತದೆ. ಕಳೆದ ಮೂರು ತಿಂಗಳಲ್ಲಿ ಒಂದು ಸಹಸ್ರ ಮೋಡಗಳ ಛಾಯಾಚಿತ್ರಗಳನ್ನು ತೆಗೆದಿದ್ದೇನೆ ಎಂದರೆ ಯಾರೂ ನಂಬಲಿಕ್ಕಿಲ್ಲ! ಮೋಡಗಳ ಚಿತ್ರೀಕರಣಕ್ಕೆ ಕಪ್ಪು-ಬಿಳುಪು ಫಿಲ್ಮ್ ವಾಸಿ. ಇನ್ನು ಮುಂದೆ ಮುದ್ರಿಸಬೇಕೆಂದಿರುವ ಹಣ್ಣು, ಹೂ, ಹಕ್ಕಿಗಳಿಗೆ ಹಿನ್ನೆಲೆಯಾಗಿ ಈ ಮೋಡಗಳನ್ನು ಜೋಡಿಸಿದರೆ, ಅವು ಕಣ್ಣಿಗೆ ಹಬ್ಬವಾಗುವದರಲ್ಲಿ ಅನುಮಾನವಿಲ್ಲ!

◆ ◆ ◆

೨೮. ಫೋನಾಯಣ

ಅನೇಕದಿನಗಳಿಂದ ನಿನ್ನ ಪತ್ರದರ್ಶನ ಆಗಿಲ್ಲ. ಎಂದಿನಂತೆ ಬಿಡುವು ಆಗಿಲ್ಲ ಅಲ್ಲವೇ? ಫೋನಕರೆಯ ಮೇಲೆ ಹೆಚ್ಚಿನ ವಿಶ್ವಾಸವಿಟ್ಟು ಪತ್ರ ಬರೆಯುವದನ್ನು ಕಡಿಮೆ ಮಾಡಬೇಡ. ಏಕೆಂದರೆ ಇತ್ತೀಚೆಗೆ ಮನೆಯ ಫೋನಿನಿಂದ ಪರ ಊರಿಗೆ ಮಾಡಿದಾಗೆಲ್ಲ 'ನಿಮ್ಮ ಫೋನಿಗೆ ಈ ಸವಲತ್ತು ಇಲ್ಲ!' ಎಂಬ ಸಿದ್ಧ ಉತ್ತರಬರುತ್ತದೆ. ಯಾರದೋ ಕಿತಾಪತಿ ಇರಬೇಕು. ಆದರೆ ಪರ ಊರಿನಿಂದ ಮಾಡಿದ ಫೋನ ಕರೆಗಳು ಬರುತ್ತವೆಯೋ ಇಲ್ಲವೋ ಎಂದು ಖಚಿತವಾಗಿ ತಿಳಿದಿಲ್ಲ. ಪ್ರತಿಸಲವೂ ಭಾರೀ ಮಳೆಯಾದಾಗ ಫೋನ ವ್ಯವಸ್ಥೆ ಅಸ್ತವ್ಯಸ್ತವಾಗುವದು ತೀರ ಸಾಮಾನ್ಯ. ಪ್ರದೀಪನು ಬೆಂಗಳೂರಿಗೆ ಬಂದಾಗ ಹೇಳಿದ್ದೆಂದರೆ, ಪೋಸ್ಟ ಆಫೀಸಿನಲ್ಲಿ ಫೋನಿಸಿದಾಗ ನಂಬರ ಸಿಗುತ್ತಿರಲಿಲ್ಲ. ಆದರೆ ತಮ್ಮ ಅಂಗಡಿಯಿಂದ ನಂಬರ ತಿರುಗಿಸಿದಾಗ, ನಮ್ಮ ನಂಬರ ಸಿಕ್ಕಿ ಬಿಟ್ಟಿತ್ತು! ಇದಕ್ಕೆ ಹಣ ಕೊಡಬೇಕಾದ್ದರಿಂದ ಅಂಗಡಿಯಿಂದ ಸೋದರರು ಕೊಂಚ ಹೆಚ್ಚಾಗಿಯೇ ಮಾತನಾಡಿದರು.

ಬೆಂಗಳೂರಿನ ಎಸ್. ಟಿ. ಡಿ. ನಂಬರ ಬದಲಾದದ್ದು ನಿನಗೆ ತಿಳಿದಿರಬೇಕು. ಈಗ ೦೮೦ ಮಾಡಿದ್ದಾರೆ. ಇಂದಿನ ದಿನಗಳಲ್ಲಿ ಭಾರತದಿಂದ ಅಮೇರಿಕೆಗೆ ಫೋನು ಮಾಡುವವರಿಗೆ ಹೆಚ್ಚಿನ ಸೌಲಭ್ಯಗಳನ್ನು ಕೊಡಮಾಡಿದ್ದಾರೆ. ಇದೆಲ್ಲ ಡಾಲರ್‌ಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಪಡೆಯುವದಕ್ಕಾಗಿ ಹೂಡಿದ ಉಪಾಯವಿರಲು ಸಾಕು. ಇಲ್ಲಿ ಹಣಕೊಡದೇ ಅಮೇರಿಕೆಗೆ ಫೋನಮಾಡಲು ಬಯಸುವವರು, ನೇರ ನ್ಯೂಯಾರ್ಕಿಗೆ ಫೋನಮಾಡಬಹುದು. ಅಲ್ಲಿ ಫೋನ ಪಡೆಯುವ ವ್ಯಕ್ತಿಯಿಂದ ಹಣ ಚುಕ್ತಾ ಮಾಡುವ ಆಶ್ವಾಸನೆ ಸಿಕ್ಕಾಗ ಫೋನ ನಂಬರ ಜೋಡಿಸಲಾಗುತ್ತದೆ. ಈ ವ್ಯವಸ್ಥೆಯಿಂದಾಗಿ ಜೇಬಿನಲ್ಲಿ ಒಂದು ಪೈಸಾ ಇಲ್ಲದಿದ್ದರೂ ಅಮೇರಿಕೆಯಲ್ಲಿರುವವರೊಡನೆ ಮಾತನಾಡಬಹುದಾಗಿದೆ. ಈ ಸೌಲಭ್ಯದ ಲಾಭ ಪಡೆದು ನಿನಗೆ ಭಾರತದಿಂದ ಬರುವ ಫೋನ್ ಕರೆಗಳ ಹಾವಳಿ ಹೆಚ್ಚಾಗಬಹುದು. ಆದ್ದರಿಂದ ಫೋನ್ ಕರೆಯ ಹಣಕೊಡಲು ಒಪ್ಪದವರೊಂದಿಗೆ ಹರಟೆ ಹೊಡೆಯುವದನ್ನು ನಿರಾಕರಿಸುವದು ಮೇಲು! ನಿನ್ನ ಫೋನ್ ಬಿಲ್ ಮೊತ್ತ ತಿಳಿದು ಹೌಹಾರಿದ್ದೇನೆ. ಇದಕ್ಕೆ ಈಗಲೇ ತಡೆ ಹಾಕದಿದ್ದರೆ, ಬರುವ ದಿನಗಳಲ್ಲಿ ಅದು ಗಗನಕ್ಕೆ ಏರುವದು ಖಂಡಿತ! ಅಶೋಕನಿಗೆ ತಿಂಗಳಿಗೆ ಆರು ಸಾವಿರ ರೂಪಾಯಿ ಸಂಬಳ ಇರುವಾಗ ಆತನ ಫೋನ ಬಿಲ್ಲು ಎರಡು ಸಾವಿರ ರೂಪಾಯಿ ಬರುತ್ತಿತ್ತು. ಇದಕ್ಕೆ ಮುಖ್ಯ ಕಾರಣ ಅವನ ಸೋದರಿಯರಿಗೆ, ತಾಯಿಗೆ ಪತ್ರ ಬರೆಯುವ ಅಭ್ಯಾಸ ಇಲ್ಲವಂತೆ! ಆದರೆ ಮತ್ತೆ ಮತ್ತೆ ಪರಸ್ಪರ ಮಾತನಾಡದಿದ್ದರೆ ಮನಸ್ಸಿಗೆ ನೆಮ್ಮದಿಯೇ ಇರುವದಿಲ್ಲವಂತೆ. ಇಂದಿನ ದಿನಗಳಲ್ಲಿ ಹೊನ್ನಾವರದಲ್ಲಿ ಮನೆ ಮನೆಗೆ ಫೋನು ಬಂದಿದ್ದರಿಂದ ಎರಡು ದಿನಕ್ಕೊಮ್ಮೆ ಕಾರಣವಿಲ್ಲದಿದ್ದರೂ ಫೋನು ಕರೆಗಳು ಬರುತ್ತಿರುತ್ತವೆ. ಪತ್ರ ಬರೆಯುವದು ಎಲ್ಲರಿಗೂ ಬೇಸರ. ಪ್ರದೀಪನು ತನ್ನ ಮನೆಯಿಂದ ಬೆಂಗಳೂರಿಗೆ ಹೊರಟಿದ್ದೇನೆ, ಎಂದು

ಫೋನಿಸಿದರೆ, ನಂತರ ತುಳಸು ತನ್ನ ಮನೆಯಿಂದ 'ಪ್ರದೀಪನು ಬೆಂಗಳೂರಿಗೆ ಹೊರಟಿದ್ದಾನೆ' ಎಂದು ತಿಳಿಸುತ್ತಾನೆ. ಈಗ ಅಮೇರಿಕೆಯಲ್ಲಿರುವ ಮಕ್ಕಳೆಲ್ಲ ಭಾರತದಲ್ಲಿರುವ ತಂದೆ-ತಾಯಿಗಳೊಂದಿಗೆ ಬರೇ ಫೋನ ಸಂಪರ್ಕ ಇಟ್ಟಿರುತ್ತಾರೆ. ಮಾಲಿಯ ನೆರಮನೆಯವರ ಮಗನು ಅಮೇರಿಕೆಯಿಂದ ಫೋನಮಾಡಿದಾಗೆಲ್ಲ ಸಹಜವಾಗಿ ತಂದೆ-ತಾಯಿ ಅರ್ಧತಾಸು ಹರಟೆ ಹೊಡೆಯುತ್ತಾರಂತೆ! ಇಂಗ್ಲಿಷ ಬಾರದ ತೆಲಗು ತಾಯಿ, ಮಧ್ಯಮಧ್ಯ ಒಂದೊಂದು ಸಾಲು ಇಂಗ್ಲಿಷಿನಲ್ಲಿ ಮಾತನಾಡುವದನ್ನು ಕೇಳುವದೇ ಒಂದು ಮೋಜು ಅಂತೆ! ಇಷ್ಟಾಗಿ ಅವರಲ್ಲಿ ಫೋನು ಇಲ್ಲ. ನೆರಮನೆಯವರು ಕೂಗಿ ಇವರನ್ನು ಕರೆಯಬೇಕೆಂತೆ!

ಮನೆ ಮನೆಗೂ ಫೋನು ಬಂದದ್ದರಿಂದ ಹೊನ್ನಾವರದಿಂದ ಪತ್ರಗಳು ಬರುವದು ಕ್ವಚಿತ್ತಾಗಿತ್ತು. ಮೊನ್ನೆ ಅಪರೂಪಕ್ಕೆ ವಿಜಯಾಳ ಪತ್ರ ಬಂದಿದೆ. ತುಳಸುನ ಈ ತಿಂಗಳ ಫೋನ್ ಬಿಲ್ ಒಂದುವರೆ ಸಹಸ್ರ ರೂಪಾಯಿ ಬಂದಿದೆಯಂತೆ! ಕೇವಲ ಹದಿನೈದು ಪೈಸೆಯ ಪೋಸ್ಟ್ ಕಾರ್ಡಿನಿಂದ ಮುಗಿಸಬಹುದಾದಂತಹ ಕೆಲಸಗಳಿಗಾಗಿ ಐವತ್ತು ರೂಪಾಯಿ ಚಾರ್ಜ ಮಾಡುವ ಫೋನ್ ಬಳಸಿದರೆ ಏನಾಗುತ್ತದೆ? ೯೯% ರಷ್ಟು ಮಾತುಕತೆಯೆಲ್ಲ 'ಫಾಲ್ತು' ಎಂದು ಹೇಳಬೇಕಿಲ್ಲ. ಸಾಲದ್ದಕ್ಕೆ ಫೋನ್ ಬಂದ ನಂತರ ಮನೆಯಲ್ಲಿದ್ದುಕೊಂಡೇ ದಾಯಾದಿಗಳ ಚಾಡಿ ಮಾತನಾಡುವ ಚಪಲವೂ ಜನರಲ್ಲಿ ಹೆಚ್ಚಾಗುತ್ತಿದೆ. ಮಡದಿ-ಮಕ್ಕಳು, ಫೋನಿನ ದಾಸಾನುದಾಸರಾಗಿ ಬಿಟ್ಟಿದ್ದಾರೆ. ಯಾವ ಊರಿಗೇ ಹೋಗಲಿ, ತಾಯಿಗೆ ಕಾಳಜಿ ಆಗುತ್ತದೆ! ಎಂದು ಫೋನು ಮಾಡುತ್ತಿರುತ್ತಾರೆ. ಬೇರೆ ಬೇರೆ ಊರಲ್ಲಿರುವ ಸೋದರ ಸೋದರಿಯರಿಗೆ ಸಂಪರ್ಕ ಸಾಧನೆಯ 'ಸಸಾರ' ವ್ಯವಸ್ಥೆ ಇದು. ಒಂದೇ ಊರಲ್ಲಿರುವ ತವರುಮನೆಯವರಿಗಂತೂ ಲೋಕಲ್ ಕಾಲ್ ವ್ಯವಸ್ಥೆ ಇದ್ದು ಅದನ್ನು ಹುಸಿ ಹೋಗಗೊಡಲಾದೀತೇ? ಅನುಕೂಲವಂತರೆಲ್ಲ ಹೆಚ್ಚೆಚ್ಚು ಸೋಮಾರಿಗಳಾಗುತ್ತಾರೆಂದು ಊಹಿಸಿದರೆ, ಫೋನು ತಿರುಗಿಸುವ 'ಚಾಳಿ' ಎಲ್ಲ ವರ್ಗದವರಿಗೂ ಅಂಟಿದೆ! ಪುಕ್ಕಟೆ, ಅದೂ ಆಫೀಸಿನದು ಸಿಕ್ಕರೆ, ಬಳಸುವದಕ್ಕೆ ಮಿತಿ ಎಂಬುದಿಲ್ಲ. ಕೆಲಸದ ಆಳುಗಳಿಗಂತೂ ಅದಿಲ್ಲದೇ ದಿನ ಬೆಳಗಾಗುವದಿಲ್ಲ.

ಮೇಲಿನದನ್ನು ಬರೆಯುತ್ತಿದ್ದಂತೆ, ನಿನ್ನ ಫೋನು ಬಂದಿತು. ನನ್ನ ಪತ್ರದಲ್ಲಿ ಫೋನು+ಪತ್ರದ ವಿಷಯವನ್ನು ಅದಾಗಲೇ ಬರೆದಿರುವೆನೆಂದು ನಿನ್ನ ಅಮ್ಮನಿಗೆ ಆಶ್ಚರ್ಯವಾಯಿತು. ವಿಕಾಸನು ಭಾರತಕ್ಕೆ ಪ್ರತಿಸಲ ಫೋನಿಸಿದಾಗ ಎಷ್ಟು ಖರ್ಚು ಬರುತ್ತದೆ? ಎಂದು ಉಮೇಶನು ವಿಚಾರಿಸಿದನು. ವಿಕಾಸನಿಗೇ ತಿಳಿದಿದೆಯೋ ಇಲ್ಲವೋ! ನಾನು ಹೇಗೆ ಹೇಳುವದು? ಎಂದು ಜಾರಿಕೊಳ್ಳಬೇಕಾಯಿತು. ಇನ್ನು ಮುಂದೆಯಾದರೂ, ಅತಿ ಕಡಿಮೆ ಖರ್ಚಿನಲ್ಲಿ ಎಷ್ಟು ಹೊತ್ತು ಮಾತನಾಡಬಹುದು? ಎಂಬ ವಿವರಗಳನ್ನು ಅರಿತು ತಿಳಿಸಿದರೆ, ಆ ವೇಳೆ ಹಾಗೂ ಅವಧಿಯಲ್ಲಿ ಮಾತುಕತೆ ಮುಗಿಸಲು ಯತ್ನಿಸಲಾಗುವದು. ಪ್ರತಿ ವಾರಾಂತ್ಯದಲ್ಲಿ ಪತ್ರ ಬರೆಯುತ್ತೇನೆ ಎಂದು ನಿರ್ಧರಿಸಿ ಅದರಂತೆ ಉತ್ತರ ಬರೆಯುವದನ್ನು ರೂಢಿಸಿಕೊಂಡರೆ ಸಮಯದ ಅಭಾವ

ಅನಿಸಲಾರದು!

ನಾನು, ಜ್ಯೋತ್ಸ್ನಾಳ ಕಿರಿ ಆಪರೇಶನ್ ವಿಚಾರ ಯಾರಿಗೂ, ನಿನಗೂ ತಿಳಿಸಿರಲಿಲ್ಲ ಅಲ್ಲವೇ? ಆದರೆ ಜ್ಯೋತ್ಸ್ನಾಗೆ ಇದನ್ನು ನಿನ್ನಿಂದ ಬಚ್ಚಿಡಲು ಮನಸ್ಸಾಗದೇ ಹೇಳಿಯೇ ಬಿಟ್ಟಳು. ಕೆಲಸದ ಆಳು, ಅಡಿಗೆಯವರು, ಹಾಗೂ ಫೋನು, ಅತ್ಯವಶ್ಯವಿದ್ದಾಗಲೇ ಕೈಕೊಡುವದು ಸಾಮಾನ್ಯವಲ್ಲವೇ? ಅಂತೆಯೇ ಅದು ಆಸ್ಪತ್ರೆಗೆ ಜ್ಯೋತ್ಸ್ನಾ ದಾಖಲಾದ ಮರುದಿನವೇ ತಾನೂ ಮಲಗಿಬಿಟ್ಟಿತು! ಮತ್ತೆ ನೀನು ಅವಳ ಆರೋಗ್ಯ ವಿಚಾರಿಸಲು ಫೋನಿಸಿದಾಗ, ಅದಿನ್ನೂ ಗಾಢ ನಿದ್ರೆಯಲ್ಲಿತ್ತು. ನಿನಗೆ ಗಾಬರಿಯೆನಿಸಿ ಹೊನ್ನಾವರಕ್ಕೆ ಫೋನಿಸಿದಾಗ, ಅವರಿಗೆ ಅತ್ಯಾಶ್ಚರ್ಯವಾಗಿರಬೇಕು. ಪ್ರದೀಪನು ಆ ಕೂಡಲೇ ನನ್ನನ್ನು ಸಂಪರ್ಕಿಸಲು ಯತ್ನಿಸಿದನಂತೆ. ಉತ್ತರ ಬಾರದಿರಲು ಮಾಲಿಯ ನೆರೆಮನೆಯ ಕಾವೇರಮ್ಮನಿಗೆ 'ಎಮರ್ಜನ್ಸಿ' ಎಂದು ಟ್ರಂಕ್ ಕಾಲ್ ಮಾಡಿ ಮಾಲಿಗೆ ಕರೆಯಲು ಹೇಳಿದನಂತೆ. ಅವಳಿಂದ ಅವನಿಗೆ ನಿಜಸ್ಥಿತಿ ತಿಳಿದಿರಬೇಕು. ಫೋನಿನ ಸವಲತ್ತನ್ನು ಮುಂದಾಲೋಚನೆಯಿಂದ ಬಳಸದಿದ್ದರೆ, ಇಂತಹ ಗೊಂದಲಗಳಾಗುವದು ತೀರ ಸಾಮಾನ್ಯ. ನಮ್ಮ ಫೋನ್‌ದುರಸ್ತಿಯ ಬಗ್ಗೆ ದೂರು ಕೊಟ್ಟರೂ, ತಿರುಗಿ ಅದರಲ್ಲಿ ಜೀವಕಳೆ ತುಂಬಲು ಒಂದು ವಾರವನ್ನೇ ತೆಗೆದುಕೊಂಡರು. ಸರಿಯಾದ ಕೂಡಲೇ ಮಗನ ಫೋನು ಬಂದೇ ಬರುತ್ತದೆ! ಎಂದು ನಿರೀಕ್ಷಿಸುವದು ಸರಿಯೇ? ಮಗನ ಫೋನು, ಪತ್ರ ಬಾರದೇ ಯುಗಗಳೇ ಕಳೆದವು ಎಂಬ ಭ್ರಾಂತಿಯಲ್ಲಿದ್ದಳು, ಜ್ಯೋತ್ಸ್ನಾ. ನೀನು ಪ್ರವಾಸದಿಂದ ಹಿಂದಿರುಗಿದಾಕ್ಷಣ ಫೋನಿಸಿದ್ದರಿಂದ ಅವಳಿಗೆ ಜೀವ ಬಂದಂತಾಯಿತು! ಜೀವನದ ಸಾಮಾನ್ಯ ಆಗು-ಹೋಗುಗಳ ಬಗ್ಗೆ ತಾಳ್ಮೆಯಿಂದ ಪರಿಚಯ ಮಾಡಿಕೊಳ್ಳದಿದ್ದರೆ, ಇಂತಹ 'ನಿರಾಶೆ'ಗಳನ್ನು ಆಗಾಗ ಎದುರಿಸಲೇ ಬೇಕಾಗುತ್ತದೆ!

ಅದರಂತೆ ತನ್ನ ಸೊಂಡೂರಿನ ಇತಿಹಾಸ ಸಮ್ಮೇಳನ ದಿನಾಂಕಗಳನ್ನು ನಿನ್ನಮ್ಮ ಮುಂಚಿತವಾಗಿ ತಿಳಿಸಿದ್ದರೆ ಈ ರವಿವಾರ ನೀನು ಫೋನಿಸುವ ತಾಪತ್ರಯ ಇರುತ್ತಿರಲಿಲ್ಲ. ನಾನು ಮಾತನಾಡಿದೆನಾದರೂ, ನಿನ್ನೊಡನೆ ಮಾತು - ಕತೆಯನ್ನು ಜ್ಯೋತ್ಸ್ನಾಳೇ ಜಾಸ್ತಿ ಮಿಸ್ ಮಾಡುತ್ತಾಳೆ! ಇಂದಿನ ದಿನಗಳಲ್ಲಿ ಮನೆಮನೆಗೂ ಫೋನು ಬಂದು ಮುಂದಾಗಿ ಯೋಜಿಸುವ, ವಿಚಾರ ಮಾಡುವ ಕಲೆಯನ್ನೇ ಜನರು ಮರೆಯಲಾರಂಭಿಸಿದ್ದಾರೆ. ನಮ್ಮೂರಿನವರಂತೂ ಹುಟ್ಟಾ ಫೋನನ್ನು ಕೈಯಲ್ಲಿ ಹಿಡಿದೇ ಇದ್ದವರಂತೆ ವರ್ತಿಸಲಾರಂಭಿಸಿದ್ದಾರೆ. ಮನುಷ್ಯನು ಅದೆಷ್ಟು ಬೇಗ ಆಧುನಿಕ ಸವಲತ್ತುಗಳ ದಾಸಾನು ದಾಸನಾಗಿ ಬಿಡುತ್ತಾನಲ್ಲ! ಎಂದು ವಿಸ್ಮಯ ಪಡುವಂತೆ ಆಗಿದೆ. ಫೋನಿನಂತೆ ಮನೆಮನೆಯಲ್ಲೂ ಟಿ. ವಿ. ಸೋಂಕು ರೋಗ ಹರಡಿಕೊಂಡಿದೆ. ಪ್ರತಿಯೊಂದು ಪತ್ರಿಕೆ, ಪ್ರತಿಯೊಬ್ಬ ಪಾಲಕರು, ಇದರ ಬಗ್ಗೆ ಬೊಬ್ಬೆ ಇಡುತ್ತಿದ್ದರೂ, ಯಾರಿಂದಲೂ ಪರಿಹಾರ ಕೈಕೊಳ್ಳಲಾಗಿಲ್ಲ. ಏಕೆಂದರೆ ಪಾಲಕರೂ ಒಳಗೊಂಡಂತೆ ಮನೆಯ ಹಿರಿಯರೆಲ್ಲ ಟಿ. ವಿ.ಯ ಮಹಾಭಕ್ತರಾಗಿಬಿಟ್ಟಿದ್ದಾರೆ.

◆ ◆ ◆

೨೯. ಪುಟ್ಟ ಜೀವಿಲೋಕ

ಹೋದವರ್ಷ, ವಸಂತ ಋತು ಭೂಮಿಗೆ ಇಳಿದು ಬರುವಾಗ ಅದರ ಸ್ವಾಗತಕ್ಕಾಗಿ ಗಿಡಮರಗಳು ಹೂಬಿಟ್ಟು, ಗಿಳಿ-ಕೋಗಿಲೆಗಳು ಹಾಡುತ್ತ ಎಲ್ಲೆಡೆಯಲ್ಲಿ ಅಡರಿದ ಸಡಗರ ಕುರಿತಾಗಿ ಬರೆದಿದ್ದೆ. ಈಗ ನಾನು ಬೆಳೆಸಿದ ಗೊಂಡೆ ಹೂವಿನ ತೋಟದ ಕುರಿತಾಗಿ ಬರೆಯಬೇಕೆಂದಿರುವೆ. ಆಸೆಯಿಂದ ಬೀಜ ಬಿತ್ತಿದ್ದೆ. ಆದರೆ ನಮ್ಮ ಬೆಡ್‌ರೂಮಿನ ಬಾಲ್ಕನಿಯ ಮಣ್ಣು ಶಕ್ತಿಹೀನವಾಗಿದ್ದರಿಂದ, ಸುಂದರ ಹೂಗಳನ್ನು ಬೆಳೆಸುವದು ಅಸಾಧ್ಯವೆಂದು ಭ್ರಮಿಸಿದ್ದೆ. ಆದರೆ ನಂತರ ಕೇಶರದಂತೆ ನಾಜೂಕಾಗಿದ್ದ ಗೊಂಡೆ ಬೀಜ ಮೊಳಕೆ ಒಡೆದು ಜೀವ ಕಳೆ ತುಂಬಿಕೊಂಡಾಗ ಹೊಸ ಆಸೆ ಮೂಡಿತು. ಅಬ್ಬರದ ಗಾಳಿ ಬೀಸಿದಾಗ, ನೀರು ಹನಿಸಿದಾಗ, ಸಸಿಗಳು ಅವು ನೆಲಸಮವಾಗುತ್ತಿದ್ದರಿಂದ, ಬೀಜಗಳು ನಿಶ್ಪ್ರಾಣವಾಗಿವೆ ಅಂದುಕೊಂಡಿದ್ದೆ. ಆದರೆ ಕೇವಲ ನೀರನ್ನು ಕುಡಿದು ಬಾಲ್ಯಾವಸ್ಥೆಯನ್ನು ಕಳೆದು ಮೈ, ಕೈತುಂಬಿಸಿಕೊಂಡು 'ಪುಷ್ಪವತಿ'ಯರಾದ ನಳನಳಿಸುವ ಗಿಡಗಳನ್ನು ಕಂಡಾಗ ನಿಸರ್ಗ ಅದೆಷ್ಟು ಅಮೋಘವಾಗಿದೆ! ಎಂದು ಅಚ್ಚರಿಪಟ್ಟೆ. ಒಂದು ದೇಟಿಗೆ ಮಳೆಯ ಹನಿಗಾತ್ರದ ಒಂದು ಮೊಗ್ಗು. ಅದರ ಹಚ್ಚ ಹಸಿರು ಕವಚಗಳು ತೆರೆದುಕೊಳ್ಳುತ್ತಿದ್ದಂತೆ, ಒಳಗೆ ಅಡಗಿಕುಳಿತಿದ್ದ ಸುವರ್ಣ ವರ್ಣದ ಪಕಳೆಗಳು ಕಾಣಲಾರಂಭಿಸಿದವು. ಮುಂಜಾನೆಗಿಂತ ಸಂಜೆ, ಇಂದಿನಕ್ಕಿಂತ ನಾಳೆ ಹೂಗಳು, ಪ್ರಫುಲ್ಲವದನ ತಾಳಿದವು. ಆಚೆ ಈಚೆ ಬಳಕುತ್ತ, ಒಂದನ್ನೊಂದು ತಬ್ಬಿಕೊಳ್ಳುತ್ತ, ಮಂದ ಮಾರುತನನ್ನು ಬರಮಾಡಿಕೊಳ್ಳುತ್ತ, ಕಣ್ಣಿಗೆ ಹಬ್ಬವನ್ನುಂಟು ಮಾಡಲಾರಂಭಿಸಿದವು.

ಒಂದು, ಎರಡು, ಹತ್ತು, ಇಪ್ಪತ್ತು, ನೂರಾರು, ಹೂಗಳು ಹೊತ್ತುನಿಂತ ಗಿಡಗಳಿಗೆ ಪರ್ಣಗಳು ತೀರ ಕಡಿಮೆ ಇದ್ದುದರಿಂದ ದಾರಿ ಹೋಕರಿಗೂ ನಮ್ಮ ಮಹಡಿಯ ಬಾಲ್ಕನಿ, ಆಕರ್ಷಿಸಲಾರಂಭಿಸಿತು. ಪ್ರತಿಯೊಂದು ಹೂವೂ ಒಂದು ಬೊಗಸೆಯ ಗಾತ್ರದಷ್ಟು ಅಗಲವಾಗಿದ್ದವು. ಅವನ್ನು ನೋಡುತ್ತ ನಿಲ್ಲುವದೇ ಒಂದು ಅಪೂರ್ವ ಅನುಭವ. ಒಂದು ಹೂ ಇನ್ನೊಂದರಂತಿಲ್ಲ. ಅವುಗಳೆಲ್ಲ ಕೇಸರಿ ಬಣ್ಣದವು ಆದರೂ ಕೆಲವು ತಿಳಿಹಳದಿಯವು. ಇನ್ನೂ ಕೆಲವು ರಬ್ಬಾಗಿ ಶೋಭಿಸುತ್ತಿದ್ದವು. ಸಸ್ಯಶಾಸ್ತ್ರಜ್ಞರು ಇವನ್ನು ಸಂಯುಕ್ತ ಹೂ ಎಂದು ಗುರುತಿಸುತ್ತಾರೆ. ಅವುಗಳಲ್ಲಿ ಪಕಳೆಗಳು ಒಂದೊಂದು ಹೂವನ್ನು ಪೋಣಿಸಿದ ರೀತಿ ತೀರ ಚಮತ್ಕಾರಿಕವಾಗಿತ್ತು. ಮುತ್ತು, ರತ್ನ, ವಜ್ರ, ಕೆಂಪುಮಣಿಗಳನ್ನು ಸುವರ್ಣಕಾರನು ಜೋಡಿಸಿ, ಭಾರಿ ಬೆಲೆಬಾಳುವ ಆಭರಣ ಮಾಡಿದರೂ ಕಾಸಿಲ್ಲದ ಈ ನೈಸರ್ಗಿಕ ಆಭರಣಕ್ಕೆ ಸರಿಸಾಟಿ ಇಲ್ಲವೆನಿಸಿತು.

ನಮ್ಮ ಊರಿನಲ್ಲಿ ದೀಪಾವಳಿಯ ದಿನ, ಹಂಡೆ, ಕೊಡಪಾನ ಚಂಬುಗಳನ್ನೆಲ್ಲ ಗೊಂಡೆ ಹೂವಿನ ಮಾಲೆಗಳಿಂದ ಅಲಂಕರಿಸುತ್ತಾರೆ. ಗೋಪೂಜೆಯ ದಿನ, ಇಂಥವೇ ಮಾಲೆಗಳಿಂದ ಸಿಂಗರಿಸುತ್ತಾರೆ. ಪುಷ್ಪಲೋಕದಲ್ಲಿ ಈ ಗೊಂಡೆ ಹೂ, ದೀನದಲಿತರ

ವರ್ಗಕ್ಕೆ ಸೇರಿರುವದರಿಂದ ಜಾನವರಗಳಿಗೆ ತೊಡಿಸಲು ಉಪಯೋಗಿಸುತ್ತಾರೆ! ಎಂದುಕೊಂಡಿದ್ದೆ. ಆದರೆ ಗಿಡದಲ್ಲಿ ಪುಷ್ಕಳವಾಗಿ ಅರಳಿನಿಂತು ನಲಿಯುವ ಚೆಲುವನ್ನು ಕಂಡಾಗ ನನ್ನ ಅನಿಸುವಿಕೆಯಲ್ಲಿ ಹುರುಳಿಲ್ಲ ಎಂದು ಅನಿಸದೇ ಇರಲಿಲ್ಲ.

ಈ ಪುಟ್ಟ ಕೈದೋಟದಿಂದಾಗಿ ಅಲ್ಲಿ ಒಂದು ಹೊಸ 'ಜೀವವಿಶ್ವ' ತಲೆ ಎತ್ತಲಾರಂಭಿಸಿತು. ಸಸ್ಯತಗಣಿ (ಎಫಿಡ್)ಗಳಿಗೆ ರೆಕ್ಕೆಗಳಿದ್ದರೂ, ಅಬ್ಬರದ ಗಾಳಿಯ ನೆರವಿನಿಂದ ತೇಲುತ್ತ ಬಂದು ಪರ್ಣಗಳ ಮೇಲೆ ಬೇರುಬಿಟ್ಟವು. ವಾಸಸ್ಥಾನದಲ್ಲಿಯೇ ವಿಪರೀತ ಆಹಾರ ಲಭ್ಯವಿದ್ದರಿಂದ ಬೃಹತ್ ಪ್ರಮಾಣದಲ್ಲಿ ಸಂತಾನೋತ್ಪತ್ತಿಯಲ್ಲಿ ತೊಡಗಿದವು. ಈ ಗುಟ್ಟನ್ನು ಅದು ಹೇಗೋ ಇರುವೆಗಳು ಅರಿತು, ಆಹಾರ ಹುಡುಕುತ್ತ ಅಡಿಗೆ ಮನೆಗೆ ದಾಳಿ ಇಡುವ ಬದಲಾಗಿ ಈ ಗಿಡಗಳನ್ನೇರಲಾರಂಭಿಸಿದವು! ತತ್ತರವೆತ್ತರ ನಡಿಗೆಯಲ್ಲಿ ಎಫಿಡ್‌ಗಳ ಸಮೂಹವನ್ನು ಗುರುತಿಸಿ ಅವುಗಳ ಬೆನ್ನುಗಳನ್ನು ತಮ್ಮ ಮೀಸೆಗಳಿಂದ ಸ್ಪರ್ಶಿಸಿ, ಈ ಸುಖದಿಂದ ಹೊರ ಹೊಮ್ಮಿಸಿದ ಸಿಹಿದ್ರವ್ಯವನ್ನು ಹೊತ್ತು ಗೂಡಿಗೆ ಧಾವಿಸಲಾರಂಭಿಸಿದವು. ಈ ಇರುವೆಗಳಿಗೆ ಆಸೆ ಪಟ್ಟು ಒಂದು 'ಮರಿಶಿವನ ಕುದುರೆ' ಹೂವಿನ ಮರೆಯಲ್ಲಿ ಅವಿತು ಕುಳಿತು ಭೋಜನ ಕೂಟ ನಡೆಸಲಾರಂಭಿಸಿತು.

ಉದ್ದಜಿಗಿತದಲ್ಲಿ ಸಹಜವಾಗಿ ಪ್ರಥಮಸ್ಥಾನ ಪಡೆಯಬಹುದಾದ 'ಚಿಟ್ಟೆ' ಮರೆಯೊಂದು ಎಲ್ಲಿಂದಲೋ ಜಿಗಿಯುತ್ತ ಬಂದು ದೊಡ್ಡದಾದ ಹೂವೊಂದರ ಮೇಲೆ ಆಕ್ರಮಣ ನಡೆಸಿತು. ಹಳದಿ ಹೂವಿನ ಮಧ್ಯದಲ್ಲಿ ಹಚ್ಚ ಹಸಿರು ಚಿಟ್ಟೆಯೊಂದು ಕುಳಿತು ಪ್ರತಿದಿನವೂ ಮುದ ನೀಡುತ್ತಿತ್ತು. ಕರ್‍ರಗಿನ ಚಿಕ್ಕ ಮಿಶ್ರಿ ಜೇನ್ನೊಣಗಳು, ಮಧುವಿಗಾಗಿ ಆಸೆಪಟ್ಟು, ಹೂವಿನಿಂದ ಹೂವಿಗೆ ನುಗ್ಗಲಾರಂಭಿಸಿದವು. ಜೇನಿನ ಉತ್ಪಾದನೆಗೆ ಅತ್ಯವಶ್ಯವಿದ್ದ ಪರಾಗ ಕಣಗಳನ್ನು ಶೇಖರಿಸಲು ಜೇನ್ನೊಣಗಳು ಭರ್‌ss ಎಂದು ಹಾರಿ ಬಂದು ಅವಸರವಸರವಾಗಿ ಕಣಗಳನ್ನು ತಮ್ಮ ಹಿಂಗಾಲ ತಗ್ಗುಗಳಲ್ಲಿ ಸೇರಿಸಿ ಗೂಡಿಗೆ ಹಿಂದಿರುಗಿದವು. ಕುಬ್ಜ ಪತಂಗಗಳು, ವಿರಾಮವಾಗಿ ಹೂವುಗಳ ಮೇಲೆ ಆರೂಢವಾಗಿ ಮಧು ಹೀರಿ, ಮತ್ತವಾದಾಗ, ತಮ್ಮ ರೆಕ್ಕೆಗಳನ್ನು ಬಿಚ್ಚುತ್ತ, ಮುಚ್ಚುತ್ತ ತಾವು ಅದೆಷ್ಟು ಆಕರ್ಷಕ! ಎಂದು ಮೆರೆದವು. ಚಂಚಲ ಸ್ವಭಾವದ ಪತಂಗಗಳು, ಎಲ್ಲಿಂದಲೋ ಹಾರುತ್ತ ಬಂದು, ಹೂವುಗಳನ್ನು ಸ್ಪರ್ಶಿಸುತ್ತ ಬೇರೆಲ್ಲಿಗೋ ಹಾರಿಹೋದವು. ಈ ಕೀಟಗಳ ಹಾರಾಟ, ಜಿಗಿದಾಟಗಳನ್ನು ಕಂಡು, ಜೇಡ ಹುಳುವಿಗೆ ಬಾಯಿ ನೀರು ಬಂದಿರಬೇಕು. ಅಂತೆಯೇ ಅದೂ ಅವೆಲ್ಲ ಹಾರಿ ಬರುವ ದಾರಿಗೆ ಅಡ್ಡವಾಗಿ ಬಲೆಯೊಂದನ್ನು ಹೆಣೆಯಲು ಪ್ರಾರಂಭಿಸಿತು. ಅತ್ಯಂತ ಜಿನುಗಾದ ದಾರವನ್ನು ಹೊರಹೊಮ್ಮಿಸುತ್ತ ಒಂದು ಗಿಡದಿಂದ ಇನ್ನೊಂದಕ್ಕೆ ಚಲಿಸುತ್ತ, ಅಡಿಪಾಯ ಸಿದ್ಧವಾದ ನಂತರ ಚಕ್ರಾಕಾರದಲ್ಲಿ ಚಲಿಸಲಾರಂಭಿಸಿತು. ಶರೀರದ ಹಿಂಭಾಗದಿಂದ ಹೊರಹಾಕಿದ ಎಳೆಗಳನ್ನು ಹಿಂಗಾಲಿನಿಂದ ಒಂದನ್ನೊಂದು ಅದು ಜೋಡಿಸುತ್ತ ಹೋಗುವದು ಅತ್ಯಂತ ಚಮತ್ಕಾರಿಕವಾದದ್ದು! ನಮ್ಮ ಶಾಲೆ-ಕಾಲೇಜುಗಳಲ್ಲಿ ಜೀವಿಗಳ ಈ ಚಮತ್ಕಾರಿಕ ನಡಾವಳಿಕೆಗಳನ್ನೆಲ್ಲ ವೀಕ್ಷಿಸಲು, ಅಭ್ಯಸಿಸಲು ಅನುವು ಮಾಡಿಕೊಡುವದೇ ಇಲ್ಲ. ಬರೇ ಅವುಗಳ ಕೈ, ಕಾಲು, ಮೀಸೆಗಳನ್ನು ಎಣಿಸಲು ಹಚ್ಚಿ

ಪದವಿಯನ್ನು ದಯಪಾಲಿಸಿ ಕಳಿಸುತ್ತಾರೆ. ಅಂತೆಯೇ ಹೆಚ್ಚಿನ ವಿದ್ಯಾರ್ಥಿಗಳು ಪ್ರಾಣಿ ಜೀವನ ಕುರಿತು ಅಜ್ಞಾನಿಯಾಗಿಯೇ ಇರುತ್ತಾರೆ!

ಒಂದು ಮಧ್ಯಾಹ್ನ, ಗಿಡಗಳಿಗೆ ನೀರು ಹನಿಸಲು, ಬಾಲ್ಕನಿ ಬಾಗಿಲು ತೆರೆದಾಗ, ಹೂವುಗಳನ್ನೆಲ್ಲ ಹರಿದು, ಪಕಳೆಗಳೆಲ್ಲ ಚಲ್ಲಾಪಿಲ್ಲಿಯಾಗಿ ಹರಡಿದ್ದನ್ನು ಕಂಡು, ಎದೆ ಝಲ್! ಎಂದಿತು. ಇಲ್ಲಿ ಮಕ್ಕಳು, ಮರಿ, ನೆರೆ-ಹೊರೆಯವರಾರೂ ಬರುವದು ಸಾಧ್ಯವಿಲ್ಲದ್ದರಿಂದ, ಈ ದುಷ್ಕೃತ್ಯವನ್ನು ಯಾರು ಮಾಡಿರಬಹುದು? ಎಂದು ಎಷ್ಟು ಯೋಚಿಸಿದರೂ ಹೊಳೆಯಲಿಲ್ಲ. ಮರುದಿನ ಮುಂಜಾನೆ ಬಾಲ್ಕನಿಯಲ್ಲಿ ಏನೋ ಸಪ್ಪಳ! ಹಠಾತ್ ಬಾಗಿಲು ತೆಗೆದಾಗ, ಗಂಡು ಇಣಚಿಯೊಂದು ಪಲಾಯನ ಮಾಡಿತು. ಕಳ್ಳನಾರು? ಎಂದು ಕೊನೆಗೂ ಪತ್ತೆ ಹಚ್ಚುವಂತೆ ಆದದ್ದರಿಂದ ನೆಮ್ಮದಿಯಾಯಿತು. ಅದು ಖಂಡಿತ ತಿರುಗಿ ಬರಲಿದೆ ಎಂದು ಅನಿಸಿದ್ದರಿಂದ ಕಿಡಕಿಯ ಹಿಂದೆ ಅವಿತು ನಿಂತು ಅದರ ಬರವನ್ನು, ಚಟುವಟಿಕೆಯನ್ನು, ಕಾಣಲು ಕಾತರದಿಂದ ಕಾದೆ. ಶ್ರೀರಾಮನ ಆಶೀರ್ವಾದವನ್ನು ಪಡೆದ ಅಳಿಲು, ಬಂದೇ ಬಂದಿತು! ಬಾಲವನ್ನು ಗಾಳಿಯಲ್ಲಿ ಹಾರಬಿಟ್ಟು ಹಿಂಗಾಲ ಮೇಲೆ ಮಂಡಿಯೂರಿ ಕುಳಿತು, ಮುಂಗಾಲುಗಳನ್ನೆ ಕೈಯಾಗಿಸಿ, ಪಕ್ವವಾದ ಹೂವನ್ನು ಕಿತ್ತು ಅದರ ಒಡಲಲ್ಲಿ ಇರುವ 'ಕೊಬ್ಬರಿ'ಯಂತಹ ಬೀಜದ ಮೇಲೆ 'ನಾಶ್ತಾ' ನಡೆಸಿತು. ಹೀಗೆ ಮಾಡುತ್ತಿದ್ದಾಗಲೇ ಅನತಿ ದೂರದಲ್ಲಿ ಇಣಚಿ ಅಪ್ಸರೆಯೋರ್ವಳು, ಹೋಗುತ್ತಿರುವದನ್ನು ಕಂಡಿತು. ಈಗ ಹಸಿವನ್ನೂ ಮರೆತು, ಅವಳನ್ನು ಮರುಳುಗೊಳಿಸಲು, ನಾಗಾಲೋಟದಿಂದ ಹಿಂಬಾಲಿಸಿತು. ಹೂವುಗಳನ್ನು ಹರಿದು ಚಲ್ಲಾಪಿಲ್ಲಿ ಮಾಡಿದ್ದಕ್ಕೆ ಇಣಚಿಯ ಮೇಲೆ ರೇಗುವ ಬದಲಾಗಿ, ಇದೂ ಒಂದು ನಿಸರ್ಗದ ಪ್ರಕ್ರಿಯೆ ಅಲ್ಲವೇ? ಎಂದು ಅರಿವಾಗಿ ಸಮಾಧಾನವಾಯಿತು. ಅದಾಗಲೇ ಗಿಡಗಳು ಸಾಕಷ್ಟು ಹೂಗಳನ್ನು ಹೊರಗೆ ಹಾಕಿ ಮುದಿಯಾಗಿ ಒಣಗಲಾರಂಭಿಸಿದ್ದವು. ಅವುಗಳನ್ನೆಲ್ಲ ಕಿತ್ತು ಹಾಕಿ, ಮಳೆ ಚೆನ್ನಾಗಿ ಬೀಳಲಾರಂಭಿಸಿದಾಗ, ಹೊಸ ಬೀಜ ಬಿತ್ತಲು ತಯಾರಿಮಾಡಿಕೊಂಡು ಕಾಯಲಾರಂಭಿಸಿದೆ.

◆ ◆ ◆

೩೦. ಮಲ್ಟಿಮೀಡಿಯ: ಒಂದು ಮುನ್ನೆಚ್ಚರಿಕೆ

ನೀನು 'ಮಲ್ಟಿಮೀಡಿಯ; ಇಂಟರ್‌ನೆಟ್' ಎಂಬ ಹೊಸ ಸಾಹಸ ಸುರು ಮಾಡಲಿದ್ದಿ, ಎಂದು ತಿಳಿಯಿತು. ಏನೋ ಸಾಧಿಸಲು ಯತ್ನಿಸಿ ಗೊಂದಲದಲ್ಲಿ ಸಿಕ್ಕಿ ಹಾಕಿಕೊಳ್ಳುವ ಸಾಧ್ಯತೆ ಇದ್ದುದರಿಂದ ಈ ವಿವರವಾದ ಪತ್ರ ಬರೆಯುತ್ತಿದ್ದೇನೆ. ಬಂದ ಪತ್ರಗಳನ್ನು ಮನಸ್ಸುಗೊಟ್ಟು ಓದುವದು, ಅದನ್ನು ಸರಿಯಾಗಿ ಅರ್ಥೈಸಿಕೊಳ್ಳುವದು, ಮತ್ತು ಕಾರ್ಯಾಚರಣೆಯಲ್ಲಿ ತರುವದನ್ನು ರೂಢಿಮಾಡಿಕೊಳ್ಳುವದು ಮುಖ್ಯ. ಮುಂಜಾಗ್ರತೆ ಇರಲಿ! ಎಂದು, ಇಲ್ಲಿ ಕೆಲವು ಘಟನೆಗಳನ್ನು ನಮೂದಿಸುವ ಸಾಹಸಕ್ಕೆ ಕೈಹಾಕಿದ್ದೇನೆ. ಕೈಕೊಳ್ಳುವದು ನಿನಗೆ ಬಿಟ್ಟದ್ದು.

೧೯೭೧ರಲ್ಲಿ ಪ್ಲಾಸಿಯ ನೌಕರಿಗೆ ರಾಜೀನಾಮೆ ಕೊಟ್ಟು, ಕರ್ನಾಟಕಕ್ಕೆ ಹಿಂದಿರುಗಿದಾಗ, 'ಕರ್ಮವೀರ'ದವರು ದೀಪಾವಳಿ ವಿಶೇಷಾಂಕಕ್ಕೆ ಒಂದು ಲೇಖ ಬರೆದುಕೊಡಲು ವಿನಂತಿಸಿಕೊಂಡದ್ದರಿಂದ ರಾಜ್ಯದ ಅಗಲದುದ್ದಕ್ಕೂ ಸಂಚರಿಸಿ, ಕ್ಲಿಕ್ಕಿಸಿ 'ಮಲೆನಾಡಿನ ಜನಜೀವನ' ಲೇಖನ ಬರೆದು ಕೊಟ್ಟಿದ್ದೆ. ಅದರಲ್ಲಿ ಹವ್ಯಕ ಜನಾಂಗದ ಬಗ್ಗೆ ಬಂದ ಮಾಹಿತಿ ಆ ಸಮಾಜಕ್ಕೆ ಅವಮಾನಕಾರಿಯಾಗಿದೆ! ಎಂದು 'ಹವ್ಯಕ' ಎಂಬ ಪತ್ರಿಕೆ ಮೂಲಕ ಅದರ ಸಂಪಾದಕರು ತೀವ್ರವಾಗಿ ಪ್ರತಿಭಟಿಸಿದ್ದರು. (ಗತದಿನಗಳಲ್ಲಿ ವಿಧವೆಯರ ಅತಿ ದೀನಸ್ಥಿತಿಯ ಬಗ್ಗೆ ಅಲ್ಪ ಉಲ್ಲೇಖ ಅದಾಗಿತ್ತು.) ಕವಿ ವಿ. ಜಿ. ಭಟ್ಟರು ಲೇಖವನ್ನು ಪ್ರಶಂಸಿಸಿದ್ದರು. ಇನ್ನೂ ಕೆಲ, ಅದೇ ಪಂಗಡದ ಜನರು, ನನ್ನ ಆತ್ಮೀಯರೂ ಮೆಚ್ಚಿಕೊಂಡಿದ್ದರು. 'ತೀವ್ರ ಪ್ರತಿಭಟನೆ'ಗೆ ಉತ್ತರಿಸುವದು ಉರಿಯುವ ಬೆಂಕಿಗೆ ತುಪ್ಪ ಸುರಿದಂತಾಗುವದು, ಎಂದು ಸುಮ್ಮನಿದ್ದುಬಿಟ್ಟೆ. 'ಕರ್ಮವೀರ'ಕ್ಕೂ ಅದೇ ವ್ಯಕ್ತಿಯ ಪತ್ರ ಬಂದು ಸಂಪಾದಕರು ವಿನಂತಿಸಿಕೊಂಡರೂ ನಾನು ಉತ್ತರಿಸುವ ಗೋಜಿಗೆ ಹೋಗಲಿಲ್ಲ.

ಆದರೆ ಈ ಲೇಖ, ತುಂಬ ಅಧಿಕೃತ ಮಾಹಿತಿ ಉಳ್ಳದ್ದಾಗಿದೆ! ಎಂದು ಶಾ.ಮಂ. ಕೃಷ್ಣರಾಯರು ಅದನ್ನು ಸಿರ್ಸಿಯಲ್ಲಿ ನಡೆದ ಉತ್ತರ ಕನ್ನಡ ಜಿಲ್ಲಾ ಸಮ್ಮೇಳನದ ಪೂರ್ವಭಾವೀ ಸಂಚಿಕೆಯಲ್ಲಿ ಪ್ರಕಟಿಸಲು ಅನುಮತಿ ಕೇಳಿದರು. ತಿರುಗಿ ಗೊಂದಲ ಬೇಡವೇ ಬೇಡ! ಎಂದು 'ನಾವು ನಮ್ಮವರು' ಎಂಬ ಬೇರೆಯೇ ಲೇಖ ಬರೆದು ಕಳಿಸಿದೆ. ೧೯೮೩ರಲ್ಲಿ ಸಾಹಿತ್ಯಪರಿಷತ್ತು 'ಉತ್ತರ ಕನ್ನಡ ದರ್ಶನ' ಎಂಬ ಪುಸ್ತಕವನ್ನು ಪ್ರಕಟಿಸಿದಾಗ, ಅದೇ ಲೇಖವನ್ನು ಉತ್ತರ ಕನ್ನಡದ ವಿವಿಧ ಜನಾಂಗಗಳು ಎಂಬ ಹೊಸ ಶೀರ್ಷಿಕೆ ಕೊಟ್ಟು ಪ್ರಕಟಿಸಿದರು. ಇದ್ದುದನ್ನು ಹೇಳಿದರೆ ಕೆಂಡದಂತಹ ಕೋಪ ಮಾಡಿಕೊಳ್ಳುವ ಜನ ಸಾಕಷ್ಟು ಇರುತ್ತಾರೆ.

ಶಿವರಾಮ ಕಾರಂತರು ಎಂದೋ ಪ್ರಕಟಿಸಿದ 'ಓದುವ ಆಟ' ಎಂಬ ಕಿರುಪುಸ್ತಕವನ್ನು ವೀರಪ್ಪ ಮೊಯಲಿಯವರು ಮುಖ್ಯಮಂತ್ರಿಯಾಗಿದ್ದಾಗ ಅದನ್ನು ಉತ್ತರ-ದಕ್ಷಿಣ ಕನ್ನಡ ಜಿಲ್ಲೆಗಳ ಪ್ರಾಥಮಿಕ ಶಾಲಾಮಕ್ಕಳಿಗೆ ಪಠ್ಯಪುಸ್ತಕವನ್ನಾಗಿ

ಮಾಡಿದರು. ಅದರಲ್ಲಿದ್ದ ಕೆಲ ವಾಕ್ಯಗಳು ಅಕ್ಕಸಾಲಿಗರು ಮತ್ತು ಕ್ರೈಸ್ತರಿಗೆ ಅವಹೇಳನಕಾರಿಯಾಗಿವೆ! ಎಂದು ಕೆಲವರು ಹುಯಿಲೆಬ್ಬಿಸಿದರು. ಅವರ ಒತ್ತಡಕ್ಕೆ ಮಣಿದು ಆ ಪಠ್ಯವನ್ನು ಸರಕಾರ ಹಿಂದೆಗೆದುಕೊಳ್ಳಬೇಕಾಯಿತು. ಕೇರಳದ ಪತ್ರಿಕೆಯೊಂದರಲ್ಲಿ ಒಂದು ದಶಕದ ಹಿಂದೆ ಪ್ರಕಟಗೊಂಡ 'ಮಹಮ್ಮದ್ ದಿ ಈಡಿಯಟ್' ಎಂಬ ಕಥೆಯೊಂದು ಅಗ್ಗದ ರಾಜಕಾರಣಿಯ ನೇತೃತ್ವದಲ್ಲಿ ಭುಗಿಲಾಗಿ ಪರಿಣಮಿಸಿ ಆ ಕಥೆ ಪುನಃ ಪ್ರಕಟಗೊಂಡ ಇಂಗ್ಲಿಷ್ ಪತ್ರಿಕೆ, ಅಪಾರ ಹಾನಿಗೆ ಒಳಪಡಬೇಕಾಯಿತು! ಅಲ್ಲದೇ ಉದ್ರೇಕಿತ ಗುಂಪು ಚದುರಿಸಲು ಪೋಲಿಸರು ನಡೆಸಿದ ಗೋಳಿಬಾರಿನಲ್ಲಿ ಸತ್ತವರ ಕುಟುಂಬಕ್ಕೆ ಪರಿಹಾರ ಧನವನ್ನು ತೆತ್ತ ಬೇಕಾಯಿತು.

'ವಂಗದರ್ಶನ' ಪುಸ್ತಕವನ್ನು ತುಂಬ ಜನ ಮೆಚ್ಚಿಕೊಂಡಿದ್ದಾರೆ. ಅವರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಡಾ. ರಿತ್ತಿ, ಲೇಖಕ ಎನ್ಕೆ, ಪಾವೆಂ, ಕವಿ ವಿ.ಜಿ. ಭಟ್ಟ ಮೊದಲಾದವರು ಪ್ರಮುಖರು. ತೆಗಳಿದವರೂ ಇದ್ದರು. ಮೊನ್ನೆ ನಿನಗೆ ಫೋನಿಸಿದಂತೆ, ಅದನ್ನು ಓದಿಸಿ ಕೇಳಿಸಿಕೊಂಡ ಬಂಗಾಲಿ ವಿದ್ಯಾರ್ಥಿಯೋರ್ವ ರುದ್ರಾವತಾರ ತಾಳಿ ನನ್ನ ಲ್ಯಾಬಿಗೇ ಬಂದಿದ್ದ! ಅಲ್ಲದೇ ಮಂಗಳೂರಿನ ಕಮ್ಯುನಿಸ್ಟ ಧುರೀಣರೋರ್ವರು ಉಗ್ರವಾಗಿ ಪ್ರತಿಭಟಿಸಿ ಜಿ. ಬಿ. ಜೋಶಿಗೆ ಪತ್ರ ಬರೆದು, ಆ ಪುಸ್ತಕವನ್ನು ಬಹಿರಂಗವಾಗಿ ಸುಡುತ್ತೇವೆ! ಎಂದು ಹೇಳಿದರಂತೆ. ಅದರಿಂದ ಸಾಕಷ್ಟು ಪ್ರಚಾರವಾಗಿ ಪುಸ್ತಕ ಪ್ರತಿಗಳು ಬಿಕರಿ ಆಗಬಹುದು! ಎಂದು ಜೋಶಿಯವರು ಉದ್ಗರಿಸಿದ್ದು ನೆನಪಾಗುತ್ತದೆ. ಅದು ಅಷ್ಟಕ್ಕೇ ತಣ್ಣಗಾದದ್ದು ನನ್ನ ಪುಣ್ಯವೆನ್ನಬೇಕು. ಬಂಗಾಲಿಗಳು, ಬಂಗ್ಲಾದೇಶದಲ್ಲಿರಲಿ, ಭಾರತದ ಇನ್ನಾವ ರಾಜ್ಯದಲ್ಲಿರಲಿ, ಅಮೇರಿಕೆಯಲ್ಲಿರಲಿ, ಭಾಷಾಭಿಮಾನದಿಂದ ಏಕ ಪ್ರಕಾರವಾಗಿ ವರ್ತಿಸುತ್ತಾರೆ. ಹೀಗಿದ್ದಾಗ ಅಮೇರಿಕೆಯಲ್ಲೆ ಆಗಲಿ, ಭಾರತದಲ್ಲೆ ಆಗಲಿ, 'ಅಭಿಮಾನಿ' ವರ್ಗಗಳಿಂದ ಯಾವುದೇ ಜನಾಂಗೀಯ ಬಿತ್ತರಕ್ಕೆ ಯಾವುದೇ ತರದ ಆಕ್ಷೇಪಣೆ ಬಾರದಿರುವಂತೆ ಮುನ್ನೆಚ್ಚರಿಕೆ ವಹಿಸುವದು ಅತ್ಯವಶ್ಯ. 'ವಂಗದರ್ಶನ'ದಲ್ಲಿ ಬರುವ ಚೊಂದಾ, ಉಪದ್ರವಿಗಳು, ಈತ ಬಂಗಾಲಿ! ಹೀಗಿದ್ದಾರವರು! ನಕ್ಸಲೀಯರು, ಆಟ ಕೂಟಗಳು: ಬಂಗಾಲಿ ಮಾದರಿ ಮೊದಲಾದ ಅಧ್ಯಾಯಗಳನ್ನು ಕೈಬಿಡುವದು ಉತ್ತಮ. ನೀನು ಆ ಪುಸ್ತಕದ ಕೆಲ ಅಧ್ಯಾಯಗಳನ್ನು ಇಂಟರ್‌ನೆಟ್‌ಗೆ ಬಳಸುವ ಮನಸ್ಸಿದೆ! ಎಂದಿದ್ದರಿಂದ ಇಷ್ಟನ್ನು ಬರೆಯಬೇಕಾಯಿತು.

ಬಂಗಾಲದ ಮುಖ್ಯಮಂತ್ರಿಗಳು ಅಂತಾರಾಷ್ಟ್ರೀಯ ಮಟ್ಟದ ಮುಖಂಡನೆಂದು ಅನೇಕ ಬಂಗಾಲಿಗಳು ಭಾವಿಸಲಾರಂಭಿಸಿದ್ದರಿಂದ ಬಂಗಾಲಿಗಳಿಗೆ ಕೂಡಲೇ ಅರಿಯುವ ಮಾತಿನಲ್ಲಿ 'ಅವಹೇಳನ' ಮಾಡಿದರೆ ಅವರು ಹೇಗೆ ಸಹಿಸಿಯಾರು? ಆದ್ದರಿಂದ ನಿನ್ನ ಕಾರ್ಯಕ್ರಮದಲ್ಲಿ ಇಂಥ ಮಾಹಿತಿ ಬಳಸಿಕೊಳ್ಳುವಾಗ ಹೆಚ್ಚಿನ ಜಾಗ್ರತೆ ವಹಿಸುವದು ಅತಿಮುಖ್ಯ.

ಅದೇಕೋ, ಎಲ್ಲವನ್ನೂ ನೀನು ಏಕಕಾಲಕ್ಕೆ ಮಾಡಲು ಹೊರಟಂತೆ ಇದೆ. ಮೊದಲು ಅಂಗಳ ಹಾರಲು ಕಲಿಯಬೇಕು, ಬಳಿಕ ಗಗನ ಹಾರುವ ವಿಚಾರ ಮಾಡಬೇಕು.

ಒಮ್ಮೆಲೇ ಗಗನ ಹಾರಹೊರಟರೆ ಏಣಿ ಇಲ್ಲದೇ ಮುಗ್ಗರಿಸಿ ಬೀಳುವ ಸಾಧ್ಯತೆಗಳೇ ಹೆಚ್ಚು!

ನನ್ನ ಬರವಣಿಗೆಯನ್ನು ಮಲ್ಟಿಮೀಡಿಯಾಕ್ಕೆ ಬಳಸುವಾಗ, ಅದನ್ನು ಇಂಗ್ಲಿಷಿಗೆ ಭಾಷಾಂತರಿಸುವ ಬದಲಾಗಿ, ಒಂದು ಅಧ್ಯಾಯ ಓದಿ, ಜೀರ್ಣಿಸಿಕೊಂಡು, ನಂತರ ಅಮೇರಿಕನ್‌ರಿಗೆ ತಿಳಿಯುವ ಸುಲಭ ಇಂಗ್ಲಿಷಿನಲ್ಲಿ ಬರೆದರೆ ಹೆಚ್ಚು ಪರಿಣಾಮಕಾರಿಯಾಗಬಲ್ಲದು. ಕನ್ನಡ ಭಾಷೆಯ ಸೊಗಡು, ಭಾಷಾಂತರದಲ್ಲಿ ಇಳಿದು ಬರುವದು ಕಷ್ಟ ಸಾಧ್ಯ! ಹಾಗೆ ಮಾಡಲು ಶ್ರಮ ವಹಿಸಬೇಕಾಗುತ್ತದೆ. ನಾವು ಮಾಡಿದ ಕೆಲಸಕ್ಕೆ ಇನ್ನಿತರರಿಂದ ತಲೆದೂಗಿಸಿಕೊಳ್ಳಬೇಕಾದರೆ ಶ್ರಮವಹಿಸದೇ ಗತ್ಯಂತರವಿಲ್ಲ. ಇಲ್ಲದಿದ್ದರೆ ಬರವಣಿಗೆ ಕಡಿಮೆ ಮಾಡಿ, ಆದಷ್ಟು ಹೆಚ್ಚು ಛಾಯಾ ಚಿತ್ರ, ವರ್ಣಚಿತ್ರ, ರೇಖಾಚಿತ್ರಗಳನ್ನು ಬಳಸಬೇಕು. ಸಮಯಕೊಟ್ಟರೆ, ಇವನ್ನೆಲ್ಲ ನಾನೇ ಪೂರೈಸಬಲ್ಲೆ. ಆದ್ದರಿಂದ, ಇಡೀ ಭಾರತವನ್ನೇ ನಿನ್ನ ಇಂಟರ್‌ನೆಟ್‌ದಲ್ಲಿ ಒಟ್ಟಿಗೆ ಹಾಕುವದಕ್ಕಿಂತ, ಪ್ರಾರಂಭದಲ್ಲಿ ಉತ್ತರ ಕನ್ನಡಜಿಲ್ಲೆ, ಪಶ್ಚಿಮ ಕರಾವಳಿ, ಕರ್ನಾಟಕ ಹೀಗೆ ಪರಿಚಿತ ಪ್ರದೇಶದ ಮಾಹಿತಿ ಕೊಡುವದು ನೆಟ್ಟಗೆ.

ಬಳಿಕ ರಾಜಸ್ಥಾನ, ಬಂಗಾಲ, ಮಧ್ಯ ಪ್ರದೇಶ ಹೀಗೆ ಬೇರೆ ರಾಜ್ಯಗಳನ್ನು ಸೇರಿಸುತ್ತ ಹೋಗುವದು ಮೇಲು, ಅಲ್ಲವೇ? ನಿಧಾನವಾಗಿ ಮಾಡಿದರೆ ಏನೂ ಚಿಂತೆಯಿಲ್ಲ. ಮಾಡಿದ್ದು ಚೆನ್ನಾಗಿರಬೇಕು. ನಿನ್ನ ಭಾಷಾಂತರ ಕೆಲವೆಡೆ ತೀರ ಸಪ್ಪಗೆ ಆಗಿದೆ. 'ಆದಿವಾಸಿಗಳ ಛಾಯಾಗ್ರಹಣ' ಅಧ್ಯಾಯವನ್ನೇ ತೆಗೆದುಕೊಳ್ಳೋಣ. ಅದನ್ನು ಓದುವವರಿಗೆ, ಚಿತ್ರ ನೋಡುವವರಿಗೆ ಆ ನನ್ನ ಅನುಭವಗಳನ್ನು ಅವರವನ್ನಾಗಿ ಮಾಡುವದು ಅತಿ ಮುಖ್ಯ. ನಾನು ಆದಿವಾಸಿಹಳ್ಳಿಗೆ ಹೋದಾಗ, ಅಲ್ಲಿ ಹೊಂಡವೊಂದರಲ್ಲಿ ಈರ್ವರು ಯುವತಿಯರು ನಗ್ನರಾಗಿ ನೀರಿಗಿಳಿದಿದ್ದರು. ಒಮ್ಮೆಲೆ ಪರಪುರುಷನ ಆಗಮನದಿಂದ ನಾಚಿಕೆಯಿಂದ ಮುದುಡಿಕೊಂಡರು. ನನ್ನ ಕ್ಯಾಮರಾ ಕ್ಲಿಕ್ಕಿಸಲು ಸಿದ್ಧವಾಗಿದ್ದರೂ ಅವರ ಅಸಹಾಯಕತೆಯನ್ನು ಛಾಯಾಗ್ರಹಣಕ್ಕೆ ಬಳಸುವಲ್ಲಿ ಮನಸ್ಸಾಗಲಿಲ್ಲ! ಎಂಬ ಭಾವ ನಿನ್ನ ಅನುವಾದದಲ್ಲಿ ಮೂಡಿ ಬರಲೇ ಇಲ್ಲ. ಅದರಂತೆ ಬಡ ದಾರಿಹೋಕನು ತನ್ನ ಭಾವಚಿತ್ರ ಪಡೆಯಲು ತಾನು ಅತಿ ಶ್ರಮದಿಂದ ರಚಿಸಿದ ಬಿಲ್ಲು-ಬಾಣ ಕೊಡಲು ಸಿದ್ಧನಾದದ್ದು. ಜಾತ್ರೆಗೆ ಬರಲು ಪಾಲಕರು ಕೊಟ್ಟ ಐದು ಪೈಸೆಗಳನ್ನು ತನ್ನ ಫೋಟೋಗೆ ಕೊಡಲು ಹುಡುಗಿಯೊಬ್ಬಳು ಮುಂದಾದದ್ದು. ಫೋಟೋಗ್ರಾಫರನ ಅಸಹಾಯಕತೆಯನ್ನು ತೋರಿಸುವ ಘಟನೆಗಳು, ಅದರ ಹಿಂದೆ ಅಡಗಿದ ಮಾನವೀಯತೆ, ಓದುಗರ ಮನಸ್ಸನ್ನು ತಟ್ಟಬೇಕು. ಅದೆಷ್ಟು ನಾನು ಯತ್ನಿಸಿದರೂ ಭಾವಚಿತ್ರಗಳನ್ನು ಅವರಿಗೆ ತಲುಪಿಸುವ ಸಾಧ್ಯತೆ ಇರಲೇ ಇಲ್ಲ! ಮುಂದಿನ ಸಲ ಈ ಕಡೆಗೆ ಬರುವಾಗ ಕ್ಷಣಾರ್ಧದಲ್ಲಿ ಸಿದ್ಧಮಾಡಿದ ಛಾಯಾಚಿತ್ರಗಳನ್ನು ಒದಗಿಸುವ ಪೊಲೊರಾಯ್ಡ್ ಕೆಮೆರಾದೊಂದಿಗೆ ಸುಸಜ್ಜಿತವಾಗಿ ಬರಬೇಕೆಂಬ ನಿರ್ಧಾರ ಕೈಕೊಳ್ಳುವಂತೆ ಮಾಡಿತು. ಅಮೇರಿಕೆಯಲ್ಲಿ ಪ್ರಚಲಿತವಿರುವ ಭಾಷೆ-ಪರಿಭಾಷೆಯನ್ನೆ ಬಳಸಿದರೆ ಓದುಗರಿಗೆ, ವೀಕ್ಷಕರಿಗೆ ಸುಲಭವಾಗಿ

ಅರ್ಥವಾಗಬಹುದು. 'ಕಾಣದ ಕ್ಯಾಮೆರಾ'ವನ್ನು 'ಕೆಂಡಿಡ್ ಕ್ಯಾಮರಾ' ಎಂದು ಪರಿವರ್ತಿಸಬಹುದು. ಈ ಶಿರೋನಾಮೆಯ ಟಿ. ವಿ. ಕಾರ್ಯಕ್ರಮ ಅಲ್ಲಿ ತುಂಬ ಜನಪ್ರಿಯವಿದೆ. ಹೀಗಾಗಿ ಅದು ಕೂಡಲೇ ಅರ್ಥವಾಗಬಹುದು.

ನೀನು ತಯಾರಿಸಿದ ಪ್ರತಿಯೊಂದು ಕಾರ್ಯಕ್ರಮವನ್ನು ನನ್ನ ಪರಾಮರ್ಶೆಗೆ ಕಳಿಸುವದು ಬೇಡ. ಶೀಘ್ರಾತಿಶೀಘ್ರ (ಸ್ಪೀಡ್‌ಪೋಸ್ಟ್)ದಿಂದ ಕಳಿಸುವದಂತೂ ಖಂಡಿತ ಬೇಡ. ನಿನ್ನ ಕಂಪನಿ ಊರ್ಜಿತಾವಸ್ಥೆಯಲ್ಲಿರಬೇಕಾದರೆ ಇಂಥ ಖರ್ಚನ್ನು ನಿಯಂತ್ರಣದಲ್ಲಿ ಇಡುವದು ಅತಿ ಮುಖ್ಯ. ಅದೆಷ್ಟೊ ಸಲ ವ್ಯಕ್ತಿ ಸಿರಿವಂತನಾದರೆ ಕಂಪನಿಗಳು ಮುಳುಗಿ ಹೋಗುತ್ತವೆ. ನೀನೇನೋ ಕರಡುಪ್ರತಿ ಕಳಿಸಲು ಇಪ್ಪತ್ತು ಡಾಲರ್ ಖರ್ಚು ಮಾಡಿದಿ. ಇಲ್ಲಿ 'ಕಸ್ಟಮ್ ತಪಾಸಣೆ' ಎಂದು ಮತ್ತೆ ಇಪ್ಪತ್ತೈದು ರೂಪಾಯಿ ವಸೂಲು ಮಾಡುವದು ಬಿಡಲಿಲ್ಲ! ಇದನ್ನೂ ಇನ್ನಿತರ ಸಾಮಾನ್ಯ ಅಂಚೆಯಂತೆ ಕಳಿಸಬಹುದಿತ್ತು, ಅಲ್ಲವೇ? ನಿನ್ನ ಮಲ್ಟಿಮೀಡಿಯಾ ಕಾರ್ಯಕ್ರಮದ ಅವಶ್ಯಕತೆ ವಿವರವಾಗಿ ತಿಳಿಸಿದರೆ, ವರ್ಣಪಾರದರ್ಶಿಕೆ, ಛಾಯಾಚಿತ್ರ, ರೇಖಾಚಿತ್ರ, ಲೇಖ, ಮಾಹಿತಿಗಳನ್ನು ಕಳಿಸಲು ಅನುಕೂಲವಾಗುತ್ತದೆ.

◆ ◆ ◆

೩೧. ಅಂಚೆಕಾರ್ಡಿನ ಸುಭಸಂದೇಶ

ದೀಪಾವಳಿಯ ಮತ್ತು ಹೊಸವರ್ಷದ ಶುಭಾಶಯಗಳನ್ನು ಕಳಿಸುವದು ಶಾಲಾದಿನಗಳಿಂದಲೂ ನನ್ನ ಹವ್ಯಾಸ. ಆದರೆ ಅಂದಿನ ದಿನಗಳಲ್ಲಿ ಅವುಗಳನ್ನು ಸಿದ್ಧಪಡಿಸಲು ಯಾವ ಸಾಮಗ್ರಿಗಳೂ ನನ್ನಲ್ಲಿ ಇರುತ್ತಿರಲಿಲ್ಲ. ಕಾಕಾರವರು ಒಂದು ವರ್ಷಕಾಲ ಸತತವಾಗಿ ಹಲ್ಲು ಉಜ್ಜಿ ಅಷ್ಟಾವಕ್ರವಾಗಿ ಬೀಸಾಡಿದ್ದ ಬ್ರಶ್‌ನ್ನೇ ಕೆಂಪು ಹಾಗು ನೀಲಿ ಮಶಿ (ಶಾಯಿ)ಯಲ್ಲಿ ಅದ್ದಿ, ಸ್ಪ್ರೇ ಮಾಡಿ ಕಷ್ಟಪಟ್ಟು ಅಕ್ಷರಗಳನ್ನು ಮೂಡಿಸಿ ಶುಭಾಶಯಗಳ ಕಾರ್ಡು ತಯಾರಿಸಿ, ಇದ್ದ ಪುಡಿಗಾಸನ್ನೇ ಬಳಸಿ ಕಳಿಸಿದರೂ, ಅದನ್ನು ಪಡೆದವರು, ''ತಲುಪಿದೆ!'' ಎಂದು ತಿಳಿಸುವ ಗೋಜಿಗೂ ಹೋಗುತ್ತಿರಲಿಲ್ಲ. ಅದೆಷ್ಟೋ ವರ್ಷಗಳ ಕಾಲ ಇವನ್ನು ಕಳಿಸಿದವರ ಬಳಿ, ಒಂದಾದರೂ ಶುಭಾಶಯದ ಕಾರ್ಡು ಇದೆ ಎಂದೆನಿಸುವದಿಲ್ಲ. ನೀನು ಅಮೇರಿಕೆಗೆ ಹೊರಟ ವರ್ಷ, ನಮ್ಮ ಮೂವರ ಹೆಸರು ಹಾಕಿ, ಹಾರ್ಯೆಕೆಗಳನ್ನು ಅರಸಿ ಅಂಚೆ ಕಾರ್ಡಿನ ಮೇಲೆ ಬರೆದ ಓಲೆ ನಿನಗೆ ಅಗ್ಗದ್ದಾಗಿ ಕಂಡರೂ, ಅದನ್ನು ಪಡೆದವರೆಲ್ಲ ಸಂತೋಷಪಟ್ಟು ಉತ್ತರ ಬರೆದದ್ದನ್ನು ನೀನು ಮರೆತಿರಲಿಕ್ಕಿಲ್ಲ. ಒಂದುವರೆ ವರ್ಷದ ಬಳಿಕ ನೀನು ಭಾರತಕ್ಕೆ ಬಂದು, ಹಲವು ಬಗೆಗಳ ಚಿತ್ರ ಸಾಮಗ್ರಿ ತಂದುಕೊಟ್ಟದ್ದರಿಂದ ನನ್ನ ಈ ಹವ್ಯಾಸಕ್ಕೆ ಹೊಸ ಆಯಾಮ ಬಂದಂತಾಯಿತು. ಈ ಮೊದಲು ಕೇವಲ ಒಂದೆರಡು ಆಕಾಶ ಬುಟ್ಟಿ ಅಥವಾ ಹಣತೆಗಳನ್ನು ಚಿತ್ರಿಸಿ ಅಲಂಕರಿಸುತ್ತಿದ್ದೆ. ಈಗ ಬೇರೆ ಬೇರೆ ಬಣ್ಣಗಳಿಂದ ಅವು 'ಪೇಂಟಿಂಗ್' ರೂಪ ತಾಳಿದವು.

ನೀನು ಚಿಕ್ಕಮಗುವಾಗಿದ್ದಾಗ ನಿನ್ನ ಭಾವಚಿತ್ರವನ್ನೇ ಬಳಸಿ ಹಿಂಬದಿಗೆ ದೀಪಾವಳಿಯ ಶುಭಸಂದೇಶಗಳನ್ನು ಬರೆದು ಕಳಿಸುತ್ತಿದ್ದೆ. ಅನೇಕರು, ಅವನ್ನೇ ತಮ್ಮ ಆಲ್ಬಂಗಳಲ್ಲಿ ಕಾದಿರಿಸಿದ್ದಾರೆ!

ನಮ್ಮ ಸರಕಾರ ಕವರಿನ ಬೆಲೆಯನ್ನು ಗಗನಕ್ಕೇರಿಸಿ ಅಂಚೆಕಾರ್ಡನ್ನು ಮಾತ್ರ ಕೇವಲ ಬಡಬಗ್ಗರು ಬಳಸುತ್ತಾರೆ! ಎಂಬ ನೆಪದ ಮೇಲೆ ಅದರ ಬೆಲೆಯನ್ನು ಏರಿಸದೇ ಇದ್ದುದರಿಂದ ನನಗೆ ಹೊಸ ಹೊಸ ವಿಚಾರಗಳು ಬರಲಾರಂಭಿಸಿದವು. ನೀನು ತಂದುಕೊಟ್ಟ ಮೂವತ್ತಾರು ಬಣ್ಣದ ಸ್ಕೆಚ್‌ಪೆನ್‌ಗಳಿಂದ ಬೇಕಾದ ಚಿತ್ರಬಿಡಿಸಿ, ಇಲೆಕ್ಟ್ರಾನಿಕ್ ಟ್ಯಾಪ್‌ರ್ಯಾಟರ್ ಬಳಸಿ ಅಕ್ಷರಗಳನ್ನು ಮೂಡಿಸಿದಾಗ ಅಂಚೆಕಾರ್ಡು ಅತ್ಯಾಕರ್ಷಕವಾಗಿ ಕಾಣಲಾರಂಭಿಸಿತು. ಕನ್ನಡದಲ್ಲಿ ಸಂದೇಶಗಳನ್ನು ಕೈಯಿಂದ ಬರೆದರೂ ಅಂದ-ಚೆಂದಕ್ಕೆ ಕೊರತೆಯಾಗದು, ಎಂದು ಮನಗಂಡೆ. ಅಂಚೆ ಕಾರ್ಡಿನ ಶುಭಾಶಯವೇ! ಎಂದು ಅವನ್ನು ಪಡೆದ ಜನ ಮೂಗುಮುರಿದದ್ದನ್ನು ಕಂಡಿಲ್ಲ!

ಮೋಜಿನ ಮಾತೆಂದರೆ, ಮುದ್ರಿತ ಅಂಚೆಕಾರ್ಡಿಗೆ ಒಂದು ರೂಪಾಯಿಯ ಸ್ಟಾಂಪ್ ಅಂಟಿಸಬೇಕೆಂಬ ಕಾನೂನು ಇದೆ. ರಬ್ಬರ್ ಸ್ಟಾಂಪ್ ಬಳಸಿದರೂ ಇದನ್ನೆ ಅನುಸರಿಸಬೇಕು. ಆದರೆ ಟ್ಯಾಪ್‌ರಾಯ್ಟರ್ ಬಳಸಿದರೆ ಅದು ಅನ್ವಯಿಸುವದಿಲ್ಲ! ಹೇಗಿದೆ ಭಾರತೀಯ ಅಂಚೆ ಕಾಯ್ದೆ?

ಅಂತರ್‌ದೇಶೀಯದಲ್ಲಿ ಮುದ್ರಿತ ಸಂದೇಶ ಕಳಿಸಿದರೆ, ಅದಕ್ಕೆ ಎಪ್ಪತ್ತೈದು ಪೈಸೆಯ ತಿಕೀಟು ಹಚ್ಚಿದರೆ ಸಾಕಾಗುತ್ತದೆ. ಈ ವಿಶೇಷ ಸವಲತ್ತು ಪಡೆದು, ಹೋದ ದೀಪಾವಳಿಗೆ ಅರವತ್ತು ಶುಭಾಶಯಗಳನ್ನು ಕಳಿಸಿದೆ. ಹೊಸ ವರ್ಷಕ್ಕೆ ನೂರ ಇಪ್ಪತ್ತಾರು ಕಾರ್ಡುಗಳನ್ನು ಕಳಿಸಿದ್ದೆ, ಎಂದರೆ ನಂಬುವಿಯಾ? ಈ ವರ್ಷವೂ ದೀಪಾವಳಿಗೆ ಅರವತ್ತು ಪರಿಚಿತರಿಗೆ! ಸಂಬಂಧಿಕರಿಗೆ ಇಂಥವೇ ಕಾರ್ಡು ಕಳಿಸಿದ್ದೆ. ಹೆಚ್ಚಿನವರು ಪ್ರತಿಕ್ರಿಯಿಸಿದ್ದಾರೆ. ಮೈಸೂರಿನ ಮುಕ್ತಾ ವೆಂಕಟೇಶ್, ಸುಂದರ ಕಾರ್ಡಿಗೆ ಕೃತಜ್ಞತೆ ಸಲ್ಲಿಸಿದ್ದಾರಲ್ಲದೇ ತಾವೂ, ಹುಡುಗಿಯೋರ್ವಳು ಪಟಾಕ್ಷಿಯನ್ನು ಸುಡುವದರಲ್ಲಿ ಮೈಮರೆತ ಚಿತ್ರವನ್ನು ಬಿಡಿಸಿ ಕಳಿಸಿದ್ದಾರೆ. ಸುಷಮಾ ತನ್ನ ಬಿಡುವಿಲ್ಲದ ದಿನಚರಿಯಲ್ಲೂ, ಪತ್ರ ಬರೆದು ಕೃತಜ್ಞತೆ ತಿಳಿಸಿದ್ದಾಳೆ. ಆತ್ಮೀಯ ಸ್ನೇಹಿತರೆಲ್ಲ ಮೆಚ್ಚಿಗೆ ತಿಳಿಸಿದ್ದಾರೆ.

ಅಂಚೆಕಾರ್ಡಿನ ಹೊಸ ಹೊಸ ಉಪಯೋಗ ಕಂಡುಕೊಳ್ಳುತ್ತಿದ್ದೇನೆ. ಯಾರಿಂದಾದರೂ ಪತ್ರ ಬಂದು ಅದಕ್ಕೆ ಉತ್ತರ ಬರೆಯುವ ಮನಸ್ಸು ಇಲ್ಲದಿದ್ದರೆ, ಕೇವಲ 'ಕೃತಜ್ಞತೆಗಳು!' ಎಂದು ಕಲಾತ್ಮಕವಾಗಿ ಅಕ್ಷರಗಳನ್ನು ಬರೆದು ಕಳಿಸಿಬಿಡುತ್ತೇನೆ. ವಿವಾಹ ಆಮಂತ್ರಣಗಳು ಬಂದರೆ ನವವಿವಾಹಿತರಿಗೆ ಅಂಚೆ ಕಾರ್ಡಿನಲ್ಲಿಯೇ ಆಶೀರ್ವಾದ ಬರೆದು ಕಳಿಸಿ ಕೊಡುತ್ತೇನೆ. ನನ್ನ ಈ ಕಾರ್ಯವಿಧಾನವನ್ನು ಅರಿತ ಅಂಚೆಖಾತೆಯವರು ಅಂಚೆ ಕಾರ್ಡಿನ ಬೆಲೆಯನ್ನು ಗಗನಕ್ಕೇರಿಸಿದರೆ ಆಶ್ಚರ್ಯವಿಲ್ಲ! ಅಥವಾ ಒಂದೇ ಕಾರ್ಡನ್ನು ಬಡವರಿಗೆ ಕಡಿಮೆ ಬೆಲೆ, ಮತ್ತು ಉಳ್ಳವರಿಗೆ ಹೆಚ್ಚಿನ ಬೆಲೆಯಲ್ಲಿ ಮಾರಬಹುದು. ಆಗ ಅಂಚೆಕಾರ್ಡುಗಳೂ ಇದ್ದಕ್ಕಿದ್ದಂತೆ, ಮಾಯವಾಗಿ ಕಳ್ಳಪೇಟೆಯಲ್ಲಿ ಮಾರಾಟಕ್ಕೆ ಸಿಗಲಾರಂಭಿಸಬಹುದು. ಈಗಾಗಲೇ ಅಕ್ಕಿ, ಗೋಧಿ, ಸಕ್ಕರೆಗಳು ಬೇರೆ ಬೇರೆ ಬೆಲೆಗಳಲ್ಲಿ ರೇಶನ್‌ದಲ್ಲಿ ಮಾರಾಟ ಮಾಡುತ್ತಿರುವ ವಿಚಾರ ನಿನಗೆ ತಿಳಿದಿರಬಹುದು!

◆ ◆ ◆

೩೨. ಬದುಕಿನ ಸಾರ್ಥಕತೆ

ನನ್ನ ವಯಸ್ಸಿನ ಹೆಚ್ಚಿನ ಹಿರಿಯರಿಗೆ, ನಿವೃತ್ತಿಯ ದಿನಗಳನ್ನೆಲ್ಲ ಅಂತರ್ ಮುಖಿಯಾಗಿ ಕಳೆಯುವ ದಿನಗಳಲ್ಲಿ ತಮ್ಮಿಂದ ಏನೂ ಸಾಧಿಸಲಾಗಲಿಲ್ಲವೆಂಬ ಕೊರಗು, ತಮ್ಮಿಂದ ಘಟಿಸಿದ ಪ್ರಮಾದಗಳು, ತಮ್ಮ ಕುಂದು-ಕೊರತೆಗಳು, ಇವುಗಳ ಕುರಿತು ಯೋಚಿಸುತ್ತಲೇ ಕಾಲ ಕಳೆಯಬೇಕಾಗುತ್ತದೆ. ನನ್ನ ಅರವತ್ತೈದು ವರ್ಷಗಳ ಜೀವನದಲ್ಲಿ ನಾನು ಕೈಕೊಂಡ ನಿರ್ಧಾರಗಳ ಬಗ್ಗೆ, ಕಾರ್ಯಗತ ಮಾಡಿದ ಚಟುವಟಿಕೆಗಳ ಬಗ್ಗೆ ಮರುಗುವ ಪ್ರಸಂಗವೇ ಬರಲಿಲ್ಲ. ಕಾಕಾರು ಕಟ್ಟಿದ ಜವಳೀ ವ್ಯಾಪಾರದ ಸುಭದ್ರ ಸ್ಥಾನಕ್ಕೆ ಆಕರ್ಷಿತನಾಗದೇ ಉಚ್ಚ ಶಿಕ್ಷಣ ಕೈಕೊಂಡದ್ದಾಗಲಿ, ಕರ್ನಾಟಕ ಕಾಲೇಜಿನ ಒಳ್ಳೆಯ ನೌಕರಿಗೆ ರಾಜೀನಾಮೆ ಕೊಟ್ಟು, ಅಮೇರಿಕೆಗೆ ಹೋಗುವ ನಿರ್ಧಾರವಾಗಲೀ, ಅತ್ಯುಚ್ಚ ಡಿಗ್ರಿ ಪಡೆದು, ಆ ದೇಶದಲ್ಲಿ ಉತ್ತಮ ನೌಕರಿ ಸಿಗುವ ಸಾಧ್ಯತೆಗಳಿದ್ದರೂ, ಮರಳಿ ಭಾರತಕ್ಕೆ ಬರುವ ಖಚಿತ ವಿಚಾರವಿರಲಿ! ಜ್ಯೋತ್ಸ್ನಾಳೊಡನೆ ವಿವಾಹಮಾಡಿಕೊಳ್ಳುವದಿರಲಿ, ಜೊಬನೇರ ಕಾಲೇಜ ಸೇರುವದಿರಲಿ, ಪ್ಲಾಸಿಯ ವಾಸದ ಬಗ್ಗೆಯಾಗಲಿ, ಬೆಂಗಳೂರಿನಲ್ಲಿ ವೈಜ್ಞಾನಿಕ ಛಾಯಾಗ್ರಹಣದ ಸೇವೆ ಪ್ರಾರಂಭಿಸುವದಿರಲಿ, ಲ್ಯಾಬ್ ಮುಚ್ಚಿ ಒಂದು ವರ್ಷ ಮಧ್ಯಪ್ರದೇಶದಲ್ಲಿ ಅಲೆದಾಡಿದ್ದಕ್ಕಾಗಲಿ, ಬರವಣಿಗೆಯನ್ನು ನನ್ನ ಮಾಧ್ಯಮವನ್ನಾಗಿಸಿದ್ದಕ್ಕಾಗಲಿ, ಮರುಗುವ ಸಂದರ್ಭವೇ ಬರಲಿಲ್ಲ! ಶ್ರೀಮಂತಿಕೆ ಪ್ರಸಿದ್ಧಿಗಳೇ ಜೀವನದ ಧ್ಯೇಯ ಮಾಡಿಕೊಂಡ ನಮ್ಮ ಹೆಚ್ಚಿನ ದೇಶಬಂಧುಗಳಿಗೆ ನಾನು ಅವ್ಯವಹಾರಿಕನೆಂದು ಅನಿಸಿದರೆ ಆಶ್ಚರ್ಯವಿಲ್ಲ. ಆದರೂ ಇರಲಿಕ್ಕೆ ಮನೆ-ಮಾರು, ಇಳಿವಯಸ್ಸಿನಲ್ಲಿ ಅತ್ಯವಶ್ಯವಿರುವ ಆರ್ಥಿಕ ನೆರವುಗಳ ಸಮರ್ಪಕ ಏರ್ಪಾಡು ಮಾಡಿಕೊಳ್ಳುವದರಲ್ಲಿ ಹಿಂದೆ ಬಿದ್ದಿಲ್ಲ, ಎಂಬುದು ಅನೇಕರಿಗೆ ತಿಳಿಯದ ಮಾತು. ನನ್ನ ಸಾಧನೆ ಕುರಿತು ನಾನಂತೂ ಖಂಡಿತ ಅಭಿಮಾನ ಪಡುತ್ತೇನೆ. ಉಳಿದವರ ಅಭಿಪ್ರಾಯಕ್ಕೆ ಸೊಪ್ಪು ಹಾಕುವವನು ನಾನಲ್ಲ!

ಮೈಸೂರಿನಲ್ಲಿ ಪ್ರಪ್ರಥಮ ವಿಶ್ವಕನ್ನಡ ಸಮ್ಮೇಳನದಲ್ಲಿ (೧೯೮೫) ಸಾಹಿತಿಗಳೆಲ್ಲ ಸೇರಿದ್ದರಲ್ಲವೇ? ಪ್ರೊ! ಗೋಪಾಲಕೃಷ್ಣ ಅಡಿಗರು, ನನ್ನನ್ನು ತಮ್ಮೊಬ್ಬ ಸಾಹಿತಿಸ್ನೇಹಿತನಿಗೆ ಪರಿಚಯಿಸುತ್ತ, ''ಯಾವ ಪ್ರತಿಷ್ಠೆ - ಹೆಸರು ಬಯಸದೇ ತಮ್ಮಷ್ಟಕ್ಕೆ ತಾವು ಕಾರ್ಯರತರಾಗಿರುವ ಏಕೈಕ ವ್ಯಕ್ತಿ!'' ಎಂದು ಸಾರಿದ್ದರು. ಬೆಂಗಳೂರಿನ ಮಿಥಿಕ್ ಸೊಸಾಯಟಿಯ ಕಾರ್ಯಕ್ರಮ ಒಂದರಲ್ಲಿ ಡಾ. ಸೂರ್ಯನಾಥ ಕಾಮತರು.... ಪ್ರಸಿದ್ಧಿ ಪರಾಙ್ಮುಖಿ! ಎಂದು ಎರಡೇ ಶಬ್ದಗಳಲ್ಲಿ ಈ ವ್ಯಕ್ತಿಯನ್ನು ಗುರುತಿಸಬಹುದು! ಎಂದು ಸಭೆಗೆ ನನ್ನನ್ನು ಪರಿಚಯಿಸುತ್ತ ಹೇಳಿದ್ದರು. ಧಾರವಾಡದ ಮನೋಹರ ಗ್ರಂಥಮಾಲೆಯ ರಮಾಕಾಂತ ಜೋಶಿ, ತಮ್ಮ ಒಬ್ಬ ಅಧಿಕಾರಿ ಸ್ನೇಹಿತ ಹಾಗೂ ಅವರ ಪತ್ನಿಗೆ ಪರಿಚಯಿಸುತ್ತ, ''ಮೂವತ್ತೈದು ವರ್ಷಗಳಷ್ಟು ಹಿಂದೆಯೇ ನ್ಯೂಯಾರ್ಕ ವಿಶ್ವವಿದ್ಯಾಲಯದ ಡಾಕ್ಟರೇಟು ಪಡೆದು ಭಾರತಕ್ಕೆ ಮರಳಿ ಬಂದಾಗ

ಸರಿಯಾದ ನೌಕರಿ ಸಿಗದಿದ್ದರೂ, ಇಲ್ಲಿಯೇ ಇದ್ದು ಹೋರಾಡಲು ನಿರ್ಧರಿಸಿದ್ದಕ್ಕಾಗಿ ಒಮ್ಮೆಯೂ ಮರುಗದ ಅಪರೂಪದವರು!'' ಎಂದಿದ್ದರು.

ಹೊನ್ನಾವರ ಜಿಲ್ಲಾ ಸಾಹಿತ್ಯ ಸಮ್ಮೇಳನ ನಡೆದ ಸಂದರ್ಭದಲ್ಲಿ ಪ್ರೊ. ಎಂ.ಜಿ. ಹೆಗಡೆ ಅವರು ನನ್ನ ಸಾಹಿತ್ಯವನ್ನು ಓದುಗರಿಗೆ ಪರಿಚಯಿಸಿದ್ದರು. ಶಿವಾನಂದ ಕಳವೆ ಅವರು ನನ್ನ ಸಮಗ್ರ ಪರಿಚಯ ಕೊಟ್ಟಿದ್ದರು ಪ್ರೊ. ಜಿ. ಎಸ್. ಅವಧಾನಿ ಅವರು 'ಕನ್ನಡಕ್ಕೊಬ್ಬರೇ ಕಾಮತರು' ಎಂದು ಉದ್ಗರಿಸಿದ್ದರು. ಇದಕ್ಕೂ ಹೆಚ್ಚಾಗಿ ನಾನು ಹುಟ್ಟಿಬೆಳೆದ ಹೊನ್ನಾವರದ ಬೀದಿ-ಬೀದಿಗಳಲ್ಲಿ ಸಾಹಿತ್ಯ ಸಮ್ಮೇಳನಾಧ್ಯಕ್ಷರಾಗಿ ಡಾ. ಕೃಷ್ಣಾನಂದ ಕಾಮತರು ಎಂದು ಸಚಿತ್ರ ಪೋಸ್ಟರಗಳನ್ನು ತೂಗಹಾಕಿದ್ದರು. ಇಂಥ ಒಬ್ಬ ವ್ಯಕ್ತಿ ಉಂಟೆಂದು ಅರಿಯದವರ ಊರಲ್ಲಿ ಇದೆಲ್ಲ ಜರುಗುವದೆಂದರೆ ಅಭಿಮಾನದ ಸಂಗತಿಯಲ್ಲವೇ? ನಂತರ 'ಸುಧಾ' ಹಾಗೂ 'ಮಯೂರ' ಮಾಸಪತ್ರಿಕೆಯಲ್ಲಿ ನನ್ನ, ನಮ್ಮ ಪರಿಚಯ ಸಾಧನೆಗಳ ಕುರಿತು ಸಚಿತ್ರ ಲೇಖಗಳು ಬಂದವು. ಆ ತನಕ ನನ್ನ ಅಸ್ತಿತ್ವದ ಬಗ್ಗೆ ಅರಿಯದವರಾದ ಪೊಪ್ಯುಲರ್ ಔಷಧ ಅಂಗಡಿಯವರು, ಖಾದಿ ಭಾಂಡಾರದವರು ಹಾಗೂ ಲ್ಯಾಬಿನ ನೆರೆ ಹೊರೆಯ ಅಂಗಡಿಯವರೆಲ್ಲ ನನ್ನನ್ನು ಹೆಚ್ಚಿನ ಗೌರವದಿಂದ ಕಾಣಲಾರಂಭಿಸಿದ್ದಾರೆ. ವಿನಯದಿಂದ ವಂದಿಸಲಾರಂಭಿಸಿದ್ದಾರೆ! ಫೋಟೊ ಫ್ಲ್ಯಾಶ್ ಅಂಗಡಿಯ ಕೆಲಸಗಾರರೆಲ್ಲ ಹೆಚ್ಚಿನ ವಿಶ್ವಾಸದಿಂದ ನನ್ನ ಬೇಡಿಕೆಗಳನ್ನು ಪೂರೈಸುತ್ತಿದ್ದಾರೆ. ಝುರಾಕ್ಸ ಅಂಗಡಿಯ ಕೆಂಪರಾಜ್, ನನ್ನ ಕೆಲಸವೆಂದರೆ ದೇವರ ಕೆಲಸ! ಎಂದು ಭಾವಿಸಿದಂತೆ ನಡೆದುಕೊಳ್ಳುತ್ತಾನೆ. ದಿನವೂ ವೃತ್ತಪತ್ರಿಕೆ ಹಾಕುವ ಕೃಷ್ಣೇಗೌಡ ಬರಹೋಗುವಾಗೊಮ್ಮೆ ನಮಸ್ಕಾರ ಹೇಳದೇ ಇರುವದಿಲ್ಲ.

ಕನ್ನಡ ಲೇಖಕಿ ಶ್ರೀಮತಿ ನೇಮಿಚಂದ್ರಳ ಆಗ್ರಹಕ್ಕೆ ಮಣಿದು, ಹುಬ್ಬಳ್ಳಿಯ 'ಮಹಿಳಾ ಸಾಹಿತ್ಯಿಕಾ'ದ ಶ್ರೀಮತಿ ಹನುಮಾಕ್ಷಿ ಗೋಗಿಯವರು ಪ್ರಕಟಿಸಿದ, ಅವರ 'ಒಂದು ಕನಸಿನ ಪಯಣ' ಪ್ರವಾಸ ಕಥನದ ಬಿಡುಗಡೆಗೆ ಒಪ್ಪಿಕೊಂಡಿದ್ದೆ. ೨೧-೨-೯೯ರಂದು ನಡೆದ ಈ ಪುಸ್ತಕ ಬಿಡುಗಡೆಯ ಸಮಾರಂಭಕ್ಕೆ ಒಪ್ಪಿಕೊಂಡದ್ದು ಒಳ್ಳೆಯದಾಯಿತು! ಎಂದು ಆಮೇಲೆ ಅನಿಸಿತು. ಜ್ಯೋತ್ಸ್ನಾಳ ಅದೆಷ್ಟೋ ಸ್ನೇಹಿತರಿಗೆ, ಪರಿಚಿತರಿಗೆ ನನ್ನ ಬಗ್ಗೆ ಕುತೂಹಲ, ಅನುಮಾನ, ಅಪನಂಬಿಕೆಗಳಿದ್ದು, ನಾನೊಂದು ಬಿಡಿಸಲಾಗದ ಒಗಟಾಗಿದ್ದೆ. ಇಂಥವರ ಆತಂಕಗಳನ್ನು ಪರಿಹರಿಸಲು ಅಂದು ಸಾಧ್ಯವಾಯಿತು. ಐದು ವರ್ಷಗಳ ಹಿಂದೆಯೇ ನಿವೃತ್ತಳಾದ ಆಕಾಶವಾಣಿ ನಿರ್ದೇಶಕರ ಯಜಮಾನರು ಹಣ್ಣುಹಣ್ಣು ಮುದುಕರಾಗಿರದೇ ಅವಳಿಗಿಂತ ಕಿರಿಯರು! ಅನಿಸುವಷ್ಟು ಉತ್ತಮ ಆರೋಗ್ಯ ಹೊಂದಿದ್ದಾರೆ. ಅವರಿಗೆ ಸಭಿಕರನ್ನು ಎದುರಿಸುವ ಧೈರ್ಯ ಇಲ್ಲ! ಎಂಬುದು ಭ್ರಮೆ. ಕ್ರಮಬದ್ಧವಾಗಿ ಸ್ಪಷ್ಟವಾಗಿ, ಹಾಸ್ಯಭರಿತವಾಗಿ ಮಾತನಾಡಬಲ್ಲರು. ಆದರೆ ಯಾವುದೇ ಸಾಹಿತ್ಯಿಕ, ಸಾಂಸ್ಕೃತಿಕ ಕಾರ್ಯಕ್ರಮಗಳಿಂದ ಏಕೆ ದೂರವಿದ್ದಾರೆ? ಬಹುಶಃ ಅವರ ವಿವಿಧ ಚಟುವಟಿಕೆಗಳ ತನ್ಮಯತೆಯೇ ಕಾರಣವಿರಬಹುದು! ಎಂದುಕೊಂಡರಂತೆ, ಒಬ್ಬಿಬ್ಬರು. ಮುಂದೆ ಇಂಥ

ಕಾರ್ಯಕ್ರಮಗಳಿಗೆ, ಅವರು ಎಷ್ಟೇ ವಿರೋಧಿಸಿದರೂ ಬಿಡದೇ ಎಳೆದುಕೊಂಡು ಬರಬೇಕು! ಎಂದು ಅನುಭವಸ್ಥರೊಬ್ಬರು ಸೂಚಿಸಿದರಂತೆ. ಎಲ್ಲರಿಗೂ ನನ್ನ ಉಪಸ್ಥಿತಿ, ಆಶ್ಚರ್ಯದ ಸಂಗತಿಯಾಗಿತ್ತು ಎಂಬುದು ನಿಜ.

ಸ್ವಾಗತ ಭಾಷಣದಲ್ಲಿ ಡಾ. ಬಿ. ಎನ್. ಸುಮಿತ್ರಾಬಾಯಿ ಅವರು ನನ್ನ ಸಾಹಿತ್ಯಸಾಧನೆ ಪ್ರಶಂಸಿಸಿದರು. ನನ್ನ ಭಾಷಣದಲ್ಲಿ, ನೇಮಿಚಂದ್ರರ ಒತ್ತಾಯಕ್ಕೆ ಮಣಿದು, ಪುಸ್ತಕದ ಬಿಡುಗಡೆಗೆ ಒಪ್ಪಿಕೊಂಡಿದ್ದೆ, ಎಂದು ಹೇಳಿದ್ದೆ. ಆದರೆ ಆ ಬಳಿಕ ಮಾತನಾಡಿದ ಡಾ. ಎನ್. ಗಾಯತ್ರಿ ಅವರು ಕೃಷ್ಣಾನಂದ ಕಾಮತರ ಹೆಸರನ್ನು ಸೂಚಿಸಿದವಳೇ ನಾನು! ಆದ್ದರಿಂದ ಅವರನ್ನು ಬರಮಾಡಿಕೊಂಡ ಈ ಯಶಸ್ಸಿನಲ್ಲಿ ನನಗೂ ಸ್ವಲ್ಪ ಪಾಲು ಇದೆ. ಚಿಕ್ಕವಳಿದ್ದಾಗಿನಿಂದ ಅವರ ಪ್ರವಾಸ ಕಥನಗಳನ್ನು ಓದಿಯೇ ಬೆಳೆದಿದ್ದೇನೆ ಎಂದು ವಾದಿಸಿದರು. ನಂತರ ಪ್ರಕಾಶಕರಾದ ಹನುಮಾಕ್ಷಿ ಅವರು ತಾನು ಮೊದಲಿಗೆ ಅವರ ಮನೆಗೆ ಹೋಗಿ 'ದರ್ಶನ ಲಾಭ' ಪಡೆದದ್ದೇ ಅಲ್ಲದೇ ಅವರ ಕೃತಿಗಳನ್ನು ಓದಿ ಮನವಾರೆ ಮೆಚ್ಚಿಕೊಂಡದ್ದರಿಂದ ಅವರು ಈ ಸಭೆಗೆ ಬರಲು ಒಪ್ಪಿಕೊಳ್ಳುವದರಲ್ಲಿ ನನ್ನದೂ ಸಕ್ರಿಯ ಪಾಲು ಇದ್ದೇ ಇದೆ! ಎಂದರು. ಅಧ್ಯಕ್ಷಸ್ಥಾನವಹಿಸಿದ ಶ್ರೀಮತಿ ಎಚ್. ಎಸ್. ಪಾರ್ವತಿ, ಅವರು, ಕಾಮತರನ್ನು ನೋಡುವ, ಅವರ ಭಾಷಣವನ್ನು ಕೇಳುವ ಲವಲವಿಕೆಯಿಂದಲೇ ಬರಲು ಒಪ್ಪಿಕೊಂಡದ್ದು! ಎಂದರು. ವಂದನಾರ್ಪಣೆ ಮಾಡಿದ ಶ್ರೀಮತಿ ಶಾಂತಾ ನಾಗರಾಜ್ ಅವರು, ತಮ್ಮೆಲ್ಲ ಕೆಲಸಗಳನ್ನು ಬದಿಗೊತ್ತಿ ಕಾಮತರು, ಕರೆಗೆ ಓಗೊಟ್ಟು ಬಂದದ್ದಕ್ಕೆ ಕೃತಜ್ಞತೆ ಸಲ್ಲಿಸಿದರು.

ಶ್ರೀ ಕೃಷ್ಣನನ್ನು ಗೋಪಿಯರ ಸಮೂಹ ಸುತ್ತುವರಿದಂತೆ ನನ್ನ ಎಡಬಲದಲ್ಲೆಲ್ಲ ಜಾಗೃತಿ ಮಹಿಳಾ ಸಂಘದವರು ನಿಂತು ಸಮೂಹ - ಛಾಯಾಚಿತ್ರವನ್ನು ತೆಗೆಸಿಕೊಂಡರು. ಅನೇಕರು, ಬಿಡುಗಡೆ ಮಾಡಿದ ಪುಸ್ತಕದ ಪ್ರತಿಗಳನ್ನು ಕೊಂಡು, ಲೇಖಕಿಯ ಬದಲಾಗಿ ನನ್ನ ಹಸ್ತಾಕ್ಷರ ಪಡೆದರು! ಹನುಮಾಕ್ಷಿ ಗೋಗಿ, ಅವರು ಧಾರವಾಡಕ್ಕೆ ಮರಳಿ, ಅಲ್ಲಿದ್ದ ಜ್ಯೋತ್ಸ್ನಾಗೆ ನನ್ನ ಅಪರೂಪದ (!) ಸಾನ್ನಿಧ್ಯ ಹಾಗೂ ಭಾಷಣಗಳ ವರದಿ ಮಾಡಿದರು. ಅಲ್ಲಿ ಡಾಕ್ಟರೇಟ ಮಾಡುತ್ತಿರುವ ಮುರೂರಿನ ಹುಡುಗ ಶ್ರೀಧರ ಹೆಗಡೆ, ನನ್ನ ಎಲ್ಲ ಕೃತಿಗಳನ್ನು ಕೊಂಡು ಓದಿದ್ದಾನಂತೆ! ಅವನಿಗೆ ಅತಿ ಮೆಚ್ಚಿಗೆ ಆದ ಕೃತಿ, 'ಪ್ರೇಯಸಿಗೆ ಪತ್ರಗಳು' ಅಂತೆ. ಕೇವಲ ಬರವಣಿಗೆ ಮೂಲಕ ಎಷ್ಟೊಂದು ಓದುಗರನ್ನು ತಲುಪಬಹುದಲ್ಲವೇ?

ನೀನು ಹುಟ್ಟುವ ಮೊದಲಿನಿಂದಲೂ ಜೋಬನೇರ ಕಾಲೇಜಿನ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ನಾನು ಬೋಧಿಸುತ್ತಿದ್ದ ವಿಚಾರ ನಿನಗೆ ತಿಳಿದಿರಬಹುದು. ಅವರಲ್ಲಿ ವಿನೋದ ಭಟನಾಗರ ಒಳ್ಳೆಯ ವಿದ್ಯಾರ್ಥಿ ಅನಿಸಿಕೊಂಡಿದ್ದ. ಹೈದರಾಬಾದದಲ್ಲಿ ನೌಕರಿ ಮಾಡುತ್ತಿದ್ದ. ನಾನು ಮಧ್ಯಪ್ರದೇಶಕ್ಕೆ ಹೊರಟಾಗ ಹೈದರಾಬಾದದಲ್ಲಿ ಎರಡು ದಿನ ಅವರ ಆತಿಥ್ಯ ಕೂಡ ಸ್ವೀಕರಿಸಿದ್ದೆ. ಮೊನ್ನೆ ಅವನ ಹಿರಿಯ ಮಗಳ ಮದುವೆಯ ಆಮಂತ್ರಣಕ್ಕೆ ಆಶೀರ್ವಾದ ಕಳಿಸಿದ್ದೆ. ಅದಕ್ಕೆ ಬಂದ ಉತ್ತರದಲ್ಲಿ ಡಾ. ಭಟನಾಗರನು ಹೀಗೆ ಬರೆದಿದ್ದಾನೆ.... "You have been the main guiding force for me at

Jobner. In fact you had some special way of teaching to make various courses interesting. I still remember the course of micro-technique and various projects we carried out in that course'' ಮೂವತ್ತೈದು ವರ್ಷಗಳ ಹಿಂದಿನ ವಿದ್ಯಾರ್ಥಿಯಿಂದ ಹೆಚ್ಚಿನ ಹೆಗ್ಗಳಿಕೆ ನಿರೀಕ್ಷಿಸಲು ಸಾಧ್ಯವೇ?

ನಾನು ೧೯೭೪ರ ನಂತರ ಮುಂಬಯಿಗೆ ಹೋಗದೇ ಇದ್ದುದರಿಂದ ಶುಭಾಂಗನ ಪತ್ನಿ ಪ್ರೀತಿಯನ್ನು ನೋಡಿರಲಿಲ್ಲ. ಬಾಬಾರ ತೊಂಭತ್ತನೇ ಹುಟ್ಟುಹಬ್ಬಕ್ಕೆ ಅವರೆಲ್ಲ ಬೆಂಗಳೂರಿಗೆ ಬಂದಿದ್ದರೂ ಮೈಸೂರು, ಬಂಡೀಪುರ, ಅಲ್ಲಿ, ಇಲ್ಲಿ ಸುತ್ತುವದರಲ್ಲಿ ನಿರತರಾಗಿದ್ದರು. ಈಬಾರಿ ಬಂದಾಗ ಜ್ಯೋತ್ಸ್ನಾ ಅವಳಿಗೆ ಕೊಂಕಣಿ 'ವೊವ್ಯೊ' (ವಿವಾಹ ಗೀತ) ಕೊಡುವ ಆಶ್ವಾಸನೆ ನೀಡಿ ಮನೆಗೆ ಬರಲು ಹೇಳಿದ್ದಳು. ಆದರೆ ಅವಳು ಬರುವ ಸಾಧ್ಯತೆಯೇ ಇಲ್ಲವೆಂದು ನನಗೆ ಹೇಳಿ, ಆ ಹೊತ್ತಿನಲ್ಲಿ ಬೇರೆಲ್ಲಿಗೋ ಹೋಗಿಬಿಟ್ಟಿದ್ದಳು! ಅವಳ ಗೈರಹಾಜರಿಯಲ್ಲಿ ಪ್ರೀತಿ ಗಂಡನೊಡನೆ ಬಂದಿಳಿದಳು. ನಾನು ಏನು ಮಾಡಬೇಕು? ಚಹ-ಕಾಫಿ ಏನೂ ಬೇಡವೆಂದರು. ಬೇರೇನೂ ತೋಚದೇ ಅವರ ಭಾವಚಿತ್ರಗಳನ್ನು ಸೆರೆಹಿಡಿದಿದ್ದೆ. ಆಮೇಲೆ ಅವರಿಗೆ ಎರಡು ಪ್ರತಿಗಳನ್ನು ಕಳಿಸಿದ್ದೆ. ಅದಕ್ಕೆ ಪ್ರೀತಿಯೇ ಉತ್ತರಿಸಿದ್ದಾಳೆ. 'Received the snaps you clicked when we visited your place in January. Though I do not consdier myself photogenic, the snaps have come out just beautiful. Shubhang and myself were very thrilled to receive them and we will cherish them forever... Bhayya, what is latest in Kamat Potpourri? Please do write to us'' ನಾನು ಅವರಿಗೆ ನಮ್ಮ ವೆಬ್ ಸ್ಯಾಟಿನ ಕೆಲವು ಪ್ರಿಂಟ್‌ಔಟ್‌ಗಳನ್ನು ತೋರಿಸಿದ್ದೆ. ಭಾವಚಿತ್ರಗಳನ್ನು ಕ್ಲಿಕ್ಕಿಸಿದ್ದೆ. ಇವೆರಡೂ ಪ್ರೀತಿಗೆ ಪತ್ರ ಬರೆಯುವಂತೆ ಮಾಡಿದವು.

ಖ್ಯಾತಿಯೇ ನನ್ನನ್ನು ಬೆನ್ನಟ್ಟಿ ಬರಲಾರಂಭಿಸಿದೆ! ಅಮೇರಿಕೆಯ ಪ್ರವಾಸಕಥನದಿಂದ ನನ್ನ ಬರವಣಿಗೆ ಪ್ರಾರಂಭವಾಯಿತು. ಬಿಡಿ ಬರಹಗಳು, ವೈಜ್ಞಾನಿಕ ಬರವಣಿಗೆ, ಕಲೆಯ ಕುರಿತು ಗ್ರಂಥ, ಹಲವಾರು ಪ್ರವಾಸಕಥನಗಳು, ಓದುಗರಲ್ಲಿ ವಿಶಿಷ್ಟವಾದ ಕುತೂಹಲವನ್ನು ಕೆರಳಿಸಿದವು. ಆದರೆ ಒಂದೂವರೆ ವರ್ಷಗಳ ಹಿಂದೆ ನೀನು ನನ್ನ ಲೇಖನ ಹಾಗೂ ಚಿತ್ರ ಪ್ರತಿಭೆ (!)ಯ ಪ್ರಕಾರಕ್ಕಾಗಿಯೇ ವೆಬ್‌ಸ್ಯಾಟ್‌ನ್ನು ಇಂಟರನೆಟ್ ಮೇಲೆ ಪ್ರಾರಂಭಿಸಿದಾಗ, ನಮ್ಮ ಹೆಸರು ದೇಶ-ವಿದೇಶಗಳಲ್ಲಿ ಹರಡಲಾರಂಭಿಸಿತು. ನೀನು ಸತತವಾಗಿ ಕಳಿಸುತ್ತಲೇ ಇರುವ ನೋಡುಗರ, ಈ-ಮೇಲ್ ಪ್ರತಿಕ್ರಿಯೆಗಳನ್ನೆಲ್ಲ ಓದಿ ಮನಸೋತಿದ್ದೇನೆ. ಕಾವಿಕಲೆ, ಭೀಮಬೆಟ್ಕಾದ ಶಿಲಾಚಿತ್ರಗಳು, ರಂಗೋಲಿ, ತೊಗಲುಬೊಂಬೆ, ಕಸೂತಿಗಳಂತಹ ಜನಸಾಮಾನ್ಯರ ವಿಷಯಗಳೆಲ್ಲ ವಿಶ್ವ-ವೀಕ್ಷಕರ ಮನ್ನಣೆ, ಮೆಚ್ಚಿಗೆಗಳನ್ನು ಪಡೆಯುತ್ತಿವೆ ಅಲ್ಲವೇ? ಇದರಿಂದ ನಿನ್ನ ಶ್ರಮ, ಹೆಚ್ಚಿನ ಕೆಲಸ, ಹಣದ ವ್ಯಯವಾಗುವದೇನೋ ನಿಜ, ಆದರೆ ಈ ಮೂಲಕ ನೀನು ವಿಶಿಷ್ಟ ರೀತಿಯಲ್ಲಿ ಸಮಾಜದ ಹಾಗೂ ದೇಶದ ಸೇವೆಯನ್ನು ಮಾಡುತ್ತಿರುವಿ, ಎಂಬುದನ್ನು ಗಣನೆಗೆ ತೆಗೆದುಕೊಳ್ಳಲೇಬೇಕಾಗುತ್ತದೆ. ನನ್ನ ಅರ್ಧ

ವಯಸ್ಸಿಗೆ ನಿನಗೆ ಈ ಕ್ಷೇತ್ರದಲ್ಲಿ ಅದೆಷ್ಟು ಅವಕಾಶಗಳು! ಈ ಪ್ರಪಂಚ ತುಂಬ ಸುಂದರವಾದದ್ದು, ವಿಶಾಲವಾದದ್ದು, ಮನಸ್ಸಿದ್ದರೆ ಏನೆಲ್ಲ ಸಾಧಿಸಬಹುದು. ನನಗೆ ಅದೆಷ್ಟೋ ಬಾರಿ, ನಾನೀಗ ಮೂವತ್ತು ವರ್ಷದ ಹರೆಯದವನಾಗಿದ್ದರೆ!... ಅನಿಸುತ್ತಿರುತ್ತದೆ.

ಮೊನ್ನೆ, ಮುಂಬಯಿಯಿಂದ ಪ್ರಕಟವಾಗುವ 'CHIP' ಮಾಸಿಕ (ಕಂಪ್ಯೂಟರ ಕಂಪನಿಯದು) ಕೊರಿಯರ್‌ದಿಂದ ಒಂದು ಪತ್ರವನ್ನು ಕಳಿಸಿದೆ. ಅದರಲ್ಲಿ "Congratulations! CHIP has chosen www.kamat.com as one among the 25 Best Indian Websites" ಬರೆದದ್ದನ್ನು ಓದಿ ತುಂಬಾ ಖುಷಿಪಟ್ಟೆ. ನಮ್ಮ ಸರಕಾರ ಒಂದು ಲಕ್ಷ ರೂಪಾಯಿಗಳ ಯಾವುದಾದರೂ ಬಹುಮಾನ ಕೊಟ್ಟಿದ್ದರೂ ಇಷ್ಟೊಂದು ಸಂತೋಷವಾಗುತ್ತಿರಲಿಲ್ಲ! ಈ ಪತ್ರದೊಂದಿಗೆ ಕಳುಹಿಸಿದ ಫೆಬ್ರುವರಿ ತಿಂಗಳ ಸಂಚಿಕೆಯಲ್ಲಿ ಗುರುತಿಸಿದ ಇಪ್ಪತ್ತೈದು ವೆಬ್‌ಸ್ಯಾಟುಗಳನ್ನು ಹೆಸರಿಸಲಾಗಿದೆ. ಅವುಗಳಲ್ಲಿ "ಟೈಮ್ಸ್ ಆಫ್ ಇಂಡಿಯಾ" 'ಆಲ್ ಇಂಡಿಯಾ ರೇಡಿಯೋ'ಗಳಂತಹ ಬೃಹತ್ ಸಂಸ್ಥೆಗಳ ಜೊತೆಯಲ್ಲಿ ಕಾಮತಕುಟುಂಬದ (ಕೇವಲ ನಾಲ್ಕು ಸದಸ್ಯರು!) ಸಾಧನೆಯನ್ನು ತೋರಿಸಲಾಗಿದೆ! ಎಂದರೆ ಸಾಧನೆಯ ವಿಸ್ತಾರದ ಅರಿವು ಆಗದೇ ಇರದು. ಇಂದು ಪ್ರತಿಯೊಬ್ಬನು, ಕೇವಲ ಲಾಭಕ್ಕಾಗಿ ಎಲ್ಲ ಚಟುವಟಿಕೆಗಳನ್ನು ಹಮ್ಮಿಕೊಳ್ಳುವ ದಿನಗಳಲ್ಲಿ ನಮ್ಮ ಪ್ರತಿಭೆ, ವೇಳೆ, ವೆಚ್ಚಗಳನ್ನು ಇನ್ನಿತರರೊಡನೆ ಹಂಚಿಕೊಳ್ಳುವ ನಮ್ಮಂಥ ಕುಟುಂಬ ತೀರ ಅಪರೂಪದ್ದಾಗಿರಲೇ ಬೇಕು!

ಈ ಗೌರವದಿಂದ ನಮ್ಮ ಜವಾಬ್ದಾರಿಗಳು ಇನ್ನೂ ಹೆಚ್ಚಿವೆ! ಆರೋಗ್ಯ, ಆಯುಷ್ಯ ಚೆನ್ನಾಗಿದ್ದರೆ ಏನೆಲ್ಲ ಸಾಧಿಸಬಹುದು. ಎಂದು ಕನಸು ಕಾಣುತ್ತಿದ್ದೇನೆ. ನಾನು ತೀರ ಎಳೆಯ ವಯಸ್ಸಿನಿಂದಲೂ ಕನಸುಗಾರ. ಆದರೆ ನನ್ನನ್ನು ಯಾರೂ ಅರ್ಥಮಾಡಿಕೊಳ್ಳಲೇ ಇಲ್ಲ. ಅಂತೆಯೇ ಜೀವನದ ಉದ್ದಕ್ಕೂ ಒಂಟಿಯಾಗಿಯೇ ನನ್ನ ಕನಸುಗಳಿಗೆ ನನಸಿನ ರೂಪ ಕೊಡಲು ಕಂಕಣಬದ್ಧನಾಗಿದ್ದೆ. ಇಂದಿನ ದಿನಗಳಲ್ಲಿ ನನಗೆ ಸಿಗುವ, ಸಿಗುತ್ತಿರುವ ಗೌರವ, ಖ್ಯಾತಿಗಳಿಗೆ ಹಪಹಪಿಸುವವರು ಅದೆಷ್ಟೊ ಜನರು. ಕಳೆದ ಅರ್ಧಶತಮಾನದ ನನ್ನ ಶ್ರಮವೆಲ್ಲ ಕನಸೆಲ್ಲ ಇಂದು ಫಲಿಸುತ್ತಿದೆ, ಎಂಬ ಕಲ್ಪನೆ ಅವರಿಗೆ ಹೇಗೆ ಬರಬೇಕು? ಶಿಕ್ಷಕ, ವಿಜ್ಞಾನಿ, ಸಂಶೋಧಕ, ಛಾಯಾಚಿತ್ರಕಾರ, ಬರಹಗಾರ, ಭಾಷಣಕಾರ, ಬಾಣಸಿಗ ಮುಂತಾಗಿ ಬೇರೆ ಬೇರೆ ಕ್ಷೇತ್ರದಲ್ಲಿ ಸೈ ಅನಿಸಿಕೊಳ್ಳುವದು ಸುಲಭ ಸಾಧ್ಯವಾದ ಮಾತೇನಲ್ಲ.

ನನ್ನ ಮನದಲ್ಲಿ ಮೂಡಿಬಂದ ಭಾವನೆಗಳನ್ನೆಲ್ಲ ಬಿಚ್ಚು ಮನಸ್ಸಿನಿಂದ ನಿನಗೆ ಬರೆದಿದ್ದೇನೆ. ಇದು ತನ್ನ ಬೆನ್ನನ್ನು ತಾನೇ ಚಪ್ಪರಿಸಿಕೊಳ್ಳುವ ಯತ್ನ ಎಂದು ನಿನಗೆ ಅನಿಸಿದರೆ ಆಶ್ಚರ್ಯವಿಲ್ಲ!!

◆ ◆ ◆

೩೩. ವೆಬ್‌ಸ್ಯಾಟ್ ವಿಶೇಷ

ನಿನ್ನ ಇಂಟರ್‌ನೆಟ್ - 'ಕಾಮತ್ ವೆಬ್‌ಸ್ಯಾಟ'ನಿಂದ ಅನೇಕಾನೇಕರು ನನ್ನ-ನಮ್ಮ ಬಗೆಗಿನ ಅಭಿಪ್ರಾಯ ಬದಲಿಸುತ್ತಿದ್ದಾರೆ. ಪ್ರೊ। ಶಾನಭಾಗರ ಮಗಳು ಹಿಂದೆಂದೂ ನಮ್ಮ ಬಗ್ಗೆ ಆದರ-ವಿಶ್ವಾಸ ತಾಳಿದಂತೆ ಅನಿಸಿಯೇ ಇರಲಿಲ್ಲ. ಆದರೆ ಇಂಟರ್ ನೆಟ್‌ನಲ್ಲಿ ನಮ್ಮ ಕಾರ್ಯಕ್ರಮ ನೋಡಲಾರಂಭಿಸಿದ ಬಳಿಕ, ನಾವು ಏನೋ 'ವಿಶೇಷ!' ಎನಿಸಿರಬೇಕು. ಅಂತೆಯೇ ತನ್ನ ತಾಯಿಯನ್ನು ಆಫೀಸಿಗೆ ಕರೆದುಕೊಂಡು ಹೋಗಿ ನಮ್ಮ ವೆಬ್‌ಪೇಜ್ ತೋರಿಸಿದಳಂತೆ! ಅಲ್ಲದೇ ಈ -ಮೇಲ್ ಕಳಿಸಿ ತನ್ನ ಪ್ರಶಂಸೆ ತಿಳಿಸಿದ್ದಾಳೆ. ತಾಯಿಯ ಮನಸ್ಸು ಒಲಿಸಿ, ಎರಡು ಬಸ್ ಬದಲಿಸಿ ನಮ್ಮ ಭೇಟಿಗೆ ಬಂದಿದ್ದಳು.

ರವಿಕುಮಾರ್, ನಮ್ಮ ಬಗ್ಗೆ ಪ್ರೀತಿ - ಆದರ ತೋರಿದ ನೆನಪಿಲ್ಲ. ಊರಲ್ಲಿದ್ದೂ ದಶಕಗಟ್ಟಲೆ ಮಾತನಾಡಿಸದವ, ಮೊನ್ನೆ ಫೋನಿಸಿ ಕಾರ್ಯಕ್ರಮಗಳ ಮೆಚ್ಚಿಕೆ ತಿಳಿಸಿದ. 'ಕಾಮತ್ ಪೌಪುರಿ'ಯಲ್ಲಿ ನೋಡುವದು ಬೆಟ್ಟದಷ್ಟಿದೆ! ಯಾವುದು ನೋಡುವದು ಯಾವುದು ಬಿಡುವದು ತಿಳಿಯುತ್ತಿಲ್ಲ!' ಎಂದು ಹೇಳಿ ನಿನ್ನ ಈ-ಮೇಲ್ ವಿಳಾಸ ಪಡೆದಿದ್ದಾನೆ. ಹೊನ್ನಾವರದವರು ಎಷ್ಟೋ ಕಾರ್ಯಕ್ರಮ ನೋಡಿ, ತುಳಸುವಿಗೆ ವರದಿಸಿದ್ದಾರೆ. ಪ್ರಮೋದ್ ಕಾಮತನು ಗೋವಾ ಪತ್ರಿಕೆಗಳಲ್ಲಿ ನಮ್ಮ ಸೈಟಿನ ಲೇಖಗಳ ಪುನರ್ ಮುದ್ರಣ ಮತ್ತು ಪ್ರಶಂಸೆ ಓದಿದನಂತೆ! ನಾವಾಗಿ ಪ್ರಸಿದ್ಧಿಗೆ ಹವಣಿಸದಿದ್ದರೂ ನಮ್ಮ ಯತ್ನಸಾಧನೆಗಳು ನಾಲ್ಕೂ ದೆಸೆಗಳಲ್ಲಿ ಹರಡುತ್ತಿರುವದು ಅಭಿಮಾನದ ಸಂಗತಿಯಲ್ಲವೇ?

ಈಗ ಈ ಹೊಸ ಸಾಹಸದಿಂದ, ಅದರ ಯಶಸ್ಸಿನಿಂದ, ಹುಟ್ಟಿಬಂದದ್ದು ಸಾರ್ಥಕವೆನಿಸುತ್ತಿದೆ. ಧನಸಂಪಾದನೆಯೇ ಜೀವನದ ಏಕಮಾತ್ರ ಗುರಿ ಅಲ್ಲವಲ್ಲ! ಅದೆಷ್ಟೋ ತಂದೆ-ತಾಯಿಗಳ ಮಕ್ಕಳು ಅಮೇರಿಕೆಗೆ ಹೋಗುತ್ತಾರೆ. ಹಣ ಗಳಿಸುತ್ತಾರೆ. ಆದರೆ ಇಂಥ ಸಾಧನೆ ಮಾಡಿದ್ದಾರೆ! ಎಂದು ಹೆಮ್ಮೆ ಪಡುವಂತೆ ಇದೆಯೇ? ಕೇವಲ ಅಮೇರಿಕೆಗೆ ಹೋಗುವದರಿಂದ ಇದನ್ನು ಸಾಧಿಸಲಾಗುವದಿಲ್ಲವಲ್ಲ? ಇದಕ್ಕೆ ತಪಸ್ಸು ಬೇಕು, ಪರಿಶ್ರಮ ಬೇಕು. ತ್ಯಾಗಬುದ್ಧಿ ಬೇಕು, ಎಂಬುದು ಅವರಿಗೆಲ್ಲ ಹೇಗೆ ತಿಳಿಯಬೇಕು?

ಕಳೆದ ಅರ್ಧ ಶತಮಾನದಲ್ಲಿ ನಾನು ಸಂಗ್ರಹಿಸಿದ ಛಾಯಾ-ಚಿತ್ರಗಳನ್ನು ಒಂದೊಂದಾಗಿ ಹೊರತೆಗೆದು, ನಿನಗೆ ಕಳಿಸಿದಾಗ ನಿನ್ನ ಅಮ್ಮ ಅವಾಕ್ ಆಗುತ್ತಾಳೆ. ''ಒಂದು ದಿನ ವಿಕಾಸನು ಇಂಟರ್‌ನೆಟ್ ಪ್ರಾರಂಭಿಸಬಹುದು, ಅದಕ್ಕೆ ಇವೆಲ್ಲ ಬೇಕಾಗಬಹುದು, ಎಂದು ನಿಮಗೆ ಮೊದಲೇ ಅನಿಸಿತ್ತೆ?'' ಎಂದು ಅಣಕವಾಡುತ್ತಾಳೆ. ಜೀವನದಲ್ಲಿ ಎಲ್ಲವನ್ನೂ ಸ್ವಾರ್ಥಕ್ಕಾಗಿ, ಲಾಭಕ್ಕಾಗಿ ಬಳಸುವ ಧೋರಣೆ ತಳೆದಿದ್ದರೆ ಇವನ್ನೆಲ್ಲ ಮಾಡಲು ಸಾಧ್ಯವಿತ್ತೆ? ನೀನು ಜೀವನದಲ್ಲಿ ಇದರ ಮೌಲ್ಯವನ್ನು ಕಂಡುಕೊಂಡದ್ದರಿಂದ ಹೆಚ್ಚಿನ ನೆಮ್ಮದಿಯಾಗಿದೆ.

ಅಮೇರಿಕನ್ನರು ಹಿಂದೆ ಸೌಭಾಗ್ಯ -ಕುಂಕುಮಧಾರಣೆ, ಇವುಗಳ ಕುರಿತು ವಿಚಾರಿಸಿದಾಗಲೆಲ್ಲ ವಿವರಣೆ ನೀಡುವದು ತುಂಬ ಕಷ್ಟಕರವಾಗುತ್ತಿತ್ತು. ಯಾಕಂದರೆ ನಾನು ಕೊಟ್ಟ ಉತ್ತರಕ್ಕೆ ಮರುಪ್ರಶ್ನೆ ಸದಾಕಾಲ ಇದ್ದೇ ಇರುತ್ತಿತ್ತು. ಈಗ ನಮ್ಮ ಧರ್ಮವೆಂಬುದು ಧಾರ್ಮಿಕ ಕಟ್ಟಳೆಗಳ ಮೇಲೆ ಅವಲಂಬಿಸಿಲ್ಲ. ವೈಯಕ್ತಿಕ ನಂಬಿಕೆಯ ಮೇಲೆ ಬಹುಟ್ಟಿಗೆ ಅವಲಂಬಿಸಿದೆ, ಎಂದು ಅವರಿಗೆ ತಿಳಿ ಹೇಳುವದೂ ಕಷ್ಟ! ಕುಂಕುಮಾದಿ ತಿಲಕಧಾರಣೆ ಕುರಿತು ವಿವರಣೆ ಕೊಡುವದೂ ತುಂಬ ಬಿಗಿ. ಇಂಟರ್‌ನೆಟ್‌ಗಾಗಿ ಕುಂಕುಮ, ಸಿಂಧೂರ, ಶ್ರೀಗಂಧ, ಸಾದು, ಚಂದನ, ಗೋಪೀಚಂದನ, ಅರಿಶಿಣ ಹಾಗೂ ನಾಮ ಧರಿಸುವ ಹಲವು ವಿಧಾನಗಳನ್ನು ಈ ದೃಷ್ಟಿಯಿಂದಲೇ ಕ್ಲಿಕ್ಕಿಸಿ ಕಳಿಸುತ್ತಿದ್ದೇನೆ. ಇಷ್ಟಾದರೂ ಕುಂಕುಮ ಇಟ್ಟುಕೊಳ್ಳುವದರ ಹಿಂದಿನ ತಾತ್ವಿಕತೆ ಅವರಿಗೆ ಅರ್ಥವಾಗುತ್ತದೆ, ಎಂದು ಹೇಳಲಾಗುವದಿಲ್ಲ. ಬಹಳ ಹಿಂದೆ ಒಮ್ಮೆ, ಕುಂಕುಮಧಾರಣೆಯ ಬಗ್ಗೆ ಹೇಳುತ್ತ ವಿಧವೆಯಾದವಳು, ಗಂಡನಲ್ಲಿ ಇಟ್ಟ ಪ್ರೀತಿ-ಗೌರವಗಳ ಪ್ರತೀಕವಾಗಿ, ಆತನ ನಿಧನದ ನಂತರ ತಾಳಿ-ಕುಂಕುಮ ಧರಿಸುವದಿಲ್ಲ ಎಂದು ಹೇಳಿಬಿಟ್ಟೆ. ಆಗ ಸಹಜವಾಗಿಯೇ ಒಬ್ಬಾಕೆ ಹೆಂಡತಿ ಮೃತಪಟ್ಟಾಗ ಗಂಡ ಏನು ಮಾಡುತ್ತಾನೆ? ಏನೇನು ತ್ಯಜಿಸುತ್ತಾನೆ? ಎಂದು ಕೇಳಿದ್ದಳು. ನಮ್ಮ ಸಮಾಜದ ವಿಷಮತೆ, ಅಮೇರಿಕನ್ನರಿಗೆ ಅರ್ಥವಾಗದ ವಿಷಯವಾದ್ದರಿಂದ, ''ಎಲ್ಲರೂ ಪತ್ನಿಯ ಗೌರವಾರ್ಥ ತಾಜಮಹಲ್ ಕಟ್ಟಲಾಗುವದಿಲ್ಲವಲ್ಲ?'' ಎಂದು ಹಾಸ್ಯದ ಉತ್ತರ ಕೊಟ್ಟಿದ್ದೆ. ಆವಮ್ಮಾ, ಅಲ್ಲಿ ಹೋದಾಗ ಕೊಟ್ಟ ಟಿ. ವಿ. ಸಂದರ್ಶನವೊಂದರಲ್ಲಿ ''ಕುಂಕುಮಧಾರಣೆ, ನಿಮ್ಮಲ್ಲಿಯ ಲಿಪ್‌ಸ್ಟಿಕ್‌ದಂತೆ! ವೇಷ, ಭೂಷಣಕ್ಕೆ ಸರಿಹೊಂದುವ 'ಬಿಂದಿ' ಧರಿಸಿ ಹೆಂಗಳೆಯರು ನಲಿಯುತ್ತಾರೆ ಎಂದು ಉತ್ತರಿಸಿದಳಂತೆ. ಪುಣ್ಯಕ್ಕೆ ಅವರಾರೂ ಗಂಡಸರ ತಿಲಕ, ನಾಮಧಾರಣೆ ನೋಡಿರದ್ದರಿಂದ ಮುಂದೆ ಪ್ರಶ್ನಿಸಲಿಲ್ಲವಂತೆ!

ನಾನು ಪ್ರತಿದಿನವೂ 'ವೇಣುಗೋಪಾಲ ಸ್ವಾಮಿ ಶ್ರೀ ಕೃಷ್ಣ ದೇವಸ್ಥಾನವನ್ನು ಹಾದು ಹೋಗುವದರಿಂದ ಅಲ್ಲಿ ಹಲವಾರು ಅಯ್ಯಂಗಾರಿಗಳನ್ನು ನೋಡುತ್ತಿರುತ್ತೇನೆ. ಅದೇ ಬೀದಿಯಿಂದ ಮುಂದುವರಿದು ಹೋಗುವದರಿಂದ ಅವರ ಮಹಿಳೆಯರು, ಮಕ್ಕಳನ್ನು ನೋಡುತ್ತೇನೆ. ಈ ಮೊದಲು ಕ್ಲಿಕ್ಕಿಸಿದ ಚಿತ್ರಗಳು ನನಗೆ ತೃಪ್ತಿ ಕೊಟ್ಟಿರಲಿಲ್ಲ. ಅಂತೆಯೇ ದೇವಾಲಯದ ಅರ್ಚಕರ ಕುಟುಂಬದವರ, ಪರಿಚಯ ಮಾಡಿಕೊಂಡೆ. ಮುಗುಳುನಗೆ ಬೀರಿ, ಹಿರಿಯರಿಗೆ ವಂದಿಸಿ, ನಂತರ ಛಾಯಾಗ್ರಹಣ ಮಾಡಲಾರಂಭಿಸಿದೆ. ಅವರಲ್ಲಿ ಕೆಲವರು ರಾಮಾನುಜಾಚಾರ್ಯರ ಕಾಲದ ವೇಷ-ಭೂಷಣಗಳನ್ನು ಧರಿಸಿದರೂ, ಅತ್ಯಾಧುನಿಕ ಜೀವನಕ್ರಮವನ್ನು ತಮ್ಮದನ್ನಾಗಿ ಮಾಡಿಕೊಂಡಿದ್ದಾರೆ. ಸ್ಕೂಟರ್ ಓಡಿಸುತ್ತಾರೆ. ಕಾರು ನಡೆಸುತ್ತಾರೆ. ಕ್ರಿಕೆಟ್ ಆಡುತ್ತಾರೆ, ಅವರ ಜೀವನದ ಹಲವಾರು ಮುಖಗಳನ್ನು ಛಾಯಾಚಿತ್ರಗಳಲ್ಲಿ ಸಂಗ್ರಹಿಸಿಡಲು ಯತ್ನಿಸಿದ್ದೇನೆ. ಅವರ ಈ ಜೀವನಕ್ರಮ, ನಾಮ, ಜುಟ್ಟು, ಚೈನು, ಪಂಚೆಯೊಂದಿಗೆ ಸ್ಕೂಟರ್, ಕಾರ್ ಚಾಲನೆ ಪಾಶ್ಚಾತ್ಯರಿಗೆ ಆಕರ್ಷಕವಾಗಿ ಕಂಡರೆ ಆಶ್ಚರ್ಯವಿಲ್ಲ.

ಇಂದಿನ ಯುವಪೀಳಿಗೆ, ಪುರೋಹಿತ ವರ್ಗ ಒಳಗೊಂಡಂತೆ, ಪಾಶ್ಚಾತ್ಯ ವೇಷ-ಭೂಷಣಕ್ಕೆ ಮಾರುಹೋಗಿದ್ದರಿಂದ ಇನ್ನು ಕೆಲವೇ ದಶಕಗಳಲ್ಲಿ ಇಂಥವರನ್ನು ಕಾಣಲು, ನಿನ್ನ ಇಂಟರ್‌ನೆಟ್‌ಗೇ ಶರಣು ಹೋಗಬೇಕಾಗಬಹುದು!

ಇಂಟರ್‌ನೆಟ್‌ಗೆ ಛಾಯಾಚಿತ್ರಗಾರನಾಗಿ ಕೆಲಸ ಮಾಡಲಾರಂಭಿಸಿದ್ದರಿಂದ, ಎಲ್ಲಿಯೇ ಹೋಗಲಿ, ಅಲ್ಲಿ ನಡೆದಿರುವ ಚಟುವಟಿಕೆಗಳನ್ನು ಕಣ್ಣಲ್ಲಿ ಕಣ್ಣಿಟ್ಟು ವೀಕ್ಷಿಸುತ್ತೇನೆ. ಅವರನ್ನು ಒಪ್ಪಿಸುವ ವಿಧಾನ ಕುರಿತು ಆಳವಾಗಿ ವಿಚಾರಿಸುತ್ತೇನೆ. ಅವರು ಯಾವ ಆಕ್ಷೇಪಣೆ ಎತ್ತದೇ ಒಪ್ಪಿಕೊಳ್ಳುವ ಸಾಧ್ಯತೆ ಇದ್ದಲ್ಲಿ ಮಾತ್ರ ಅವರಿಗೆ ಕೇಳಿಕೊಳ್ಳುತ್ತೇನೆ. ಅವರು 'ಒಲ್ಲೆ' ಎಂದರೆ ಕೆಮೆರಾ ಮುಚ್ಚಿ ಅಲ್ಲಿಂದ ಕಾಲ್ತೆಗೆಯುತ್ತೇನೆ. ಹೆಚ್ಚಿನ ಜನ ತಮ್ಮ ಛಾಯಾಚಿತ್ರಗಳು ಏಕೆ ಬೇಕು? ಎಂದು ವಿಚಾರಿಸದೇ ಇರುವದಿಲ್ಲ. ಅನೇಕರು ಯಾವುದೋ ಪತ್ರಿಕೆಗೋ ದೂರದರ್ಶನಕ್ಕೊ ಇರಬಹುದು, ಎಂದು ತಾವೇ ನಿರ್ಧರಿಸಿಬಿಡುತ್ತಾರೆ. ಕೆಲವರು ಅವು ಪ್ರಕಟವಾಗುವ, ಪ್ರಸಾರವಾಗುವ ದಿನಾಂಕದ ಕುರಿತು ವಿಚಾರಿಸುತ್ತಾರೆ. ಪ್ರತಿಗಳನ್ನೂ ಕೇಳುತ್ತಾರೆ. ಇನ್ನೂ ಕೆಲವರು ನೆಗೆಟಿವ್ ವಿಚಾರಿಸುತ್ತಾರೆ. ಅವರೆಲ್ಲರನ್ನೂ ಸಂಭಾಳಿಸುವ ಕಲೆಯನ್ನು ಸುಲಭವಾಗಿ ಕರಗತ ಮಾಡಿಕೊಂಡಿದ್ದೇನೆ. ಪದೇ ಪದೇ ಕೇಳುವವರಿಗೆ ಮಾತ್ರ ಚಿಕ್ಕ ಪ್ರತಿಗಳನ್ನು ಕೊಡುವ ಪರಿಪಾಠ ಇಟ್ಟುಕೊಂಡಿದ್ದೇನೆ. ಅವನ್ನು ಪಡೆದವರು, ಎಂದೂ ತಮ್ಮ ಫೋಟೋ ಕಾಣದ ದುರ್ದೈವಿಗಳು, ಅವನ್ನು ನೋಡಿ ಪಡುವ ಸಂತೋಷ ಅಷ್ಟಿಷ್ಟಲ್ಲ!

* * *

ಭಾರತದ ಬೆಳೆಯುತ್ತಿರುವ ಮಕ್ಕಳ ಸಂಖ್ಯೆಯ ಬಗ್ಗೆ ವಿಶ್ವದ ಜನರೆಲ್ಲ ತಲೆ ಕೆಡಿಸಿಕೊಂಡಿದ್ದಾರೆ. ಜನಸಂಖ್ಯೆ ಬಿಲಿಯ (ನೂರು ಕೋಟಿ) ದಾಟಿದಾಗ ಕಳವಳಕ್ಕೆ ಕಾರಣವಾಗದೇ ಇದ್ದೀತೆ? ಈ ಸಮಸ್ಯೆಗೆ ಮುಖ್ಯವಾಗಿ ಎರಡು ಕಾರಣ. ಸರ್ವರಿಗೆ ಎಟಕುವ ಮನರಂಜನೆಯ ಅಭಾವ. ಎರಡನೆಯದಾಗಿ, ಮಕ್ಕಳೇ ತಮ್ಮ ಸರ್ವಸಂಪತ್ತು! ಎಂದು ಪರಿಗಣಿಸುವ ಸ್ವಭಾವ. ಅತ್ಯಾಧುನಿಕರು, ಕುಟುಂಬ ಯೋಜನೆ ಪಾಲಿಸಿದರೂ ಬಹುಸಂಖ್ಯಾತರು ಭಾರತ ಮಾತೆಗೆ ಉದಾರವಾಗಿ ತಮ್ಮ ಮಕ್ಕಳನ್ನು ಕೊಡಮಾಡುವ ಕಾಯಕವನ್ನು ಏಕಪ್ರಕಾರವಾಗಿ ನಡೆಸಿಕೊಂಡು ಬಂದಿದ್ದಾರೆ. ಈ ಸಮಸ್ಯೆಯನ್ನು ಚಿತ್ರರೂಪದಲ್ಲಿ ಸಂಗ್ರಹಿಸಲು ಸಾಕಷ್ಟು ಶ್ರಮಿಸಿದ್ದೇನೆ. ಮೊದಲನೆಯದಾಗಿ ಎಷ್ಟೇ ಬಡವರು, ತಮ್ಮ ಮಕ್ಕಳು 'ಪರದೇಶಿ'ಯಂತೆ ಕಾಣುವದನ್ನು ಕ್ಲಿಕ್ಕಿಸಲು ಸಮ್ಮತಿಸುವದಿಲ್ಲ! ಎರಡನೆಯದಾಗಿ ಮಕ್ಕಳೇ ಕ್ಯಾಮರಾ ಕಂಡಾಕ್ಷಣ ತಮ್ಮ ಸಕಲ ವರ್ತನೆಯನ್ನು ಬದಲಾಯಿಸಿಕೊಂಡು ಬಿಡುತ್ತಾರೆ. ಅಂತೆಯೇ ಅವರ ಒಡನಾಟ ಪ್ರಾರಂಭಿಸಿ, ಗೆಳೆತನ ಬೆಳಸಿ, ನಾನೂ ಅವರಲ್ಲಿ ಒಂದಾಗಿ ಬಿಡುತ್ತೇನೆ. ಹೋಗಿ ಬರುವಾಗ ಮಾತನಾಡಿಸುತ್ತೇನೆ. ಕ್ರಮೇಣ 'ಫೋಟೋ ಅಂಕಲ್' ಆಗಿಬಿಟ್ಟಿದ್ದೇನೆ. ಅವರ ಪಾಲಕರೂ, ಮಕ್ಕಳು ಫೋಟೋ ಅಂಕಲ್‌ನನ್ನು ಕರೆಯುವಾಗ, ನನ್ನನ್ನು ನೋಡಿ ಪರಿಚಯದ ನಗೆ ನಗುತ್ತಾರೆ. ಕೆಲವರು

ನಮಸ್ಕಾರ ಹೇಳುತ್ತಾರೆ. ಕಾಸಿಲ್ಲದೇ ಕೊಡುವ ಕಿರಿಯ ಫೋಟೋಗಳಿಂದ ಅವರಿಗೆ ಹತ್ತಿರದವನಾದೆ.

ಬೆಂಗಳೂರಿನ ಮಕ್ಕಳು ಅಸಂಖ್ಯಾತ ರೀತಿಯಲ್ಲಿ ತಮ್ಮನ್ನು ತಾವೇ ರಂಜಿಸಿಕೊಳ್ಳುತ್ತವೆ. ಕೆಲವು ನಮಗೆ ಗೊತ್ತಿವೆ. ಕೆಲವನ್ನು ಕಷ್ಟಪಟ್ಟು ಹುಡುಕಬೇಕಾಗುತ್ತದೆ. ಮಕ್ಕಳ ದಿನಾಚರಣೆಗೆ ಲಕ್ಷಾವಧಿ ರೂಪಾಯಿಗಳನ್ನು ಸರಕಾರ। ಶಾಲೆಯವರು ಖರ್ಚುಮಾಡುತ್ತಾರೆಯೇ ಹೊರತು ಮಕ್ಕಳಿಗೆ ರಂಜಿಸುವ, ಖುಷಿಕೊಡುವ ಯತ್ನ ಮಾಡುವದಿಲ್ಲ. ಸ್ಕೂಲಿನ ಮುಖ ಕಾಣದ ಮಕ್ಕಳನ್ನು ಹಲಬಾರಿ ಕ್ಲಿಕ್ಕಿಸಿದೆ. ಇಂತಹ ಮಕ್ಕಳು ಗುಂಪು ಕಟ್ಟಿಕೊಂಡು ನನ್ನನ್ನು ಹಿಂಬಾಲಿಸುತ್ತವೆ. ತಮ್ಮ ತಂಟೆ, ತಕರಾರುಗಳನ್ನು ಮರೆತು ರಸ್ತೆಯಲ್ಲಿ ಏಕಪ್ರಕಾರವಾಗಿ ಓಡುವ ವಾಹನಗಳನ್ನು ಲಕ್ಷಿಸದೇ ನನ್ನನ್ನು ಕಂಡಾಕ್ಷಣ ಓಡಿಬರುತ್ತವೆ. 'ಅಂಕಲ್ ಫೋಟೋ!' ಎಂದು ಕೂಗುತ್ತವೆ. ದಾರಿ ಹೋಕರಿಗೆ ಅರ್ಥವಾಗದೇ ದಿಟ್ಟಿಸುತ್ತಾರೆ. ಒಬ್ಬ ''ಈ ಬೀದಿ ಮಕ್ಕಳ ಫೋಟೋ ಯಾಕೆ ತೆಗೆಯುತ್ತೀರಾ?'' ಎಂದು ಅಧಿಕಪ್ರಸಂಗದ ಪ್ರಶ್ನೆ ಕೇಳಿದ. 'ಫೋಟೋ ಏಕೆ ತೆಗೆಯುತ್ತಾರೆ ಗೊತ್ತಿಲ್ಲವೇ?' ಎಂದು ಮರು ಪ್ರಶ್ನೆ ಪಡೆದು ಸುಮ್ಮನಾದ. ಇನ್ನೊಬ್ಬ ವೃದ್ಧೆ 'ಮಕ್ಕಳ ಫೋಟೊ ತೆಗೆಯುವದಿದ್ದರೆ ಚೆನ್ನಾದ ಬಟ್ಟೆ ಹಾಕಿದ ಮಕ್ಕಳದನ್ನು ತೆಗೆಯಬಾರದೇ?' ಎಂದು ತನ್ನ ಮೊಮ್ಮಗನನ್ನು ತೋರಿಸಿ, ಮೌನ ಅಲಕ್ಷ್ಯವನ್ನು ಎದುರಿಸಬೇಕಾಯಿತು.

★ ★ ★

ರಂಗೋಲಿಯ ಪ್ರಕಾರಗಳನ್ನು ಕ್ಲಿಕ್ಕಿಸಲು ''ಹಲವಾರು ಹೆಂಗಳೆಯರನ್ನು ಹುಡುಕಿಕೊಂಡು'' ಹೋದದ್ದೇ ಹೋದದ್ದು! ಹಿಂದೆಂದೂ ಸೆರೆ ಹಿಡಿದ ಫೋಟೋ ಪ್ರತಿಗಳನ್ನು ಅವರಿಗೆ ಕೊಟ್ಟು, ಒಬ್ಬರ ಚಿತ್ರವನ್ನು ಇನ್ನೊಬ್ಬರಿಗೆ ತೋರಿಸಿ, ಅವರನ್ನು ಛಾಯಾಚಿತ್ರಕ್ಕೆ ಒಪ್ಪಿಸುವದನ್ನೆ ಒಂದು ಕಲೆಯಾಗಿ ಬೆಳೆಸಿಕೊಳ್ಳಬೇಕಾಯಿತು! ಚಿಕ್ಕ ಹುಡುಗಿಯರಿಂದ ಹಳಬರೆಲ್ಲರಿಗೆ ನನ್ನಲ್ಲಿ ವಿಶ್ವಾಸ ಮೂಡುವಂತೆ ಆಯಿತು. ಹೀಗಾಗಿ ಮೊದಲು ನಿರಾಕರಿಸಿದವರು, ನಂತರ ತಾವಾಗಿ ಕೂಗಿ ಕರೆದು, ತಮ್ಮ ಫೋಟೊ ತೆಗೆಯಲು ವಿನಂತಿಸಿಕೊಂಡವರೂ ಇದ್ದಾರೆ. ಬಿಡಿಸಿಟ್ಟ ರಂಗೋಲಿಯ ಚಿತ್ರಗಳಿಗೆ ಬರಗಾಲವಿಲ್ಲ. ಆದರೆ ರಂಗೋಲಿ ಬಿಡಿಸುತ್ತಿರುವ ಚಿತ್ರಗಳನ್ನು ನಾನು ನೋಡಿಯೇ ಇಲ್ಲವೆಂದರೆ ಅತಿಶಯೋಕ್ತಿ ಆಗಲಾರದು. ರಂಗೋಲಿ ಕಲೆಯೇ ತೀವ್ರವಾಗಿ ಮಾಯವಾಗುತ್ತಿರುವ ಇಂದಿನ ದಿನಗಳಲ್ಲಿ ಈ ಛಾಯಾಚಿತ್ರಗಳೇ ಅಪೂರ್ವವಾಗಿ ಉಳಿದಾವು! ಸಂತೋಷಕುಮಾರ ಗುಲ್ವಾಡಿಯವರು 'ಇನ್ನು ಮುಂದೆ ಕಾವಿಕಲೆಯನ್ನು ಕೃಷ್ಣಾನಂದ ಕಾಮತರ ಕೃತಿಯಲ್ಲಿ ಮಾತ್ರ ಕಾಣುವಂತೆ ಆಗಬಹುದು!' ಎಂದು ಅಭಿಪ್ರಾಯಪಟ್ಟಿದ್ದರು. ಕೆಲಕಾಲದ ನಂತರ ರಂಗೋಲಿ ಕಲೆಯೆಂಬುದು ನಮ್ಮ ಸಿ.ಡಿ. ರೊಮ್ ಹಾಗೂ ವೆಬ್‌ಸ್ಯಾಟಿನಲ್ಲಿ ಮಾತ್ರ ಲಭ್ಯವಾದರೆ ಅಚ್ಚರಿ ಪಡಬೇಕಿಲ್ಲ. ರಂಗೋಲಿ ಪ್ರಕಾರಗಳನ್ನು ಶಕ್ಯವಾದಾಗೆಲ್ಲ ಕ್ಲಿಕ್ಕಿಸುತ್ತಲೇ ಇರುತ್ತೇನೆ. ರಂಗೋಲಿ ಪುಡಿ ತಯಾರಿಸಿ ಮಾರುವವರು,

ಅಚ್ಚುಗಳನ್ನು ತಯಾರಿಸುವವರು ಮೊದಲಾದವರ ಶೋಧ ನಡೆಸಿದ್ದೇನೆ. ಈಬಾರಿ, ರವೀಂದ್ರ ಕಲಾಕ್ಷೇತ್ರದಲ್ಲಿ ಹಾಕಿದ ಹೂವಿನ ರಂಗೋಲಿಯ ವರ್ಣಚಿತ್ರವನ್ನು ಕಳಿಸಿದ್ದೇನೆ.

ಈ ಸಲ ಹೂವನ್ನು ಮಾರುವವರ ಛಾಯಾ ಚಿತ್ರಗಳನ್ನು ತೆಗೆದಿದ್ದೇನೆ. ಹೂವಿನ ಹಾಗೂ ರಂಗೋಲಿ ಅಲಂಕಾರಗಳು ಸುಲಭವಾಗಿ ಸಿಗುವಂಥವಲ್ಲ. ಹಬ್ಬ ಹುಣ್ಣಿವೆಗಳಂದು, ವಿವಿಧ ದೇವಾಲಯಗಳಲ್ಲಿ, ಕೆಲವೊಮ್ಮೆ ಕಲ್ಯಾಣ ಮಂಟಪಗಳಲ್ಲಿ ಎಡತಾಕಬೇಕಾಗುತ್ತದೆ. ರಂಗೋಲಿಯಂತೆ ಈ ಹೂವಿನ ಅಲಂಕಾರಗಳೂ ಸುಂದರವಾಗಿರುತ್ತವೆ. ಇವನ್ನು ಕನ್ನಡಿಗರೇ ಕಣ್ಣಿಟ್ಟು ನೋಡದೇ ಇರುವಾಗ, ಪಾಶ್ಚಾತ್ಯರು ನೋಡಿರಬಹುದಾದ ಸಾಧ್ಯತೆ ತೀರ ಕಡಿಮೆ. ವೆಬ್‌ಸ್ಯಾಟಿನಲ್ಲಿ ನೋಡಿದವರು ಅವನ್ನು ಸ್ವಾಗತಿಸಿಯಾರು!

* * *

ಭಾರತೀಯ ಶಾಸ್ತ್ರೀಯ ನೃತ್ಯಗಳ ಛಾಯಾಗ್ರಹಣ ಮಾಡಬೇಕೆಂದಿರುವ ನನ್ನ ಕನಸು, ಇತ್ತೀಚೆಗೆ ಕೈಗೂಡುತ್ತಿದೆ! ರವೀಂದ್ರ ಕಲಾಕ್ಷೇತ್ರದಲ್ಲಿ ಪ್ರಸಿದ್ಧ ನಾಟ್ಯಶಾಲೆಯೊಂದರ ವಾರ್ಷಿಕೋತ್ಸವಕ್ಕೆ ನಮ್ಮಿಬ್ಬರಿಗೂ ಆಮಂತ್ರಣ ಬಂದಿತ್ತು. ಅವರು ರಂಗದ ಮೇಲೆ ನರ್ತಿಸುವಾಗ ದೂರದಲ್ಲಿ ನಿಂತು ಛಾಯಾಗ್ರಹಣ ಮಾಡಿದರೆ ಅಷ್ಟೊಂದು ಚೆನ್ನಾಗಿ ಬಾರದ್ದರಿಂದ, ಗ್ರೀನ್‌ರೂಮಿಗೇ ನುಗ್ಗಿ, ನೃತ್ಯವಿದ್ಯಾರ್ಥಿಗಳ ವಿಶ್ವಾಸ ಗಳಿಸಿ, ಛಾಯಾಗ್ರಹಣ ಮಾಡಲು ಶ್ರಮಿಸಬೇಕಾಯಿತು. ಪ್ರತಿ ಸೀನಿಗೆ ತಯಾರಾಗುತ್ತಿದ್ದೇವೆ ಕೊಂಚ ತಾಳಿ! ಅನ್ನುವದು, ರಂಗದ ದೃಶ್ಯದ ನರ್ತನ ಮುಗಿದೊಡನೆ ಬಡಬಡ ಅಲಂಕಾರ ಕಳಚಿಕೊಂಡು ಬಿಡುವದು, ನಡೆಯಿತು. ಅವರಲ್ಲಿ ವಾಚಾಳಿಯಾದ ಹುಡುಗಿ, ಫೋಟೋ ಏಕೆ ಬೇಕು? ಪ್ರತಿ ಕೊಡುತ್ತೀರಾ? ನೆಗೆಟಿವ್ ಕೊಡುತ್ತೀರಾ? ಎಂದೆಲ್ಲ ವಿಚಾರಿಸಿಕೊಂಡು ಮರುದಿನ ಅಲ್ಲಿ ಕಾರ್ಯಕ್ರಮ ಮುಂದರಿಯಲಿದ್ದರಿಂದ ತಾನಾಗಿ ಆಮಂತ್ರಿಸಿ, 'ಪೋಸ್' ಕೊಡುವದಾಗಿ ಹೇಳಿದಳು. ಮರುದಿನ ತನ್ನ ಗೆಳತಿಯೊಡನೆ ವಿವಿಧ ಭಂಗಿಗಳನ್ನು ತೋರ್ಪಡಿಸಿದಳು. ಒಬ್ಬಳ ಬದಲಿಗೆ ಇಬ್ಬರು ಸಿಕ್ಕರು! 'ನಾವು ಸಿದ್ಧರಾಗುವ ಮೊದಲೇ ಕ್ಲಿಕ್ಕಿಸುತ್ತೀರಲ್ಲ ಅಂಕಲ್?' ಎಂದು ದೂರಿಕೊಂಡರೆ, ನೀವು ಶಿಲಾಪ್ರತಿಮೆಯಂತೆ ನಿಂತು ಬಿಡುತ್ತೀರಿ! ಅದು ಬೇಕಿಲ್ಲ. ಜೀವಂತ ನೃತ್ಯಗಾತಿಯರು ಬೇಕು! ಎಂದು ವಿವರಿಸಿದಾಗ ಖುಷಿ ಪಟ್ಟರು. ಆಮೇಲೆ ಫೋಟೋ ತೆಗೆಯಲು ಅವರೇ ದುಂಬಾಲು ಬಿದ್ದರು. ಈ ಗೋಪಿಯರ ಫೋನ ಕರೆಗಳಿಂದ, ನಿನ್ನ ಆಮ್ಮಾಗೆ ಕರಕರೆ ಆದರೆ ಆಶ್ಚರ್ಯವಿಲ್ಲ!

◆ ◆ ◆

೩೪. ಹುಟ್ಟುಹಬ್ಬ : ಒಂದು ಹಿನ್ನೋಟ

ಇಂದು ನನಗೆ ಅರವತ್ತೈದು ವರ್ಷಗಳು ತುಂಬಿದ್ದರಿಂದ ಜೀವನದ ಒಂದು ಘಟ್ಟ ಮುಟ್ಟಿದಂತಾಗಿದೆ. ಈ ಎಲ್ಲ ವರ್ಷಗಳನ್ನು, ಒಂದಿಲ್ಲೊಂದು ಸೃಜನಾತ್ಮಕ ಚಟುವಟಿಕೆಯಲ್ಲಿ ತೊಡಗಿ ಸುಖವಾಗಿಯೇ ಕಳೆದಿದ್ದೇನೆ. ಅಧಿಕಾರ, ಆದಾಯ, ಆರಾಮ ಅವಶ್ಯಕತೆ ನನಗಿಲ್ಲ. ಮುಂಬರುವ ವರ್ಷಗಳಲ್ಲಿ ನಾನು ಆರೋಗ್ಯವಂತನಾಗಿದ್ದು, ಜೀವನದಲ್ಲಿ ಇನ್ನಿಷ್ಟು ಸಾಧಿಸುವಂತೆ ಆಗಲಿ! ಎಂಬುದೊಂದೇ ನನ್ನ ಮಹದಾಸೆ!

ಇಂದಿನ ದಿನಗಳಲ್ಲಿ ಹೊಸಬಗೆಯ ಛಾಯಾಗ್ರಹಣ ಪ್ರಾರಂಭಿಸಿದ್ದೇನೆ. ನನ್ನ ಛಾಯಾಗ್ರಹಣದ ತಂತ್ರಜ್ಞಾನ, ಕಲಾಭಿರುಚಿ ಮತ್ತು ಜನರನ್ನು ಒಲಿಸುವ ಮಾತುಗಾರಿಕೆಯಿಂದ ಇದು ಸಾಧ್ಯವಾಗಿದೆ. ಪ್ರತಿದಿನವೂ, ಎಷ್ಟೊಂದು ಜನರನ್ನು ಹಾದುಹೋಗುತ್ತೇವೆ, ನೋಡುತ್ತೇವೆ, ಮಾತನಾಡಿಸುತ್ತೇವೆ, ಅವರೊಡನೆ ವ್ಯವಹರಿಸುತ್ತೇವೆ. ಆದರೂ ಅವರನ್ನೆಲ್ಲ ನಾವು ಹತ್ತಿರದಿಂದ ಪರೀಕ್ಷಿಸುವದೇ ಇಲ್ಲ. ಅವರಿಗೆಲ್ಲ ತಮ್ಮದೇ ವ್ಯಕ್ತಿತ್ವ ಇರುತ್ತದೆ. ಆದರೆ ಅದರ ಅರಿವು ಅವರಿಗಿರುವದಿಲ್ಲ. ಈ ಅಂಶವನ್ನು ಛಾಯಾರೂಪದಲ್ಲಿ ಸೆರೆ ಹಿಡಿಯಲು ಅನೇಕ ವರ್ಷಗಳಿಂದ ಕನಸು ಕಾಣುತ್ತಿದ್ದೆ. ಆದರೆ ಅವರನ್ನೆಲ್ಲ ಕ್ಲಿಕ್ಕಿಸುವಂತೆ ಒಪ್ಪಿಸುವದು ಸುಲಭ ಸಾಧ್ಯವಾದ ಮಾತಾಗಿರಲಿಲ್ಲ.

ಈಗ ನಾನು ಹಿರಿಯ ನಾಗರಿಕನಾಗಿದ್ದೇನೆ! ಸಹಚಾರಿಗಳು ನನ್ನನ್ನು ಸಹಾನುಭೂತಿಯಿಂದ ಕಾಣುತ್ತಾರೆ. 'ಒಂದು ಫೋಟೋ ಹಿಡಿಲಾಽ?' 'ನಿಮ್ಮದೊಂದು ಛಾಯಾಚಿತ್ರ ತೆಗೆಯಬೇಕಲ್ಲ?' ಎಂದೆಲ್ಲ ವಿನಂತಿಸಿಕೊಂಡಾಗ, ಬಹುಸಂಖ್ಯಾತರು ಬೇಡ! ಅನ್ನುವದಿಲ್ಲ. ಬದಲಾಗಿ ಯಾಕೆ? ಏನಕೆ? ಎಂದೆಲ್ಲ ಮರುಪ್ರಶ್ನೆ ಹಾಕುತ್ತಾರೆ. ಪ್ರಶ್ನೆಗಳ ಸುರಿಮಳೆಗೆ ನನ್ನ ಉತ್ತರ ಸದಾಕಾಲ ಸಿದ್ಧವಿರುತ್ತದೆ. 'ಅದೆಷ್ಟೊ ವರ್ಷಗಳಿಂದ ನಿನ್ನ ಹತ್ರ ತರ್ಕಾರಿ ಕೊಂಡ್ಕೊತಾ ಇದ್ದೀನಿ! ನಿಂದೊಂದು ಫೋಟೊ ಇರ್‍ಲಿ! ಎಂದೋ, ಬೆಂಗ್ಳೂರನೋರು ಎಷ್ಟು ಚೆನ್ನಾಗಿ ಹೂ ಮಾರ್‍ತಾರೆ! ಅಂತ ಬೊಂಬ್ಯಾನೋರು ನೋಡಿ ಕಲೀಲಿ! ಎಂದೋ ಹೇಳುತ್ತೇನೆ. ''ಸೀತಮ್ಮನನ್ನು ಫೋಟೋದಲ್ಲಿ ಹಿಡಿದಿದೀನಿ! ನಿಂದೂ ಜೊತೆಗೆ ಇರ್‍ಲಿ ಅಂತ ಆಸೆ!'' ಇಷ್ಟೆಲ್ಲ ಹೇಳಿದ ನಂತರ ಒಪ್ಪಿಯೇ ಇರುತ್ತಾರೆ - ಕ್ಲಿಕ್ಕಿಸಿಕೊಳ್ಳಲು. 'ಫೋಟೊ ತೋರಸ್ತೀರಾ?' ಎಂಬುದು ನಂತರದ ಪ್ರಶ್ನೆ. 'ಚೆನ್ನಾಗಿ ಮೂಡಿದರೆ, ಖಂಡಿತ' ಎಂದರೂ ಅವರಿಗೆ ನಂಬಿಕೆ ಹುಟ್ಟದು! 'ಕಾಸು ಕೊಟ್ರೆ ಫೋಟೊ ಕೊಡ್ತೀರಾ?' ಮುಂದಿನ ಪ್ರಶ್ನೆ. ಆಗಲಿ! ಎಂದಾಗ ಅವಳು ಕ್ಲಿಕ್ಕಿಸಿಕೊಳ್ಳುವದನ್ನು ನೋಡುತ್ತ ನಿಂತ ಗೆಳತಿ, ತಂಗಿ, ಅಮ್ಮ ಮುಂತಾದವರನ್ನೂ ಕ್ಲಿಕ್ಕಿಸುವಂತೆ ವಿನಂತಿಸಿಕೊಳ್ಳುತ್ತಾಳೆ. ಬೇಕಾದವರ ಫೋಟೊ ತೆಗೆಯುವಾಗ, ಬೇಕಾಗಿಲ್ಲದವರದೂ ಕ್ಲಿಕ್ಕಿಸಬೇಕಾಗುತ್ತದೆ. ನಂತರ ಫೋಟೊ ಪ್ರತಿಯನ್ನೂ ಕೊಡಬೇಕಾಗುತ್ತದೆ. ಒಬ್ಬ ಸಮಗಾರನ ಫೋಟೊ ಇನ್ನೊಬ್ಬಾತನಿಗೆ ತೋರಿಸಿ ಕ್ಲಿಕ್ಕಿಸಲು

ಸಹಾಯವಾಗುತ್ತದೆ. ಒಬ್ಬ ಪೋಲಿಸನ ಫೋಟೊ ತೆಗೆದಿದ್ದೆ. ಆತನ ವಿಚಾರ ಇನ್ನೊಬ್ಬನಿಗೆ ಹೇಳಿದಾಗ, ಅವನು ತಾನಾಗಿ ತನ್ನದನ್ನು ತೆಗೆಯುವಂತೆ ಕೇಳಿಕೊಂಡ. ಹೀಗೆ ಕ್ಲಿಕ್ಕಿಸಿದವರ ಸಂಖ್ಯೆ ಅಪಾರವಾಗಿದೆ!

ಆದರೆ ಹೀಗೆ ತೆಗೆದವರ ಚಿತ್ರಗಳೆಲ್ಲ ಉಪಯೋಗಕಾರಿ ಎಂದು ಹೇಳುವಂತಿಲ್ಲ. ನನಗೆ ಒಪ್ಪಿಗೆಯಾದವನ್ನು ನಿನ್ನ ಇಂಟರ್‌ನೆಟ್‌ಗೆ ಬಳಸಲು ಕಳಿಸುತ್ತಿದ್ದೇನೆ. 'ಸೈ!' ಅನಿಸಿದರೆ ನಿನಗೆ ಸರಿಕಂಡ ರೀತಿಯಲ್ಲಿ ಅವುಗಳನ್ನು ಬಳಸಿಕೊಳ್ಳಬಹುದು. ನಮ್ಮ ಸಮಾಜ, ತೀವ್ರಗತಿಯಲ್ಲಿ ಬದಲಾವಣೆ ಹೊಂದುತ್ತ ಇದೆ. ಇಪ್ಪತ್ತನೆಯ ಶತಮಾನದಲ್ಲಿ ಹೇಗೆ ಇತ್ತು? ಎಂಬುದನ್ನು ಛಾಯಾಚಿತ್ರಗಳಲ್ಲಿ ಸೆರೆಹಿಡಿದು ಇಡಬೇಕು, ಎಂದು ಸಂಕಲ್ಪ ಮಾಡಿಕೊಂಡಿದ್ದೇನೆ. ಹತ್ತೊಂಬತ್ತನೆಯ ಶತಮಾನದಲ್ಲಿ ಸಾಮಾನ್ಯ ಭಾರತೀಯರು ಹೇಗೆ ಜೀವಿಸಿದ್ದರು. ಎಂಬುದನ್ನು ಅನೇಕ ಬ್ರಿಟಿಶ್ ಕಲಾಕಾರರು, ಛಾಯಾಚಿತ್ರಕಾರರು, ಸೆರೆಹಿಡಿದು ಇಟ್ಟಿದ್ದಾರೆ. ಇಂದು ಅದು ಅವರ ಅಪೂರ್ವ ಕೊಡುಗೆಯಾಗಿ ಉಳಿದಿದೆ. ಇಂಥ ದಿಸೆಯಲ್ಲಿ ನನ್ನದೊಂದು ಪುಟ್ಟ ಕೊಡುಗೆ ಉಳಿಯಲಿ! ಎಂದು ನನ್ನ ಕನಸು! ಈ ಕನಸನ್ನು ಎಷ್ಟರಮಟ್ಟಿಗೆ ನನಸಾಗಿ ಮಾಡಲಾಗುವದು? ಎಂದು ಹೇಳಲಾಗುವದಿಲ್ಲ. ಕಾಲವೇ ಅದನ್ನು ನಿರ್ಧರಿಸಬೇಕು. ಯತ್ನವನ್ನೇನೊ ಪ್ರಾರಂಭಿಸಿದ್ದೇನೆ.

★ ★ ★

ಈ ಅವಧಿಯಲ್ಲಿ ನನ್ನ ಸಾಧನೆಗಳನ್ನು ಮೆಲುಕು ಹಾಕಿದಾಗ ವಿಸ್ಮಯವಾಗುತ್ತದೆ. ಒಂದು ವರ್ಷದಂತೆ ಇನ್ನೊಂದಿಲ್ಲ. ಪ್ರತಿವಾರ, ತಿಂಗಳುಗಳೂ ವೈವಿಧ್ಯದಿಂದ ಕೂಡಿವೆ. ಈ ದೀರ್ಘವೆಂದೇ ಅನಿಸುವ ಅವಧಿಯಲ್ಲಿ ಒಮ್ಮೆಯೂ ಅತೃಪ್ತಿ ಪಡುವ, ಪರಿತಪಿಸುವ ಘಟನೆ ನಡೆದೇ ಇಲ್ಲ! ಇದಕ್ಕೆಲ್ಲ ಮುಖ್ಯಕಾರಣ, ನಾನು ಜೀವನವನ್ನು ಅರ್ಥೈಸಿಕೊಳ್ಳುವ ದೃಷ್ಟಿಕೋನದಲ್ಲಿ ಇದ್ದಿರಬೇಕು. ನಾನೆಂದೂ ಜೀವನ ಹೀಗಿರಬೇಕು, ಹಾಗಿರಬೇಕು, ಎಂದು ಕನಸು ಕಂಡವನೇ ಅಲ್ಲ. ಸಿಕ್ಕಷ್ಟರಲ್ಲಿಯೇ, ಪಾಲಿಗೆ ಬಂದದ್ದರಲ್ಲಿಯೇ ತೃಪ್ತಿಯಿಂದ ಇರುವದು ನನ್ನ ಸ್ವಭಾವ. ಇಷ್ಟಾದರೂ ನನ್ನ ಮಟ್ಟಿಗೆ ಹೆಸರು, ಖ್ಯಾತಿ, ಹಣ, ಆಸ್ತಿಗಳಿಗೆ ಕೊರತೆ ಆಗಲೇ ಇಲ್ಲ. ಈಗಂತೂ ನಿನ್ನ ಇಂಟರ್‌ನೆಟ್ - ವೆಬ್‌ಸ್ಯಾಟ್ ಸಾಹಸದಿಂದಾಗಿ ನಾನೊಬ್ಬ 'ವಿಶ್ವಮಾನವ'ನಾಗಲು ಸಾಧ್ಯವಾಯಿತು. ಈ ಮಾಧ್ಯಮದವರೇ ನನ್ನನ್ನು ಹುಡುಕಿಕೊಂಡು ಬಂದು ಸಂದರ್ಶಿಸುವಂತೆ ಆಯಿತು. ನಿನ್ನ ಈ ಕೊಡುಗೆಗೆ ಸದಾ ಕೃತಜ್ಞನಾಗಿದ್ದೇನೆ.

ಎರಡು ವರ್ಷಗಳ ಹಿಂದೆ, ನನ್ನ ಹುಟ್ಟು ದಿನದಂದು ನಿನ್ನ ಇಂಟರ್‌ನೆಟ್‌ಗಾಗಿ, ವರ್ಣಛಾಯಾಗ್ರಹಣ ಮಾಡುವ ನಿರ್ಧಾರ ಕೈಕೊಂಡೆ. ಆ ಬಳಿಕ ಅಸಂಖ್ಯ ಜನರನ್ನು ಘಟನೆಗಳನ್ನು ಸೆರೆಹಿಡಿಯಲು ಸಾಧ್ಯವಾಯಿತು. ಈ ವರ್ಷ ಹೊಸ ಯೋಗ ಲಭಿಸಿದೆ. ಹೊನ್ನಾವರದ ನದಿ, ಸಮುದ್ರ, ಸಹ್ಯಾದ್ರಿಯ ಸಂಗಮದ ನೆರೆಯಲ್ಲಿ ಮನೆಯೊಂದನ್ನು ನಮ್ಮದನ್ನಾಗಿಸುವ ಸಂಕಲ್ಪ ಮಾಡಿಕೊಂಡಿದ್ದೇನೆ. ಇದಕ್ಕೆ ಅನುಗುಣವಾಗಿ, ಲಕ್ಷ್ಮಿನಾರಾಯಣ ನಗರದ - ಪ್ರಭುಗಳ ಮನೆ ಮಾರಾಟಕ್ಕಿದೆ, ಎಂದು ತಿಳಿಯಿತು.

ಅದನ್ನು ಕೊಳ್ಳಲು ಸುಮಾರು ಜನ ಮುಂದೆ ಬಂದರೂ, ನಾವು ಸಜ್ಜನರು! ಎಂದು ನಮಗೇ ಮಾರಲು ನಿರ್ಧರಿಸಿದ್ದಾರಂತೆ. ಅವರು ಸೂಚಿಸಿದ ಬೆಲೆಯಲ್ಲಿ ಕಡಿತ ಮಾಡಲು ಎಷ್ಟು ಯತ್ನಿಸಿದರೂ ಸಾಧ್ಯವಾಗಲೇ ಇಲ್ಲ.

ಜಾಗ ಆರು ಗುಂಟೆಗಳಷ್ಟಿದೆ. ಹದಿನೈದು ತೆಂಗಿನ ಮರಗಳು ಇವೆ. ಆತ ಹೇಳಿದ ರೇಟಿಗೆ ಕೊಳ್ಳಬಹುದೆಂದು, ಮಾರಾಟದ ಅನುಭವವಿದ್ದವರು ಹೇಳುತ್ತಿದ್ದಾರೆ. ತುಳಸಿದಾಸನಂತೂ ಈ ಅವಕಾಶ ಕಳೆದುಕೊಂಡರೆ, ಇಂಥ ಮನೆ ಸಿಗುವ ಸಾಧ್ಯತೆ ತೀರ ಕಡಿಮೆ, ಎನ್ನುತ್ತಿದ್ದಾನೆ. ಆತನ ಹೆಂಡತಿ, ತಮ್ಮ ಮನೆಗಿಂತ ಅದೇ ಚೆನ್ನಾಗಿದೆ, ಎಂದು ಹೇಳುತ್ತಿದ್ದಾಳೆ. ಯಾರ ಹಂಗೂ ಇಲ್ಲದೇ ಬೆಳೆದು ನಿಂತ ತೆಂಗಿನ ಮರಗಳು. ಯಾರ ಆಮಂತ್ರಣ ಇಲ್ಲದೇ ಬೆಳಿಗ್ಗೆ. ಸಂಜೆ, ಬಂದು ಹಾಡಿ ಹೋಗುವ ಪಕ್ಷಿಗಳು, ಮನಸ್ಸಿಗೆ ಮುದ ನೀಡುವ ಪ್ರಶಾಂತ ವಾತಾವರಣ, ಜನಜಂಗುಳಿಯ ಜಂಜಾಟವಿಲ್ಲ. ಕಲುಷಿತ ವಾತಾವರಣವಿಲ್ಲ. ಶಾಲೆ, ಬ್ಯಾಂಕು, ಬಸ್ ನಿಲ್ದಾಣ, ಡಾಕ್ಟರ್‌ಶಾಪ್ ಮುಂತಾದವು ೨ ಫರ್ಲಾಂಗು ದೂರದೊಳಗೇ ಇವೆ!

ಈ ಮನೆಯ ಎದುರಿಗೇ ಸೊಸಾಯಟಿಯ ಆಫೀಸು ಹಾಗೂ ಕಲ್ಯಾಣ ಮಂಟಪವಿದೆ. ಅದರ ಪಕ್ಕದ ಕೊಠಡಿಯಲ್ಲಿ ಕಾಸರಕೋಡದ ವಿವೇಕಾನಂದ ಆರೋಗ್ಯಧಾಮವು ತನ್ನ ಉಪಶಾಖೆಯನ್ನು ಇನ್ನೆರಡು ತಿಂಗಳಿಗೆ ಪ್ರಾರಂಭಿಸಲಿದೆ. ಎಣ್ಣೆ ಮಾಲೀಸು, ಉಗಿಸ್ನಾನ, ಯೋಗಾಸನಗಳ ಸೌಲಭ್ಯ ಪ್ರಾಪ್ತವಾಗಲಿದೆ. ಹತ್ತಿರದಲ್ಲಿಯೇ ನನ್ನ ಮೂವರೂ ಸೋದರರು ವಾಸವಾಗಿದ್ದಾರೆ. ಬೇಕಾದಾಗ ಅವರ ನೆರವು ಪಡೆಯಬಹುದು. ಎಲ್ಲವೂ ನಾವು ಯೋಚಿಸಿದಂತೆ ನಡೆದರೆ, ಕಾಕಿಯವರನ್ನು ಕಾಸರಕೋಡದಿಂದ ಮನೆಗೆ ಬರಮಾಡಿಕೊಳ್ಳಬಹುದು, ಎಂಬ ದೂರದ ಆಸೆಯನ್ನು ಇಟ್ಟುಕೊಂಡಿದ್ದೇನೆ. ಇದು ಮಾತ್ರ ಎಷ್ಟರ ಮಟ್ಟಿಗೆ ಕೈಗೂಡುತ್ತದೆಯೆಂದು ಈಗಲೇ ಹೇಳಲಾರೆ!★

ದೊಡ್ಡ ಹಿತ್ತಲಿನ ಆವರಣದ ಮನೆಯೂ ವಿಸ್ತಾರವಾಗಿ ಮಜಬೂತಾಗಿದೆ. ಕಟ್ಟಡದ ಕಟ್ಟಿಗೆಯ ಅಭಾವದ ಇಂದಿನ ದಿನಗಳಲ್ಲಿ ಅಂಥ ಮನೆಯನ್ನು ಕಟ್ಟುವದು ಅಸಾಧ್ಯವೆಂದೇ ಹೇಳಬೇಕು. ಸದ್ಯದಲ್ಲಿಯೇ ನಾವು ಅಲ್ಲಿಗೆ ಹೋಗಿ ಬಿಡಾರ ಮಾಡುವದು ಸಾಧ್ಯವಿಲ್ಲದಿದ್ದರೂ ವರ್ಷದಲ್ಲಿ ಒಂದೆರಡು ತಿಂಗಳು ಅಲ್ಲಿದ್ದು ವಿಶ್ರಾಂತಿ ಪಡೆಯಬಹುದು ಅನಿಸುತ್ತದೆ. ಮನೆಯ ಒಳಗಿನ, ಹಾಗೂ ಹೊರಗಿನ ಕೆಲಸದವರು, ಇಲ್ಲಿಗಿಂತ ಹೊನ್ನಾವರದಲ್ಲಿ ಸುಲಭವಾಗಿ ಲಭ್ಯರಿರುವದರಿಂದ ಅದೊಂದು ದೊಡ್ಡ ಆಕರ್ಷಣೆ. ಯಾವುದೇ ಕಾರಣಕ್ಕೆ ನೀವು ಭಾರತಕ್ಕೆ ಮರಳುವದನ್ನು ನಿರ್ಧರಿಸಿದರೆ, ಬೆಂಗಳೂರಿನ ಮನೆ ನಿನಗೆ ಬಿಟ್ಟುಕೊಟ್ಟು, ನಮಗೆ ಹೊನ್ನಾವರದಲ್ಲಿರಲು ಅನುಕೂಲವಾಗುತ್ತದೆ. ಇವೆಲ್ಲವುಗಳನ್ನು ಪರಿಶೀಲಿಸಿ, ಈ ಮನೆ ನಮಗೇ ಇರಲಿ! ಎಂದು ನಿರ್ಧರಿಸಿ ನಾಲ್ಕು ಲಕ್ಷ ರೂಪಾಯಿಗಳ ಮುಂಗಡ ಹಣವನ್ನೂ ಕಳಿಸಿದ್ದೇನೆ. ಉಳಿದ ಹಣವನ್ನು ಮನೆಯಾತ ಖಾಲಿಮಾಡಿ ದಸ್ತಾವೇಜು ಮಾಡುವಾಗ ಕೊಡುವದೆಂದು ನಿರ್ಧರಿಸಲಾಗಿದೆ.

ಊರಲ್ಲಿ ಈಗಾಗಲೇ ಈ ಮನೆ ಸಾವು ಕೊಳ್ಳುವದರ ಬಗ್ಗೆ ಊಹಾಪೋಹಗಳು ಪ್ರಾರಂಭವಾಗಿವೆಯಂತೆ. ಪುಸ್ತಕ ಬರೆಯುವಾತ, ಇಷ್ಟು ಹಣ ಗಳಿಸುವದು ಸಾಧ್ಯವೇ? ಎಂದು ಒಬ್ಬನೆಂದರೆ, ಇನ್ನೊಬ್ಬಾತ, ಸರಕಾರಿ ನೌಕರಿಯಲ್ಲಿ ಇದ್ದು ಊರೂರು ವರ್ಗಾವರ್ಗಿಯಾಗಿ ಅಲೆದಾಡಿದ ಪತ್ನಿಗೆ ದೊಡ್ಡ ಮೊತ್ತದ ಉಳಿತಾಯ ಮಾಡಲು ಸಾಧ್ಯವೇ? ಎಂದು ವಿಸ್ಮಯ ಪಟ್ಟನಂತೆ. ಅಮೇರಿಕೆಯಲ್ಲಿರುವ ಮಗ-ಸೊಸೆಯರು ದೊಡ್ಡನಿಧಿ ಕಳಿಸಿರಬೇಕು! ಎಂದು ಕೊನೆಯವನು ತೀರ್ಪನ್ನಿತ್ತನಂತೆ. ಅಂತೂ ಜನರಿಗೆ ಮಾತನಾಡಿಕೊಳ್ಳಲು ಒಂದು ವಿಷಯ ದೊರೆತಂತಾಯಿತು!

◆ ◆ ◆

- - - - - - -

★ ಕಾಕಿ ಅಥವಾ ಕಾಮತರ ತಾಯಿ ೧೩-೯-೨೦೦೩ರಂದು, ನಿಧನ ಹೊಂದಿದರು. ಈ ಹಿರಿಮಗನ ಸಾವು ೭ ತಿಂಗಳು ಮೊದಲಿಗೆ ಸಂಭವಿಸಿತ್ತು.

೩೪. ಕೊಂಕಣಿಯ ಕರ್ಮಕಥೆ

ಜುಲೈ ೨೦೦೦ನೇ ವರ್ಷ ಅಮೇರಿಕೆಯ ಶಿಕಾಗೋ ನಗರದಲ್ಲಿ ನಡೆಯಲಿರುವ ವಿಶ್ವಕೊಂಕಣಿಯ ಸಹಸ್ರಮಾನ ವರ್ಷದ ಸಮ್ಮೇಳನಕ್ಕೆ ಕಾರ್ಯದರ್ಶಿಗಳಾಗಿರುವ ಶ್ರೀಕರರು ಫೋನಿಸಿ ನನ್ನನ್ನೂ ಆಮ್ಮಾಳನ್ನೂ ಆಮಂತ್ರಿಸಿದ್ದಾರೆ. ಚಿತ್ರ ಮತ್ತು ಲೇಖನಗಳನ್ನು ಖಂಡಿತ ಪೂರೈಸುತ್ತೇವೆ. ಆದರೆ ಅಮೇರಿಕೆಗೆ ಬರುವ ವಿಚಾರವಿಲ್ಲ ಎಂದಳಂತೆ! ನಿನ್ನ ಅಮ್ಮ

ವಾರದ ನಂತರ ಸಹಸ್ರಮಾನದ ಕೊಂಕಣಿ ಸಮ್ಮೇಳನದ ಅಧಿಕೃತ ಪತ್ರ ಬಂದು ತಲುಪಿತು. ಹಣಕಾಸಿನ ಸಂಗ್ರಹ ನಾವು ಊಹಿಸಿದಷ್ಟು ಆಗಿಲ್ಲ. ಆದ್ದರಿಂದ ಬರಹೋಗುವ ಖರ್ಚು ಕೊಡಲಾಗುವದಿಲ್ಲ. ನೀವು ಮಗನ ಮನೆಗೆ (ಅಲಬಾಮ) ಬರುವವರಿದ್ದರೆ, ಆಗ ಅಲ್ಲಿಂದ ಶಿಕಾಗೋಕ್ಕೆ ಬರಹೋಗುವ ಖರ್ಚು ಹಾಗೂ ಊಟ-ತಿಂಡಿ, ವಸತಿಯ ವ್ಯವಸ್ಥೆ ಮಾಡುತ್ತೇವೆ! ಎಂದು ಬರೆದಿದ್ದಾರೆ. ನಾನು ಹೆಚ್ಚಿನ ಬರವಣಿಗೆ ಕೈಕೊಂಡಿದ್ದರಿಂದ ಬರಲಾಗುವದಿಲ್ಲವೆಂದು ಬರೆಯಬೇಕೆಂದಿದ್ದೇನೆ. ಇದು ಉತ್ತರ ಅಮೇರಿಕೆಯ ಮೂರನೆಯ ಕೊಂಕಣಿ ಸಮ್ಮೇಳನವಾಗಿದ್ದು ಮುಖ್ಯ ಉದ್ದೇಶ, Promoting Konkani heritage ಆಗಿದೆ ಎಂದು ತಿಳಿಸಿದ್ದಾರೆ. ಅಂದರೆ ಈಗ ನಾನು ಬರೆಯುತ್ತಿರುವ 'ಕೊಂಕಣ್ಯಾಲಿ ಕಾವಿಕಲಾ' (ಕೊಂಕಣಿಗರ ಕಾವಿಕಲೆ) ಪುಸ್ತಕದ ಉದ್ದೇಶ, ಸಮ್ಮೇಳನದಕ್ಕೆ ಸರಿಹೋಗುತ್ತದೆ. ಸ್ಮರಣ ಸಂಚಿಕೆಯೊಂದನ್ನು ಹೊರತರಲಿದ್ದಾರಂತೆ. ಲೇಖ-ಚಿತ್ರಗಳನ್ನು ಕೇಳಿದ್ದಾರೆ. ಆದ್ದರಿಂದ Konkani art of coastal Karnataka (ಕರ್ನಾಟಕ ಕರಾವಳಿಯ ಕಾವಿಕಲೆ) ಲೇಖ, ಹಾಗೂ ನಾಲ್ಕಾರು ಚಿತ್ರಗಳನ್ನು ಮತ್ತು ಆಮ್ಮಾ ಬರೆದ 'Role of Konkani Women in preserving their socio-cultural identity' ಲೇಖಗಳನ್ನು ಕಳಿಸುತ್ತಿದ್ದೇನೆ. ಬೇಕಾದರೆ ಬಳಸಿಕೊಳ್ಳುತ್ತಾರೆ.

ಇಂತಹ ಸಮ್ಮೇಳನದಲ್ಲಿ ಊಟ, ಉಪಚಾರ, ಹರಟೆ, ವಿಹಾರ, ಮಿತ್ರ-ಭೇಟಿ, ಸಲ್ಲಾಪಗಳಿಗೇ ಹೆಚ್ಚಿನ ಪ್ರಾಶಸ್ತ್ಯ! ಎಂಬುದು ಸರ್ವವಿದಿತ. ಬೆಳಗಾಂವಿಯಲ್ಲಿ ನಡೆದ ಅಖಿಲಭಾರತ ಕೊಂಕಣಿ ಸಮ್ಮೇಳನ ಹಾಗೂ ಮಂಗಳೂರಿನಲ್ಲಿ ನಡೆದ ಪ್ರಥಮ ವಿಶ್ವ ಸಾರಸ್ವತ ಸಮ್ಮೇಳನಗಳು ಇದೇ ವರ್ಗಕ್ಕೆ ಸೇರುತ್ತವೆ. ಅದು ಹೇಗೇ ಇರಲಿ, ಅವರಿಗೆ ಹೆಚ್ಚಿನ ಮಾಹಿತಿ ಏನಾದರೂ ಬೇಕಾದರೆ ನಿನ್ನನ್ನು ಸಂಪರ್ಕಿಸುವಂತೆ ಸೂಚಿಸಿದ್ದೇನೆ.

ಕೊಂಕಣಿ ಭಾಷೆಗೆ ಸರಕಾರದಿಂದ ಮಾನ್ಯತೆ ಸಂದಾಯವಾಗಿ, ಗೌರವ, ಪುರಸ್ಕಾರ, ಪ್ರಶಸ್ತಿಗಳು ಬರಲಾರಂಭಿಸಿದ ಮೇಲೆ, ಕೊಂಕಣಿಯಲ್ಲಿ ಬರಹಗಾರರ ಸಂಖ್ಯೆ ಗಗನಕ್ಕೇರಿದೆ! ಚೊಚ್ಚಲ ಕೃತಿಗೇ ರಾಜ್ಯ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿಯಿಂದ ಬಹುಮಾನ ಗಿಟ್ಟಿಸಿದವರಿದ್ದಾರೆ. ಒಂದೇ ಒಂದು ಕಥಾ ಸಂಕಲನ ಪ್ರಕಟಿಸಿದ ಮಹಿಳೆ ಸಾಹಿತ್ಯ ಸಮ್ಮೇಳನದ ಅಧ್ಯಕ್ಷಳಾಗಿ ಮೆರೆದಳು! ಗೋವಾ, ಕೇರಳ, ಕರ್ನಾಟಕ, ಮಹಾರಾಷ್ಟ್ರಗಳಲ್ಲಿ ಅದೆಷ್ಟು ಕೊಂಕಣಿ ಸಂಘಟನೆಗಳಿವೆ, ಎಂದು ಎಣಿಸುವದು ಕಷ್ಟ!

ಕರ್ನಾಟಕದಲ್ಲಿ ಕನ್ನಡ (ಲಿಪಿ) ಕೊಂಕಣಿ ಸಂಘವಾದರೆ, ಕೇರಳದಲ್ಲಿ ಮಲಯಾಳಿ ಕೊಂಕಣಿಗರ ಸಂಘ ತರುವದು ವೈಶಿಷ್ಟ್ಯ! ಬೆಕ್ಕಿನ ಬಿಡಾರವೇ ಬೇರೆ ಎಂಬಂತೆ, ಗೋವಾದವರ ಸಂಘಟನೆಯೇ ಬೇರೆ. ತಾವು ಮಾತ್ರ ನಿಜವಾದ ಕೊಂಕಣಿ ಸಂಸ್ಕೃತಿಯ ಪ್ರತಿನಿಧಿಗಳೆಂದು ಅವರು ಭಾವಿಸುತ್ತಾರೆ! ಕೊಂಕಣಿಯ ಪ್ರಚಾರಕ್ಕೆ ಅದೆಷ್ಟೊ ಪತ್ರಿಕೆಗಳು ಅಣಬೆಗಳಂತೆ ಎದ್ದೆದ್ದು ಮಾಯವಾಗುತ್ತಿವೆ. ಇಪ್ಪತ್ತೈದು ಲಕ್ಷ ಜನರ ಮನೆ ಮಾತು ಕೊಂಕಣಿಯಾಗಿರುವ ಕರ್ನಾಟಕದಲ್ಲಿ ಮಾತ್ರ ಕೊಂಕಣಿ ಭಾಷಾ ಸಾಹಿತ್ಯದ ಬೆಳವಣಿಗೆ ಸಾಕಷ್ಟು ಆಗುತ್ತಿಲ್ಲ! ಎಂಬುದನ್ನು ಒಪ್ಪಿಕೊಳ್ಳಲೇ ಬೇಕು...

ಕೊಂಕಣಿಗರಿಗೆ, ಕೊಂಕಣಿ ಸಂಸ್ಕೃತಿಗೆ, ನನ್ನ ಕೊಡುಗೆ ಕನ್ನಡ ಭಾಷೆಯ ಮೂಲಕವೇ ಪ್ರಾರಂಭವಾಯಿತು. ೧೯೭೮ರಷ್ಟು ಹಿಂದೆಯೇ ಶ್ರೀ ಶಂಕರ ಪಾಟೀಲರ ಕೋರಿಕೆಯ ಮೇರೆಗೆ, 'ಕರ್ಮವೀರ' ವಾರಪತ್ರಿಕೆಗೆ 'ಬುದ್ಧಿಮತ್ತೆಗೆ ಹೆಸರಾದವರು!' ಲೇಖ ಬರೆದಿದ್ದೆ (ಅವರು ಕೊಟ್ಟ ಶೀರ್ಷಿಕೆ!) ೧೯೮೭ರಲ್ಲಿ ಗೋವೆಯ 'ಸುನಾಪರಾಂತ' ಪತ್ರಿಕೆಯ ಸಂಪಾದಕ ಲೇಖಕ ಚಂದ್ರಕಾಂತ ಕೇಣಿ ಅವರು ಮನೆಗೆ ಬಂದು, 'ಕರ್ನಾಟಕ - ಗೋವಾ ಬಾಂಧವ್ಯ' ಕುರಿತು ಲೇಖವನ್ನು ತಮ್ಮ ವಿಶೇಷ ಸಂಚಿಕೆಗೆ ಬರೆಯಲು ವಿನಂತಿಸಿಕೊಂಡಿದ್ದರು. ಇದನ್ನು ದೇವನಾಗರಿ ಲಿಪಿಯ ತಮ್ಮ ವಿಶೇಷಾಂಕದಲ್ಲಿ ಅಚ್ಚುಕಟ್ಟಾಗಿ ಮುದ್ರಿಸಿದರು. ಬಳಿಕ ಕೊಂಕಣಿ-ಕನ್ನಡ ಮೈತ್ರಿ ಕುರಿತು ಇನ್ನೊಂದು ಲೇಖ ಬರೆದೆ. ಸಿರ್ಸಿಯಲ್ಲಿ ನಡೆದ ಕೊಂಕಣಿ ಸಮ್ಮೇಳನ ಪೂರ್ವಭಾವಿ, ಸಂಚಿಕೆಗೆ ಸಂಘಟಕರು ವಿನಂತಿಸಿಕೊಂಡ ಲೇಖವಾಗಿತ್ತು ಅದು. ಆದರೆ ಅವರ ಅಂತಃಕಲಹದಿಂದ ಯಾವ ಪಾರ್ಟಿಗೂ ಸೇರದ ಆ ಲೇಖ ಪ್ರಕಟವಾಗಲಿಲ್ಲ!

ಮಣಿಪಾಲದ ಗೋವಿಂದ ಪೈ ಪ್ರತಿಷ್ಠಾನದವರು ವಿನಂತಿಸಿಕೊಂಡ ಮೇರೆಗೆ 'ಕೊಂಕಣಿ ಭಾಷೆಯ ಉಗಮ ಹಾಗೂ ಬೆಳವಣಿಗೆ' ಲೇಖ ಬರೆದೆ. ಈ ಲೇಖನದ ಇಂಗ್ಲಿಷ್ ರೂಪವನ್ನು ನೀನು ಇಂಟರನೆಟ್ ಮೂಲಕ ವೆಬ್‌ಸ್ಯಾಟಿಗೆ ಬಳಸಿಕೊಂಡಾಗ, ಇಡೀ ವಿಶ್ವದಲ್ಲಿ ವ್ಯಾಪಿಸಿಕೊಂಡ ಅದೆಷ್ಟೋ ಕೊಂಕಣಿ ಜನರು ಹಿಗ್ಗಿನಿಂದ ನಲಿದದ್ದು ನೆನಪಿದೆಯೇ? ಎರಡು ವರ್ಷಕ್ಕೂ ಮಿಕ್ಕಿ ಈಗಲೂ ಆ ಕುರಿತು ಪತ್ರಗಳು ಬರುತ್ತಲೇ ಇವೆ!

ಆ ಬಳಿಕ 'ಕರ್ಮವೀರ' ಪತ್ರಿಕೆ ಆಮ್ಮಾರಿಗೆ ಕೋರಿಕೆ ಕಳಿಸಿ ನಾಲ್ಕು ವಿಶೇಷ ಲೇಖಗಳನ್ನು ಪ್ರಕಟಿಸಿತು.

ಈಗ ರಾಜ್ಯ ಕೊಂಕಣಿ ಸಾಹಿತ್ಯ ಅಕಾಡಮಿ ವಿನಂತಿಯ ಮೇರೆಗೆ 'ಕೊಂಕಣಿಗರ ಕಾವಿಕಲೆ' ಪುಸ್ತಕ ಬರೆಯುವ ಕೆಲಸವನ್ನು ಕೈಗೆ ಎತ್ತಿ ಕೊಂಡಿದ್ದೇನೆ. ಕೊಂಕಣಿಗರು ಒಳ್ಳೆಯ ಕಲಾಭಿರುಚಿ ಉಳ್ಳ ಜನಾಂಗವೆಂದು ಗೋವಾ ಹಾಗೂ ಕನ್ನಡ ಜಿಲ್ಲೆಗಳಲ್ಲಿದ್ದ ಅವರ ದೇವಾಲಯಗಳನ್ನು ನೋಡಿದವರಿಗೆಲ್ಲ ಮನವರಿಕೆ ಆಗದೇ ಇರದು. ಕೊಂಕಣಿ ಸಾಹಿತ್ಯವನ್ನೆಲ್ಲ ಪೋರ್ಚುಗೀಸರು ನಾಶ ಮಾಡಿದ್ದು ಐತಿಹಾಸಿಕ ಘಟನೆ. ಅವರ ಖಾಸ ಕಲೆ ಏನಾದರೂ ಇರಬಹುದೇ? ಎಂದು ಹುಡುಕುತ್ತ ಹೊರಟಾಗ, ಕಾವಿಕಲೆ, ಅವರದೇ ದೇಣಿಗೆ, ಎಂದು ಖಾತರಿಯಾಗುತ್ತ ಹೋಗಿದ್ದರಿಂದ ಆ ದಿಸೆಯ ಸಂಶೋಧನೆಗೆ

ನಾಂದಿಯಾಯಿತು. ಕೊಂಕಣಿಗರು (ಮುಖ್ಯವಾಗಿ ಸಾರಸ್ವತರು) ತೀರ ಪ್ರಾಚೀನ ಕಾಲದಲ್ಲಿ ಸರಸ್ವತಿ ಕೊಳ್ಳದಿಂದ ಗೋವೆಗೆ ವಲಸೆ ಬಂದಾಗ ತಮ್ಮ ಸ್ವಂತ ಕಲಾಪ್ರಕಾರವಾಗಲಿ, ಸಾಂಸ್ಕೃತಿಕ ಅಂಶವನ್ನಾಗಲಿ ತಂದಂತೆ ಅನಿಸುವದಿಲ್ಲ. ಅಂತೆಯೇ ವೈದಿಕ ದೇವತೆಗಳ ಜೊತೆಗೆ ಗೋವಾದ ಗ್ರಾಮದೇವ-ದೇವತೆಗಳನ್ನೂ ತಮ್ಮವನ್ನಾಗಿಸಿಕೊಂಡರು. ಅವರ ಮೂಲ ಸಂಸ್ಕೃತ-ಪ್ರಾಕೃತ ಭಾಷೆ - ಕೊಂಕಣ ಪ್ರದೇಶದಲ್ಲಿ ಪಸರಿಸಿ ತನ್ನದೇ ಕೊಂಕಣಿ ರೂಪ ಪಡೆಯಿತು. ಇದರಂತೆ ಸ್ಥಾನೀಯರಲ್ಲಿ ಪ್ರಚಲಿತವಿದ್ದ ಕಾವಿಚಿತ್ರಕಲೆಯನ್ನು ತನ್ನದಾಗಿಸಿ ಕೊಂಕಣಿ ಮೆರುಗು ಕೊಟ್ಟರು. ಮುಖ್ಯ ಕಲಾಪ್ರಕಾರವಾಗಿ ಬೆಳೆಸಿದರು. ಗೋವಾದಲ್ಲಿ ನೆಲೆಸಿದ್ದಾಗ ಕೊಂಕಣಿ 'ಗಾವುಂಡಿ'ಗಳಿಂದ ತಮ್ಮ ದೇಗುಲಗಳನ್ನು ಅಲಂಕರಿಸಿದರು.

ನಂತರ ಕೊಂಕಣಿಗರು ಪೋರ್ಚುಗೀಸರ ಧರ್ಮಾಂತರದ ಹಾವಳಿಯನ್ನು ತಪ್ಪಿಸಿಕೊಳ್ಳಲು ಉತ್ತರ ಕನ್ನಡ ಜಿಲ್ಲೆಗೆ ವಲಸೆ ಬರಬೇಕಾಯಿತು. ಅಲ್ಲಿಯ ಗುಡಿಗಾರರಿಂದ ಅವರಿಗೆ ಬೇಕಾದ ನೆರವು ದೊರೆಯಿತು. ಹೊಯ್ಸಳಕಾಲದ ದೇಗುಲ (ಗುಡಿ) ಕಟ್ಟುವವರೆಲ್ಲ ಗುಡಿಕಾರರೆಂದು ಶ್ರೇಷ್ಠಮನ್ನಣೆಗೆ ಪಾತ್ರರಾಗಿದ್ದಾರೆ. ಈ ಗುಡಿಗಾರರು ಅಚ್ಚ ಕನ್ನಡಿಗರಾದರೂ, ಕೊಂಕಣಿಯಲ್ಲೆ ವ್ಯವಹರಿಸುವದು ಅತ್ಯಂತ ಸಾಂದರ್ಭಿಕ ಮಹತ್ವದ್ದಾಗಿದೆ. ಏಕೆಂದರೆ ಅವರ ಕಲಾಸೇವೆಯನ್ನು ಪೂರ್ಣತಃ ಬಳಸಿಕೊಂಡವರು, ಕೊಂಕಣಿ ವ್ಯಾಪಾರಸ್ಥರು, ಜಮೀನುದಾರರು, ಹಾಗೂ ಚಿಕ್ಕದೊಡ್ಡ ಅರಸರಲ್ಲಿ ಪ್ರತಿಷ್ಠಿತ ಅಧಿಕಾರಿಗಳೇ ಆಗಿದ್ದರು. ಕಾವಿಕಲೆಯ ಹೆಚ್ಚಿನ ಪ್ರಕಾರಗಳೆಲ್ಲ ಕೊಂಕಣಿ ದೇವಸ್ಥಾನಗಳು, ಮಠಗಳು ಹಾಗೂ ಹಿಂದಿನ ಮನೆಗಳಲ್ಲಿಯೇ ಕಂಡುಬರುವದರಿಂದ ಗುಡಿಗಾರರು ಈ ಕೊಂಕಣಿ ಆಶ್ರಯದಾತರಿಗಾಗಿ ಮುಖ್ಯತಃ ಅವರ ಭಾಷೆಯನ್ನು ತಮ್ಮದನ್ನಾಗಿಸಿಕೊಂಡಿರಲು ಸಾಕು, ಎಂದು ನನ್ನ ಊಹೆ. ಕೊಂಕಣಿಗರು ಎಂದರೆ, ಇವರಲ್ಲಿ ಕೊಂಕಣಿ ಮನೆ ಮಾತಿನ ಶೇರುಗಾರ, ವಾಣಿ, ಸೋನಾರ ಖಾರ್ವಿ, ಸುತಾರ, ಇತರ ಕುಶಲ ಕಲಾಕಾರ್ಮಿಕರೆಲ್ಲ ಸೇರ್ಪಡೆಯಾಗುತ್ತಾರೆ. ಕ್ರೈಸ್ತ - ಮುಸ್ಲಿಂ ಕೊಂಕಣಿಗರೂ ಬರುತ್ತಾರೆ.

* * *

ಕೊನೆಗೊಮ್ಮೆ 'ಕೊಂಕಣ್ಯಾಲಿ ಕಾವಿಕಲಾ' ಪುಸ್ತಕದ ಹಸ್ತಪ್ರತಿಯನ್ನು ಕೊಂಕಣಿ ಸಾಹಿತ್ಯ ಅಕಾಡಮಿ (ಮಂಗಳೂರು)ಗೆ ಮುಟ್ಟಿಸುವ ಏರ್ಪಾಡು ಮಾಡಲಾಯಿತು. ಇದು ಯಾವಾಗ ಪ್ರಕಟಗೊಂಡರೂ ಚಿಂತೆಯಿಲ್ಲ. ಕೊಂಕಣಿ ಬರವಣಿಗೆಯಲ್ಲಿ ಇದು ಮುಂದೊಮ್ಮೆ ಮೈಲಿಕಲ್ಲು ಆಗಿ ಪರಿಣಮಿಸಿದರೆ ಆಶ್ಚರ್ಯವಿಲ್ಲ. ಅದಕ್ಕಾಗಿ ಬಳಸಿದ ನೂರಾರು ಚಿತ್ರಗಳಲ್ಲಿ, ನಿನಗೆ ಕಳಿಸಿದವುಗಳು ಐವತ್ತು. ಮಾಸಿದ ಇವನ್ನು ಮೂಲ ಕೃತಿಗೆ ಬಾಧೆ ಬರದಂತೆ, ಸ್ಪಷ್ಟವಾಗಿ ಮೂಡಿಸಲು ನಾನು ಪಟ್ಟ ಶ್ರಮದ ಕಲ್ಪನೆ ನಿನಗೆ ಬಂದೀತು! ಈ ಹಿಂದೆ ನೀನು ಬಳಸಿದ ಕಾವಿಚಿತ್ರ ಕುರಿತ ಲೇಖವನ್ನು update ಮಾಡಲು ಅವನ್ನು ಬಳಸಬಹುದು. ಈ ಕುರಿತು ಹೆಚ್ಚಿನ ಮಾಹಿತಿ-ಚಿತ್ರಗಳು ಬೇಕಿದ್ದರೆ ತಿಳಿಸು.

ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿಯವರು ಹಸ್ತಪ್ರತಿಯನ್ನು ಮುದ್ರಣಕ್ಕೆ ಕೊಟ್ಟಿದ್ದಾರಂತೆ. ಇದಕ್ಕೆ ಸುಮಾರು ನಲವತ್ತೈದು ಸಹಸ್ರ ರೂಪಾಯಿಗಳಷ್ಟು ಖರ್ಚು ಬರುವದಂತೆ. ಅಲ್ಲದೇ ಐದು ಸಹಸ್ರ ರೂಪಾಯಿಗಳನ್ನು ಗೌರವಧನದ ರೂಪದಲ್ಲಿ ಕೊಡಲಿದ್ದಾರಂತೆ.

ಈ ಪತ್ರದೊಂದಿಗೆ ಕರ್ನಾಟಕದ ಕುಣಬಿ (ಕುಡುಬಿ, ಕುಳಂಬಿ) ಜನಾಂಗದ ಬಗ್ಗೆ ಕಿರಿಲೇಖವನ್ನು ವರ್ಣಚಿತ್ರದೊಂದಿಗೆ ಕಳಿಸುತ್ತಿದ್ದೇನೆ. ಹಿಂದೊಮ್ಮೆ ಉತ್ತರ ಕನ್ನಡ ಜಿಲ್ಲೆಯ ಗೆಝೆಟಿಯರ್‌ಗೆಂದು ಸೂಪಾ, ಯಲ್ಲಾಪುರ, ಹಳಿಯಾಳಗಳಿಗೆ ಹೋದಾಗ ಅಲ್ಲಿಯ ದಟ್ಟ ಕಾಡುಗಳಲ್ಲಿ ವಾಸಿಸುವ ಕುಣಬಿಗಳ ಕೆಲವು ಛಾಯಾಚಿತ್ರ ತೆಗೆದಿದ್ದೆ. ನಂತರ ವಿಶ್ವ ಕನ್ನಡ ಸಮ್ಮೇಳನಕ್ಕೆ ಬಂದ ತಂಡವೊಂದರ ವರ್ಣ ಪಾರದರ್ಶಿಕೆ ಮಾಡಿದ್ದೆ. ಇವುಗಳಲ್ಲಿ ಕೆಲವಾದರೂ ನಿನ್ನ ಸಂಗ್ರಹದಲ್ಲಿ ಇರಲಿಕ್ಕೆ ಬೇಕು. ಮೊನ್ನೆ ರವೀಂದ್ರ ಕಲಾಕ್ಷೇತ್ರದಲ್ಲಿ ಆದಿವಾಸಿ ತಂಡಗಳ ನೃತ್ಯಪ್ರದರ್ಶನ ಏರ್ಪಡಿಸಿದ್ದರು. ಅವರಲ್ಲಿ ಕುಣಬಿ ಜನರ ಸುಗ್ಗಿ ಕುಣಿತವೂ ಸೇರಿತ್ತು. ಇವರೆಲ್ಲ ಸರಕಾರದ ಅನುದಾನಕ್ಕಾಗಿ ತಂಡ ಕಟ್ಟಿಕೊಂಡು ಬರುವವರು ಎಂದು ಬೇರೆ ಹೇಳಬೇಕಿಲ್ಲ. ಅವರು ಬಳಸಿದ ಹೂಗಳು, ಶಿರೊಭೂಷಣಗಳು ಪ್ಲಾಸ್ಟಿಕ್ ಮತ್ತು ನಾಯಲಾನ್ ಬಟ್ಟೆಯವು. ಅವರ ಕೋಲಾಟ, ಗುಮಟೆ ಪಾಂಗು, ನವಿಲು ನೃತ್ಯಗಳೆಲ್ಲ ಹೆಸರುವಾಸಿ! ಅವರ ಎಲ್ಲಾ ಹಾಡುಗಳೂ ಕೊಂಕಣಿ ಭಾಷೆಯಲ್ಲಿಯೇ ಇವೆ. ವೀಡಿಯೋಕ್ಕೆ ಇವೆಲ್ಲ ಚೆನ್ನಾಗಿರುತ್ತಿದ್ದವು. ಆದರೂ ಅಮೇರಿಕೆಯಲ್ಲಿ ನಡೆಯಲಿರುವ ಹೊಸ ಸಹಸ್ರಮಾನದ ಕೊಂಕಣಿ ಸಮ್ಮೇಳನ ಸಂದರ್ಭದಲ್ಲಿ ಈ ಛಾಯಾಚಿತ್ರಗಳನ್ನು ಬಳಸಬಹುದಾಗಿದೆ.

ಮಂಗಳೂರಿನ ಹೃದಯ ಚಿಕಿತ್ಸಾ ತಜ್ಞರಾದ ಡಾ. ಕೆ. ಮೋಹನ ಪೈ ಅವರು, 'ಕೊಂಕಣ್ಯಾಲಿ ಕಾವಿಕಲಾ' ಪುಸ್ತಕವನ್ನು ಕೊಂಡು, ಓದಿ, ಮೆಚ್ಚಿ ಪತ್ರ ಬರೆದು ತಿಳಿಸಿದ್ದಾರೆ. ಇಂತಹ ಒಂದೆರಡು ಪತ್ರಗಳು ಬಂದರೂ ಪಟ್ಟ ಶ್ರಮ ಸಾರ್ಥಕವಾಯಿತು ಅನಿಸುತ್ತದೆ. ಅವರು ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮದ ಎರಡೆರಡು ಶಾಲೆಗಳನ್ನು ಮಂಗಳೂರಿನಲ್ಲಿ ನಡೆಸುತ್ತಿದ್ದಾರಂತೆ. ನನ್ನ ಕಾವಿಕಲೆ ಪುಸ್ತಕದಲ್ಲಿ ಪ್ರಕಟಗೊಂಡ ಕಿನ್ನರನ ಚಿತ್ರವನ್ನು ಅವರು ಈ ಶಿಕ್ಷಣ ಸಂಸ್ಥೆಗಳ ಚಿಹ್ನ (Logo) ಎಂದು ಅಳವಡಿಸಿಕೊಂಡಿದ್ದಾರಂತೆ. ತಮ್ಮ ಆಡಳಿತ ಕಟ್ಟಡದ ಮೇಲೆ ದೊಡ್ಡದಾಗಿ ರಚಿಸಿಕೊಡಬಲ್ಲ ಕಾವಿಕಲಾಕಾರರು ಯಾರಾದರೂ ಇದ್ದಾರೆಯೇ? ಎಂದು ನನ್ನ ಅನುಮತಿ ಕೋರಿಕೆಗೆ ಬರೆದ ಪತ್ರದಲ್ಲಿ ವಿಚಾರಿಸಿದ್ದಾರೆ. ಅಂಥ ಕಲಾಕಾರರು ಯಾರೂ ಈಗ ಬದುಕಿಲ್ಲವಾದ್ದರಿಂದ ಯಾರೇ ಆಧುನಿಕ ಕಲಾಕಾರನಿಂದ ದೊಡ್ಡದಾಗಿ ಕಾಗದದ ಮೇಲೆ ಬಿಡಿಸಿ, ಗೋಡೆಯ ಮೇಲೆ ಅಚ್ಚು ತೆಗೆದು ನಂತರ ಕೆಂಬಣ್ಣದಿಂದ ತುಂಬುವದೇ ಸುಲಭವಾದ ಉಪಾಯವೆಂದು ಸೂಚಿಸಿದ್ದೇನೆ.

◆ ◆ ◆

೩೬. ಚಿತ್ರಸಿದ್ಧಿ

ಈ ಪತ್ರದೊಂದಿಗೆ ಪಶ್ಚಿಮ ಬಂಗಾಲದ ಚೋಹು ನೃತ್ಯದ ಕುರಿತು ಸಚಿತ್ರ ಲೇಖ ಕಳಿಸುತ್ತಿದ್ದೇನೆ. ನಾನು ಪಶ್ಚಿಮ ಬಂಗಾಲದಲ್ಲಿ ಎರಡು ವರ್ಷ ತಂಗಿದ್ದೆ. ಆಮ್ಮಾರು ಅಲ್ಲಿ ಎರಡುವರೆ ವರ್ಷ ಇದ್ದರೂ ಈ ನೃತ್ಯ ನಾಟಕ ವೀಕ್ಷಿಸುವ ಅವಕಾಶ ಸಿಕ್ಕಿರಲಿಲ್ಲ. ಆದ್ದರಿಂದ ಇಲ್ಲಿ ಚೋಹು (ಅಥವಾ ಛೋವು) ನೃತ್ಯ-ನಾಟಕ ಪ್ರದರ್ಶನಕ್ಕೆ ಆಮಂತ್ರಣ ಬಂದಾಗ ತಪ್ಪಿಸಿಕೊಳ್ಳದೇ ಆ ಸ್ಥಳಕ್ಕೆ ಹೋಗಿ ಛಾಯಾಗ್ರಹಣ ಮಾಡಿದ್ದೆ. ಆದರೆ ಅದಕ್ಕೆ ಬೇಕಾಗುವ ಹಿನ್ನೆಲೆಯ ಮಾಹಿತಿ ಸಂಗ್ರಹಿಸಿ ಲೇಖ ಬರೆಯಲು ಸಾಕಷ್ಟು ಶ್ರಮ ತೆಗೆದುಕೊಳ್ಳಬೇಕಾಯಿತು. ನಮ್ಮ ಕರಾವಳಿಯ ಹಾಲಕ್ಕಿ ಗೌಡರು ಸುಗ್ಗಿ ನೃತ್ಯಮಾಡುವಾಗ ಚೋಹೊ! ಚೊಹೋ! ಎಂದು ಉದ್ಗರಿಸುವದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಇದನ್ನು ಚೋಹು ನೃತ್ಯತಜ್ಞ ಡಾ. ಆಶುತೋಷ ಭಟ್ಟಾಚಾರ್ಯರ ಗಮನಕ್ಕೆ ಜ್ಯೋತ್ಸ್ನಾ ತಂದಾಗ, 'ಕೆಲವು Tribal beltಗಳು ದೇಶದಲ್ಲಿ ಸಾಮಾನ್ಯವಾಗಿವೆ. ಹಾಲಕ್ಕಿ ಗೌಡರು ಆದಿವಾಸಿಗಳಲ್ಲವೇ? ಬಂಗಾಲ, ಓರಿಸ್ಸಾಗಳಿಂದ ಆಂಧ್ರ-ಕರ್ನಾಟಕಕ್ಕೆ ವಲಸೆ ಹೋಗಿರಲು ಸಾಕು! ಎಂಬ ಅಭಿಪ್ರಾಯ ವ್ಯಕ್ತ ಪಡಿಸಿದ್ದರಂತೆ. ಚೋಹುನೃತ್ಯದಲ್ಲಿ ಮುಖವಾಡಕ್ಕೆ ಹೆಚ್ಚಿನ ಪ್ರಾಶಸ್ತ್ಯವಿದೆ. ಆದರೆ ಸುಗ್ಗಿ ಕುಣಿತದಲ್ಲಿ ಮುಖವಾಡ ಧರಿಸುವ ಪರಿಪಾಠವಿಲ್ಲ. ಮುಖವಾಡದ ಚಿತ್ರಗಳನ್ನು ಬೇರೆ ಕಳಿಸಿದ್ದೇನೆ.

ಕನ್ನಡ ಪತ್ರಿಕೆಗಳಿಗೆಲ್ಲ ಇಂಥ ಸಚಿತ್ರ ಲೇಖಗಳ ಬೇಡಿಕೆ ಇದ್ದೇ ಇರುತ್ತದೆ. ಆದರೆ ಇಷ್ಟೆಲ್ಲ ಶ್ರಮವಹಿಸಿ ಬರೆದು ಕೊಡುವವರು ಯಾರು? 'ಸುಧಾ' ಪತ್ರಿಕೆ, ಸಚಿತ್ರ ಲೇಖ, ರಂಗೋಲಿ ಕುರಿತಾದ ಲೇಖನಗಳಿಗೆ ಜಾಹೀರಾತು ನೀಡಿದೆ. ಆದರೆ ಕನ್ನಡ ಪತ್ರಿಕೆಗಳಿಗೆಲ್ಲ ನಾನಾಗಿ ಚಿತ್ರ-ಲೇಖನ ಕಳಿಸುವ ಮನಸ್ಸಿಲ್ಲ. ನಿನಗೆ ಬರೆದು ಕಳಿಸಿದ ಒಂದೇ ವಾರದೊಳಗೆ ದೇಶ-ವಿದೇಶಗಳಲ್ಲಿ ಮೂಲೆ-ಮೂಲೆಯ ಜನ ವೀಕ್ಷಿಸಿ ತಮ್ಮ ಮೆಚ್ಚಿಗೆಯನ್ನು ಇನ್ನೊಂದು ವಾರದೊಳಗೇ ನಿನಗೆ ಕಳಿಸುವ ಅವಕಾಶ ಇರುವಾಗ, ಇಂಥ ಲೇಖ ಕೇಳದ, ಬರೆಸದ ಪತ್ರಿಕೆಗಳು, ಹಾಗೂ ಓದಿ ನೋಡದ, ನೋಡಿದರೂ ತಿಳಿಸದ, ಓದುಗರಿಂದ ಏನಾಗಬೇಕಾಗಿದೆ?

ಈ ವಾರ, ಡಾ. ಶೇಷ ಶಾಸ್ತ್ರಿಯ ಅಣ್ಣನ ಮಗ ಸಂಜಯ್ ತನ್ನ ಸ್ನೇಹಿತ ಸತ್ಯಜಿತನೊಡನೆ ಲ್ಯಾಪ್-ಟಾಪ ಕಂಪ್ಯುಟರ್ ಹೊತ್ತು ನಮ್ಮಲ್ಲಿ ಬಂದಿದ್ದ. ಅವರಿಬ್ಬರಿಗೂ ನಿನ್ನ ಸಿ.ಡಿ. ರೊಮ್ ನನ್ನ ಮೇಲ್ವಿಚಾರಣೆಯಲ್ಲಿ ನೋಡಬೇಕು, ಎನ್ನುವ ಹಂಬಲ! ಅದರ ಮೇಲೆ ಮೂಡಿ ಬಂದ ಮಧ್ಯಪ್ರದೇಶದ ಆದಿವಾಸಿ ಚಿತ್ರಗಳು, ಭಿತ್ತಿ ಚಿತ್ರಗಳು, ಜೆಸ್ಸೊಚಿತ್ರಗಳು, ಖಜುರಾಹೊ ಚಿತ್ರಗಳು, ಭೀಮಬೆಟ್ಕಾ ಗುಹಾಚಿತ್ರಗಳನ್ನು ನೋಡಿ ಸಂತೋಷವಾಯಿತು. ಆ ಇಬ್ಬರೂ ತರುಣರು ಅತೀವ ಆಸಕ್ತಿಯಿಂದ ಅವನ್ನು ವೀಕ್ಷಿಸಿ ನೂರಾರು ಪ್ರಶ್ನೆಗಳನ್ನು ಕೇಳಿ ವಿವರಗಳನ್ನು ಪಡೆದುಕೊಂಡರು. ''ಈ ಸಿ.ಡಿ.ರೊಮ್ ತಯಾರಿಸಲು ನಿಮ್ಮ ಮಗ-ಸೊಸೆ

ಎಷ್ಟೊಂದು ದುಡಿದಿರಬೇಕು, ಎಂದು ಊಹಿಸಲೂ ಸಾಧ್ಯವಾಗುತ್ತಿಲ್ಲ! ಎಂದು ಉದ್ಗರಿಸಿದರು. ಸತ್ಯಜಿತನೂ ಸಂಜಯನಂತೆ ಕೆಮಿಕಲ್ ಇಂಜಿನಿಯರ್. ಒಳ್ಳೆಯ ಕಂಪನಿಯಲ್ಲಿ ಉಚ್ಚ ಪದವಿಯಲ್ಲಿದ್ದಾನೆ. ಕಂಪನಿ ಅವನಿಗೆ ಟೆಕ್ಸಾಸ್ ರಾಜ್ಯದ ಹ್ಯೂಸ್ಟನ್‌ಗೆ ತರಬೇತಿಗೆ ಕಳಿಸಿತ್ತು. ಉತ್ತರ ಭಾರತದಲ್ಲೂ ಕೆಲಸ ಮಾಡಿ ಬಂದಿದ್ದಾನೆ. ಈ ಯುವಕರು ತಾವಾಗಿ ಫೋನಿಸಿ, ಕಂಪ್ಯೂಟರ್ ಹೊತ್ತು ತಂದು ಮೂರು ಗಂಟೆಕಾಲ ನಮ್ಮೊಡನಿದ್ದು ನಿನ್ನ ಸಿ. ಡಿ. ರೊಮ್ ನೋಡಿ ಮುಕ್ತಕಂಠದಿಂದ ಹೊಗಳಿದ್ದರಿಂದ ತುಂಬ ಜಂಬ ಬಂದುಬಿಟ್ಟಿದೆ! ಹಣದಾಸೆ, ಪ್ರಚಾರದಾಸೆ ಇಲ್ಲದ ಕುಟುಂಬಕ್ಕೆ ಇದಕ್ಕಿಂತ ಹೆಚ್ಚಿನದು ಇನ್ನೇನು ಬೇಕು?

ಬೆಂಗಳೂರನ್ನು ಸಿಂಗಪುರದಂತೆ ಸುಂದರ ನಗರವನ್ನಾಗಿ ಪರಿವರ್ತಿಸುವ ಭ್ರಮೆಯಲ್ಲಿ ಕರ್ನಾಟಕ ಸರಕಾರ ಹತ್ತಾರು ಬಗೆಯ ಚಟುವಟಿಕೆಗಳನ್ನು ಪ್ರಾರಂಭಿಸಿದೆ. ಕಟ್ಟಡಗಳ ಮೇಲೆ ವಿಪರೀತ ಕರ ಹೇರುವದು, ರಸ್ತೆಗಳನ್ನೆಲ್ಲ ಸಿಕ್ಕಂತೆ ಅಗೆದು ಹಾಕಲು ಅನುಮತಿ ಕೊಡುವದು, ಕೇವಲ ಒಂದೇ ತಿಂಗಳಲ್ಲಿ ಭಿಕ್ಷುಕರು ಇಲ್ಲದಂತೆ ಮಾಡುವದು ಎಂಬ ಘೋಷಣೆ ಬಿತ್ತರಿಸುವದು ನಡೆದೇ ಇದೆ. ಇದು ನಿಜವಾದಲ್ಲಿ ಇನ್ನು ಮುಂದೆ ಭಿಕ್ಷುಕರ ಛಾಯಾಗ್ರಹಣವೂ ಸಾಧ್ಯವಾಗಲಿಕ್ಕಿಲ್ಲ! ಎಂದುಕೊಂಡು ಕಳೆದ ರವಿವಾರ ಯಶವಂತಪುರ ರಸ್ತೆಯ ಚರ್ಚಿಗೆ ಹೋಗಿದ್ದೆ. ಅಲ್ಲಿ ಬೆಳಿಗಿನ ಸರ್ವಿಸಿಗೇ ಜನ ಬಂದು ಪ್ರಾರ್ಥಿಸುವದರಿಂದ ಭಿಕ್ಷುಕ ಸಮೂಹ ನೆರೆದಿರುತ್ತದೆ. ಪ್ರಾರಂಭದಲ್ಲಿ ನನ್ನನ್ನು ನೋಡಿದೊಡನೆ ಪೋಲಿಸರ ಕಡೆಯವರು ಎಂದು ಗುಮಾನಿಗೆ ಒಳಗಾಗಿದ್ದರು. ಅವರನ್ನು ಸಂತೈಸಲು ''ನಿಮಗೆ ಏನೂ ಮಾಡೊಲ್ಲ ಕಣ್ರಿ! ನಾವಾಗಿ ನಿಮಗೆ ಭಿಕ್ಷೆ ಕೊಡಲಿಕ್ಕೆ ಬಂದಿದೀವಿ ಅಂತ ಗೊತ್ತಾದ್ರೆ ನಮ್ಮನ್ನೆ ಹಿಡ್ಕೊಂಡು ಹೋಗ್ತವ್ರೆ!'' ಎಂದು ಹೇಳಿದಾಗ ಬಿಚ್ಚುಮನಸ್ಸಿನಿಂದ ನಕ್ಕರು.

ಈಗ ಛಾಯಾಗ್ರಹಣ ಸುಲಭವಾಯಿತು. ಅವರು ಒಟ್ಟು ಹನ್ನೆರಡು ಜನರಿದ್ದರು. ಅವರನ್ನು ತೀರ ಸನಿಹದಿಂದ ನೋಡಿ ಕ್ಲಿಕ್ಕಿಸುವಂತೆ ಆದದ್ದರಿಂದ ತುಂಬ ನೋವಾಯಿತು. ಒಬ್ಬನಿಗೆ ಒಂದು ಕೈ ಇಲ್ಲ. ಇನ್ನೊಬ್ಬಳು ಕುಷ್ಠರೋಗದಿಂದ ಬಳಲುತ್ತಿದ್ದಾಳೆ. ಮುದಿಯ ನಿರ್ಗತಿಕ. ಓರ್ವಳು ಮಾನಸಿಕ ರೋಗಿ, ಇನ್ನೊಬ್ಬಳು ಅನಾಥೆ. ಇಷ್ಟಾದರೂ ಜೀವನದಲ್ಲಿ ಅವರು ಹೊಂದಿರುವ ಆಸಕ್ತಿ, ಉತ್ಸಾಹ ನೋಡಿ ವಿಸ್ಮಯವಾಯಿತು 'ಒಬ್ಬ ಯಾರ ಹತ್ತಿರ ಗಟ್ಟಿನೋಟು ಕೊಟ್ಟು ಬಿಡಿ! ನಾವೆಲ್ಲ ಹಂಚಿಕೊಳ್ಳುತ್ತೇವೆ! ಎಂದು ಒಕ್ಕೊರಳಿನಿಂದ ಸಾರಿದರು. ನಗುಮುಖದಿಂದ, ಗೆಲುವಾಗಿ ಛಾಯಾಗ್ರಹಣಕ್ಕೆ ಸಹಕರಿಸಿದರು. ಹೊರಟು ನಿಂತಾಗ ಕೈ ಜೋಡಿಸಿ ನಮಸ್ಕರಿಸಿದರು. ಈ ಭೇಟಿಯಲ್ಲಿ ಸೆರೆಹಿಡಿದ ಕೆಲವು ಛಾಯಾಚಿತ್ರಗಳು ಅಪರೂಪದವಾಗಿವೆ. ನಾನು 'ಭಿಕ್ಷಾಟನೆ' ಲೇಖ ಬರೆಯುವ ದಿನಗಳಲ್ಲಿ ಇಂಥ ಛಾಯಾಚಿತ್ರಗಳು ಸಿಗುವಂತಾಗಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು ಅಲ್ಲವೇ?

ಬಾಲ್ಯದಿಂದಲೂ ನನಗೆ ಜನಸಾಮಾನ್ಯರಲ್ಲಿ, ಅವರ ವಿವಿಧ ಚಟುವಟಿಕೆಗಳಲ್ಲಿ ಆಸಕ್ತಿ ಇದ್ದೇ ಇತ್ತು. ಆದರೆ ಈಗ ನಿನ್ನ ಇಂಟರ್‌ನೆಟ್ ವೆಬ್‌ಸಾಹಸಕ್ಕೆ ಛಾಯಾಗ್ರಹಣ

ಪ್ರಾರಂಭಿಸಿದಾಗ ಬಡವರು, ದೀನ-ದಲಿತರಲ್ಲಿ ಒಂದಾಗಿ ಹೋಗಿದ್ದೇನೆ. ಕಟ್ಟಡ ಕೆಲಸಗಾರರು, ತರಕಾರಿ ಮಾರುವವರು, ಹೂ ಕಟ್ಟುವವರು, ಹಣ್ಣು ವಿಕ್ರಯಿಸುವವರು, ಚಿಕ್ಕ ಹುಡುಗರು, ಬಾಲಕಾರ್ಮಿಕರು, ಕಸ ಬಳಿಯುವವರು, ಕಸ ಮಾರಿಯೇ ಜೀವಿಸುವವರು, ಧೋಬಿಗಳು, ರಿಪೇರಿ ಜನರು, ಭಿಕ್ಷುಕರು ಇವರನ್ನು ಹುಡುಕಿಕೊಂಡು ಹೋಗುತ್ತೇನೆ. ಅವರೆಲ್ಲ, ನಾನೊಬ್ಬ ಪರಕೀಯನೆಂದು ಭಾವಿಸದೇ ತಮ್ಮಲ್ಲೊಬ್ಬ! ಎಂದು ಪರಿಗಣಿಸುವಷ್ಟು ಆತ್ಮೀಯನಾಗಿದ್ದೇನೆ. ನಾನು ಕ್ಲಿಕ್ಕಿಸಿದ ಅವರ ಭಾವಚಿತ್ರಗಳನ್ನು ನೋಡಿದವರು, ಇದೆಲ್ಲ ಹೇಗೆ ಸಾಧ್ಯವಾಯಿತು? ಎಂದು ವಿಸ್ಮಯ ಪಡುತ್ತಾರೆ. ಯಾರೊಬ್ಬರ ''ಫೋಟೊ ತೆಗೆಯುತ್ತೇನೆ!'' ಎಂದಾಗ ತಿರಸ್ಕರಿಸಿದವರು ತೀರ ಕಡಿಮೆ ಜನ ಎನ್ನಬಹುದು. ಅವರು ನೆಚ್ಚಿಕೊಳ್ಳುವ ಯಾವ ಗುಣ ನನ್ನಲ್ಲಿದೆ? ಎಂದು ನನಗೇ ತಿಳಿಯದಾಗಿದೆ. ಜನರ ಈ ಸಹಕಾರದಿಂದ ಫೋಟೋಗಳು ರಾಶಿರಾಶಿ ಯಾಗಿ ಸಂಗ್ರಹವಾಗಲಾರಂಭಿಸಿವೆ! ನನಗೆ ವರ್ಣಚಿತ್ರಗಳನ್ನು ಮಾಡಿಕೊಡುವ ಫೋಟೊ ಅಂಗಡಿಯ ಹುಡುಗರೂ ನಾನು ಕ್ಲಿಕ್ಕಿಸಿದ ಯಾವತ್ತೂ ಚಿತ್ರಗಳ ಮೇಲೆ ಕಣ್ಣಾಡಿಸಿದ ಹೊರತು, ಆಹಾ! ಓಹೊಹೋ! ಎಂದು ಉದ್ಗರಿಸಿದ ಹೊರತು, ನನ್ನ ಕೈಗೆ ಅವನ್ನು ಕೊಡುವದೇ ಇಲ್ಲ. ಕೆಲವು ಅಪೂರ್ವ ಛಾಯಾಚಿತ್ರಗಳನ್ನು ವರ್ಣಪಾರ ದರ್ಶಿಕೆಗಳನ್ನಾಗಿ ಪರಿವರ್ತಿಸಿ ಇಟ್ಟುಕೊಂಡಿದ್ದೇನೆ. ನೆಗೆಟಿವ್‌ಗಳ ಜೊತೆಗೆ ವರ್ಣಪಾರದರ್ಶಿಕೆಗಳೂ ಇರುವದರಿಂದ, ಅಂಚೆಯಲ್ಲಿ ಛಾಯಾಚಿತ್ರಗಳು ಕಳೆದು ಹೋಗಿ ಹಾನಿಯಾಗುವ ಸಾಧ್ಯತೆ ತೀರ ಕಡಿಮೆ. ಅಷ್ಟೆ ಅಲ್ಲದೇ ಇಂದಿನವರೆಗೆ ನಿನಗೆ ಕಳಿಸಿದ ಕವರುಗಳಲ್ಲಿ ಒಂದೂ ಕಾಣೆಯಾಗಿಲ್ಲ. ಇದಕ್ಕೆ ಮುಖ್ಯ ಕಾರಣ ನಾನು ಮಲ್ಲೇಶ್ವರಂ ಅಂಚೆ-ಕಚೇರಿಗೆ ಹೋಗಿ, ಅಲ್ಲಿಯ ಅಧಿಕಾರಿಯ ಹತ್ತಿರ ತೂಗಿಸಿ, ಸ್ಟಾಂಪ್ ಹಚ್ಚಿ ಅವರಿಗೇ ಸ್ವಾಧೀನ ಮಾಡಿ ಬರುತ್ತೇನೆ. ಯಾವುದಾದರೂ ಅಂಚೆ ಡಬ್ಬಿಗೆ ಸೇರಿಸಿದರೆ, ಬೆಲೆ ಬಾಳುವ ಅಂಚೆ ಚೀಟಿಗಳನ್ನು ಪೇದೆಗಳು ಕದಿಯುವ ಸಾಧ್ಯತೆ ಇದ್ದೇ ಇದೆ. ಈವರೆಗೆ ನಮ್ಮ ಈ ವ್ಯವಸ್ಥೆ ಸರಿಯಾಗಿ ನಡೆದಿದೆ, ಎಂಬುದೇ ನೆಮ್ಮದಿ!

◆ ◆ ◆

೩೭. ಮಿತವ್ಯಯ : ಒಂದು ಮೆಲುಕು

ನಾನು ಹುಟ್ಟಾ ಮಿತವ್ಯಯಿ. ಹೀಗಾಗಿ ಇನ್ನಿತರರು ನನ್ನನ್ನು ಕೃಪಣರ ಗುಂಪಿಗೆ ಸೇರಿಸಿದ್ದರೆ ಆಶ್ಚರ್ಯವಿಲ್ಲ! ಬಾಲ್ಯದಲ್ಲಿ ನಮಗೆಲ್ಲ ದುಡ್ಡನ್ನು ಕೈಗೆ ಕೊಡುತ್ತಲೇ ಇರಲಿಲ್ಲ. ಅಜ್ಜ, ಮಾಮಾ ಮೊದಲಾದವರು ನಮ್ಮ ಊರಿಗೆ ಬಂದಾಗ, ಕೈಗೆ ಒಂದು ಬಿಲ್ಲಿ ಕೊಟ್ಟರೆ, ಅದೇ ಮಹಾ ಆನಂದ ತರುತ್ತಿತ್ತು. ವರ್ಷಕ್ಕೊಮ್ಮೆ ಬರುವ ಹೊನ್ನಾವರ ತೇರಿನ ಖರ್ಚಿಗೆ ಒಂದು ಆಣೆ (೪ ಬಿಲ್ಲಿ ಅಥವಾ ಪಾವಾಣೆ ೧ ಆಣೆ, ೧೬ ಆಣೆ-೧ ರೂಪಾಯಿ) ಪ್ರತಿ ಮಗುವಿನ ಕೈಗೆ ಬರುತ್ತಿತ್ತು. ಆ ಆಣೆಯಿಂದ ಬೆಂಡು, ಬತ್ತಾಸು, ಮಿಠಾಯಿಗಳನ್ನೆಲ್ಲ ಕೊಳ್ಳಬಹುದು ಎಂದು ಯೋಚಿಸಿ, ಹಿರಿಹಿರಿ ಹಿಗ್ಗಿ ಆ ನಾಣ್ಯವನ್ನು ಸುರಕ್ಷಿತವಾಗಿಡಲು ಕಾಕಿಯವರ ಹತ್ತಿರ ಕೊಡುವದು ವಾಡಿಕೆ. ಅಂದಿನ ದಿನಗಳಲ್ಲಿ ಗಂಗಕ್ಕನವರು ಹಾಲು-ಗೊಬ್ಬರಗಳನ್ನು ಮಾರಿ, ಬಂದ ಹಣವನ್ನು, ಗೃಹಿಣಿಯರ ಕಷ್ಟಕಾಲದಲ್ಲಿ ಅವರ ಚಿಕ್ಕ ಪುಟ್ಟ ಒಡವೆಗಳನ್ನು ಒತ್ತೆಯಾಗಿಟ್ಟುಕೊಂಡು ಹತ್ತು ರೂಪಾಯಿಗಳನ್ನು ಕೈಗಡವಾಗಿ ಕೊಡುವ ಪರಿಪಾಠವಿತ್ತು. ಕಾಕಿಯವರಿಗೂ ಬಡ್ಡಿ ಗಳಿಸುವ ಲಾಲಸೆ ಹುಟ್ಟಿರಬೇಕು! ತುಳಸಾಬಾಯಿ ಎನ್ನುವಾಕೆಗೆ ಐದುರೂಪಾಯಿ ಸಾಲಕೊಟ್ಟರು. ಕೆಲ ತಿಂಗಳ ನಂತರ ಆಕೆ ಅಸಲು ಕೊಳ್ಳಿ! ಬಡ್ಡಿ ಇಷ್ಟರಲ್ಲಿ ಹಿಂದಿರುಗಿಸುತ್ತೇನೆ, ಎಂದು ಅಸಲನ್ನು ಹಿಂದಿರುಗಿಸಿ, ಅಡವಿಟ್ಟ ಆಭರಣ ಯಾವುದೋ ಮದುವೆಗೆ ಧರಿಸಲು ಒಯ್ದಳು. ಆಕೆ ಕೊಟ್ಟ ಐದು ರೂಪಾಯಿ ಪರಿಶೀಲಿಸಲಾಗಿ ಅದು ಐದು ರೂಪಾಯಿಯ ಹಣವಾಗಿರದೇ ಹೊಚ್ಚ ಹೊಸದಾಗಿ ಬಳಕೆಯಲ್ಲಿ ಬಂದ ಎರಡು ರೂಪಾಯಿಯ ನೋಟು ಎಂದು ತಿಳಿಯಿತು. ಕಾಕಿಯವರ ಬಳಿ ಹಣ ಎಲ್ಲಿಂದ ಬರಬೇಕು! ಕಾಲಕಾಲಕ್ಕೆ ಅವರ ಬಳಿ ನಾವು ಕೂಡಿಡಲು ಕೊಟ್ಟ ನಮ್ಮ ಹಣದ ದೊಡ್ಡ ಪಾಲು ನೀರಿನಲ್ಲಿ ಹೋಮ ಮಾಡಿದಂತೆ ಆಯಿತು.

ನಾವು ಮುಂದೆ ವಾಸಕ್ಕಾಗಿ ರಥಬೀದಿಯ ಮನೆಗೆ ಬಂದ ನಂತರವೂ ಸಣ್ಣಪುಟ್ಟ ಕೈಗಡಕ್ಕಾಗಿ ಪರಿಚಿತರು ಪೀಡಿಸುತ್ತಲೇ ಇರುತ್ತಿದ್ದರು. ಒಬ್ಬಳು, ಖಾರ್ವಿ ಲಕ್ಷ್ಮಿಯ ಬಳಿ ಯಾವ ದಾಗೀನೂ ಇಲ್ಲದ್ದರಿಂದ ಅವಳು ಗಂಡನ ದಿಂಡುಕೊಯ್ಯುವ ದೊಡ್ಡ ಕರಗಸವನ್ನೆ ಒತ್ತೆಯಾಗಿ ತಂದಿಟ್ಟಳು! ಕಾಕಾರಿಗೆ ಇಂಥ ವ್ಯವಹಾರಗಳು ಮನಸ್ಸಿಗೆ ಬರುತ್ತಿರಲಿಲ್ಲ. ಹೀಗಾಗಿ ಅದನ್ನು ಅವರ ಕಣ್ಣಿಗೆ ಬೀಳದಂತೆ ಬಚ್ಚಿಡಲಾಯಿತು. ಒಂದು ಶುಭ ಮುಹೂರ್ತದಲ್ಲಿ ಲಕ್ಷ್ಮಿ ಪ್ರತ್ಯಕ್ಷಳಾದಳು! ತನ್ನ ಗಂಡ ಗಟ್ಟ ಹತ್ತಿ ಕೆಲಸಕ್ಕೆ ಹೋಗಲಿದ್ದಾನೆ. ಕರಗಸ ಕೊಟ್ಟರೆ, ದುಡಿದು ನಾಲ್ಕು ಕಾಸು ಗಳಿಸುತ್ತಾನೆ. ಬಳಿಕ ಸಾಲ ಹಿಂದಿರುಸುತ್ತೇನೆ' ಎಂದು ಆಶ್ವಾಸನೆ ಕೊಟ್ಟು ಕರಗಸ ಒಯ್ದಳು. ನಂತರ ಲಕ್ಷ್ಮಿ ಪುನಃ ಕಾಣಿಸಿಕೊಳ್ಳಲಿಲ್ಲ, ಎಂದು ಬೇರೆ ಹೇಳಬೇಕೇ?

ಹೈಸ್ಕೂಲು ಸೇರಿದ ಬಳಿಕವೂ ನನ್ನ ಉಳಿತಾಯ ಪ್ರವೃತ್ತಿ ನಡೆದೇ ಇತ್ತು. ಇದನ್ನರಿತ ಸಹಪಾಠಿ ಸ್ನೇಹಿತರು ಇದರ ಲಾಭವನ್ನು ಸಂಪೂರ್ಣ ಪಡೆದುಕೊಂಡರು. ಅಂದಿನ ದಿನಗಳಲ್ಲಿ ಆರ. ಎಸ್. ಎಸ್. ಶಾಖೆಯ ಪ್ರಭಾವ ಊರಿನಲ್ಲಿ ಜೋರಾಗಿತ್ತು. ಅಂತೆಯೇ

ಬೆಂಗಳೂರಿನಲ್ಲಿ ನಡೆಯಲಿದ್ದ ಯು. ಟಿ. ಸಿ. ತರಬೇತಿ ಕ್ಯಾಂಪಿಗೆ ಹಲವರು ಹೊರಟು ನಿಂತರು. ಅವರ ಕನಸು ನನಸಾಗಿಸಲು ಕಾಸು ಬೇಕಲ್ಲ? ನನ್ನ ನಾಲ್ವರು ಸ್ನೇಹಿತರಿಗೆ ತುಂಬ ಕಷ್ಟದಿಂದ ಉಳಿಸಿದ್ದ ಹಣವನ್ನು ತಲಾ ಐದು ರೂಪಾಯಿಯಂತೆ ಅವರ ಆಗ್ರಹಕ್ಕೆ ಮಣಿದು ಕೊಟ್ಟು ಬಿಟ್ಟೆ. ಅವರಲ್ಲಿ ಒಬ್ಬ ಮಾತ್ರ ಒಂದಾಣೆ ಎರಡಾಣೆಯಂತೆ ಅರ್ಧದಷ್ಟು ಹಣವನ್ನು ಹಿಂದಿರುಗಿಸಿದ. ಇನ್ನೊಬ್ಬ ಒಂದು ಕ್ಲಾಸು ಮುಂದೆ ಇದ್ದವ, ಹಳೆಯ ಪಠ್ಯಪುಸ್ತಕ ಕೊಟ್ಟು ಹೊಂದಾಣಿಕೆ ಮಾಡಿಕೊಂಡ. ಇನ್ನಿಬ್ಬರು ಬಿಡಿಕಾಸನ್ನೂ ಹಿಂದಿರುಗಿಸಲಿಲ್ಲ. ಇಷ್ಟಾಗಿ ಈ ನಾಲ್ವರೂ ಶಾಬ್ಬಿಯ ಅಂಗಡಿಯಲ್ಲಿ ಪೂರಿ-ಭಾಜಿ ತಿನ್ನಲಿಕ್ಕೆ, ಚಲಚ್ಚಿತ್ರ ನೋಡಲಿಕ್ಕೆ ಏನೇನೂ ಕೊರತೆ ಮಾಡಿಕೊಳ್ಳುತ್ತಿರಲಿಲ್ಲ!

ಮುಂದೆ ಕುಮಟಾದ ಕ್ಯಾನರಾ ಕಾಲೇಜು ಸೇರಿಕೊಂಡೆ. ಅಲ್ಲಿಯ ಊಟ ತೀರಾ ಕಚಡಾ ಆಗಿರುತ್ತಿದ್ದರೂ ಎಂದೂ ಕ್ಯಾಂಟೀನಿಗೆ ಹೋಗುವ ಅಭ್ಯಾಸ ಮಾಡಿಕೊಳ್ಳಲೇ ಇಲ್ಲ. ನನ್ನ ಹಾಸ್ಟೆಲ್ ವಾಸಿಗಳ ಧಾರಾಳ ಖರ್ಚನ್ನು ನೋಡುತ್ತಿದ್ದೆ. ಅದೇಕೋ ಕಾಕಾರವರು ಏಕೈಕರಾಗಿ ಕಷ್ಟಪಟ್ಟು ಗಳಿಸಿದ ಹಣವನ್ನು ಖರ್ಚು ಮಾಡಲು ಮನಸ್ಸೇ ಬರುತ್ತಿರಲಿಲ್ಲ. ಎಷ್ಟೊ ಸಲ ಕಾಕಾರು ತೀರ ಬಡಕಲಾಗಿದ್ದಿ! ಹಾಲು ಕುಡಿ, ಹಣ್ಣು ತಿನ್ನು, ದುಡ್ಡಿಗೆ ಹಿಂದೆ ಮುಂದೆ ನೋಡಬೇಡ! ಎಂದು ಹೇಳಿದ್ದುಂಟು. ಮುಂದೆ ಧಾರವಾಡ ಹಾಸ್ಟೆಲಿನಲ್ಲಿ ಊಟ ಚೆನ್ನಾಗಿ ಇರುತ್ತಿದ್ದುದರಿಂದ ಹೊರಗೆ ತಿಂಡಿ ತಿನ್ನುವ ಪ್ರಮೇಯವೇ ಇರುತ್ತಿರಲಿಲ್ಲ.

ಮಾಸ್ಟರ್ಸ್ ಡಿಗ್ರಿ, ಮುಗಿಸಿ ಕರ್ನಾಟಕ ಕಾಲೇಜಿನಲ್ಲಿ ಒಳ್ಳೆಯ ವೇತನ ಪಡೆಯಲಾರಂಭಿಸಿದರೂ ನನ್ನ ಮಿತವ್ಯಯ ಮುಂದುವರಿದಿದ್ದರಿಂದ, ಕ್ಯಾನರಾ ಬ್ಯಾಂಕಿನಲ್ಲಿ ಎರಡು ಠೇವಣಿಗಳನ್ನು ಇಡುವಂತಾಯಿತು. ಅಮೇರಿಕೆಗೆ ಹೆಚ್ಚಿನ ವ್ಯಾಸಂಗಕ್ಕೆ ಹೋಗುವ ಪ್ರಸಂಗ ಬಂದಾಗ, ನನ್ನ ಆದಾಯದ ಉಳಿತಾಯವನ್ನೇ ಬಳಸಿಕೊಂಡಿದ್ದೆ. ಪ್ರವಾಸ ಮತ್ತು ಪ್ರಾರಂಭಿಕ ವೆಚ್ಚಕ್ಕಾಗಿ ನಾನು ಕಾಕಾರಿಂದ ಪಡೆದದ್ದು ಆರು ಸಾವಿರ ರೂಪಾಯಿ ಮಾತ್ರ! ಸಾಯರೆಕ್ಯೂಸಿನ ವಾಸ್ತವ್ಯದಲ್ಲಿ ಎಂದೂ ಹೊಟೇಲಿಗೆ ಹೋಗಲಿಲ್ಲ. ಹೊರಗೆ ಕಾಫಿ-ತಿಂಡಿ ತೆಗೆದುಕೊಳ್ಳಲಿಲ್ಲ. ನನಗೆ ಸಿಗುತ್ತಿದ್ದ ಅಲ್ಪ ಶಿಷ್ಯವೇತನದಲ್ಲೇ ನನ್ನ ಸಂಪೂರ್ಣ ಸ್ನಾತಕೋತ್ತರ ಶಿಕ್ಷಣ ಮುಗಿಸುವದು, ಅಮೇರಿಕಾ ದೇಶವನ್ನೆಲ್ಲ ಸುತ್ತಾಡುವದು, ಭಾರತಕ್ಕೆ ಮರಳುವಾಗ ಯುರೋಪ ಖಂಡದಲ್ಲಿ ಅಲೆದಾಡುವದು ಸಾಧ್ಯವಾದದ್ದು, ಮಿತವ್ಯಯದಿಂದಲೇ!

ಭಾರತಕ್ಕೆ ಮರಳಿದ ನಂತರ ಹಣದ ಅಭಾವ ಅನಿಸಿದರೂ ಯಾರೊಬ್ಬರಿಗೂ ಕೇಳಲಿಲ್ಲ. ಪಡೆಯಲಿಲ್ಲ. ನನ್ನ ವಿವಾಹಕ್ಕಾಗಿ ನಾನು ಖರೀದಿಸಿದ್ದು ಒಂಬತ್ತು ರೂಪಾಯಿಯ ಲಖನೌ ಅಚಕನ್ (ಜುಬ್ಬ) ಒಂದನ್ನೇ! ಮದುವೆಗೆ ಹೊನ್ನಾವರದಿಂದ ಕುಮಟೆಗೆ ಕೇವಲ ಒಂಬತ್ತು ಜನರು ಸಾರಿಗೆ ಬಸ್‌ನಲ್ಲಿ ಹೋಗಿದ್ದೆವು! ಅಳಿಯನು ಸಾಹುಕಾರ ಕುಟುಂಬದವನೆಂದು ಬುರ್ಡೆ ಮನೆತನದವರು ಭರ್ಜರಿಯಾಗಿಯೇ ಮದುವೆಯ ಏರ್ಪಾಡು ಮಾಡಿದ್ದರು! ಆದರೆ ಮದುವೆಯಾಗಿ ನಾವಿಬ್ಬರೂ ಜೋಬನೇರಕ್ಕೆ ಹಿಂದಿರುಗಲು ನಮಗೆ ಬಂದ ಆಹೇರ (ಉಡುಗೊರೆ) ಹಣವನ್ನೆ

ಬಳಸಬೇಕಾಯಿತು ಎಂದು ಇಂದಿಗೂ ಯಾರಿಗೂ ತಿಳಿದಂತೆ ಇಲ್ಲ! ಜೋಬನೇರದಲ್ಲಿ ಸಂಸಾರ ಹೂಡಿದರೂ ಹಣದ ಕೊರತೆ ಏನೂ ದೂರವಾಗಲಿಲ್ಲ. ಇಷ್ಟಾದರೂ ಬೇಸಿಗೆಯ ರಜೆಯಲ್ಲಿ ನಾವಿಬ್ಬರೂ ಒಂದು ತಿಂಗಳ ಕಾಶ್ಮೀರ ಪ್ರವಾಸ ಕೈಕೊಳ್ಳಲು ಹಿಂದೆ ಮುಂದೆ ನೋಡಲಿಲ್ಲ. ಕೈಯಲ್ಲಿ ಹಣ ಕೂಡಿದಾಗ ಕಾಶ್ಮೀರಕ್ಕೆ ಹೋಗುತ್ತೇವೆ, ಎಂದು ಮುಂದೂಡಿದ್ದರೆ ಇಂದಿಗೂ ಕಾಶ್ಮೀರ, ಕನಸಾಗಿಯೇ ಉಳಿಯುತ್ತಿತ್ತು. ಮುಂದಿನ ಜೀವನದಲ್ಲಿ ಈ ಮಿತವ್ಯಯ ಸ್ವಭಾವದಿಂದ ಜೀವನದಲ್ಲಿ ಏನೆಲ್ಲ ಸಾಹಸ ಮಾಡಲು ಸಾಧ್ಯವಾಯಿತು, ಎಂದು ನಿನಗೆ ಹೇಳಬೇಕಾಗಿಯೇ ಇಲ್ಲ. ಛಾಯಾಗ್ರಹಣ ಅತ್ಯಂತ ದುಬಾರಿ ಹವ್ಯಾಸವಲ್ಲವೇ? ಎಂದು ಅನೇಕರು ವಿಸ್ಮಯ ಪಡುತ್ತಾರೆ. ಇಷ್ಟೆಲ್ಲ ಇದ್ದರೂ ನನ್ನ ಮಾಸಿಕ ಖರ್ಚು ಅವರದಕ್ಕಿಂತ ಕಡಿಮೆ! ಎಂದು ಆಮ್ಮಾರ ಮಾಜಿ ಸಹೋದ್ಯೋಗಿಗಳಿಗೆ ಹೇಳಿದಾಗ ಅವರಿಗೆ ನಂಬಿಕೆಯಾಗಲೇ ಇಲ್ಲ!

ಬಹಳ ವರ್ಷಗಳ ಉಳಿತಾಯ ಯೋಜನೆ ಈಗಿನ ವರ್ಷಗಳಲ್ಲಿ ಫಲ ಕೊಡಲಾರಂಭಿಸಿತು. ಇದರಿಂದಾಗಿ ಕಳೆದ ಅರ್ಧ ಶತಮಾನದ ನನ್ನ ಛಾಯಾಗ್ರಹಣದ ನೆಗೆಟಿವ್‌ಗಳನ್ನೆಲ್ಲ ಮುದ್ರಿಸಿಕೊಳ್ಳಲು ಉತ್ಸಾಹ ಮೂಡಿತು. ಪ್ರತಿದಿನವೂ ಹತ್ತು ಫಿಲ್ಮರೋಲುಗಳನ್ನು ಕೊಟ್ಟು, ೪೫೦-೫೦೦ ಛಾಯಾಚಿತ್ರಗಳಿಗೆ ಸುಮಾರು ಎರಡು ಸಹಸ್ರ ರೂಪಾಯಿಗಳನ್ನು ವ್ಯಯಿಸುವದು ಸಾಮಾನ್ಯವೇ? 'ಫೋಟೊ ಫ್ಲ್ಯಾಶ್'ದ ಸುನೀತಾಳು ಇಷ್ಟೊಂದು ಛಾಯಾಚಿತ್ರಗಳನ್ನು ಮುದ್ರಿಸಿ, ಶೇಖರಿಸಿ ಏನು ಮಾಡುತ್ತೀರಿ? ಎಂದು ಪ್ರಶ್ನಿಸಿದಳು. ''ನೋಡಮ್ಮ! ನನಗೆ ಸಿಗರೇಟು ಸೇದುವದು, ಸೆರೆ ಕುಡಿಯುವದು, ವೀಳ್ಯ ಜಗಿಯುವದು, ಚಹ-ಕಾಫಿ ಸೇವಿಸುವದು. ಉತ್ತಮ ಫ್ಯಾಶನೆಬಲ್ ಬಟ್ಟೆ ಧರಿಸುವದು, ಕಾರಿನಲ್ಲಿ ಓಡಾಡುವದು ಮುಂತಾದ ಯಾವ ಹವ್ಯಾಸವೂ ಇಲ್ಲ! ಫೋಟೊ ಕ್ಲಿಕ್ಕಿಸುವದು ಮಾತ್ರ ಒಂದೇ ಒಂದು ಚಟವಿದೆ! ಇದಕ್ಕಾಗಿ ಮಾತ್ರ ಧಾರಾಳವಾಗಿ ಖರ್ಚು ಮಾಡುತ್ತೇನೆ!'' ಎಂದಾಗ ನಕ್ಕಳು. ಏಕೆಂದರೆ ನಾನು ಹೆಸರಿಸಿದ ಯಾವತ್ತೂ ಚಟವುಳ್ಳವರು ಅನೇಕರಿರುತ್ತಾರೆ. ಆದರೆ ಅವಕ್ಕೆ ತಗಲುವ ವೆಚ್ಚದ ಲೆಕ್ಕ ಯಾರು ಇಡುತ್ತಾರೆ?

ನನ್ನ ಈ ಹೊಸ ಸಾಹಸದಿಂದ ಮನೆ ತುಂಬ ಫೋಟೊಗಳು ರಾಶಿರಾಶಿಯಾಗಿ ಸಂಚಯವಾಗಿವೆ. ನನ್ನ ಪ್ರೀತಿಯ ಹಾಬಿಗಾಗಿ ಜೀವಮಾನದಲ್ಲಿ ಇಷ್ಟೊಂದು ಹಣವನ್ನು ವ್ಯಯಿಸುವದು ಎಂದಾದರೂ ಸಾಧ್ಯವಾದೀತು, ಎಂದು ಎಂದೆಂದೂ ಅನಿಸಿರಲಿಲ್ಲ. ಈ ಸಾಧನೆಗಾಗಿ ನನಗೆ ಅತೀವ ಅಭಿಮಾನ, ಆನಂದಗಳು ಉಂಟಾಗಿವೆ. ಇವನ್ನೆಲ್ಲ ಲಾಭದಾಯಕವಾಗಿ ಬಳಸಿಕೊಳ್ಳಲಾಗುತ್ತದೆ ಎಂದು ಆತ್ಮವಿಶ್ವಾಸದಿಂದ ಹೇಳಲಾರೆ! ಆದರೆ ಅನೇಕಾನೇಕ ರೀತಿಯಲ್ಲಿ ಅದನ್ನು ಬಳಸಿಕೊಳ್ಳುವ ಸಾಧ್ಯತೆಗಳು ಮಾತ್ರ ಖಂಡಿತವಾಗಿಯೂ ಇವೆ.

ಇಂದು ನನ್ನ ೬೬ನೆಯ ಹುಟ್ಟುಹಬ್ಬ. ಇನ್ನೂ ಜೀವನದಲ್ಲಿ, ಎಲ್ಲ ರೀತಿಯ ಕಳಕಳಿ, ಕುತೂಹಲಗಳನ್ನು ಉಳಿಸಿಕೊಂಡು ಬಂದಿದ್ದೇನೆ. ಗಂಟೆಗಟ್ಟಲೆ ಊರೆಲ್ಲ ಸುತ್ತಿ ಛಾಯಾಗ್ರಹಣ ಮಾಡುತ್ತೇನೆ, ಎಂದರೆ ಹಲವರಿಗೆ ನಂಬಲು ಸಾಧ್ಯವಾಗುವದೇ

ಇಲ್ಲ. ಯಾವುದೇ ಕ್ರಿಯಾಸಾಧನೆಗೆ ಆರೋಗ್ಯದಿಂದ ಇರುವದು ಅತಿ ಮುಖ್ಯ. ಅಂತೆಯೇ ಆರೋಗ್ಯವನ್ನು ಕಾಪಾಡಿಕೊಳ್ಳಲಿಕ್ಕೆ ಆದ್ಯತೆ ಕೊಡುತ್ತಿದ್ದೇನೆ. ಅನೇಕ ಕಿರಿವಯಸ್ಸಿನ ಪರಿಚಿತರು ಇಲ್ಲವಾಗಿದ್ದಾರೆ. ನನ್ನ ಸೋದರರ ದೇಹ ಸ್ಥಿತಿಯೂ ಗಾಬರಿ ಹುಟ್ಟಿಸುವಂತಹದು. ಚಿಕ್ಕ ಊರಿನಲ್ಲಿಯೂ ತೀರ ಸಮೀಪವಿರುವ ಸ್ಥಳಗಳಿಗೂ ಸ್ಕೂಟರ, ಕಾರು ಬಳಸಿದರೆ ಶರೀರಕ್ಕೆ ವ್ಯಾಯಾಮವೆಲ್ಲಿಂದ ಸಿಗಬೇಕು? ಮೀನು-ಮಾಂಸಗಳಿಲ್ಲದ ಊಟ ರುಚಿಸುವದಿಲ್ಲ. ಹೀಗಾಗಿ ಕೊಬ್ಬು ಕರಗಲು ಅವಕಾಶವಿಲ್ಲ.

ಇಂದಿನ ಯುವ ಪೀಳಿಗೆಗೆ ಏನೇನೋ ಆಸೆಗಳು, ಕನಸುಗಳು. ಕಲಿಯುತ್ತಿರುವಾಗಲೇ ಅವರಿಗೆ ದೊಡ್ಡ ನೌಕರಿ, ಬೃಹತ್ ಬಂಗ್ಲೆ, ಹೊಚ್ಚ ಹೊಸ ಕಾರಿನ ಕನಸುಗಳು. ಇವು ಫಲಿಸದಿದ್ದಾಗ ಜೀವನದಲ್ಲಿ ನಿರಾಸೆ, ಜುಗುಪ್ಸೆಗಳು. ಧೂಮ್ರಪಾನ, ಮದ್ಯಪಾನ, ಮಾದಕ ವಸ್ತುಗಳಿಗೆ ಮೊರೆಹೋಗುತ್ತಾರೆ. ಅಮೇರಿಕೆಯಲ್ಲಿ ಹಣದ ಹೊಳೆ ಹರಿಯುತ್ತದೆ, ಸುಖದ ಹೆಬ್ಬಾಗಿಲು ತೆರೆದಿರುತ್ತದೆ ಎಂಬ ಭ್ರಮೆಯಿಂದ ಆ ದೇಶಕ್ಕೆ ಧಾವಿಸುತ್ತಾರೆ. ನಂತರವೇ ಅಲ್ಲಿಯ ವಿವಿಧ ಸಮಸ್ಯೆಗಳ ಪರಿಚಯವಾಗುವದು. ಹಾಗೆಂದು ಇಲ್ಲಿ ತಿರುಗಿ ಬರುವ ಧೈರ್ಯ-ಸಾಹಸಗಳೂ ಸಾಲದೇ ಅಲ್ಲೇ ಮುಂದರಿಯುತ್ತಾರೆ. ಅವರು ಅಮೇರಿಕೆಯಲ್ಲಿರುವದೇ ಮಹಾ ಸಾಧನೆ! ಎಂದು ಅವರ ಜನರೇ ನಂಬದಿದ್ದಾಗ ಉಳಿದವರು ಹೇಗೆ ನಂಬಿಯಾರು? ಅಮೇರಿಕೆಯಲ್ಲಿ ಇತರರೆಲ್ಲರೂ, ದ್ವಿತೀಯ ದರ್ಜೆಯ ನಾಗರಿಕರು ಎಂಬುದು ಕಠೋರ ಸತ್ಯ. ಆದರೂ ಅಮೇರಿಕೆಯ ಆಕರ್ಷಣೆ ಕಡಿಮೆಯಾಗಿಲ್ಲ!

◆ ◆ ◆

೩೮. ಕ್ಯಾಮರಾಗಳ ಕತೆ

ಈ ಪತ್ರದಲ್ಲಿ ನನ್ನ ಛಾಯಾಗ್ರಹಣದ ಆಸಕ್ತಿಯ ಕುರಿತು ಬರೆಯಬೇಕೆಂದಿದ್ದೇನೆ. ನನ್ನ ಬಾಲ್ಯದ ಗೆಳೆಯ, ನಕುಲನ ಅಣ್ಣನ ಹತ್ತಿರ ಒಂದು Agfa folding camera ಇತ್ತು. ಅವನಿಗೆ ಹುಡುಗಿಯರ ಫೋಟೋ ತೆಗೆಯುವ ಹುಚ್ಚು ಇತ್ತು. ಕ್ಯಾಮರಾ ಸದಾಕಾಲ ಹೊತ್ತುಕೊಂಡೇ ಅಲೆಯುತ್ತಿದ್ದ. ಆದರೆ ಅವನು ತೆಗೆದ ಒಂದಾದರೂ ಫೋಟೋ ನೋಡುವ ಅವಕಾಶ ಬರಲೇ ಇಲ್ಲ! ನನಗೆ ಕ್ಯಾಮರಾ ಬಳಸುವ ಸಾಧ್ಯತೆ ಇಲ್ಲದಿದ್ದರೂ ಅದನ್ನು ನೋಡುವ ಲವಲವಿಕೆ ತುಂಬಾ ಇತ್ತು. ಆದರೆ ಅದರ ಮಾಲಕನು ಸಿಟ್ಟಿನ ಮನುಷ್ಯ. ಹೀಗಾಗಿ ಆ ಸಾಹಸಕ್ಕೆ ಇಳಿಯಲೇ ಇಲ್ಲ. ಇಂಗ್ಲಿಷ್ ಶಾಲೆಯಲ್ಲಿ ಎನ್.ಸಿ.ಸಿ. ಸೇರಿದಾಗ, ನಾವೆಲ್ಲ ಸೇರಿ ಹದಿನೇಳು ರೂಪಾಯಿಯ Agfa click ಕ್ಯಾಮರಾವನ್ನು ಕೊಂಡು ಶಾಲೆಗೆ ಉಡುಗೊರೆಯಾಗಿ ಕೊಟ್ಟಿದ್ದೆವು. ಆದರೆ ಅದಕ್ಕೆ ಫಿಲ್ಮ್ ಹಾಕಿ ಬಳಸುವವರು ಯಾರು? ಅಂತೆಯೇ ನಾವು ಕೆಲಗೆಳೆಯರು ಸೇರಿ ವರ್ಗಣಿ ಹಾಕಿ ಒಂದು ಫಿಲ್ಮ್‌ಕೊಂಡು ನಮ್ಮ ನಮ್ಮ ಫೋಟೋ ತೆಗೆಸಿಕೊಂಡಿದ್ದೆವು. ಮುಂದೆ ೧೯೫೩ರಲ್ಲಿ ಕಾಲುನಡಿಗೆಯಲ್ಲಿ ಗೇರಸೊಪ್ಪಾ (ಜೋಗ್) ಧಬಧಬೆ ನೋಡಲು ಹೋದಾಗ ಇದೇ ಕ್ಯಾಮರಾ ಒಯ್ದಿದ್ದೆವು. ನಮ್ಮ ಡ್ರಾಯಿಂಗ್ ಮಾಸ್ತರರಾಗಿದ್ದ ಟಿ. ಎನ್. ಪ್ರಭುಗಳು ಬಲುದೊಡ್ಡ ಕ್ಯಾಮರಾದಿಂದ, ಕಪ್ಪು ಹೊದಿಕೆ ಹಾಕಿ ಛಾಯಾಗ್ರಹಣ ಮಾಡುತ್ತಿದ್ದರು. ಮ್ಯಾಟ್ರಿಕ್ ವಿದ್ಯಾರ್ಥಿಗಳ ಬೀಳ್ಕೊಡುವಿಕೆಯ ಸಮಾರಂಭದ ಗುಂಪು ಛಾಯಾಚಿತ್ರದಲ್ಲಿ ಪ್ರಭು ಮಾಸ್ತರರೂ ಸೇರ್ಪಡೆ ಆಗಲೇಬೇಕಿತ್ತು. ಹೀಗಾಗಿ ಕ್ಲಿಕ್ಕಿಸುವ ಸುಸಂಧಿ ನನ್ನ ಪಾಲಿಗೆ ಬರುತ್ತಿತ್ತು. ಅದೆಷ್ಟೊ ಸಲ ಪ್ರಭು ಮಾಸ್ತರರ ಮನೆಗೆ ಹೋಗಿ ಗಾಜಿನ ಪ್ಲೇಟು ತೊಳೆಯುವದು, ಅದನ್ನು ಕಾಗದದ ಮೇಲೆ ಮುದ್ರಿಸುವದು ಕಂಡು ರೋಮಾಂಚನಗೊಂಡದ್ದೂ ಇದೆ. ಇಂತಹ ಕಲೆಯೊಂದನ್ನು ನನ್ನದನ್ನಾಗಿ ಮಾಡಿಕೊಂಡರೆ, ಅದೆಷ್ಟು ರೀತಿಯಿಂದ ಬಳಸಿಕೊಳ್ಳಬಹುದು, ಎಂದು ಹಗಲುಗನಸು ಕಂಡದ್ದೂ ಇದೆ.

ಆತ್ಮೀಯ ಗೆಳೆಯ ರಾಜಾರಾಮಶಾಸ್ತ್ರಿ ಎಲ್ಲಿಂದಲೋ ಆಟಿಗೆಯಂತಹ ಕ್ಯಾಮರಾ ಪಡೆದಿದ್ದ. ಆದರೆ ಛಾಯಾಗ್ರಹಣದಲ್ಲಿ ಅವನಿಗೆ ಎಳ್ಳಷ್ಟೂ ಆಸಕ್ತಿ ಇರಲಿಲ್ಲ. ಹೀಗಾಗಿ ಆ ಕ್ಯಾಮರಾವನ್ನು ನಾನೇ ಹೆಚ್ಚಾಗಿ ಬಳಸುತ್ತಿದ್ದೆ. ಆ ದಿನಗಳಲ್ಲಿ ಕಾಕಿ, ಕಾಕಾ, ತುಳಸು, ಮಂಗಲಾ ಮೊದಲಾದವರ ಪ್ರಪ್ರಥಮ ಫೋಟೋ ತೆಗೆದಿದ್ದೆ. ಇಂದಿಗೂ ಅವು ಅಪೂರ್ವ ಕೌಟುಂಬಿಕ ಚಿತ್ರ ಮಾದರಿಗಳಾಗಿ ಉಳಿದಿವೆ. ಅಂದು ಹೊನ್ನಾವರದಲ್ಲಿ ಫೋಟೊಗ್ರಾಫಿಯ ಯಾವ ಸೌಕರ್ಯಗಳೂ ಇರಲಿಲ್ಲ. ಫಿಲ್ಮ್‌ನ್ನು ನಕುಲ, ಮುಂಬೈಗೆ ಹೊರಟಾಗ ಆತನೊಡನೆ ಕಳಿಸಿ ಪ್ರಿಂಟ್‌ಗಳನ್ನು ಪಡೆಯುವದು ಅನಿವಾರ್ಯವಾಗಿತ್ತು.

ಕುಮಟಾದ ಕ್ಯಾನರಾ ಕಾಲೇಜು ಸೇರಿಕೊಂಡಾಗ, ಅಲ್ಲಿ ಫಿಜಿಕ್ಸ ಅಧ್ಯಾಪಕರಾಗಿದ್ದ ಕೇರಳದ ಅಗಸ್ಟಿನ್, ಹಾಸ್ಟೆಲಿನಲ್ಲಿ ನಮ್ಮೊಡನೆ ಇರುತ್ತಿದ್ದರು. ಅವರಿಗೆ 'ಕತ್ತಲುಕೋಣೆ'

ಛಾಯಾಗ್ರಹಣದ ಅಲ್ಪಸ್ವಲ್ಪ ಪರಿಚಯ ಇತ್ತು. ಆದರೆ ಅಲ್ಲಿ ಈ 'ಡಾರ್ಕ್‌ರೂಮ್' ಸೌಲಭ್ಯ ಎಲ್ಲಿಂದ ಬರಬೇಕು? ಎಲ್ಲ ವಿದ್ಯಾರ್ಥಿಗಳೂ ಮಲಗಿದ ನಂತರ ಬಾಗಿಲು, ಕಿಟಕಿಗಳನ್ನು ಭದ್ರವಾಗಿ ಮುಚ್ಚಿ ನಾವು ಛಾಯಾಗ್ರಹಣ ಮಾಡಬೇಕಾಗಿತ್ತು. ಇದರ ಸಿದ್ಧತೆಯೇ ಬಲು ಕಷ್ಟಕರವಾದ್ದರಿಂದ ಅದನ್ನು ಕೈ ಬಿಡಬೇಕಾಯಿತು. ನಂತರದ ದಿನಗಳಲ್ಲಿ ಮದ್ರಾಸಿನ ವಾಮನ್ ಬ್ರದರ್ಸ್‌ರಿಂದ ಅಂಚೆಯ ಮೂಲಕ ಛಾಯಾಗ್ರಹಣದ ಸೇವೆ ಪಡೆಯಲಾರಂಭಿಸಿದೆ.

ಮುಂದೆ ಕರ್ನಾಟಕ ಕಾಲೇಜು ಸೇರಿಕೊಂಡೆ. ನನ್ನ ಸಹಪಾಠಿ ಈಶ್ವರ ಮಳಗಿಯ ಜೊತೆಯಲ್ಲಿ ವಿಜಯ, ರಾಜಾ, ನೆರ್ಲೆಕರ ಸ್ಟುಡಿಯೋಗಳಿಗೆ ಆಗಾಗ ಹೋಗಿ ಬರುತ್ತಿದ್ದೆ. ಅವರೆಲ್ಲ ವೃತ್ತಿ ಛಾಯಾಗ್ರಾಹಕರು, ಹವ್ಯಾಸಿಗಳಾಗಿ ಹೋಗುತ್ತಿದ್ದ ವಿದ್ಯಾರ್ಥಿಗಳಿಗೆ ಹೆಚ್ಚಿನ ಪ್ರೋತ್ಸಾಹ ಕೊಡುತ್ತಿರಲಿಲ್ಲ. ಕಾಲೇಜಿನ ನಮ್ಮ ಪ್ರಾಣಿಶಾಸ್ತ್ರ ವಿಭಾಗದಲ್ಲಿ ಪ್ರೊ. ಗಿಡಿಯನ್ ಎನ್ನುವವರು, ಛಾಯಾಗ್ರಹಣದ ಸಕಲ ಅನುಕೂಲತೆಗಳನ್ನು ಮಾಡಿ ಇಟ್ಟಿದ್ದರು. ಆದರೆ ಅವರಿಗೆ ವರ್ಗವಾಗಿ, ಬಳಿಕ ಬಂದವರಿಗೆ ಅದರಲ್ಲಿ ಎಳ್ಳಷ್ಟೂ ಆಸಕ್ತಿ ಇರದ್ದರಿಂದ ಕತ್ತಲೆಕೋಣೆಯಲ್ಲಿ, ಸತ್ತ ಪ್ರಾಣಿಗಳನ್ನು ಸಂಗ್ರಹಿಸಿ ಇಟ್ಟಿದ್ದರು! ನಾನು, ಮಳಗಿ ಸೇರಿ ಅದನ್ನೆಲ್ಲ ಸಫಾಯಿ ಮಾಡಿ ಬಳಸಲಾರಂಭಿಸಿದೆವು. ಅಲ್ಲಿ ದಾಸ್ತಾನು ಮಾಡಿದ ರಾಸಾಯನಿಕಗಳು ಹಾಗೂ ಫೋಟೊಗ್ರಾಫಿ ಕಾಗದಗಳು ಪುಕ್ಕಟೆಯಾಗಿ ದೊರೆತದ್ದರಿಂದ ಛಾಯಾಗ್ರಹಣ ಪ್ರಾರಂಭಿಸಿಬಿಟ್ಟೆವು! ನಮ್ಮ ವರ್ಗದವರೆಲ್ಲ ರಾಮೇಶ್ವರ ಕುಸಾಡಿಯಾ ದ್ವೀಪಕ್ಕೆ ಪ್ರವಾಸಕ್ಕೆ ಹೋದಾಗ ತೆಗೆದ ಎಲ್ಲ ಚಿತ್ರಗಳನ್ನು ಮುದ್ರಿಸುವ ಸಾಹಸವನ್ನು ಮಾಡಿದೆವು. ಸಹಪಾಠಿಗಳೊಂದಿಗೆ ಖರ್ಚನ್ನು ಹಂಚಿಕೊಂಡೆವು. ಈ ಎಲ್ಲ ಚಿತ್ರಗಳೂ ಇಂದು ನನ್ನ ಖಜಾನೆಯಲ್ಲಿವೆ. ಇದರಂತೆ ಕುಮಟಾದ ಸಾಹಿತ್ಯ ಸಮ್ಮೇಳನ (೧೯೫೩)ದಲ್ಲಿ ಸೆರೆಹಿಡಿದ ಸಾಹಿತಿಗಳ ಭಾವಚಿತ್ರಗಳೂ ಅಪೂರ್ವವಾಗಿವೆ.

ಎಂ. ಎಸ್. ಸಿ. ಮುಗಿಸಿ ಶಿಕ್ಷಕನಾಗಿ, ಕರ್ನಾಟಕ ಕಾಲೇಜಿಗೆ ಸೇರಿಕೊಂಡೆ. ಸಸ್ಯವಿಭಾಗದ ಆರ್. ಎಂ. ಪಾಟೀಲರ ಪರಿಚಯವಾಯಿತು. ಅವರೊಂದು 'ತಟ್ಟೆ' ಕೆಮೆರಾ ಇಟ್ಟುಕೊಂಡಿದ್ದರು. ತಾನು ಫೋಟೋಗ್ರಾಫಿ ಪ್ರವೀಣನೆಂದು ಅಭಿಮಾನ ಪಡುತ್ತಿದ್ದರು. ಕೆಲವೊಮ್ಮೆ ಈ ಕ್ಯಾಮರಾದಿಂದಲೂ ನಾನು ಫೋಟೊ ತೆಗೆದದ್ದು ಉಂಟು.

ಮುಂದೆ, ನ್ಯೂಯಾರ್ಕ್ ವಿಶ್ವವಿದ್ಯಾಲಯದ ವಿದ್ಯಾರ್ಥಿ ವೇತನ ಲಭಿಸಿ, ಸಾಗರಗಾಮಿ ಮಹಾನೌಕೆಯಲ್ಲಿ ಪ್ರವಾಸ ಮಾಡುವ ಸುಯೋಗ ಲಭಿಸಿದರೂ, ನನಗೆ ಯಾವ ಕ್ಯಾಮರಾದ ಸೌಕರ್ಯವೂ ಇರದ್ದರಿಂದ ಈ ಅಪೂರ್ವ ಅವಕಾಶದ ಘಟನೆಗಳನ್ನೆಲ್ಲ ಮನಸ್ಸಿನಲ್ಲಿಯೇ ಮುದ್ರಿಸಿ ಇಟ್ಟುಕೊಳ್ಳಬೇಕಾಯಿತು.

ಅಮೇರಿಕೆಯಲ್ಲಿ ನನ್ನ ಸಹನಿವಾಸಿ, ಆನಂದ ಮೋಹನ ಸಿನ್ಹಾನ ಬಳಿ ಒಂದು 'ಅರ್‌ಗಸ್' ಕ್ಯಾಮೆರಾ ಇತ್ತು. ಆತ ಹದಿಮೂರು ಡಾಲರ್ ಕೊಟ್ಟು ಅದನ್ನು ಕೊಂಡಿದ್ದ. ಹೆಚ್ಚಿನ ಸಮಯ ಅದು ನನ್ನ ಹತ್ತಿರವೇ ಇರಲು ಬಯಸುತ್ತಿತ್ತು! ನಂತರ ಇನ್ನೊಬ್ಬ

ಪೂರ್ವ ಪಾಕಿಸ್ತಾನ (ಈಗಿನ ಬಂಗ್ಲಾ ದೇಶ) ಸಹವಾಸಿ, ಅಬ್ದುಲ್ ಸಲಾಮನು, ಜರ್ಮನ್ ಕ್ಯಾಮರಾ 'ಲೈಕಾ'ವನ್ನು ಮೂವತ್ತು ಡಾಲರ್ ಕೊಟ್ಟು ಕೊಂಡಿದ್ದ. ಅವನು ಸ್ವದೇಶಕ್ಕೆ ಮರಳುವ ವರೆಗೂ ಅದು ನನ್ನ ಬಳಿಯಿತ್ತು. ಆತನ ಬಳಿಕ ಸಹವಾಸಿಯಾದ ಅರುಣ ಆಚಾರ್ಯನು ತನ್ನೊಬ್ಬ ಜಪಾನಿ ಸ್ನೇಹಿತನಿಂದ 'ಪೆಂಟೆಕ್ಸ್' ಕ್ಯಾಮರಾ ತರಿಸಿದ್ದ. ಈ ಕ್ಯಾಮರಾ ನನಗೆ ಬಹಳ ಮೆಚ್ಚಿಗೆಯಾಗಿ ಧಾರಾಳವಾಗಿ ಬಳಸುತ್ತಿದ್ದೆ.

ಪಂಜಾಬಿ ಸ್ನೇಹಿತ ಗ್ರೇವಾಲನು ಜಪಾನಿನಿಂದ 'ನಿಕೊ'ನ್ ಕ್ಯಾಮರಾವನ್ನು ಅಂಚೆಯಿಂದ ತರಿಸಿದ್ದ. ಅದು 'ಝೂಮ್' ಕ್ಯಾಮರಾ ಇದ್ದುದರಿಂದ ಬಳಸುವದು ಕಷ್ಟಕರವಾಗಿತ್ತು. ಹೀಗಾಗಿ ಗ್ರೇವಾಲನು ತನಗೆ ಫೋಟೊ ಬೇಕಾದಾಗೆಲ್ಲ ನನ್ನನ್ನು ಆಮಂತ್ರಿಸುತ್ತಿದ್ದ! ಗುಜರಾಥಿನ ಪರಿಚಿತ ಮಹಿಳೆ, ಸರೋಜ ಸುತಾರಿಯಾ, ಬಳಿ ತೀರ ಸರಳ ಬಾಕ್ಸ ಕೆಮೆರಾ ಇತ್ತು. ಸಾಯರಾಕ್ಯೂಸಿನ ತನ್ನ ಜೀವನದ ಕುರಿತಾದ ಛಾಯಾಚಿತ್ರಗಳನ್ನು ತನ್ನವರಿಗೆ ಕಳಿಸಿಕೊಡಬೇಕೆಂದು ಅವನ್ನು ಕ್ಲಿಕ್ಕಿಸುವ ಹೊಣೆಯನ್ನು ನನಗೇ ಒಪ್ಪಿಸಿದ್ದಳು!

ನನ್ನ ಸಹಪಾಠಿ ಮದನ್ ಪಂಡೆಲಾ, ಮೂವತ್ತು ಡಾಲರ್ ಖರ್ಚುಮಾಡಿ ಸೆಕೆಂಡ್ ಹ್ಯಾಂಡ್ 'ಎಕ್ಸಾ' ಕೆಮೆರಾ ಕೊಂಡಿದ್ದ. ಅದಕ್ಕೆ ಹಲವಾರು ಜೋಡಣೆಯ ಸಲಕರಣೆಗಳು ಇದ್ದವು. ನಾನು ಅಮೇರಿಕೆಯ ಪ್ರವಾಸ ಕೈಕೊಂಡಾಗ ತಾನು ಬಳಸದ ಅದನ್ನು ಒಯ್ಯುವಂತೆ ಅವನು ಒತ್ತಾಯಿಸಿದ್ದ. ಹೀಗೆ, ಎಷ್ಟೆಲ್ಲ ಛಾಯಾಗ್ರಹಣ ಮಾಡಿದರೂ ನನ್ನದಾದ ಒಂದೂ ಕ್ಯಾಮರಾ ಇರಲಿಲ್ಲ ಎಂದರೆ ನಂಬುವದು ಕಷ್ಟ ಅಲ್ಲವೇ? ನನ್ನ ಸಹಪಾಠಿ ಬಿಲ್ ಸಿಸ್ಲಾ, ಹೊಚ್ಚ ಹೊಸ ಎಕ್ಸಾಕ್ಟಾ ಕ್ಯಾಮರಾವನ್ನು ತರಿಸಿ, ತನ್ನ ಹಳೆಯ 'ಟೆರೊನ್'ವನ್ನು ನನಗೆ ಹತ್ತು ಡಾಲರಿಗೆ ಕೊಟ್ಟುಬಿಟ್ಟ. ಇದೇ ನನ್ನ ಖರೀದಿಯ ಮೊಟ್ಟಮೊದಲ ಕ್ಯಾಮರಾ!

ಅದನ್ನು ಸಾಕಷ್ಟು ಬಳಸಿದೆ. ಯುರೋಪ ಯಾತ್ರೆ ಮುಗಿಸಿ ಭಾರತಕ್ಕೆ ಮರಳುವಾಗ, ಬರ್ಲಿನ್‌ದಲ್ಲಿ ಒಳ್ಳೆಯ ಜರ್ಮನ್ ಕ್ಯಾಮರಾ ಕೊಳ್ಳುವ ವಿಚಾರ ಇಟ್ಟುಕೊಂಡಿದ್ದೆ. ಹೀಗಾಗಿ ಈ 'ಟೆರೊನ್'ವನ್ನು ಲಂಡನ್ನಿನಲ್ಲಿ ಸ್ನೇಹಿತ ನಕುಲನಿಗೆ ಕೊಟ್ಟುಬಿಟ್ಟೆ. ಅನೇಕ ವರ್ಷಗಳ ನಂತರ ನಕುಲನ ಮುಂಬೈಯಲ್ಲಿರುತ್ತಿದ್ದ ಭಾವ, ಆ ಕ್ಯಾಮರಾ ನನಗೆ ತೋರಿಸಿ 'ನಕುಲನು ನಮಗಾಗಿ ತಂದು ಕೊಟ್ಟಿದ್ದಾನೆ. ಒಳ್ಳೆಯ ಕ್ಯಾಮರಾ' ಎಂದು ತಾರೀಫು ಮಾಡಿದಾಗ ಒಳಗೊಳಗೇ ನಕ್ಕಿದ್ದೆ. ಆ ಕ್ಯಾಮರಾದ ವಿವರಗಳಿದ್ದ ಕೈಪಿಡಿ ಇಂದಿಗೂ ನನ್ನ ಆಸ್ತಿಯಾಗಿಯೇ ಉಳಿದಿದೆ!

ಬರ್ಲಿನ್‌ದಲ್ಲಿ, ರಫ್ತು - ಆಮದು ವ್ಯಾಪಾರದಲ್ಲಿದ್ದ ಭಾರತೀಯ ಸಂಜಾತ, ಬಿ. ಎಲ್. ಷಾ ರಿಂದ ಕೇವಲ ನಾನೂರು ಮಾರ್ಕು (ಆಗಿನ ಐದುನೂರು ರೂಪಾಯಿಗಳು!)ಗಳಿಗೆ ಕೊಂಡುಕೊಂಡ 'ಎಕ್ಸಾಕ್ಟಾ'ದ ಒಡೆತನ ನನ್ನದಾಯಿತು. ನಂತರದ ವರ್ಷಗಳ ಹೆಚ್ಚಿನ ಛಾಯಾಗ್ರಹಣವನ್ನೆಲ್ಲ ಇದೇ ಕ್ಯಾಮರಾದಿಂದ ಮಾಡಿದ್ದೇನೆ. ಎಲ್ಲೋರಾದಲ್ಲಿ ಅದು ಕೈಲಾಸ ದೇವಾಲಯದ ಕಲ್ಲಿನ ನೆತ್ತಿಯ ಮೇಲೆ ಜಾರಿ ಬಿದ್ದರೂ ಏನೂ ಪೆಟ್ಟಾಗದೇ ತನ್ನ ಗಟ್ಟಿತನವನ್ನು ಸಾರಿತು. ಆ ಬಳಿಕ ವೃತ್ತಿ

ಛಾಯಾಗ್ರಹಣಕ್ಕಾಗಿ ನಕುಲನಿಂದ ೧೨೦" ಅಳತೆಯ ಫಿಲ್ಮ ಬಳಸುವ 'ಮಿನೊಲ್ಟಾ' ಕ್ಯಾಮರಾ ತರಿಸಿದೆ. ಪುಷ್ಪಾಳು ತನ್ನ ಮೈದುನನಿಂದ ಇನ್ನೊಂದು 'ಎಕ್ಸಾಕ್ಟಾ' ತರಿಸಿಕೊಟ್ಟಳು. ಅದಕ್ಕೆ ಒಂದು ಸಹಸ್ರ ರೂಪಾಯಿ ಕೊಟ್ಟೆ. ಆ ಬಳಿಕ ನಕುಲನು ೪೦೦ ಮಿ.ಮಿ. ಟೆಲಿಲೆನ್ಸ ಕಳಿಸಿಕೊಟ್ಟ.

ನಂತರವೂ ಬಳಸಿದ 'ಕೊನಿಕಾ', 'ವ್ಹಾಟ್ ಲ್ಯಾಂಡರ್' ಹಳೆಯ 'ಪೆಂಟೆಕ್ಸ' ಹಾಗೂ 'ಎಕ್ಸಾ'ಗಳನ್ನು ಕ್ರಮೇಣ ಕೊಂಡುಕೊಂಡೆ. ಇತ್ತೀಚೆಗೆ ಇಲ್ಲಿಯೇ ವಿದೇಶೀ ಕ್ಯಾಮರಾಗಳನ್ನು ಮಾರುತ್ತಿದ್ದವರಿಂದ, 'ಪೆಂಟೆಕ್ಸ' ಹಾಗೂ ಅದಕ್ಕೆ ಬೇಕಾಗುವ ವಿವಿಧ ಸಲಕರಣೆಗಳ ಸಂಗ್ರಹವನ್ನೇ ಹದಿಮೂರು ಸಾವಿರ ರೂಪಾಯಿಗಳಿಗೆ ಕೊಂಡೆ. ನೀನು ಅಮೇರಿಕೆಯಿಂದ ಒಲಿಂಪಸ್ ಹಾಗೂ ಸ್ಲಾಯ್ಡ್‌ಗಳನ್ನು ಪ್ರತಿಮಾಡುವ ಸಲಕರಣೆಗಳನ್ನು ತಂದು ಕೊಟ್ಟೆ.

ಇವುಗಳ ಪ್ರಯೋಗ ಗೊತ್ತಿಲ್ಲದವರಿಗೆ ಛಾಯಾಗ್ರಹಣಕ್ಕೆ ಇಷ್ಟೊಂದು ಸಲಕರಣೆಗಳು ಬೇಕೇ? ಎಂಬ ಸಂಶಯ ಬಾರದಿರದು. ಪ್ರತಿಯೊಂದು ಸಲಕರಣೆಗೆ ತನ್ನದೇ ಆದ ಕಾರ್ಯವಿಧಾನ ಹಾಗೂ ಪರಿಮಿತಿಗಳು ಇದ್ದೇ ಇರುತ್ತವೆ. ಇಂದಿನ ದಿನಗಳಲ್ಲಿ ನಾನು ಹೆಚ್ಚಾಗಿ ಬಳಸುವದು 'ಪೆಂಟೆಕ್ಸ' ಹಾಗೂ 'ಒಲಿಂಪಸ್'ಗಳನ್ನು. ನಾನು ಮಧ್ಯ ಪ್ರದೇಶಕ್ಕೆ ಹೋದಾಗ ಒಂದಾದರೂ ಟೆಲಿಲೆನ್ಸ ಇದ್ದಿದ್ದರೆ...! ಎಂದು ಆಗಾಗ ಅನಿಸುತ್ತಲೇ ಇರುತ್ತದೆ. ಆದರೆ ಇದ್ದ ಅಲ್ಪ ಸೌಕರ್ಯಗಳಿಂದಲೇ ಅಪೂರ್ವವೆನಿಸುವ ಛಾಯಾಗ್ರಹಣ ಮಾಡಿದ್ದೇನೆ! ಎಂದು ಅಭಿಮಾನ ಪಡುತ್ತೇನೆ. ಯಾರಾದರೂ ಯುವ ಪೀಳಿಗೆಯವರು ನನ್ನಂತೆ ಛಾಯಾಗ್ರಹಣದಲ್ಲಿ ಆಸಕ್ತಿ ಇದ್ದವರು, ನನ್ನ ಬಳಿ ಬಂದಿದ್ದರೆ ಅವರಿಗೆ ಎಷ್ಟೊಂದು ತರಬೇತಿ ಕೊಡುತ್ತಿದ್ದೆ. ಆದರೆ ಇಂದಿನವರಿಗೆ ಶ್ರಮಪಡದೇ ಸಕಲ ವಿದ್ಯೆಗಳಲ್ಲಿ ಪಾರಂಗತ! ಎಂಬ ಸರ್ಟಿಫಿಕೇಟು ಪಡೆಯುವದು ಮುಖ್ಯವಲ್ಲವೇ?

◆ ◆ ◆

೩೯. ವಿಮುಖನ ಖ್ಯಾತಿ

ನಾನು, ನಾವು ಖ್ಯಾತಿಗಾಗಿ ಪರದಾಡದಿದ್ದರೂ ಅದು ತನ್ನಷ್ಟಕ್ಕೆ ನಮ್ಮತ್ತ ಧಾವಿಸಿ ಬರುವಂತಿದೆ. ಸನ್ ಟಿ. ವಿ.ಯವರ ಕನ್ನಡ ಶಾಖೆ, ಉದಯ ಟಿ.ವಿ.ಯವರು ಪ್ರತಿಭಾವಂತರನ್ನು ಪರಿಚಯಿಸುವ ಕಾರ್ಯಕ್ರಮವನ್ನು ಪ್ರತಿದಿನವೂ ನಡೆಸುತ್ತಾರಂತೆ. ಆ ಕಾರ್ಯಕ್ರಮದ ನಿರ್ವಹಣಾಧಿಕಾರಿ, ಶ್ರೀಮತಿ ಶೈಲಜಾ, ಜ್ಯೋತ್ಸ್ನಾಗೆ ಪೋನಿಸಿ, ನಮ್ಮಿಬ್ಬರಿಗೂ ನಮ್ಮ ಬಾಯೋಡಾಟಾ, ಪುಸ್ತಕಗಳು, ವಿಶೇಷ ಪ್ರಶಸ್ತಿಗಳೊಂದಿಗೆ ತಮ್ಮ ಸ್ಟುಡಿಯೋಗೆ ಬರಲು ತಿಳಿಸಿದ್ದರಂತೆ! ಕಾಮತರು, ಹಾಗೆ ಎಲ್ಲೂ ಹೋಗುವವರಲ್ಲ. ಕಾರ್ಯಕ್ರಮ ಮಾಡಲು ಮನಸ್ಸಿದ್ದರೆ, ಮನೆಗೆ ಬಂದು ಅವರನ್ನು ಮಾತನಾಡಿಸುವದು ವಾಸಿ! ಎಂದು ಜ್ಯೋತ್ಸ್ನಾ ತಿಳಿಸಿದಳು. ಆಕೆ ಸಹೃದಯಿ, ಸಜ್ಜನಿಕೆಯ ಮಹಿಳೆ. ಬೇಕಾದ ಬಾಯೋಡಾಟಾ ಪಡೆದು ನಮ್ಮನ್ನು ಕಾಣಲು ಮನೆಗೇ ಬಂದರು.

ಒಂದು ಗಂಟೆಗೂ ಮಿಕ್ಕಿ ನಮ್ಮೊಡನೆ ಕುಳಿತು, ನಮ್ಮಿಬ್ಬರ ಸಾಧನೆಗಳನ್ನು ಪರಿಚಯಿಸಿಕೊಂಡರು. ಆದರೆ ಅವರು ನಮ್ಮ ಯಾವ ಕೃತಿಯನ್ನೂ ಓದಿರಲಿಲ್ಲ. ಹೀಗಾಗಿ ನಮ್ಮನ್ನು ಅರ್ಥೈಸಿಕೊಳ್ಳದ್ದರಿಂದ ಮರುದಿನವೇ ಆಗಬೇಕಾಗಿದ್ದ ರಿಕಾರ್ಡಿಂಗ್, ಆಳಕ್ಕೆ ಇಳಿಯಲೇ ಇಲ್ಲ. ಆದರೆ ಆ ನಂತರ ಆ ಟಿ.ವಿ. ಪ್ರೊಡ್ಯುಸರ್ ಸ್ವಾಮಿ, ಕ್ಯಾಮರಾಮನ್ ಮೋಹನ್, ಸಹಾಯಕ ಗೋಪಿ, ಮೊದಲಾದವರು ಪುನಃ ಮನೆಗೆ ಬಂದು, ನನ್ನ ಮತ್ತು ನಿನ್ನ ಆಮ್ಮಾರ ಪುಸ್ತಕಗಳು, ನಾನು ಮಾಡಿದ ಕಾವಿ ಚಿತ್ರಗಳು, ಬಿಡಿಸಿದ ರೇಖಾಚಿತ್ರಗಳು, ತೆಗೆದ ಕೆಲ ಛಾಯಾಚಿತ್ರಗಳು, ಆಮ್ಮಾರ ಸೀರೆಗಳ ಮೇಲೆ ಬಿಡಿಸಿದ ನಕ್ಷೆಗಳು, ಕ್ರಾಯಲಿನ್ ಚಿತ್ರಗಳು, ಪ್ರಶಸ್ತಿ ಪತ್ರಗಳು, ಮೊದಲಾದವನ್ನು ಚಿತ್ರೀಕರಿಸುವ ಆಸಕ್ತಿ ತೋರಿಸಿದ್ದರಿಂದ ಅಭಿಮಾನವೆನಿಸಿತು. ಅದರಲ್ಲಿಯ ಎಷ್ಟು ಭಾಗ ಬಳಸುತ್ತಾರೆ ಎಂದು ತಿಳಿಯದು. ಈ ಕಾರ್ಯಕ್ರಮವನ್ನು ಬರುವ ಶನಿವಾರ (೨೨.೭.೨೦೦೦)ಕ್ಕೆ ಮುಂಜಾನೆ ಎಂಟುಗಂಟೆಗೆ ಮೂವತ್ತು ನಿಮಿಷಗಳ ಕಾಲ ಬಿತ್ತರಿಸಲಾಗುತ್ತದಂತೆ. ಈ ಕಾರ್ಯಕ್ರಮ ಅತ್ಯಂತ ಜನಪ್ರಿಯವಾಗಿದೆ! ಎಂದು ಮಾಲಿ ಮಂಗಳಾ ಹೇಳುತ್ತಿರುತ್ತಾರೆ. ಆದ್ದರಿಂದ ಬಹಳಷ್ಟು ಜನ ಇದನ್ನು ವೀಕ್ಷಿಸುವ ಸಾಧ್ಯತೆ ಇದೆ.

* * *

ನಮ್ಮ ಇಂಟರ್ ನೆಟ್, ವಿಶ್ವದ ತುಂಬ ಖ್ಯಾತಿ ಹರಡಿಸಿದಂತೆ, ಉದಯ ಟಿ.ವಿ.ಯ 'ಪರಿಚಯ' ಕಾರ್ಯಕ್ರಮದಿಂದ ರಾಜ್ಯದ ಒಳ ಹೊರಗಿನ ನೊಡುಗರೆಲ್ಲ ಕಂಡು, ಮೆಚ್ಚಿಕೊಳ್ಳುವಂತೆ ಆಗಿದೆ. ನಾನು ಆಗಾಗ ಸೀಳಿದ ತೆಂಗಿನಕಾಯಿಗಳನ್ನು ಕೊಂಚ ಕಡಿಮೆ ದರಕ್ಕೆ ಓರ್ವ ತರುಣನ ಹತ್ತಿರ ಖರೀದಿಸುವ ವಿಚಾರ ನಿನಗೆ ಗೊತ್ತಲ್ಲವೇ? ಪ್ರಸಾರದ ದಿನ ಆತ ಸ್ನಾನ ಮಾಡುತ್ತಿದ್ದನಂತೆ. ಅವನ ಸೋದರನು 'ಲೋ! ನಿನ್ನ

'ಸೀಳ್‌ಕಾಯಿ ಸ್ವಾಮಿ' ಟಿವಿಲಿ ಬಿದ್ದಿದಾರೋ!' ಎಂದು ಕೂಗಿಕೊಂಡನಂತೆ. ಅವನು ಅರ್ಧಸ್ನಾನಮಾಡಿ ಬಂದು ಟಿ.ವಿ. ನೋಡಿ ಹಿಗ್ಗಿದನಂತೆ. ''ಅಷ್ಟೊತ್ತು ನಿಮ್ಮನ್ನು ತೋರಿಸಿದ್ರಾ! ಎಂದು ಸೋಜಿಗ ಪಟ್ಟ, ನನ್ನ ಝೆರೋಕ್ಸ ಅಂಗಡಿಯ ನೆರೆಯ ಗಡಿಯಾರದ ಅಂಗಡಿಯವನು, ಟಿ.ವಿ. ಪರದೆಯ ಮೇಲೆ ಪ್ರತ್ಯಕ್ಷನಾದ ವ್ಯಕ್ತಿಯನ್ನು ಎಲ್ಲಿಯೋ ನೋಡಿದಂತೆ ಅನಿಸಿತಂತೆ. ಆಮೇಲೆ ''ನೀವೇ ಅವ್ರ!'' ಎಂದು ಗೊತ್ತಾದಾಗ ಮಹದಾಶ್ಚರ್ಯ, ಆನಂದಗಳಾದವು! ಎಂದು ಮೊನ್ನೆ ಭೇಟಿಯಾದಾಗ ಹೇಳುತ್ತಿದ್ದ. ನನಗೆ ಸದಾಕಾಲ ವರ್ಣಛಾಯಾಚಿತ್ರಗಳನ್ನು ಮುದ್ರಿಸಿಕೊಡುವ 'ಫೋಟೋಫ್ಲ್ಯಾಶ್'ದ ಸುನೀತಾ ''ಏನ್ಸಾರ್, ಉದಯ ಟಿವಿಯಲ್ಲಿ ನಿಮ್ಮ 'ಪರಿಚಯ' ಇದೆ ಅಂತ ಹೇಳೇ ಇಲ್ವಲ್ಲಾ! ಕೆಲ್ಸಾ ಮಾಡ್ತಾ ಟಿ.ವಿ. ನೋಡ್ತಿದ್ದೆ. ನೀವು ಪ್ರತ್ಯಕ್ಷರಾದ್ರಿ. ನಂಬೋಕೆ ಆಗ್ಲಿಲ್ಲ!'' ಎಂದು ಆಪಾದಿಸುವ ಧ್ವನಿಯಲ್ಲಿ ಹೇಳಿದಳು. 'ನಾನು ಟಿ.ವಿ.ಯಲ್ಲಿ ಬರ್ತಾ ಇದ್ದೀನಿ, ನೋಡಿ ಖುಷಿ ಪಡ್ರಿ! ಅಂತ ಹೇಳೊಕೆ ಆಗ್ತದಾ?' ಎಂದು ಮರುಪ್ರಶ್ನೆ ಹಾಕಿದೆ.

ಬಹಳ ವರ್ಷಗಳಿಂದ ಹಾಲು ಸರಬರಾಜು ಮಾಡುವ ಪ್ರಕಾಶನ ಪತ್ನಿ, ಈ ಕಾರ್ಯಕ್ರಮ ವೀಕ್ಷಿಸಿ, ನೀವು ಸಪ್ಲೈ ಮಾಡ್ತಿರೋ ಶಶಿಕಿರಣ್‌ದಲ್ಲಿ ಯಾರೋ ಪ್ರಸಿದ್ಧ ರೈಟರ್. ಟಿ.ವಿ.ಮೇಲೆ ಬಿದ್ದಿದ್ರು! ಅವರ ಒಂದು ಪುಸ್ತಕ ತಂದ್ಕೊಡಿ ಎಂದು ದುಂಬಾಲು ಬಿದ್ದಿದ್ದಳಂತೆ. ಈ ಬರಹಗಾರ ಯಾರು? ಎಂದು ಈತ ತಲೆ ಕೆರೆದುಕೊಂಡು ವಾಚ್‌ಮನ್‌ಗೆ ವಿಚಾರಿಸಿ, ಆತ ನಮ್ಮೊಬ್ಬರ ಮನೆಯಲ್ಲೇ ರಾಶಿರಾಶಿ ಪುಸ್ತಕಗಳು ಇರುವದರಿಂದ ಈ ಮನೆ ಇರಲು ಸಾಕು! ಎಂದದ್ದರಿಂದ ಕೇಳಿ, ಅಮೇರಿಕೆಯ ಪ್ರವಾಸಕಥನದ ಪ್ರತಿ ಪಡೆದ. ಆಮ್ಮಾ ಎರಡು ವರ್ಷಗಳಿಂದ ಹೋಗುತ್ತಿರುವ ಸತ್ಸಂಗ ಮತ್ತು ಪ್ರಾಣಾಯಾಮ ವರ್ಗದ ಮಹಿಳೆಯರು, ಕಾರ್ಯಕ್ರಮ ವೀಕ್ಷಿಸಿದವರು, 'ನೀವಿಬ್ಬರೂ ಇಷ್ಟೊಂದು ಪ್ರತಿಭಾವಂತರು ಎಂದು ಅನಿಸಿರಲಿಲ್ಲ' ಎಂದರಂತೆ. ಉಳಿದವರು, ನೀವು ಮೊದಲೇ ಹೇಳಿದ್ದರೆ, ನಾವೆಲ್ಲ ಕಾರ್ಯಕ್ರಮ ನೋಡುತ್ತಿದ್ದೆವು! ಎಂದು ಪರಿತಪಿಸಿದರಂತೆ. ಆಮ್ಮಾರ ಸ್ನೇಹಿತೆಯರಾದ ಉಮಾರಾವ್, ನಾಗಮಣಿ ಎಸ್ ರಾವ್, ಡಾ. ಇಂದಿರಾಮೂರ್ತಿ, ನೀಳಾದೇವಿ ಮೊದಲಾದವರೆಲ್ಲ ಫೋನಿಸಿ ಮೆಚ್ಚಿಗೆ ಸೂಚಿಸಿದರಂತೆ. ನಮ್ಮ ಪ್ರಕಾಶಕರಾದ ಕೆ. ಎಸ್. ಗೋಪಾಲ್ ಅವರು ಕೋಣನಕುಂಟೆಯಲ್ಲಿ ಮನೆಕಟ್ಟಿಸಿ ಗೃಹ ಪ್ರವೇಶಕ್ಕೆ ಕರೆದರೆ ಹೋಗಿರಲಿಲ್ಲ, ಆದರೆ ''ಈ ಕಾರ್ಯಕ್ರಮದಿಂದ ನೀವಿಬ್ಬರೂ ಮನೆಗೇ ಬಂದು ದರ್ಶನಕೊಟ್ಟ ಖುಷಿ ಸಿಕ್ಕಿತು! ಎಂದು ಅವರೂ, ಅವರ ಪತ್ನಿ ಕುಮುದಾ ಅವರೂ ಉದ್ಗರಿಸಿದರು. ಡಾ. ಶೇಷಶಾಸ್ತ್ರಿ, ಅನಂತಪುರದಿಂದ ಫೋನಿಸಿ, ಸಂದರ್ಶಿಸಿದವರು ಪ್ರಶ್ನೆಗಳನ್ನು ಸಮರ್ಪಕವಾಗಿ ಯೋಜಿಸಿರಲಿಲ್ಲ! ಎಂದು ಸಿಡಿಮಿಡಿಗೊಂಡರು. ''ಅವರು ಕೇಳಿದ ಪ್ರಶ್ನೆ, ನೀವು ನಿಮ್ಮ ಪ್ರವಾಸಕಥನಗಳನ್ನೆಲ್ಲ ಅಲ್ಲಿ ಹೋಗಿ ನೋಡಿ ಬರೆದಿರಾ? ಎಂಬ ಪ್ರಶ್ನೆಗೆ ನನ್ನ ತೀವ್ರ ಆಕ್ಷೇಪಣೆ ಇದೆ. ''ಇಲ್ಲ. ಬೆಂಗಳೂರಿನ ಮನೆಯಲ್ಲೆ ಕುಳಿತು ಬರೆದೆ ಎಂದು ಉತ್ತರಿಸಬೇಕಾಗಿತ್ತು!

ಎಂದರು. ಧಾರವಾಡದ ನಾರಾಯಣ ಕುಲಕರ್ಣಿ ಅವರು, ವರ್ಷಗಳಿಂದ ನಿಮ್ಮಿಬ್ಬರನ್ನೂ ಚೆನ್ನಾಗಿ ಅರಿತುಕೊಂಡಿದ್ದೇವೆ, ಎಂದುಕೊಂಡರೂ ಈ ಕಾರ್ಯಕ್ರಮದಿಂದ ನಿಮ್ಮ ವ್ಯಕ್ತಿತ್ವದ ಅನೇಕ ಆಯಾಮಗಳು ಗೊತ್ತಾದವು! ಎಂದು ಪತ್ರ ಬರೆದು ತಿಳಿಸಿದರು. ಅವರಿಗೂ ಕೇಳಿದ ಪ್ರಶ್ನೆಗಳು ಸಮರ್ಪಕವೆನಿಸಲಿಲ್ಲ. ಕೊಂಕಣಿ ಸಾಹಿತಿ ಶಿವಾನಂದರಾವ್, ಮುಂಬೈಯಿಂದ ''ನಿಮ್ಮಿಬ್ಬರ ವೃತ್ತಿಕ್ಷೇತ್ರ, ಪ್ರತಿಭೆಗಳು ಬೇರೆ ಬೇರೆ ಆಗಿದ್ದರಿಂದ ಜಂಟಿಯಾಗಿ ಪರಿಚಯಿಸಿದ್ದು ಸರಿಯಲ್ಲ!'' ಎಂದು ಪತ್ರ ಮುಖೇನ ಅರುಹಿದರು. ವಿಮರ್ಶಕ ಪ್ರೊ. ಮುರಳಿಧರ ಉಪಾಧ್ಯಾಯ ಹಿರಿಯಡ್ಕ ಅವರು, ನೀವಿಬ್ಬರೂ ನಮ್ಮ ಮನೆಗೆ ಬಂದಷ್ಟು ಖುಷಿಯಾಯಿತು, ಎಂದು ಉಡುಪಿಯಿಂದ ಬರೆದರು. ದಾವಣಗೆರೆಯಿಂದ ಲೀಲಾ ಕೇಸರಿಯವರ ಮನೆಯಲ್ಲಿ ಕಾರ್ಯಕ್ರಮ ಪ್ರಾರಂಭವಾಗುತ್ತಿದ್ದಂತೆ ವಿದ್ಯುತ್ ಪೂರೈಕೆ ನಿಂತು ಹೋಯಿತಂತೆ. ಆದ್ದರಿಂದ ಲಗುಬಗೆಯಿಂದ ನೆರೆಮನೆಯವರಲ್ಲಿ ಧಾವಿಸಿ ಹೋಗಿ ಕಾರ್ಯಕ್ರಮ ನೋಡಿ, ಮೆಚ್ಚಿಕೊಂಡು ಪತ್ರ ಬರೆದಿದ್ದರು. ಹೊನ್ನಾವರದಲ್ಲಿ ಹಲವಾರು ಜನ ನೋಡಿದ್ದಾರೆ. ತುಳಸುವಿಗೆ ಟಿವಿಯಲ್ಲಿ ಬಂದವರು ನಿನ್ನ ಅಣ್ಣನೋ! ತಮ್ಮನೋ! ಎಂದು ವಿಚಾರಿಸಿದರಂತೆ. ಉಷಾ ಮನೆಯಲ್ಲಿ ಎಲ್ಲರೂ ಟಿ.ವಿ. ಸುತ್ತ ನೆರೆದು ವೀಕ್ಷಿಸಿ ಆನಂದಿಸಿದರಂತೆ.

ಗೌರಿಗಣೇಶನ ಹಬ್ಬದ ದಿನ, ಈ ಕಾರ್ಯಕ್ರಮದ ಮರುಪ್ರಸಾರವಾಗಿ ಆ ದಿನ ಶಾಲಾ-ಕಾಲೇಜಗಳಿಗೆ ರಜೆ ಇದ್ದು, ವಿದ್ಯುತ್ ಪೂರೈಕೆ ಸರಿಯಾಗಿದ್ದು ಅಸಂಖ್ಯಾತರು ವೀಕ್ಷಿಸುವಂತೆ ಆಯಿತು. ಸಂಬಂಧಿಕರೆಲ್ಲ ಅಂಕೋಲಾ ಶಿರ್ಸಿ ಕಾರವಾರ ಹೊನ್ನಾವರಗಳಿಗೆ ಆ ಕೂಡಲೇ ಫೋನಿಸಿ ಕಾರ್ಯಕ್ರಮವನ್ನು ಎಲ್ಲರೂ ನೋಡುವಂತಾಯ್ತು.

ಈ ಮರುಪ್ರಸಾರ ಅತ್ಯಧಿಕ ಪ್ರಚಾರವನ್ನು, ನನ್ನ ಪಾಡಿಗೆ ಇದ್ದವನಿಗೆ, ತಂದು ಕೊಟ್ಟು ಕಷ್ಟಕ್ಕಿಟ್ಟುಕೊಂಡಿದೆ! ಮೊನ್ನೆ ಮಲ್ಲೇಶ್ವರದ ಶಾಲೆಯಿಂದ ಮಗನನ್ನು ಕರೆದೊಯ್ಯಲು ಮಹಾಲಕ್ಷ್ಮಿ ಲೇಔಟಿನಿಂದ ಸ್ಕೂಟರ್ ಮೇಲೆ ಬಂದಿದ್ದ ಲಿಂಗರಾಜು ಎನ್ನುವವರು, ನಾನು ಎರಡೂ ಕೈಗಳಲ್ಲಿ ಚೀಲ ಹೊತ್ತು ಬರುವದನ್ನು ನೋಡಿ, ಸ್ಕೂಟರ್ ನಿಲ್ಲಿಸಿ, ನಮಸ್ಕರಿಸಿ, ತನ್ನನ್ನು ಪರಿಚಯಿಸಿಕೊಂಡು. ''ನೀವೇ ಖಂಡಿತಕ್ಕೂ ಕೃಷ್ಣಾನಂದ ಕಾಮತರಿರಬೇಕು! ಮೊನ್ನೆ ನಿಮ್ಮ ಕಾರ್ಯಕ್ರಮ ಸೊಗಸಾಗಿತ್ತು!'' ಎಂದು ಮೆಚ್ಚಿಗೆ ಸೂಸಿದರು. ಇಲ್ಲಿ ಹದಿಮೂರನೆಯ ಕ್ರಾಸಿನಲ್ಲಿ ತನ್ನಿಬ್ಬರು ಮಕ್ಕಳನ್ನು ಶಾಲೆಯ ಬಸ್ಸಿಗೆ ಹತ್ತಿಸಲು ಬಂದ ವಕೀಲರು, You are Mr Krishnanand Kamat? ಎಂದು ಇಂಗ್ಲಿಷಿನಲ್ಲಿ ಮಾತು ಪ್ರಾರಂಭಿಸಿ ಕನ್ನಡಕ್ಕೆ ಇಳಿದರು. ಮೋಜಿನ ಮಾತೆಂದರೆ ನಾನು ದಿನವೂ ನಾಲ್ಕು ಬಾರಿ ಅವರ ಮನೆಯ ಮುಂದಿನಿಂದಲೇ ಹಾದು ಹೋಗುತ್ತಿರುವದು ಅವರಿಗೆ ಗೊತ್ತೇ ಇರಲಿಲ್ಲ! ನಾನು ಜಿನಸಿ ಸಾಮಾನು ಖರೀದಿಸುವ ''ರೈಸ್ ಪ್ಲ್ಯಾಂಟ್'' ಮಾಲಿಕನು, 'ಏನ್ಸಾರ್' ಕೈಯಲ್ಲಿ ಇಷ್ಟೊಂದು ಚೀಲಗಳನ್ನು ಹಿಡಿದು ಬರುವ ನೀವು ಇಷ್ಟು ದೊಡ್ಡ ವ್ಯಕ್ತಿ ಎಂದು ತಿಳಿದಿರಲೇ ಇಲ್ಲ!'' ಎಂದು

ಮೆಚ್ಚಿಗೆ ವ್ಯಕ್ತಪಡಿಸಿದ. ಪಾಪ್ಯುಲರ್ ಅಂಗಡಿಯ ರಾಘವೇಂದ್ರರು ಮೂವತ್ತು ವರ್ಷಗಳಿಂದ ನನಗೆ ಮಾತ್ರೆಗಳನ್ನು ವಿಕ್ರಯಿಸುತ್ತ ಬಂದಿದ್ದಾರೆ. ಕಾರ್ಯಕ್ರಮ ಪ್ರಸಾರದ ಮರುದಿನ, ರಸ್ತೆಯಲ್ಲಿ ನನ್ನನ್ನು ಕಂಡು ದೂರದಿಂದ ಧಾವಿಸಿ ಬಂದು, ''ಮೊನ್ನೆ ಟಿವೀಲಿ ನೊಡ್ದೆ! ಹೆಂಡ್ತಿಗೂ ಇವರು ನಮ್ಮ ಒಳ್ಳೆ ಗಿರಾಕಿಗಳಲ್ಲದೇ ತುಂಬ ಬೇಕಾದವರು. ಅಂತ ಹೇಳ್ದಾಗ ತುಂಬಾ ಸಂತೋಷ ಪಟ್ಟುಕೊಂಡ್ಲು!'' ಎಂದು ಹೇಳಬೇಕೇ? ನೀನು ಹಿಂದೆ ಮೆಂಬರ್ ಆಗಿದ್ದ ಸಿನೊಶರ್ ಸರ್ಕ್ಯುಲೇಟಿಂಗ್ ವಾಚನಾಲಯದ ಮುಖ್ಯಸ್ಥನು ಕಳೆದ ನಾಲ್ಕಾರು ವರ್ಷಗಳಿಂದ ದಿನವೂ ರಸ್ತೆಯಲ್ಲಿ ಭೇಟಿಯಾಗುತ್ತಿದ್ದರೂ, ಒಮ್ಮೆಯೂ ಮಾತನಾಡಿರಲಿಲ್ಲ. ಆದರೆ ಈ ಕಾರ್ಯಕ್ರಮ ನೋಡಿ, ಮೆಚ್ಚಿಗೆ ತಿಳಿಸಿದ ನಂತರ, ದಿನವೂ ನಮಸ್ಕಾರ ಹೇಳುತ್ತಾನಲ್ಲದೇ ಮನೆಗೂ ಆಮಂತ್ರಿಸಿದ್ದಾನೆ!

ಬಾಯಕ್ಕನವರು ನಾನು ಪದವೀಧರನಾದ ನಂತರ ತಮಗೆಲ್ಲ ಅಭಿಮಾನ ತರುವಂತಹ ನೌಕರಿ ಹಿಡಿಯಲು ಸೂಚಿಸಿದ್ದರು. ಹಿಂದೆ ಸಿ.ಆಯ್.ಬಿ.ಸಿ. ಸೇರಿದ ನಂತರ ಅದರ ಆಡಳಿತಗಾರರಾಗಿದ್ದ ಡಾ. ವಿ. ಪಿ.ರಾವರು ತಮ್ಮ ಸಂಸ್ಥೆಯಲ್ಲಿ ಬೆವರು ಹರಿಸಿ ದುಡಿದರೆ ಖ್ಯಾತಿ ಗಳಿಸಬಹುದು! ಎಂದಿದ್ದರು. ಇಷ್ಟೊಂದು ವರ್ಷಗಳ ಕಠಿಣ ಪರಿಶ್ರಮದ ನಂತರ, ನಮಗೆ ಕೆಲ ಮಟ್ಟಿಗೆ ಜನಪ್ರಿಯತೆ ಪಡೆಯಲು ಸಾಧ್ಯವಾಗಿದೆ. ಇದನ್ನು ಅರಿಯಲು ಡಾ. ವಿ. ಪಿ. ರಾವರು ಇಂದು ಬದುಕಿಲ್ಲ. ಬಾಯಕ್ಕನಿಗಂತೂ ತಾನು ಹೇಳಿದ ಮಾತೇ ಮರೆತು ಹೋಗಿರಬೇಕು! ಲಾಭವಿಲ್ಲದ ಕೆಲಸ ಮಾಡುವ ಜನರಿದ್ದಾರೆ ಎಂದು ಯಾರೂ ನಂಬಲಿಕ್ಕಿಲ್ಲ. ನಾನು ಈ ಹೊತ್ತು ಎಂದೋ ತೆಗೆದು ಕೂಡಹಾಕಿದ ಕಪ್ಪು - ಬಿಳುಪು ಛಾಯಾಚಿತ್ರಗಳನ್ನು ಮುದ್ರಿಸಿ ಒಂದು ದಿನದಲ್ಲಿ ಐದುಸಾವಿರ ರೂಪಾಯಿಕೊಟ್ಟು ಬಂದೆ. ಸಾಮಾನ್ಯರಿಗೆ ಪ್ರತಿಯೊಂದು ಛಾಯಾಚಿತ್ರದ ಹಿಂದೆ ಇದ್ದ ಮೌಲಿಕತೆ ಹಾಗೂ ಶ್ರಮಗಳ ಆಳ ಅರ್ಥವಾಗುವದು ಕಷ್ಟ! ಈಗ ನಾನು ಟಿ.ವಿ. ಪರದೆಯ ಮೇಲೆ ಬಂದದ್ದರಿಂದ ದೊಡ್ಡವನಾಗಿಬಿಟ್ಟಿದ್ದೇನೆ!

◆ ◆ ◆

೪೦. ತ್ರಿಪುರಾವತಾರ

ಇತ್ತೀಚೆಗೆ ಮಲ್ಲೇಶ್ವರಂ, ಪ್ರಮುಖ ವ್ಯಾಪಾರ ಕೇಂದ್ರವಾಗುತ್ತಿರುವದರಿಂದ ಅಂಗಡಿಗಳಿಗೆ, ಕಟ್ಟಡಗಳಿಗೆ ಭಾರೀ ಬೇಡಿಕೆ ಬರಲಾರಂಭಿಸಿದೆ. ಅದರಲ್ಲಿಯೂ ಸಂಪಿಗೆ ರಸ್ತೆಯಲ್ಲಿರುವ ಕಟ್ಟಡಗಳ ಬೆಲೆ, ಮಿತಿಮೀರಿ ಬೆಳೆದು ಬಿಟ್ಟಿದೆ! ಅಂತೆಯೇ, ಕಟ್ಟಡಗಳ ಮಾಲಿಕರೆಲ್ಲ, ತುಂಬ ವರ್ಷಗಳಿಂದ ಇರುವ ಬಾಡಿಗೆದಾರರಿಗೆಲ್ಲ ಖಾಲಿಮಾಡಲು ಸರ್ವಪ್ರಯತ್ನ ನಡೆಸಿದ್ದಾರೆ. ಇದು ಸಾಧ್ಯವಾಗದಿದ್ದಾಗ, ವಿಪರೀತ ಮುಂಗಡ ಹಣ, ಬಾಡಿಗೆ ಹೆಚ್ಚಳ ಕೊಡುವಂತೆ ಒತ್ತಾಯಿಸುತ್ತಿದ್ದಾರೆ. ಸಂಪಿಗೆ ಥಿಯೇಟರ್ ಎದುರಿಗೆ ಎರಡಂತಸ್ತಿನ ಕಟ್ಟಡವಿದೆ. ಅದರಲ್ಲಿ ಕೆಳಗಡೆ ಐದು, ಮೇಲಂತಸ್ತಿನಲ್ಲಿ ಐದು ಅಂಗಡಿಗಳಿವೆ. ರಸ್ತೆಗೆ ತಗಲಿರುವ ಅಂಗಡಿಯೊಂದರಲ್ಲಿ 'ಸೆಂಟ್ರಲ್ ಸ್ಟುಡಿಯೊ'ದವ, ಬಾಡಿಗೆಗೆ ಇದ್ದ. ನಾನು ಹೊಸದರಲ್ಲಿ ಇಲ್ಲಿ ಬಂದಾಗ, ಸ್ಟುಡಿಯೋ ನಡೆಸುತ್ತಿದ್ದ. ಹಿರಿಯ ಮೃತನಾದ ಮೇಲೆ, ಅವನ ಮಗ ನಡೆಸುತ್ತಿದ್ದ. ಆ ಕಟ್ಟಡದ ಮಾಲಿಕನಿಗೆ ಬೇರೊಂದು ವ್ಯಾಪಾರದಲ್ಲಿ ವಿಪರೀತ ಹಾನಿಯಾಗಿದ್ದರಿಂದ ಅದನ್ನು ತುಂಬಿಸಿಕೊಳ್ಳಲು, ಕಟ್ಟಡವನ್ನು ಮಾರಿಬಿಟ್ಟ. ಅದನ್ನು ಕೊಂಡವನು, ಬಾಡಿಗೆದಾರರಿಗೆಲ್ಲ ''ನೆರವಿನ ಧನ''ವೆಂದು ಎರಡರಿಂದ ಮೂರು ಲಕ್ಷ ರೂಪಾಯಿಗಳನ್ನು ಕೊಟ್ಟು ಖಾಲಿ ಮಾಡಿಸಿದ. ನಂತರ ಹೊಸ ಬಾಡಿಗೆದಾರರಿಂದ ಬಹಳಷ್ಟು ಮುಂಗಡ ಹಣ ಮತ್ತು ಬಾಡಿಗೆ ಪಡೆದು ಜಾಣನಾದ. ಇಂದಿನ ದಿನಗಳಲ್ಲಿ ಎಲ್ಲ ಕಟ್ಟಡಗಳ ಮಾಲಕರೂ ಇದೇ ತಂತ್ರವನ್ನು ಬಳಸಿಕೊಳ್ಳಲಾರಂಭಿಸಿದ್ದಾರೆ. ಖಾದಿ ಭಾಂಡಾರದ ಎದುರಿಗೇ ಮೂರು ಅಂತಸ್ತಿನ ಕಟ್ಟಡವಿರುವದು, ನಿನಗೆ ನೆನಪಿರಬಹುದು. ಅದರ ಮೇಲಂತಸ್ತಿನವರಿಗೆ ತಲಾ ಐವತ್ತು ಸಾವಿರ, - ಒಂದು ಲಕ್ಷ ಕೊಟ್ಟು ಖಾಲಿ ಮಾಡಿಸಿದ್ದಾಯ್ತು. ಈಗ ಕೆಳಗಿನ ಅಂಗಡಿಯ ಕದೀಮರು, ಒಂದೊಂದು ಅಂಗಡಿ ತೆರವು ಮಾಡಿದರೆ, ಐದರಿಂದ ಆರುಲಕ್ಷ ಕೊಡಲೇಬೇಕು, ಎಂದು ಬೇಡಿಕೆಯನ್ನು ಮುಂದೆ ಇಟ್ಟಿದ್ದಾರೆ!

ಇಂಥ ಬೆಳವಣಿಗೆಯಿಂದ, ನನ್ನ ವೈಜ್ಞಾನಿಕ ಛಾಯಾಗ್ರಹಣದ ಲ್ಯಾಬಿನ (ಅಂಗಡಿ) ಮಾಲಕನಾದ ತ್ರಿಪುರಾಂತಕನಿಗೂ ಧನಿಕನಾಗುವ ಆಸೆ ಹುಟ್ಟಿತು! ಮೊನ್ನೆ ಇದ್ದಕ್ಕಿದ್ದಂತೆ ಅಂಗಡಿಗೆ ನುಗ್ಗಿದ. ಆವೇಶ ಭರಿತನಾಗಿ, ಈ ದೊಡ್ಡ ಅಂಗಡಿಗೆ, ಇಷ್ಟು ಕಡಿಮೆ ಬಾಡಿಗೆ ಕೊಡ್ತಾ ಇದ್ದೀರಾ! ಈ ದಿನಗಳಲ್ಲಿ ಇಂಥ ಹೀನ ಬಾಡಿಗೆಯಿಂದ ಏನಾಗಬೇಕಾಗಿದೆ? ಮೂರು ಸಾವಿರ ಬಾಡಿಗೆ. ಠೇವಣಿಯನ್ನು ಒಂದುವರೆ ಲಕ್ಷಕ್ಕೆ ಏರಿಸಬೇಕಾಗಿದೆ! ಎಂದು ಖಂಡತುಂಡವಾಗಿ ಸಾರಿದ. ನಾನು ಒಂದಿಷ್ಟು ವಿಚಲಿತನಾಗದೇ, ಮೂವತ್ತು ವರ್ಷಗಳ ಹಿಂದಿನ ಹಿನ್ನೆಲೆ ವಿವರಿಸಬೇಕು, ಎಂದುಕೊಂಡಾಗ, 'ನನಗೆ ಅದೆಲ್ಲ ಬೇಕಿಲ್ಲ! ಒಂದು ವಾರದಲ್ಲಿ ನಿಮ್ಮ ತೀರ್ಮಾನ ತಿಳಿಸಲೇ ಬೇಕು! ಎಂದು ಹೊರಟೇ ಬಿಟ್ಟ.

ಆದರೆ ನನ್ನ ತೀರ್ಮಾನ ತಿಳಿಯಲು ಒಂದು ವಾರದ ತನಕ ಕಾಯುವ ತಾಳ್ಮೆ ಇದ್ದರೆ ತಾನೆ? ಮೂರೇ ದಿನಗಳಲ್ಲಿ ತಿರುಗಿ ಬಂದ. ''ನೀವು ಕೇಳಿದಷ್ಟು ಬಾಡಿಗೆ ಕೊಡುವದು ಅಸಾಧ್ಯ. ಆಸ್ತಿಯ ಕರ ಏರಿಸಿದ್ದು ನಿಜ. ಈಗಿನ ಬಾಡಿಗೆಯಲ್ಲಿ ೨೦೦/- ರೂ.ಗಳನ್ನು ಹೆಚ್ಚಿಗೆ ಕೊಡುತ್ತೇನೆ. ಠೇವಣಿ ಹಣವನ್ನೂ ಹತ್ತು ಸಾವಿರ ಹೆಚ್ಚು ಕೊಡುತ್ತೇನೆ' ಎಂದೆ. ಇದರಿಂದ ಇನ್ನಷ್ಟು ಸಿಡಿಮಿಡಿಗೊಂಡ, ತ್ರಿಪುರನು. 'ಸಾಧ್ಯವಿಲ್ಲ. ಆದರೆ ನನ್ನ ಅಭಿಪ್ರಾಯವನ್ನು ಹಿಂದಿನಿಂದ ತಿಳಿಸುತ್ತೇನೆ' ಎಂದು ಹೊರಟೇ ಹೋದ.'

ಆನಂತರ, ಓರ್ವ ರೌಡಿಯ ಸ್ವರೂಪದ ವ್ಯಕ್ತಿಯೊಂದಿಗೆ ಆಗಮಿಸಿದ. ಅವನ ದೊಡ್ಡ ಮೀಸೆ, ಕೆಂಗಣ್ಣು, ಕೃಷ್ಣವರ್ಣ, ಕಿವಿ, ಕೊರಳ ಬಳಿ, ಏಟು ಬಿದ್ದ ಮಾಗಿದ್ದ ಗಾಯದ ಗುರುತುಗಳು, ನೋಡಿದವರಿಗೆ ಗಾಬರಿ ಹುಟ್ಟಿಸುವಂತೆ ಇದ್ದವು. 'ಇವರು ನನ್ನ ಫ್ರೆಂಡ್... ಇಂಥಿಂಥವರು' ಎಂದು ತ್ರಿಪುರನು ಪರಿಚಯಿಸಿದರೂ, ನಾನು ತಲೆ ಎತ್ತಿ ನೋಡಲಿಲ್ಲ. ವಂದನೆ ಹೇಳಲಿಲ್ಲ. ಕುಳಿತುಕೊಳ್ಳೆಂದು ಕೇಳಿಕೊಳ್ಳಲಿಲ್ಲ. ನನ್ನ ಪಾಡಿಗೆ ಬರವಣಿಗೆ ಮುಂದುವರಿಸಿದ್ದೆ. ಆತ ಅಂಗಡಿಯನ್ನು ನೋಡಿದ. ಮುರಿದುಬಿದ್ದ ಸಾಮಾನು, ಪುಸ್ತಕಗಳ ರಾಶಿ, ಧೂಳು ಹರಡಿಕೊಂಡ ಛಾಯಾಗ್ರಹಣದ ಪರಿಕರಗಳನ್ನು ನೋಡಿಯೇ ಕಂಗಾಲಾಗಿರಬೇಕು. ಇದು ಯಾತರ ಅಂಗಡಿ? ಏನು ಮಾರ್ತಾ ಇದ್ದೀರಾ? ಎಂದು ಕೇಳಿದ ಪ್ರಶ್ನೆಗಳಿಗೂ ಉತ್ತರಿಸಲಿಲ್ಲ. ತ್ರಿಪುರನೇ ''ವೈಜ್ಞಾನಿಕ ಛಾಯಾ ಗ್ರಹಣ!'' ಎಂದು ಇಂಗ್ಲಿಷಿನಲ್ಲಿ ಬರೆದದ್ದು ತೋರಿಸಿ ಜೊತೆಗೆ ವಿವರಣೆ ಕೊಟ್ಟ. ನಂತರ ನನಗೆ ''ನಿಮ್ಮ ಹೆಚ್ಚುವರಿ ಬಾಡಿಗೆ, ಹೆಚ್ಚಿನ ಡಿಪಾಜಿಟ್ ಹಣ ಬೇಡವೇ ಬೇಡ. ನನ್ನ ಮಗ ಕಂಪ್ಯೂಟರ್ ಕಲಿತು ವ್ಯಾಪಾರ ಹೂಡಬೇಕೆಂದಿದ್ದಾನೆ. ಆದ್ದರಿಂದ ಆದಷ್ಟು ಶೀಘ್ರದಲ್ಲಿ ಅಂಗಡಿಯನ್ನು ಖಾಲಿಮಾಡಿ!'' ಎಂದು ಹುಕುಂ ಬಜಾಯಿಸಿ ಹೊರಟೇ ಹೋದ. 'ರೌಡಿ' ಚೆಹರೆಯವ ಹಿಂಬಾಲಿಸಿದ.

ತ್ರಿಪುರನು ರೌಡಿಯನ್ನು ನನ್ನ ಲ್ಯಾಬಿಗೆ ಕರೆತಂದ ಸಮಾಚಾರ, ಆಚೆ-ಈಚೆ ಅಂಗಡಿಯವರಲ್ಲಿ ಬಲುಬೇಗ ಹರಡಿತು. ಕೊಳಾಯಿ ಅಂಗಡಿಯ ರಾಮಚಂದ್ರ ಮೂರ್ತಿ ಬಂದು, ''ನೀವೇನೂ ಗಾಬರಿಯಾಗಬೇಡಿ! ನಿಮಗೇನಾದರೂ ಮಾಡಿದರೆ, ಖಂಡಿತ ನಾವೆಲ್ಲ ಸೇರಿ, ನಿಮ್ಮ ಸಹಾಯಕ್ಕೆ ಧಾವಿಸುತ್ತೇವೆ. ನಮಗೆಲ್ಲರಿಗೂ ಬಾಡಿಗೆ ಹಾಗೂ ಡಿಪಾಸಿಟ್‌ಗಳಲ್ಲಿ ಹೆಚ್ಚಳ ಮಾಡಲು ಒಂದೇ ಸವನೆ ಹೆದರಿಸುತ್ತಿದ್ದಾನೆ. ಸಾಧ್ಯವೇ ಇಲ್ಲ! ಎಂದು ಹೇಳಿಬಿಟ್ಟಿದ್ದೇನೆ.'' ಎಂದು ಬೆಂಬಲ ಸಾರಿದ. ಖಾದಿ ಭಾಂಡಾರದವರು ಬಂದು - ಆ 'ಫ್ರೆಂಡ್' ನಮಗೆ ಚೆನ್ನಾಗಿ ಗೊತ್ತು! ನಮ್ಮೊಂದಿಗೆ ಚೆನ್ನಾಗಿಯೇ ಇದ್ದ. ಅವನ ಹೆಂಡತಿ ಕಿರುಕುಳ ತಾಳದೇ ಬಿಟ್ಟು ಬೇರೆ ಇದ್ದಾಳೆ. ಈಗ ಬೇರೊಂದು ಹೆಣ್ಣು ಹುಡುಕುವಂತೆ, ನನಗೆ ದುಂಬಾಲು ಬಿದ್ದಿದ್ದ. ನಮಗೂ ಈ ಮಾಲಕ, ಬಾಡಿಗೆ - ಠೇವಣಿ ಹೆಚ್ಚಿಸಲು, ಆಗಾಗ ಪೀಡಿಸುತ್ತ ಇರುತ್ತಾನೆ. ಛೇರ್ಮನ್‌ರು, ಸಾಧ್ಯವೇ ಇಲ್ಲ! ಎಂದು ಹಿಂದಿರುಗಿ ಕಳಿಸುತ್ತಲೇ ಇದ್ದಾರೆ. ನೀವು ಒಂದಿಷ್ಟೂ ಗಾಬರಿ ಪಡಬೇಡಿ! ಎಂದು ಹೇಳಿದರು. ಅಂತೆಯೇ ನಾವು ಮೂವರು ಒಟ್ಟಾಗಿ ತ್ರಿಪುರ - ರೌಡಿಯರನ್ನು ಎದುರಿಸಲು ನಿರ್ಧರಿಸಿದೆವು.

ತ್ರಿಪುರನು, ಒಂದು ವಾರದ ಬಳಿಕ ಅದೇ ರೌಡಿಯೊಂದಿಗೆ ತಿರುಗಿ ಲ್ಯಾಬಿಗೆ ಬಂದ. 'ಏನು ತೀರ್ಮಾನ ಮಾಡಿದಿರಿ?' ಎಂದು ವಿಚಾರಿಸಿದ. ನಾನು ಹೇಳುವದನ್ನೆಲ್ಲ ಹೇಳಿಯೇ ಬಿಟ್ಟಿದ್ದೇನೆ. ಈ ನನ್ನ ಫ್ರೆಂಡ್‌ನ ಅಣ್ಣ, ಲಾಯರ್ ಆಗಿದ್ದಾರೆ. ಅವರೊಡನೆ ನೀವು ಮಾತನಾಡಿ ಡಿಸ್ಪ್ಯಾಡ ಮಾಡಿ!'' ಎಂದು ಹೇಳಿ ಹೊರಟು ಹೋದ. ಆದರೆ ರೌಡಿರೂಪಿ, ಬಂದು ಸಮೀಪದಲ್ಲಿ ಕುಳಿತುಕೊಂಡ!. ''ನೀವು ತುಂಬಾ ಓದಿಕೊಂಡವರಂತೆ! ರೈಟರ್ ಬೇರೆ ಅಂತೆ. ಕೇಳಿ ತುಂಬಾ ಸಂತೋಷವಾಯ್ತು. ನನಗೆ ಮತ್ತು ನಮ್ಮ ಅಣ್ಣಾವರಿಗೆ, ರೈಟರ್ ಜನರ ಬಗ್ಗೆ ತುಂಬಾ ರಿಸ್ಪೆಕ್ಟು!'' ತ್ರಿಪುರನಿಗೆ ಕ್ವಾಪ ಜಾಸ್ತಿ! ಆದ್ರೆ ನಿಮ್ಗೆ ಯಾವ ಹಾನಿ ಮಾಡದ ಹಂಗೆ ನೋಡಿಕೊತೀನಿ' ಎಂದು ಆಶ್ವಾಸನೆ ಕೊಟ್ಟಾಗ ನಂಬುವದೇ ಕಷ್ಟವಾಯಿತು. ಕಳ್ಳನೇ ಕೋಶಾಗಾರನೆನ್ನುವಂತಾಯ್ತು! ಈ ಅಂಗಡಿಯನ್ನು ಮೂವತ್ತು ವರ್ಷಗಳ ಹಿಂದೆ ಬಾಡಿಗೆಗೆ ಹಿಡಿದಿದ್ದೇನೆ. ಈಗ ಅಂಗಡಿ ಖಾಲಿಮಾಡು ಎಂದರೆ ಮೂವತ್ತು ವರ್ಷ ಬಾಳ್ವೆ ಮಾಡಿದ ಹೆಂಡ್ತಿಗೆ ಮನೆ ಬಿಟ್ಟುಹೋಗು! ಅಂದ ಹಾಗೆ ಆಗತ್ತೆ. ಮಾಲಕರಿಗೆ ಈ ಅಂಗಡಿ ಬೇಕೇ ಬೇಕಾದಲ್ಲಿ, ಬೇರೊಂದು ಅಂಗಡಿಗೆ, ಡಿಪಾಸಿಟ್‌ಗೆ ಬೇಕಾಗುವಷ್ಟು ಮೊತ್ತ. ಇಲ್ಲವೇ ಬ್ಯಾಂಕಿನಲ್ಲಿ ಅದನ್ನು ಇಟ್ಟು, ಖರ್ಚನ್ನು ತೂಗಿಸಿಕೊಂಡು ಹೋಗುವಷ್ಟು ಧನಸಹಾಯ ಮಾಡಬೇಕು. ಇಂದಿನ ದಿನದ ಅಂಗಡಿ ಖಾಲಿಮಾಡುವ ರೇಟ್ ೨ರಿಂದ ೫ ಲಕ್ಷದಷ್ಟು ಇದೆ! ಎಂದೆ. ಆತ, 'ನೀವು ಹೇಳಿದ್ದೆಲ್ಲ ಅರ್ಥವಾಯ್ತು ಸಾರ್!' ಎಂದು ಕೈಕುಲುಕಿ ಬೀಳ್ಕೊಟ್ಟ.

ನಾನು ಯಾವ ವಕೀಲನನ್ನೂ ಕಾಣಲಿಲ್ಲ. ಹಾಗೆ ಮಾಡುವ ಅವಶ್ಯಕತೆ ಇಲ್ಲವೆಂದು ತ್ರಿಪುರನಿಗೆ ಹೇಳಿದೆ. ನನ್ನ ನಿಲುವು ನ್ಯಾಯಬದ್ಧವಾಗಿದೆ ಎಂದು ಬಲ್ಲವರು ಹೇಳಿದ್ದಾರೆ ಎಂದು ವಿವರಿಸಿದೆ. ಹಿಂದಿನ ಬಾಡಿಗೆಯನ್ನೇ ಮುಂದರಿಸಿಕೊಂಡು ಬಂದೆ. ಈ ಆಸಾಮಿಯನ್ನು ಸುಲಭದಲ್ಲಿ ಬಗ್ಗಿಸಲು ಸಾಧ್ಯವಿಲ್ಲ ಎಂದು ಆತನಿಗೆ ಮನವರಿಕೆ ಆಗಿರಬೇಕು. ಅಂತೆಯೇ ಏಪ್ರಿಲ್ ೨೦೦೦ನೇ ವರ್ಷದಿಂದ ಅಂದರೆ ಮೂರು ತಿಂಗಳ ಹಿಂದಿನಿಂದಲೇ ನಾನು ಸೂಚಿಸಿದ ಬಾಡಿಗೆಯ ಏರಿಕೆ ಮತ್ತು ಡಿಪಾಸಿಟ್‌ನಲ್ಲಿ ಹೆಚ್ಚಳದ ಹಣ ಕೊಡಿ! ಎಂದು ಗೋಗರೆಯಲಾರಂಭಿಸಿದ. ಅದಕ್ಕೆ ಒಪ್ಪಿಕೊಂಡು, ಆಗಲೇ ಹಣ ಚುಕ್ತಾ ಮಾಡಿದೆ.

ಅಂತೂ ಅಂಗಡಿಯನ್ನು ನನ್ನ ತಾಬೆಯಲ್ಲಿಯೇ ಉಳಿಸಿಕೊಳ್ಳುವಂತೆ ಯಶಸ್ವಿ ಆದದ್ದಕ್ಕೆ ನೆಮ್ಮದಿಯಾಗಿದೆ. ಈ ಅಂಗಡಿಯಿಂದ ನನಗೆ ಬಿಡಿಗಾಸಿನ ಆದಾಯವಿಲ್ಲದಿದ್ದರೂ, ನನ್ನ ಅಸಹಾಯಕತೆಯ ದಿನಗಳಲ್ಲಿ ಆಶ್ರಯ ನೀಡಿ ತಲೆ ಎತ್ತಿ ನಡೆಯುವಂತೆ ಮಾಡಿದೆ. ನನ್ನ ಎಷ್ಟೋ ಅಪೂರ್ವ ಛಾಯಾಚಿತ್ರ - ಬರವಣಿಗೆಗೆ ನಿರಂತರ ಸಾಕ್ಷಿಯಾಗಿದೆ. ಅಂತೆಯೇ ಇದರ ಮೇಲೆ ನನಗೆ ಅಪಾರ ಪ್ರೇಮ-ಗೌರವಗಳಿವೆ. ಇಂದಿನ ದಿನಗಳಲ್ಲಿ ಬೆಳಿಗ್ಗೆ ಎಂಟುಗಂಟೆಗೇ ಮನೆ ಬಿಟ್ಟು ಲ್ಯಾಬಿಗೆ ಕಾಲು ನಡಿಗೆಯಲ್ಲಿ ಬಂದು ಮುಖ್ಯವಾದ ಪತ್ರ ವ್ಯವಹಾರ ಹಾಗೂ ಬರವಣಿಗೆ ಮಾಡಿ ತಿರುಗಿ ಹನ್ನೊಂದು ಗಂಟೆಗೆ ನಡೆದುಕೊಂಡೇ ಮನೆ ಸೇರುತ್ತೇನೆ.

ಈ ನಡಿಗೆಯಿಂದ ಸಾಕಷ್ಟು ವ್ಯಾಯಾಮ ಆಗುತ್ತಿದ್ದರೂ, ಸಂಜೆ ಇನ್ನೊಮ್ಮೆ ಮಾರ್ಕೆಟ್ಟಿಗೆ ಬಂದು, ಗೃಹಕೃತ್ಯದ ಸಾಮಾನು, ತರಕಾರಿ, ಹಣ್ಣುಹಂಪಲು, ಖರೀದಿಸುತ್ತೇನೆ. ಈ ಪತ್ರವನ್ನು ಲ್ಯಾಬಿನಲ್ಲಿ ಕುಳಿತೇ ಬರೆಯುತ್ತಿದ್ದೇನೆ. ಈಗ ತ್ರಿಪುರನು ನನ್ನ ಖಾಸಾ ಗೆಳೆಯನಂತೆ ವರ್ತಿಸುತ್ತ ಪ್ರತಿ ಮುಂಜಾನೆ ಲ್ಯಾಬಿಗೆ ಬಂದು ನಮಸ್ಕರಿಸಿ ಐದು ನಿಮಿಷ ಕುಳಿತು, ರಾಜಕಾರಣ ಮಾತನಾಡಿ ಬೀಳ್ಕೊಳ್ಳುತ್ತಾನೆ!

◆ ◆ ◆

- - - - - - -

ಹೆಸರು ಬದಲಾಯಿಸಿದೆ.

೪೧. ಚಿತ್ರಸಂಪತ್ತು

‘‘ಇಷ್ಟೆಲ್ಲ ಫೋಟೋಗಳನ್ನು ಕ್ಲಿಕ್ಕಿಸಿ ಏನಾಗಬೇಕಾಗಿದೆ?’’ ಎಂದು ನೀನು ಕೇಳಿದ, ನಿನ್ನ ಅಮ್ಮಾ ಕೂಡ ಹಂಗಿಸಿದ ದಿನಗಳಿದ್ದವು. ನೀನು ಇಂಟರ್‌ನೆಟ್ ಸಾಹಸ ಪ್ರಾರಂಭಿಸಿದ ನಂತರ ಛಾಯಾಚಿತ್ರಗಳ ಮಹತ್ವ ಎಲ್ಲರಿಗೂ ತಿಳಿಯುವಂತೆ ಆಯಿತು. ಆದರೆ ನಾನು ಸಂಗ್ರಹಿಸಿದ ಸಾವಿರಾರು ಕಪ್ಪು-ಬಿಳುಪು ಫಿಲ್ಮ್‌ರೋಲುಗಳನ್ನು ಛಾಯಾಚಿತ್ರಗಳನ್ನಾಗಿ ಪರಿವರ್ತಿಸುವದು ಸುಲಭಸಾಧ್ಯವಾದ ಕೆಲಸವಾಗಿರಲಿಲ್ಲ. ಕಪ್ಪು-ಬಿಳುಪು ಚಿತ್ರಗಳನ್ನು ಮುದ್ರಿಸಲು ಬೇಕಾಗುವ ರಾಸಾಯನಿಕಗಳಾಗಲಿ, ಕಾಗದವಾಗಲೀ ಈಗ ಸಿಗುವದೇ ಇಲ್ಲ! ಅಂತೆಯೇ ಇರುವ ನೆಗೆಟಿವ್‌ಗಳನ್ನೆಲ್ಲ ಹೇಗೆ ಬಳಸುವದು? ಎಂದು ಬಹಳಕಾಲದಿಂದ ಯೋಚಿಸುತ್ತಲೇ ಇದ್ದೆ. ಈಗ ನೀನು ೧ ಲಕ್ಷ ರೂಪಾಯಿ ಬೆಲೆಬಾಳುವ ಡಿಜಿಟಲ್ ಕೆಮರಾ ಖರೀದಿಸುವದಾಗಿ ಹೆದರಿಸಿದ್ದರಿಂದ, ನನ್ನ, ನಮ್ಮ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲೇ ಬೇಕು! ಎಂದು ನಿರ್ಧರಿಸಿದೆ. ಅವುಗಳನ್ನು ಪೊಸಿಟಿವ್ ಆಗಿ ಪರಿವರ್ತಿಸಿ ಬಳಸಲು ಆದೀತೇ? ಎಂದು ಪರಿಶೀಲಿಸಲು ಎರಡು ಫ್ರೇಮ್‌ಗಳನ್ನು ನಿನಗೆ ಮಾಡಿ ಕಳಿಸಿದ್ದೆ ಕೂಡ, ಬೆಂಗಳೂರಿನಲ್ಲೇ ಕಪ್ಪು ಬಿಳುಪು ನೆಗೆಟಿವ್‌ಗಳನ್ನು ವರ್ಣಕಾಗದದ ಮೇಲೆ ಕೆಲವು ಸ್ಟುಡಿಯೋದವರು ಮುದ್ರಿಸಿ ಕೊಡುತ್ತಾರೆ. ಆದರೆ ಸಿಕ್ಕಾಪಟ್ಟೆ ಛಾರ್ಜ್ ಮಾಡುತ್ತಾರೆ ಎಂದು ಹಿಂದೊಮ್ಮೆ ಸ್ನೇಹಿತರೊಬ್ಬರು ಹೇಳಿದ್ದು ನನೆಪಿತ್ತು.

ಈ ಕುರಿತಾದ ಹೆಚ್ಚಿನ ಮಾಹಿತಿ ಪಡೆಯಲು ನನ್ನ ಖಾಯಂ ಕೆಲಸ ಮಾಡಿಕೊಡುವ ‘ಫೋಟೊ ಫ್ಲ್ಯಾಶ್’ ಅಂಗಡಿಗೆ ಹೋದೆ. ಇದು ಮಲ್ಲೇಶ್ವರಂ ವೃತ್ತದ ಬಳಿಯಲ್ಲಿಯೇ ಇರುವದರಿಂದ ಲ್ಯಾಬಿಗೆ ಬರಹೋಗುವಾಗ ಭೇಟಿಕೊಡಲು ಅನುಕೂಲವಾಗಿದೆ. ಹೀಗಾಗಿ ಅನೇಕ ವರ್ಷಗಳ ವಹಿವಾಟಿನದು. ಸಿಂಧಿ ವ್ಯಾಪಾರಸ್ಥರೊಬ್ಬರು ಸಾಕಷ್ಟು ಹಣ ಹಾಕಿ ಸ್ಥಾಪಿಸಿದ್ದಾರೆ. ಒಂದು ಕೇಂದ್ರ ಲ್ಯಾಬ್ ಸ್ಥಾಪಿಸಿ, ಕಂಪ್ಯೂಟರ್ ನಿಯಂತ್ರಣದಲ್ಲಿ ಫೋಟೊ ಪ್ರಿಂಟಿಂಗ್ ನಡೆಸುತ್ತಾರೆ. ಮಹಾನಗರದ ತುಂಬ ಹರಡಿದ ಶಾಖೆಗಳ ಮುಖಾಂತರ ವ್ಯವಹಾರ ನಡೆಸುತ್ತಾರೆ. ಅಂತೆಯೇ ಕೆಲಸಗಾರರನ್ನೆಲ್ಲ ಒಂದು ಶಾಖೆಯಿಂದ ಇನ್ನೊಂದಕ್ಕೆ ವರ್ಗಾಯಿಸುತ್ತಲೇ ಇರುತ್ತಾರೆ. ಆದರೂ ಹಿಂದಿನ ಈಗಿನ ಕೆಲಸಗಾರರೆಲ್ಲ ನನ್ನನ್ನು ನಗುಮುಖದಿಂದ ಸ್ವಾಗತಿಸಿ ಕೆಲಸ ಮಾಡಿಕೊಡುತ್ತಾರೆ. ಇದಕ್ಕೆ ಕಾರಣ, ನಾನು ಪ್ರತಿ ನಿತ್ಯವೂ ಬರುವ ಗಿರಾಕಿ! ಯಾವ ಕಿರಿಕಿರಿಯನ್ನೂ ಮಾಡದವ. ವಿನೋದ ಪ್ರವೃತ್ತಿ ಬೇರೆ! ‘ಸುಧಾ-ಮಯೂರ’ ಪತ್ರಿಕೆಗಳಲ್ಲಿ ನನ್ನ ಬಗ್ಗೆ ಬರೆದದ್ದನ್ನು ಅಲ್ಲಿಯ ಕೆಲಸಗಾರರಾದ ಸಿದ್ದು, ಶಂಕರ, ಸುನೀತಾ ಮೊದಲಾದವರು ಓದಿದ್ದಾರೆ.

ಕೆಲವು ವಾರಗಳ ಹಿಂದೆ ಉದಯ ಟಿ. ವಿ. ಯಲ್ಲಿ ನಮ್ಮಿಬ್ಬರ ಪರಿಚಯ ಆಕಸ್ಮಿಕವಾಗಿ ನೋಡಿ, ನಾನೊಬ್ಬ ಅಪರೂಪದ ವ್ಯಕ್ತಿ! ಎಂಬ ಅಭಿಪ್ರಾಯಕ್ಕೆ ಬಂದಿದ್ದಾರೆ. ಹೀಗಾಗಿ ನನ್ನ ಕೆಲಸ ಸುಲಭವಾಯಿತು. ನನ್ನ ಸಮಸ್ಯೆ ಹೇಳಿದಾಕ್ಷಣ, ಸಿದ್ದು, ಫೋನ ಎತ್ತಿಕೊಂಡು, ‘ಟಾಪ್‌ಬಾಸ್’ ಹತ್ತಿರವೇ ಮಾತನಾಡಿದ. ನಾನು ಅವರನ್ನು ವೈಯಕ್ತಿಕವಾಗಿ ಭೇಟಿ

ಮಾಡಿಲ್ಲ. ಆದರೆ ಸತತವಾಗಿ, ವ್ಯವಸ್ಥಿತವಾಗಿ ತೆಗೆಯುವ ವರ್ಣಛಾಯಾಚಿತ್ರಗಳಿಂದ, ಅವುಗಳ ಮುದ್ರಣ ಕುರಿತು ಬರೆಯುವ ಸ್ಪಷ್ಟವಾದ, ನೇರ ತಾಂತ್ರಿಕ ನಿರ್ದೇಶನಗಳಿಂದ, ಅವರ ಆಫೀಸಿನಲ್ಲಿ ಎಲ್ಲರಿಗೂ ನನ್ನ ಪರೋಕ್ಷ ಪರಿಚಯ ಇದೆಯಂತೆ! ಅಂತೆಯೇ ನನ್ನ ಹೆಸರು ಹೇಳಿದಾಕ್ಷಣ ನನ್ನ ಯಾವತ್ತು ಕಪ್ಪು-ಬಿಳುಪು ನೆಗೆಟಿವ್‌ಗಳನ್ನು ಬಣ್ಣದ ಕಾಗದದ ಮೇಲೆ ಮುದ್ರಿಸಿ ಕೊಡುವ ಒಪ್ಪಿಗೆಯನ್ನು ಕೊಟ್ಟೇಬಿಟ್ಟರು! ಎಲ್ಲಕ್ಕೂ ಹೆಚ್ಚಾಗಿ, ಇದಕ್ಕಾಗಿ ಹೆಚ್ಚಿನ ಬೆಲೆ ಕೇಳದೇ, ಮೆಕ್ಸಿ (4x6") ಪ್ರಿಂಟ್ ಒಂದಕ್ಕೆ 4½ ರೂಪಾಯಿಗಳನ್ನೆ 'ಚಾರ್ಜ್' ಮಾಡಲು ಆದೇಶ ನೀಡಿದರು. ನಾನು ಮೊಟ್ಟ ಮೊದಲು, ಭಟಕಳದ ಖೇತಪೈ ನಾರಾಯಣ ದೇವಸ್ಥಾನದ ಶಿಲ್ಪಗಳನ್ನು ಕ್ಲಿಕ್ಕಿಸಿದ ನೆಗೆಟಿವ್ ಕೊಟ್ಟೆ. ಅವು ಕಲ್ಪನೆಯನ್ನೂ ಮೀರಿ, ವರ್ಣಚಿತ್ರಗಳೇ ಎನಿಸುವಷ್ಟು ಸುಂದರವಾಗಿ ಮುದ್ರಿತವಾಗಿ ಬಂದವು! ಅವರ 'ಬಾಸ್', ಅವುಗಳನ್ನೆಲ್ಲ ನೋಡಿ ತುಂಬ ಖುಷಿ ಪಟ್ಟರಂತೆ. ಆ ನಂತರ ಈಗ ದಿನಕ್ಕೆ ಹತ್ತು ರೋಲುಗಳನ್ನು ಕೊಡಲಾರಂಭಿಸಿದ್ದೇನೆ. ಅಂದರೆ ಪ್ರತಿದಿನವೂ ೪೦೦-೫೦೦ ಫೋಟೊಗಳು ಸಿದ್ಧವಾಗಿ ಬಂದು ನನ್ನ ಸಂಗ್ರಹವನ್ನು ಸೇರುತ್ತಲಿವೆ. ಅವರಿಗೆ ನನ್ನ ಸಂಗ್ರಹವನ್ನು ಸಾಧ್ಯವಿದ್ದಷ್ಟು ಬೇಗ ಮುಗಿಸಿಕೊಡುವ ತರಾತುರಿ. ಆದ್ದರಿಂದ ಮುಂದಿನ ವಾರದಿಂದ ದಿನಕ್ಕೆ ೫೦ ರೋಲುಗಳನ್ನು ಕೊಡುವ ವಿಚಾರದಲ್ಲಿ ಇದ್ದೇನೆ. ನಾನು ನನ್ನ ರೋಲುಗಳನ್ನೆಲ್ಲ ಸುರಕ್ಷಿತವಾಗಿ ಇಟ್ಟ ವಿಧಾನಗಳನ್ನು ಅವರೆಲ್ಲ ತುಂಬ ಮೆಚ್ಚಿಕೊಂಡಿದ್ದಾರೆ. ಮುದ್ರಣದ ಕೆಲಸ ಮುಗಿದ ನಂತರ, ಪ್ರತಿಯೊಂದು ಛಾಯಾಚಿತ್ರದ ಹಿಂದೆ ನಂಬರ ಹಾಗೂ ವಿವರಗಳನ್ನು ಬರೆಯುವ ಕೆಲಸ ಪ್ರಾರಂಭಿಸಬೇಕಾಗಿದೆ. ಮಾಡುವವರಿಗೆ ಕೆಲಸದ ಕೊರತೆ ಏನೇನೂ ಇಲ್ಲವೇನೋ! ಎಂದು ಅನಿಸುತ್ತಿದೆ. ಅಂತೂ ಕೊನೆಗೊಮ್ಮೆ ನಾನು ಕ್ಲಿಕ್ಕಿಸಿದ ಛಾಯಾಚಿತ್ರಗಳೆಲ್ಲ ಮುದ್ರಿತರೂಪದಲ್ಲಿ ಬರುತ್ತಿವೆ, ಎಂಬ ಖುಷಿಯಲ್ಲಿದ್ದೇನೆ.

ಇವೆಲ್ಲ ನಾಲ್ಕು ದಶಕಗಳಿಗೂ ಹಿಂದೆ ವಿಧವಿಧ ಕ್ಯಾಮರಾಗಳ ಮೂಲಕ ಕ್ಲಿಕ್ಕಿಸಿದ್ದು, ನನ್ನ ಛಾಯಾಚಿತ್ರಗ್ರಹಣ 'ನಡೆದು ಬಂದ ದಾರಿ'ಯನ್ನು ಬಿಂಬಿಸುತ್ತವೆ. ಇವುಗಳ ಮುದ್ರಣಕ್ಕೆ ಹಣದ ಹೊಳೆ ಹರಿಸಲಾರಂಭಿಸಿದ್ದೇನೆ ಎಂದರೆ ಬಹುಸಂಖ್ಯಾಕರಿಗೆ ನಂಬಲು ಸಾಧ್ಯವಾಗಲಿಕ್ಕಿಲ್ಲ. ಇಂಥವರಿಗೆ ಪ್ರತಿ ಛಾಯಾಚಿತ್ರದ ಹಿಂದೆ ಅಡಗಿರುವ ಭಾವ, ಅದನ್ನು ಸೆರೆಹಿಡಿಯಲು ನನಗಿದ್ದ ಆಸಕ್ತಿ ಹಾಗೂ ಪಟ್ಟ ಶ್ರಮಗಳ ಅರಿವು ಹೇಗೆ ಆಗಬೇಕು?

◆ ◆ ◆

೪೨. ಅರಸಿಬಂದ ಅಮೇರಿಕನ್ನರು

ಇಂದು ನನಗೆ ಅಚ್ಚರಿಯ ದಿನ. ನೀನು ನನ್ನನ್ನು ಭೇಟಿಮಾಡುವದು ಬೇಡ! ಎಂದು ಮುನ್ನೆಚ್ಚರಿಕೆ ನೀಡಿದರೂ, ನಮ್ಮಿಬ್ಬರನ್ನು ಭೇಟಿಮಾಡಿಯೇ ತೀರುತ್ತೇನೆ! ಎಂದು ಕಾರ್ಲಾಕಿಂಗ್, ಪಟ್ಟು ಹಿಡಿದಳಲ್ಲವೇ? ಮೋಟರ್ ಸ್ಯಾಕಲ್ ಮೇಲೆ ವಿಶ್ವಪರ್ಯಟನ ಕೈಕೊಂಡ ಸಾಹಸಿ ಆಕೆ. ಇಂದು ಬೆಳಿಗ್ಗೆ ಮುಂಚಿತವಾಗಿಯೇ ಫೋನಿಸಿ ಕುಮಾರಿ ಮಾರ್ಸಿಯಾ ಕ್ರಾಸ್‌ಬಿ, ಎಂಬ ತನ್ನ ಸ್ನೇಹಿತೆಯೊಡನೆ ಮುಂಜಾನೆ ಹನ್ನೊಂದು ಗಂಟೆಗೆ ಆಗಮಿಸಿದಳು. ನಾನು ಅವರನ್ನು ಹೊರಗೇಟಿನ ಬಳಿಯೇ ಸ್ವಾಗತಿಸಿದೆ. ಇಬ್ಬರೂ ತಿಳಿಹೃದಯದ ಯುವತಿಯರು. ಯಾವ ಅಡ್ಡಿ, ಆತಂಕಗಳಿಲ್ಲದೇ ಕ್ಷಣಾರ್ಧದಲ್ಲಿ ನಮ್ಮೊಂದಿಗೆ ಒಂದಾಗಿಬಿಟ್ಟರು. ಅವರು ಕೇಳಿದ ಪ್ರಶ್ನೆಗಳಿಗೆ, ನೋಡಿದ ಕಾಗದ ಪತ್ರ, ಚಿತ್ರ, ಫೋಟೊಗಳಿಗೆ ಕೊನೆಮೊದಲಿಲ್ಲ. ನಮ್ಮ ಮಾತುಗಳನ್ನೆಲ್ಲ ಧ್ವನಿಮುದ್ರಿಸಿಕೊಂಡು, ಮಹಿಳೆಯರ ಸಬಲೀಕರಣ (empowerment of women) ಕುರಿತು ಆಮ್ಮಾರ ಅಭಿಪ್ರಾಯವನ್ನು ದೀರ್ಘವಾಗಿಯೇ ಧ್ವನಿಮುದ್ರಿಸಿಕೊಂಡರು.

ಅವರು ಬಂದ ಸ್ವಲ್ಪ ಸಮಯದಲ್ಲೇ ಸುಳಿವು ಹಿಡಿದು ಬಿ. ಬಿ. ಸಿ.ಯವರ ವತಿಯಿಂದ NDTಯ ಜಸ್‌ದೀಪ್‌ಪನ್ನು, ಎಂಬವರು ತನ್ನ ಸಹಾಯಕರು ಹಾಗು ಕ್ಯಾಮರಾಗಳೊಡನೆ ನಮ್ಮ ಮನೆಗೆ ದಾಳಿ ಇಟ್ಟರು. ಅವರು ತಮಗೆ ಬೇಕಾದುದನ್ನೆಲ್ಲ ಚಿತ್ರೀಕರಿಸಿಕೊಂಡರು. ಕಾರ್ಲಾಕಿಂಗ್, ಭಾರತದಲ್ಲಿ ಹಲವು ಧೀಮಂತರಿಗೆ ಕೇಳಿದ ಏಳು ಗಂಭೀರ ಸ್ವರೂಪದ ಪ್ರಶ್ನೆಗಳನ್ನು ಕೇಳಿದಳು. ಅವುಗಳಿಗೆಲ್ಲ ಸಮರ್ಪಕವಾದ ಉತ್ತರಗಳನ್ನು ಕೊಡುವಂತೆ ಆದದ್ದರಿಂದ ಅವಳಿಗೆ ತುಂಬ ಸಂತೋಷವಾಯಿತು. ತಾನು ನಿರೀಕ್ಷಿಸಿದ್ದಕ್ಕಿಂತ ನಾವಿಬ್ಬರೂ ಹೆಚ್ಚು ಸಾದಾ, ಸರಳ ಜೀವನ ನಡೆಸುತ್ತಿದ್ದೇವೆ! ಎಂದು ಅಚ್ಚರಿಪಟ್ಟಳು. ನನ್ನ ಮತ್ತು ಆಮ್ಮಾರ ಬಾಯೋಡಾಟಾ ಕೂಡ ಪಡೆದುಕೊಂಡಳು. ಅವಳ ಗೆಳತಿ ಮಾರ್ಸಿಯಾ ಗಣೇಶನ ಭಕ್ತಳಂತೆ. ಅವಳಿಗೆ ನಾನು ಕ್ಲಿಕ್ಕಿಸಿದ ಗಣಪತಿಯ, (ಸಿದ್ಧಿವಿನಾಯಕ) ಎರಡು ವರ್ಣಚಿತ್ರಗಳನ್ನು ಕೊಟ್ಟಾಗ ತುಂಬಾ ಸಂತೋಷಪಟ್ಟಳು. ಹೊರಟಾಗ ಮಾರ್ಸಿಯಳ ಕಣ್ಣು ತೇವವಾಗಿದ್ದವು.

* * *

ಮೊದಲೇ ನಿರ್ಧರಿಸಿದಂತೆ, ಪಾಲ್‌ಸ್ಮಾರ್ಟ್ ಮತ್ತು ಆತನ ಪತ್ನಿ ಫಾನ್ ಪೊಟ್ಯಾಶ್, ೫ನೇ ತಾರೀಕಿನಂದು ಮಧ್ಯಾಹ್ನ ಮೂರುಗಂಟೆಗೆ ಶಶಿಕಿರಣಕ್ಕೆ ಆಗಮಿಸಿದರು. ನಾನು ಗೇಟಿನ ತನಕ ಹೋಗಿ ಅವರಿಗೆ ಸುಸ್ವಾಗತ ನೀಡಿದೆ. ಕಾಣಲು ಪಾಲ್ ಎತ್ತರ, ದಪ್ಪಗಿದ್ದರೂ ವಯಸ್ಸು ನಾಲವತ್ತರೊಳಗೇ ಇರಬೇಕು ಅನಿಸಿತು. ಅವರ ವಿವಾಹವಾಗಿ ಕೇವಲ ಆರು ವಾರಗಳು ಕಳೆದಿವೆ ಎಂದರೆ ನಂಬುವದು ಕಷ್ಟ! ಅರ್ಧಾಂಗಿನಿಗಾಗಿ ಆರುವರ್ಷಕಾಲ ಎಡಬಿಡದೇ ಹುಡುಕಾಡಿದೆ! ಎಂದು ವಿನೋದಪೂರ್ಣವಾಗಿ ಹೇಳಿದರು. ಫಾನ್ (ಹರಿಣಿ, ಹೆಣ್ಣು ಚಿಗರೆ)ಳು ಎತ್ತರವಾಗಿದ್ದು

ತೆಳು ಮೈಕಟ್ಟು, ಸುಂದರ ಮುಖ ಮಂಡಲದವಳಾಗಿದ್ದಾಳೆ. ಇಂಥ ಸುಂದರಿಯ ಭಾವಚಿತ್ರಗಳನ್ನು ಕ್ಲಿಕ್ಕಿಸುವದೇ ಅಪರೂಪದ ಅನುಭವ. ಪಾಲ್ ಸ್ಮಾರ್ಟ್ ಬುದ್ಧಿಶಾಲಿ. ಭಾರತದ ಬಗ್ಗೆ ಬಹಳಷ್ಟು ಓದಿಕೊಂಡಿದ್ದಾನೆ. ಯುರೋಪ, ಆಫ್ರಿಕಾದಲ್ಲಿ ತುಂಬಾ ಪ್ರವಾಸ ಮಾಡಿ ಮಾಹಿತಿ ಪಡೆದುಕೊಂಡಿದ್ದಾನೆ. ಅಂತೆಯೇ ಅವನು ಕೇಳುತ್ತಿದ್ದ ಪ್ರಶ್ನೆಗಳಿಗೆ ಚಿಕಿತ್ಸಕವಾಗಿ ಉತ್ತರಿಸಬೇಕಾಗಿತ್ತು. ಸರ್ವರೀತಿಯಿಂದಲೂ ಕೆದಕುವ ಪ್ರಶ್ನೆಗಳನ್ನು ಆತ ಕೇಳುತ್ತಲೇ ಇದ್ದ. ನಾವಿಬ್ಬರೂ ಕ್ರಮವಾಗಿ ಉತ್ತರಿಸುತ್ತಲೇ ಇದ್ದೆವು. ಅವನ್ನೆಲ್ಲ ಡಾಯರಿಯಲ್ಲಿ ಗುರುತು ಹಾಕಿಕೊಳ್ಳುತ್ತಲೇ ಇದ್ದ. ಕೇಳಿದ ಕೆಲವು ಪ್ರಶ್ನೆಗಳು ಹೀಗಿದ್ದವು. ೧) ಬೌದ್ಧಧರ್ಮ ಭಾರತದಲ್ಲಿ ಮುಂದುವರಿದಿದ್ದರೆ ದೇಶಕ್ಕೆ ಒಳಿತಾಗುತ್ತಿತ್ತೆ? ೨) ಭಾರತಕ್ಕೆ ಬ್ರಿಟಿಶ್ ಆಳ್ವಿಕೆಯಿಂದ ಲಾಭ-ಹಾನಿಗಳೇನು? ೩) ದೇಶದ ವಿಭಜನೆಯ ಬಗ್ಗೆ ನಿಮ್ಮ ಹೇಳಿಕೆಯೇನು? ೪) ನೀವು ವೆಬ್‌ಸ್ಯಾಟ್ ಪ್ರಾರಂಭಿಸಲು ಕಾರಣವೇನು? ೫) ಇದರ ಕಾರ್ಯ ನಿರ್ವಹಣೆಯನ್ನು ಪರಿಚಯಿಸುತ್ತೀರಾ? ೬) ದಿನಂಪ್ರತಿ ವೀಕ್ಷಕರ ಸಂಖ್ಯೆ ಎಷ್ಟು? ೭) ನಿಮ್ಮ ಇಂಟರ್‌ನೆಟ್ ಸಾಧನೆಯಿಂದ ನೆಮ್ಮದಿಯಾಗಿದೆಯೇ? ಇತ್ಯಾದಿ.

ನಮ್ಮಲ್ಲಿ ಬರುವ ಮುನ್ನಾದಿನವನ್ನು ಅವರು 'ಇನಫೋಸಿಸ್'ದವರೊಂದಿಗೆ ಕಳೆದಿದ್ದರು. ಅಂತೆಯೇ ನಾನು 'ನಿಮ್ಮ ನಿನ್ನೆ - ಇಂದಿನ ಅನುಭವಗಳು ತೀರ ವಿರುದ್ಧವಾಗಿರಬೇಕಲ್ಲವೇ? ನಿನ್ನೆ 'ಕಂಪ್ಯೂಟರ್ ದೈತ್ಯ' ಕಂಪನಿಯಾದರೆ ಇಂದು ಕಂಪ್ಯೂಟರ್ ಕಂಡರಿಯದವರ ನಡುವೆ ಇದ್ದೀರಿ! ಎನ್ನುತ್ತಿದ್ದಾಗಲೇ ಪಾಲ್ ''ನಿಮ್ಮ ಸಾಧನೆ ಇನ್ಫಾಸಿಸ್‌ಗಿಂತ ಯಾವ ವಿಧದಲ್ಲೂ ಕಡಿಮೆ ಇಲ್ಲ! '೨೦೦೦ಕೆ' ಕಾರಣದಿಂದ ಅವರು ಅಪಾರ ಧನ ಸಂಪಾದಿಸಿರಲು ಸಾಕು. ಅವರಿಗೆ ಆ Infrastructure ಇದ್ದುದರಿಂದ ಸುಲಭಸಾಧ್ಯವಾಯ್ತು. ಆದರೆ ಅದರಿಂದ ಜನಸಾಮಾನ್ಯರ ಅರಿವಿನ ಬೆಳವಣಿಗೆ ಎಷ್ಟು ಸಾಧಿಸಿದೆ ಎಂದು ಹೇಳುವದು ಕಷ್ಟ! ವೈಯಕ್ತಿಕವಾಗಿ ಹೇಳುವದಾದರೆ, ವಿಶ್ವದಾದ್ಯಂತ ಭಾರತದ ಕುರಿತಾದ ಜನಸಾಮಾನ್ಯರ ತಿಳುವಳಿಕೆ ಹೆಚ್ಚಿಸಲು ನಿಮ್ಮ ಕಾಮತ್ ವೆಬ್‌ಸ್ಯಾಟಿನ ಕೊಡುಗೆಯೇ ಒಂದಿಷ್ಟು ಮೇಲು! ಇದರಿಂದಲೇ ತುಂಬ ಅರಿತುಕೊಂಡು, ಒಂದು ಗ್ರಂಥ-ನಿರ್ಮಾಣ ಮಾಡುವದಕ್ಕೆಂದೇ ನಾನು ಭಾರತಕ್ಕೆ ಬಂದಿದ್ದೇನೆ!'' ಎಂದು ವಿವರಿಸಿದರು.

ನಾನು ಬಿಡಿಸಿದ ಕಾವಿಕಲೆಯ ಚಿತ್ರಗಳನ್ನು ಆ ದಂಪತಿ ಹೆಚ್ಚಿನ ಕುತೂಹಲದಿಂದ ವೀಕ್ಷಿಸಿದರು. ಭೀಮ ಬೆಟ್ಕಾದ ಗುಹಾಚಿತ್ರಗಳು ಅಪೂರ್ವವಾಗಿವೆ ಎಂದರು. ನನ್ನ ಅಮೇರಿಕ ಪ್ರವಾಸದ ಬಗ್ಗೆ ಆಸ್ಥೆಯಿಂದ ವಿಚಾರಿಸಿಕೊಂಡರು. ತನಗೆ ಕೆಲ ಪ್ರಕಾಶಕರ ಪರಿಚಯ ಇದೆ. ಅವರಿಂದ ಆ ಪ್ರವಾಸಕಥನದ ಇಂಗ್ಲಿಷ್ ಅನುವಾದ ಪ್ರಕಟಿಸಬಹುದಲ್ಲ? ಅಂದರು. ಮಾದರಿಗಾಗಿ ಎರಡು ಅಧ್ಯಾಯಗಳನ್ನು ಇಂಗ್ಲಿಷಿಗೆ ಅನುವಾದ ಮಾಡಿಕೊಡಿ. ಉಳಿದ ಅಧ್ಯಾಯಗಳ ಸಾರಾಂಶ ಕಳಿಸಿಕೊಡಿ. ನಮ್ಮನ್ನು ಇತರರು ಹೇಗೆ ಕಾಣುತ್ತಾರೆ? ಎಂದು ತಿಳಿಯಲು ಸಹಾಯವಾಗುತ್ತದೆ. ಎಂದು ಕೆಲ ಪ್ರಕಾಶಕರ ಹೆಸರು ಹೇಳಿದರು. ಅರುಂಧತಿ ರಾಯ್, ವಿಕ್ರಮ ಸೇಠ್ ಅಥವಾ

ಉಪಮನ್ಯುರಂಥವರು ಇಂಥವರನ್ನು ಹಿಡಿದು ತಮ್ಮ ಬೇಳೆ ಬೇಯಿಸಿಕೊಳ್ಳುತ್ತಾರೆ. ಅದೆಲ್ಲ ನಮಗೆ ಸಾಧಿಸಿದ್ದಲ್ಲ! ಎಂದು ಅನಿಸಿ, ಅವರು ಹೇಳಿದ್ದಕ್ಕೆಲ್ಲ ಹೂಂಗೊಡುತ್ತಿದ್ದೆ. ಪತ್ನಿ ಫಾನ್ ಕಲಾಶಿಕ್ಷಕಿ. ದಿನಕ್ಕೆ ಆರುಗಂಟೆ ಛಾಯಾಗ್ರಹಣ ಕಲಿಸುತ್ತಾಳಂತೆ. ಅಲ್ಲದೇ ಆಗಾಗ ಛಾಯಾಗ್ರಹಣಕ್ಕೆ ಹೊರಗೆ ವಿದ್ಯಾರ್ಥಿಗಳನ್ನು ನಿಸರ್ಗ ವೀಕ್ಷಣೆಗೆ, ಬೇರೆ ಊರುಗಳಿಗೆಲ್ಲ ಕರೆದೊಯ್ಯಬೇಕಾಗುತ್ತದಂತೆ.

ಅವರಿಗಾಗಿ ಜ್ಯೋತ್ಸ್ನಾ, ಇಡ್ಲಿ ಹಾಗೂ ಕಡಿಮೆ ಖಾರದ ಚಟ್ನಿ ಮಾಡಿದ್ದಳು. ಶಿರಾ ಮಾಡಿದ್ದಳು. ಚೆನ್ನಾಗಿದೆ! ಎಂದು ತಾರೀಫು ಮಾಡಿ ಎರಡು ಬಾರಿ ಇಡ್ಲಿ ಹಾಕಿಸಿಕೊಂಡರು. ಕಾಫಿ ಕುಡಿದರು. ಮರುದಿನ ಅವರು ಕುಂಭಮೇಳ ವೀಕ್ಷಣೆಗೆ ಕಾಶಿಗೆ ಹೋಗುವವರಿದ್ದರು. ಅಲ್ಲಿ ಒಂದು ವಾರವಿದ್ದು ನಂತರ ದಿಲ್ಲಿಗೆ ಹೋಗಿ, ಮೂರು ದಿನ ಕಳೆಯಲಿದ್ದರು. ನಿನಗೆ ಪ್ರತಿವಾರ ಕಳಿಸುವ ಕವರನ್ನು ತೂಕಮಾಡುವ, ಜೈಪುರದಲ್ಲಿ ಕೊಂಡ ಮೂರು ರೂಪಾಯಿಯ ತಕ್ಕಡಿ, ಸಾಯರೆಕ್ಯೂಸಿನಲ್ಲಿ ಕೊಂಡ ನಾಲವತ್ತು ಡಾಲರಿನ ಟ್ಯಾಪರ್‍ಯಾಟರ್, ನಮ್ಮ ಹೊರಕೋಣೆಯ ಗ್ಯಾಝೇಟಿಯರ್, ವಿಶ್ವಕೋಶಗಳ ರ್‍ಯಾಕ್, ಹಾಗೂ ಆಮ್ಮಾರ ಅಡಿಗೆಕೋಣೆಯ ಫೋಟೊ ತೆಗೆದಿದ್ದಾರೆ! ತುಂಬ ಅಸ್ತವ್ಯಸ್ತವಾಗಿದೆ ಬೇಡ! ಎಂದು ಜ್ಯೋತ್ಸ್ನಾ ಪ್ರತಿಭಟಿಸಿದರೂ, ''ಸರಿಯಾಗಿ ಮೂರೂ ಹೊತ್ತು ಅಡಿಗೆ ಮಾಡುವ ಯಾರ ಕಿಚನ್ ತುಂಬ ವ್ಯವಸ್ಥಿತವಾಗಿ ಝುಳಝುಳ ಇರುತ್ತದೆ, ಹೇಳು ನೋಡೋಣ?'' ಎಂದು ಮರು ಸವಾಲು ಹಾಕಿ ಕ್ಲಿಕ್ಕಿಸುತ್ತಲೇ ಇದ್ದಳಂತೆ. ''ನಿನಗೆ ಗೊತ್ತೆ? ಬ್ರಾಝಿಲ್, ಪೇರುಗಳಲ್ಲಿ (ರೆಡ್) ಇಂಡಿಯನ್‌ರ ಗುಡಿಸಲು ಹೊಕ್ಕು ಕ್ಲಿಕ್ಕಿಸಿದ್ದೇನೆ!'' ಎಂದಳಂತೆ. ಮೂರುಗಂಟೆಗಳ ಕಾಲ ನಮ್ಮೊಡನೆ ಕಳೆದಿದ್ದರು. ನಾನು ಅವರೊಡನೆ ಕೆಳಗಿಳಿದು ಹೋಗಿ ಆಟೋ ಹತ್ತಿಸಿ, 'ವಿಕ್ಟೋರಿಯಾ ಹೊಟೇಲಿಗೆ ಸರಿಯಾಗಿ ಮುಟ್ಟಿಸುವಂತೆ ಡ್ರಾಯವರನಿಗೆ ಹೇಳಿ ಬೀಳ್ಕೊಂಡೆ.

ಡಾ. ಸ್ಟಿಫನ್ ಪಿ. ಹುಯ್ಲರ್ ಅವರ ಭಾರತದಲ್ಲಿಯ, 'ದೇವರ ಭೇಟಿ' (Meeting God: Elements of devotion in India) ಎಂಬ ವರ್ಣಛಾಯಾ ಚಿತ್ರಗಳ ಪ್ರದರ್ಶನಕ್ಕೆ, ಮದ್ರಾಸಿನ ಅಮೇರಿಕನ್ ಕನ್ಸಲೇಟಿನಿಂದ ವೈಯಕ್ತಿಕ ಆಮಂತ್ರಣ ಬಂದದ್ದರಿಂದ, ನಾನು ಆಮ್ಮಾ, ಇಲ್ಲಿಯ ಚಿತ್ರಕಲಾ ಪರಿಷತ್ತಿಗೆ ಹೋಗಿದ್ದೆವು. ಅಲ್ಲಿ ಎಸ್. ದಿವಾಕರ ಬಂದಿದ್ದರು. ನಮ್ಮನ್ನು ಕನ್ಸಲೇಟ ಅಧ್ಯಕ್ಷರಿಗೆ ಪರಿಚಯಿಸಿದರು. ಅವರಿಗೆ ನಮ್ಮ ಇಂಟರ್‌ನೆಟ್ ಪರಿಚಯದ ಕಾರ್ಡು ಕೊಟ್ಟು ಸಂಕ್ಷೇಪವಾಗಿ ಪರಿಚಯಿಸಿ ಸಿ.ಡಿ.ರೋಮಿನ ಶುಭಾಶಯ ಕಾರ್ಡನ್ನು ಕೊಟ್ಟೆ. ಅವರು ಅತಿ ಆಸಕ್ತಿಯಿಂದ ಆಲಿಸಿ ಹಲವಾರು ಕುತೂಹಲಕಾರಿ ಪ್ರಶ್ನೆ ಕೇಳಿದರು. ಅವುಗಳಲ್ಲಿ ಮುಖ್ಯವಾದವುಗಳೆಂದರೆ ಯಾವುದೇ ಧನ ಸಹಾಯವಿಲ್ಲದೇ ಇದನ್ನು ಮಾಡಲು ಹೇಗೆ ಸಾಧ್ಯವಾಯಿತು? ಎನ್ನುವದು. ಅವರಿಗೆ ಇನ್ನೂ ವಿವರಗಳನ್ನು ಅರಿಯುವದರಲ್ಲಿ ಹೆಚ್ಚು ಆಸಕ್ತಿ ಇದ್ದರೂ, ಅವರೊಂದಿಗೆ ಮಾತನಾಡಲು ಆಗಂತುಕರು ನಾ ಮುಂದು, ತಾ ಮುಂದು ಎಂದು ಮುಗ್ಗರಿಸುತ್ತಲೇ ಇದ್ದುದರಿಂದ ನಾವು ಹಿಂದೆ ಸರಿದೆವು. ನಾನು

ಕೊಟ್ಟ ಕಾರ್ಡು, ವಿವರಗಳನ್ನು ಅನುಮತಿ ಪಡೆದು ತಮ್ಮೊಂದಿಗೆ ಇಟ್ಟುಕೊಂಡರು. ಅಮೇರಿಕನ್ನರಿಗೆ ಪ್ರಶಂಸೆಯ ಮಾತು ನಾಲಿಗೆ ತುದಿಯಿಂದ ಉದಯಿಸಿ ಬರುವದರಿಂದ, ಅವರ ಭೇಟಿಗೆ ಅಷ್ಟೊಂದು ಮಹತ್ವ ಕೊಡಲಾಗದು!

ಹುಯ್ಲಿರ್ ಅವರ ಚಿತ್ರಗಳಿಗೆ ಹೋಲಿಸಿದರೆ ನನ್ನ ಛಾಯಾಗ್ರಹಣ ಯಾವ ಸ್ಥಾನದಲ್ಲಿದೆ? ಎಂದು ಅರಿಯುವದಕ್ಕಾಗಿ ಈ ಪ್ರದರ್ಶನಕ್ಕೆ ಹೋಗಿದ್ದೆ. ಕಾಯಾ, ವಾಚಾ, ಮನಸಾ ಯತ್ನಿಸಿದರೆ ನಾನೂ ಡಾ. ಹುಯ್ಲರ್ ಜೊತೆಗೆ ಸ್ಪರ್ಧಿಸಬಹುದು, ಎಂಬ ಆತ್ಮವಿಶ್ವಾಸ ಮೂಡಿದೆ. ಅಲ್ಲದೇ ಅವರು ಆರಿಸಿಕೊಂಡ ವಿಷಯದ ಮೇಲೆಯೇ ನಾನು ಕ್ಲಿಕ್ಕಿಸಿದ ಹಲವಾರು ಛಾಯಾಚಿತ್ರಗಳಿವೆ. ಅವುಗಳನ್ನು ಜ್ಞಾಪಿಸಿಕೊಂಡು, ಅವರವುಗಳಿಗಿಂತ ಇವು ಹೆಚ್ಚು ಅರ್ಥ ಪೂರ್ಣವಾಗಿವೆ! ಎಂದು ಜ್ಯೋತ್ಸ್ನಾ ಅಭಿಪ್ರಾಯ ಪಟ್ಟಳು. ಅವರಿಗಿರುವ ಜನಬಲ, ಧನಬಲ ಮತ್ತು ಇನ್ನಿತರ ಸವಲತ್ತುಗಳು ನನಗೆ/ನಮಗೆ ಇಲ್ಲ ಎನ್ನುವದು ಗಮನೀಯ! ಅವರು ಪ್ರದರ್ಶನಕ್ಕೆ ಇಟ್ಟ ೧೫೨ ವರ್ಣಛಾಯಾಚಿತ್ರಗಳಲ್ಲಿ ಕೆಲವನ್ನು ಬಳಸಿ SPAN ಮಾಸಪತ್ರಿಕೆಯಲ್ಲಿ ಒಂದು ಲೇಖ ಪ್ರಕಟವಾಯಿತು. ಅಮೇರಿಕೆಯ ಎಲ್ಲ ಮಹಾನಗರಗಳಲ್ಲಿ ಇವರ ಛಾಯಾಚಿತ್ರಗಳ ಪ್ರದರ್ಶನ ಏರ್ಪಟ್ಟಿತು. ಈಗ ಆ ಪ್ರದರ್ಶನ, ಭಾರತವನ್ನು ಸಂಚರಿಸಲಿದೆ. ಇಲ್ಲಿಯ ಚಿತ್ರಕಲಾ ಪ್ರದರ್ಶನಕ್ಕೆ ಅಮೇರಿಕನ್ ಕಾನ್ಸಲೇಟ ಹಣದ ಹೊಳೆ ಹರಿಸಿದೆ. ತಿಂಡಿ-ತೀರ್ಥಗಳ ವಿತರಣೆ ವೈಭವೋಪೇತವಾಗಿತ್ತು.

ಚಿತ್ರಕಲಾ ಪರಿಷತ್ತಿನವರು, ಈ ಚಿತ್ರಪ್ರದರ್ಶನಕ್ಕೆ ತುಂಬ ಖುಷಿಯಿಂದ ಒಪ್ಪಿಕೊಂಡಿರಲು ಸಾಕು. ಆದರೆ ಇಂತಹವೇ ಪ್ರದರ್ಶನವನ್ನು ಒಬ್ಬ ಭಾರತೀಯ ಅಥವಾ ಒಬ್ಬ ಬೆಂಗಳೂರಿಗನು ಏರ್ಪಡಿಸುತ್ತೇನೆ ಎಂದರೆ ಖಂಡಿತ ಒಪ್ಪಿಕೊಳ್ಳುತ್ತಿರಲಿಲ್ಲ. ಉದಯ ಜಾದುಗಾರರು ಕ್ಲಿಕ್ಕಿಸಿದ, 'ನೂರು ಅಪರೂಪದ ಕನ್ನಡಿಗರು' ಎಂಬ ಭಾವಚಿತ್ರಗಳ ಪ್ರದರ್ಶನಕ್ಕೆ ಇದೇ ಚಿತ್ರಕಲಾ ಪರಿಷತ್ತಿಗೆ ಹತ್ತು ಬಾರಿ ಎಡತಾಕಿ ದಿನಾಂಕ ಕೇಳಿದರೂ ಇನ್ನೂವರೆಗೆ ದಯಪಾಲಿಸಿಲ್ಲ. ಪ್ರದರ್ಶನದ ಏರ್ಪಾಡಿಗೆ ಚಿತ್ರಗಳ ಯೋಗ್ಯತೆಯೇ ತಳಹದಿಯಾಗಿಲ್ಲ, ಎಂಬುದು ಮನವರಿಕೆಯಾಯಿತು. ನಾನು ಅಭ್ಯಸಿಸಿ ಕ್ಲಿಕ್ಕಿಸಿದ ಕಾವಿಕಲೆಯ ಚಿತ್ರ, ಮಾಹಿತಿಗಳು ಡಾ. ಹುಯ್ಲರ್ ಅವರ ಕೊಡುಗೆ ಆಗಿದ್ದರೆ, ಅವೆಲ್ಲ ವಿಶ್ವದಾದ್ಯಂತ ಪ್ರದರ್ಶನಗೊಳ್ಳುವದರಲ್ಲಿ ಸಂದೇಹವೇ ಇರುತ್ತಿರಲಿಲ್ಲ. ನಮ್ಮ ಪರಿಮಿತಿಯಲ್ಲಿ ಏನೆಲ್ಲ ಸಾಧಿಸಲಾಗುವದೋ ಅಷ್ಟಕ್ಕೇ ನಮ್ಮ ಚಟುವಟಿಕೆಗಳನ್ನು ಸೀಮಿತಗೊಳಿಸೋಣ, ಆಗದೇ?

★ ★ ★

ಡಾ. ಸ್ಟೀಫನ್ ಹುಯ್ಲರ್‌ರು ನಿನಗೆ (E-mail) ಪತ್ರ ಬರೆದು ನಮ್ಮ ವೆಬ್‌ಸ್ಶಾಟ್ ಮೆಚ್ಚಿಕೊಂಡದ್ದು ಖುಷಿಕೊಟ್ಟಿತು. ಅವರ 'Painted Prayers' (ರಂಗೋಲಿ ಕುರಿತಾದ ಸಚಿತ್ರ ಪುಸ್ತಕ) ಪ್ರಸಿದ್ಧವಾಗಿದ್ದಂತೆ ಇತ್ತೀಚೆಗೆ ಏರ್ಪಟ್ಟ ದೇವಪೂಜೆಯ ಪ್ರಕಾರಗಳ ಪ್ರದರ್ಶನ ಸ್ವಾರಸ್ಯಕರವಾಗಿತ್ತು. ಇಂಥವರೂ ತಮ್ಮ ಚಿತ್ರಕಲಾ

ಪ್ರದರ್ಶನ ಏರ್ಪಡಿಸಲು ನಿನ್ನ ಸಹಾಯ ಕೋರಿದ್ದು ಓದಿ ಮೋಜೆನಿಸಿತು. ಅಮೇರಿಕನ್ನರಿಗೆ ಯಾವುದೇ ಕೆಲಸ ಸಾಧಿಸಲು, ವಿಪರೀತ ಸವಲತ್ತುಗಳು ಬೇಕೇ ಬೇಕಾಗುತ್ತವೆ. ಹಣದ ಹೊಳೆ ಹರಿಸದ ಹೊರತು ಏನೂ ಹೊರಬರುವದು ಸಾಧ್ಯವೇ ಇಲ್ಲ! ಅವರ ಪೂಜಾವಿಧಾನದ ವರ್ಣಚಿತ್ರಗಳನ್ನು ಬೆಂಗಳೂರಿನ ಚಿತ್ರಕಲಾ ಪರಿಷತ್ತಿನಲ್ಲಿ ಪ್ರದರ್ಶಿಸುವದಕ್ಕಾಗಿ, ಮದ್ರಾಸಿನ ಅಮೇರಿಕನ್ ಕಾನ್ಸಲೇಟ್ ಮಾಡಿದ ವೆಚ್ಚದ, ಏರ್ಪಾಡುಗಳನ್ನು ನೋಡಿಯೇ ತಿಳಿದುಕೊಳ್ಳಬೇಕು. ಈ ಪ್ರದರ್ಶನಕ್ಕೆ ನಮ್ಮಿಬ್ಬರನ್ನು ಆಮಂತ್ರಿಸುವದಕ್ಕಾಗಿಯೇ ತಲಾ, ಹದಿನೆಂಟು ರೂಪಾಯಿಗಳನ್ನು ಅಂಚೆಗೆ ವ್ಯಯಿಸಿದ್ದಾರೆ! ಇಷ್ಟಾಗಿ ಜನಸಾಮಾನ್ಯರು ಇಂಥ ಪ್ರದರ್ಶನ ನೋಡುವ ಗೋಜಿಗೆ ಹೋಗುವದಿಲ್ಲ, ಎಂಬ ಮಾತು ಸರ್ವವಿದಿತ. ಪರಿಸ್ಥಿತಿ ಹೀಗಿರುವಾಗ ಸ್ಟಿಫನ್ ಕೇಳಿಕೊಂಡ, ಸಿರಿವಂತ ಭಾರತೀಯ ವರ್ತಕರಾದಿ ಜನ ಈ ಪ್ರದರ್ಶನವನ್ನು ಕಾಲೇಜು-ಸ್ಕೂಲುಗಳ ಮಕ್ಕಳಿಗೆ ಮುಟ್ಟಿಸುವದಕ್ಕಾಗಿ ದೇಣಿಗೆಯನ್ನು ಎಂದಾದರೂ ಕೊಡಲು ಸಾಧ್ಯವೇ? ಅದೂ ನಿನ್ನಂಥವರ ಮುಖಾಂತರ? ಪ್ರದರ್ಶನ ಏರ್ಪಡಿಸಲು ನಾವು ನಾಲ್ವರು, ನೆರವಿಗೆ ಯಾರೊಬ್ಬರ ಮುಂದೆಯೂ ಕೈ ಒಡ್ಡದೇ, ಒಂದು ಅದ್ವಿತೀಯ ವೆಬ್‌ಸ್ಯಾಟ್ ನಡೆಸಿ, ಅಪೂರ್ವ ವಿಶ್ವದಾಖಲೆಯನ್ನೇ ನಿರ್ಮಿಸಿದ್ದೇವೆ, ಎಂದರೆ ಅತಿಶಯೋಕ್ತಿಯಾಗಲಾರದು!

ಈ ಸಾಹಸದಿಂದ ಆತ್ಮೀಯರು, ನೆಂಟರು, ಪರಿಚಿತರು, ಊರವರು, ದೇಶಬಾಂಧವರು, ಇತರರು, ನಾವು ಅಸಾಮಾನ್ಯರೆಂದು ಗುರುತಿಸಿ ಗೌರವಿಸಲಾರಂಭಿಸಿದ್ದಾರೆ. ಅದೆಷ್ಟೆ ಕಂಪ್ಯುಟರ್ ಪರಿಣತರಿರಲಿ, ಧನಿಕರಿರಲಿ, ಅವರಿಂದ ಸಾಧಿಸಲಾಗದ್ದನ್ನು ಮಾಡಿ ತೋರಿಸಿದ್ದೇವಷ್ಟೇ? ನಿನಗೆ ಬರುತ್ತಿರುವ ಅಸಂಖ್ಯಾತ E-mail ಪತ್ರಗಳೇ ಇದಕ್ಕೆ ಪ್ರಮಾಣವಲ್ಲವೇ? ನನ್ನ ಡಾಕ್ಟರೇಟ್, ಅಮ್ಮಾರ ಆಕಾಶವಾಣಿ ಉಚ್ಚ ಪದವಿ, ನಿಮ್ಮಿಬ್ಬರ ಪದವಿಗಳು, ವಾಸದ ವಿಸ್ತಾರ ಮನೆಗಳನ್ನು ಮೆಚ್ಚದೇ ಇದ್ದವರು ಕೂಡ, ಇಂಟರ್‌ನೆಟ್ ಪ್ರಗತಿ ವೀಕ್ಷಿಸಿ ಬಟ್ಟು ಕಚ್ಚಲಾರಂಭಿಸಿದ್ದಾರೆ! ಇದರ ಓಘ ಎಷ್ಟು ದಿನದ್ದೆಂದು ಕಾದು ನೋಡಬೇಕಾಗಿದೆ.

◆ ◆ ◆

★ ಕೊನೆಗೊಮ್ಮೆ ಉದಯ ಔದುಗಾರರ ನೂರು ಅಪರೂಪದ ಕನ್ನಡಿಗರು, ಪ್ರದರ್ಶನ ೨೦೦೪ನೇ ವರ್ಷದ ಜನೇವರಿ ತಿಂಗಳಲ್ಲಿ ಅದೇ ತಾಣದಲ್ಲಿ ಏರ್ಪಟ್ಟಿತು.

೪೩. ಕ್ಲಿಕ್ಕಿಸುವ ಸಾಹಸ

ಆದಿವಾಸಿಗಳ ಅಥವಾ ವನವಾಸಿಗಳ ಛಾಯಾಗ್ರಹಣ ಎಷ್ಟು ಕಷ್ಟವೆಂದು ಯತ್ನಿಸಿದಾಗಲೇ ತಿಳಿಯಬೇಕು. ಮಧ್ಯ ಪ್ರದೇಶ ಸಂಚಾರದಲ್ಲಿ ಇದನ್ನು ಸಾಕಷ್ಟು ಅನುಭವಿಸಿದ್ದೆ. ನಮ್ಮ ಕರ್ನಾಟಕದವರೂ, 'ಫೋಟೊ' ಪುಕ್ಕತನಕ್ಕೆ ಕಡಿಮೆಯಿಲ್ಲವೆಂದು ಸಿದ್ದಿಯರು ತೋರಿಸಿಕೊಂಡಿದ್ದಾರೆ. ಆಫ್ರಿಕನ್ ಮೂಲದ, ಉತ್ತರ ಕನ್ನಡ ಜಿಲ್ಲೆಯಲ್ಲಿ ಬೀಡು ಬಿಟ್ಟಿರುವ ಸಿದ್ದಿಯರನ್ನು ತೀರ ಹತ್ತಿರದಿಂದ ಕ್ಲಿಕ್ಕಿಸುವ ಅವಕಾಶ ೮-೧೨-೧೯೮೩ರಲ್ಲಿ ಲಭಿಸಿತ್ತು. ಅಪರಿಚಿತರನ್ನು ಕಂಡೊಡನೆ ಕಾಲಿಗೆ ಬುದ್ಧಿ ಹೇಳುವದರಿಂದ ಅವರನ್ನು ಒಪ್ಪಿಸಿ ಕ್ಲಿಕ್ಕಿಸುವದು ಹರಸಾಹಸವಾಯ್ತು! ನನ್ನ ಚಿತ್ರಗಳು ಉತ್ತರ ಕನ್ನಡ ಜಿಲ್ಲೆಯ ಗ್ಯಾಝೆಟಿಯರದಲ್ಲಿ ಪ್ರಕಟವಾಗಿವೆ. ಆಗಿನ ಮಹಾರಾಷ್ಟ್ರ ರಾಜ್ಯಪಾಲರ ಪತ್ನಿ ಶಾಂತಿ ಸಾದಿಕ್ ಅಲಿಯವರು ನಮ್ಮ ಮನೆಗೇ ಬಂದು ತಮ್ಮ ಪುಸ್ತಕಕ್ಕಾಗಿ ನಾಲ್ಕೆಂಟು ಛಾಯಾಚಿತ್ರಗಳನ್ನು ನನ್ನಿಂದ ಪಡೆದಿದ್ದರು. ಅವುಗಳನ್ನು ಪ್ರಕಟಿಸಿದರೋ ಇಲ್ಲವೊ ತಿಳಿಯದು!

ಶತಮಾನಗಳಿಂದ ಸಿದ್ದಿಯರು ವಿವಿಧ ರೀತಿಯಿಂದ ಶೋಷಣೆಗೆ ಒಳಪಟ್ಟಿದ್ದರಿಂದ ತೀರ ಪುಕ್ಕಲಾಗಿದ್ದಾರೆ. ಜನರಹಿತವಾದ ಕಾಡುಗಳಲ್ಲಿ ಹುಲ್ಲಿನ ಛಾವಣಿಯ ಹತ್ತೆಂಟು ಗುಡಿಸಲುಗಳೇ ಇವರ ಹಳ್ಳಿ. ಕೆಲವರು ಕೃಷಿಯನ್ನು ಅವಲಂಬಿಸಿದ್ದಾರೆ. ಜೀತದಾಳಾಗಿ ದುಡಿಯುವವರೇ ಬಹುಸಂಖ್ಯಾಕರು. ಅರಣ್ಯ ಖಾತೆಗಾಗಿ ದಿನಗೂಲಿ ಮಾಡುತ್ತಾರೆ. ದಾಂಡೇಲಿ ಕಾಗದ ಕಾರಖಾನೆಯವರು, ಬೇಕಾದ ಬಿದುರು ಕಡಿದು ಸಾಗಿಸಲು ಇವರನ್ನು ನೇಮಿಸಿಕೊಳ್ಳುತ್ತಾರೆ. ಕಟ್ಟಿಗೆ ಒಡೆಯುವದು, ಬೇಟೆಯಾಡುವದು, ಜೇನು ಸಂಗ್ರಹಿಸುವದು ಮಾಡುತ್ತಾರೆ. ಹೆಚ್ಚಿನ ವೃತ್ತಿಗಳೆಲ್ಲ ತಾತ್ಕಾಲಿಕವಾದ್ದರಿಂದ, ಎಷ್ಟೋ ಸಮಯವನ್ನು ನಿರುದ್ಯೋಗಿಯಾಗಿಯೇ ಕಳೆಯಬೇಕಾಗುತ್ತದೆ. ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ ಸಿದ್ದಿಯರಿದ್ದಂತೆ, ಕ್ರೂರ ಹುಲಿ-ಕರಡಿಗಳೊಂದಿಗೆ ದೊಣ್ಣೆ ಬರಿಗೈಯಿಂದ ಹೋರಾಡಿದವರಿದ್ದಾರೆ.

ಇತ್ತೀಚಿನ ವರ್ಷಗಳಲ್ಲಿ ಅವರ ಶೋಚನೀಯ ಸ್ಥಿತಿಯನ್ನು ಗಮನಿಸಿದ ರಾಜ್ಯ, ಕೇಂದ್ರ ಸರಕಾರಗಳೆರಡೂ ಎಚ್ಚತ್ತು ಅವರ ಸರ್ವತೋಮುಖ ಬೆಳವಣಿಗೆಯತ್ತ ಲಕ್ಷ್ಯ ಪೂರೈಸಿವೆ. ಅನೇಕರ ಮಕ್ಕಳು ಈಗ ಪ್ರಾಥಮಿಕ, ಮಾಧ್ಯಮಿಕ ಶಾಲೆಗಳಲ್ಲಿ ಓದುತ್ತಿದ್ದಾರೆ. ಕೆಲವರು ಕಾಲೇಜು ಮೆಟ್ಟಿಲು ಹತ್ತಿದ್ದಾರೆ. ಅವರಲ್ಲಿ ಒಳ್ಳೆ ಆಹಾರ, ಇತರ ಸವಲತ್ತುಗಳನ್ನು ಪಡೆದು ಆಟೋಟಗಳಲ್ಲಿ ಮುಂದುವರಿದ ತರುಣ-ತರುಣಿಯರಿದ್ದಾರೆ. ಹೀಗಾಗಿ ಮೈ ಚಳಿ ಬಿಟ್ಟು ಇತರರೊಂದಿಗೆ ಬೆರೆಯುತ್ತಿದ್ದಾರೆ. ಮೂಲ ಆಫ್ರಿಕನ್ ಮೈಬಣ್ಣ ಅಥವಾ ಅತಿ ಗುಂಗುರು ಕೂದಲು, ಅವರಲ್ಲಿ ಈಗ ಉಳಿದಿಲ್ಲ. ಅವರೆಲ್ಲರೂ ಕೊಂಕಣಿ ಮಾತನಾಡುತ್ತಾರೆ. ತಮ್ಮ ಬುಡಕಟ್ಟಿನ ಮತ ಮರೆತು ಹಿಂದು, ಕ್ರೈಸ್ತ ಹಾಗೂ ಮುಸಲ್ಮಾನ ಧರ್ಮಕ್ಕೆ ಸೇರಿದ್ದಾರೆ.

ಇಷ್ಟಾದರೂ ಅವರಲ್ಲಿ ಪರಸ್ಪರ ವಿವಾಹಗಳು ನಡೆಯುತ್ತಿವೆ. ಅವರು ತಮ್ಮ ಹೆಸರು ಗಂಗಾ, ಲಕ್ಷ್ಮಿ, ವಿಷ್ಣು, ಗಣೇಶ, ಬಾಲಚಂದ್ರ ಎಂದು ಹೇಳಿಕೊಂಡಾಗ ಅದೆಷ್ಟು ಅಭಿಮಾನವೆನಿಸುತ್ತದೆ ಗೊತ್ತೆ? ಹಿಂದೂಧರ್ಮ ಕಾಡು-ಮೇಡು, ನಾಡು ನಗರವಾಸಿಗಳನ್ನೆಲ್ಲ ಭೇದ ಮಾಡದೇ ತಬ್ಬಿಕೊಂಡಿದೆ. ಎಲ್ಲ ಆಗಂತುಕರನ್ನು ತಮ್ಮವರನ್ನಾಗಿ ಮಾಡಿಕೊಳ್ಳುವ ವಿಶಾಲ ಮನೋಭಾವ ನಮ್ಮಲ್ಲಿದೆಯೆಂದೇ, ಸಿರಿಯನ್ ಕ್ರಿಶ್ಚಿಯನ್, ಯಹೂದಿ, ಫಾರಸಿ, ಆರ್ಮಿನಿಯನ್, ಇರಾಣಿ, ಸಿದ್ದಿ ಮೊದಲಾದವರೆಲ್ಲ ನಮ್ಮಲ್ಲಿ ಬೆರೆತು ಹೋದರು. ಆದರೆ ಹೊರಗಿನಿಂದ ಬಂದರೂ ಹಿಂದುಗಳಾಗಿ ಬದುಕುವ ವಿರಳರಲ್ಲಿ ಸಿದ್ದಿಯರಿದ್ದಾರೆ.

ಅಗಸ್ಟ ೧೫, ೨೦೦೧ಕ್ಕೆ ನಾವು ಯಲ್ಲಾಪುರ ಮಾರ್ಗವಾಗಿ ಧಾರವಾಡಕ್ಕೆ ಹೊರಟಾಗ ಶಾಲಾಮಕ್ಕಳೆಲ್ಲ ಅಲ್ಲಲ್ಲಿಯ ಊರುಗಳಲ್ಲಿ ಧ್ವಜವಂದನೆಗೆ ಹೊರಟಿದ್ದವು. ಅವರಲ್ಲಿ ಎಷ್ಟೊ ಸಿದ್ದಿ ಮಕ್ಕಳಿದ್ದವು. ಸಮವಸ್ತ್ರ ಧರಿಸಿದ ಈ ಮಕ್ಕಳು ಒಂದಿಷ್ಟೂ ಅಳುಕಿಲ್ಲದೇ ಛಾಯಾಗ್ರಹಣಕ್ಕೆ ಒಪ್ಪಿಕೊಂಡಿದ್ದರಿಂದ ಅವರಲ್ಲಿ ಬಂದ ಬದಲಾವಣೆ ನೋಡಿ ಸಂತೋಷವಾಯಿತು. ಹಿಂಜರಿದ ಕೆಲವರನ್ನು ಕೂಡ ಸಂಗಾತಿಗಳು ಒಪ್ಪಿಸಿ ಕರೆತಂದು ತಮ್ಮೊಡನೆ ನಿಲ್ಲಿಸಿಕೊಂಡವು.

ಅಗಸ್ಟ ೧೬ಕ್ಕೆ ಅದೇ ದಾರಿಯಿಂದ ತಿರುಗಿ ಹೊನ್ನಾವರಕ್ಕೆ ಹೊರಟಾಗ, ಕ್ಯಾಮರಾಕ್ಕೆ ಇನ್ನೂ ಹೆಚ್ಚಿನ ಗ್ರಾಸ ಒದಗಿತು. ಯಲ್ಲಾಪುರ ಬಸ್‌ನಿಲ್ದಾಣದಲ್ಲಿ ಕೆಲವು ಸಿದ್ದಿಗಳು ಸಿಕ್ಕರು. ಕಿರವತ್ತಿಯ ಹೊಟೆಲ ಒಂದರಲ್ಲಿ ವಿಚಾರ ವಿಮರ್ಶೆ ನಡೆಸಿದ ಮಾತಾ-ಪುತ್ರರನ್ನು ಕಂಡೆವು. ಆತನ ಕ್ರೀಡಾಕಾರನ ಬಟ್ಟೆ, ಶ್ಯೂಗಳನ್ನು ಕಂಡಾಗ ನೀನು ಆಟಗಾರನೇ? ಎಂದು ಕೇಳಿದಾಗ ಅಲ್ಲಗಳೆದ. ಅವರು ನಾಶ್ತಾ ಮುಗಿಸಿ ಹೊರಟಾಗ, ಪಕ್ಕದ ಟೇಬಲ್ಲಿಗೆ ಕುಳಿತಿದ್ದ ನಾನು, ಆತನು ಕರವಸ್ತ್ರ ಬಿಟ್ಟು ಹೊರಟಿದ್ದನ್ನು ಗಮನಿಸಿ, ಕೂಗಿ ಕರೆದು ಹೇಳಿದೆ. ಆತನ ವರ್ತನೆಯಲ್ಲಿ ಪರಿವರ್ತನೆಯಾಯಿತು. ತನ್ನ ಊರು, ತಂದೆ, ಓದಿನ ವಿಚಾರ ಹೇಳಿದ. ತಾಯಿ ಮಗ ಛಾಯಾಗ್ರಹಣಕ್ಕೆ ಒಪ್ಪಿಕೊಂಡರು.

ಮುಂದೆ ಸಾಗುತ್ತಿದ್ದಾಗ ಕಾಡಿನ ಬಳಿ ಬಾರದ ಬಸ್ಸಿಗಾಗಿ ಯುವತಿಯೋರ್ವಳು ನಿಂತಿದ್ದಳು. ನಾವು ವಾಹನ ನಿಲ್ಲಿಸಿ ಇಳಿದೆವು. ಮಾತನಾಡಲು ಯತ್ನಿಸಿದಾಗ ಓಡಿ ಹೋಗುವದರಲ್ಲಿದ್ದಳು. ಜ್ಯೋತ್ಸ್ನಾ ಕೊಂಕಣಿಯಲ್ಲಿ ಮಾತನಾಡಿಸಿ ಎಲ್ಲಿಗೆ ಹೋಗ್ತಾ ಇದ್ದಿಯಾ? ನಾವು ಅದೇ ಮಾರ್ಗವಾಗಿ ಹೋಗುತ್ತಿದ್ದೇವೆ, ಎಂದೊಡನೆ ತನ್ನ ಅವಿವೇಕ ತನಕ್ಕೆ ನಾಚಿಕೊಂಡಳು. ನಮ್ಮೊಡನೆಯೆ ಬಂದಳಲ್ಲದೇ, ತಾನು ಇಳಿದ ಹಳ್ಳಿಯಿಂದ ಕೂಡಲೇ ಮನೆಗೆ ಹೋಗದೇ, ಶಾಲೆ ಬಿಟ್ಟು ಬರುತ್ತಿದ್ದ ಮಗ-ಮಗಳು, ಇತರ ಹುಡುಗರನ್ನೂ ಕರೆತಂದು ಕ್ಲಿಕ್ಕಿಸಲು ನೆರವು ನೀಡಿದಳು. ಹೀಗಾಗಿ ''ಆಫ್ರಿಕನ್ - ಇಂಡಿಯನ್'' ಎನ್ನಬಹುದಾದ ಸಿದ್ದಿಯರ ಅಪೂರ್ವದ ಛಾಯಾಚಿತ್ರಗಳನ್ನು ಹಿಡಿಯುವಂತೆ ಆದದ್ದಕ್ಕೆ ನೆಮ್ಮದಿಯೆನಿಸಿದೆ.

ನಿನ್ನ ಕವರು ತಲುಪಿದೆ. ನ್ಯೂಯಾರ್ಕ ವಿಶ್ವವಿದ್ಯಾಲಯ ಮತ್ತು ಎಮ್. ಆಯ್.ಟಿ.

(Massachusetts Institute of Technology) ಯವರು ಜಂಟಿಯಾಗಿ ಪ್ರಕಟಿಸಿದ 'ತೊಗಲು ಗೊಂಬೆ' ಕುರಿತಾದ ಸಂಶೋಧನಾ ಲೇಖ ಓದಿ ಮೋಜೆನಿಸಿತು. ಒಂದು ದೃಷ್ಟಿಯಲ್ಲಿ ನಮ್ಮದೂ ಸಂಶೋಧನಾಲೇಖವೆಂದೇ ಹೇಳಬೇಕು. ಅವರ ಲೇಖನದ ಜೊತೆಗೆ ಪ್ರಕಟಿಸಿದ ಛಾಯಾಚಿತ್ರಗಳು ಏನೂ ಚೆನ್ನಾಗಿಲ್ಲ. ಹಿಂದಿನ ಪತ್ರದಲ್ಲಿ ತೊಗಲುಗೊಂಬೆಯಾಟದ ರಾಜುವಿನ ಪರಿಚಯ ಮಾಡಿಕೊಂಡ ವಿಚಾರ ಬರೆದಿದ್ದೆನಲ್ಲವೇ? ಅವರ ಪ್ರದರ್ಶನ ಏನೂ ಆಕರ್ಷಕವಾಗಿರಲಿಲ್ಲ. ಸ್ವತಃ ತಾನೇ ಸೂತ್ರಧಾರ-ಭಾಗವತಿಕೆಯ ಹೊಣೆ ಹೊತ್ತಿದ್ದ. ಕುಟುಂಬದ ಹೆಂಗಸರು ಗೊಂಬೆಗಳನ್ನು ಕುಣಿಸುತ್ತಿದ್ದರು. ಇನ್ನೊಬ್ಬ ತಾಳ ನುಡಿಸುತ್ತಿದ್ದರೆ. ಜೊತೆಯವರು ಪೇಟಿ - ಮೃದಂಗದ ಹಿಮ್ಮೇಳ ಕೊಟ್ಟಿದ್ದರು. ಒಬ್ಬ ಹೆಣ್ಣುಮಗಳು ಹಾಡುತ್ತಿದ್ದಳು. ರಾಜು, ಸೌಜನ್ಯದಿಂದ ಮಾತನಾಡಿಸಿದ. ಗೊಂಬೆಗಳ ಛಾಯಾಚಿತ್ರಣಕ್ಕೆ ಒಪ್ಪಿಗೆ ನೀಡಿದ. ಮರುದಿನ ಮುಂಜಾನೆ ತಾನು ಇಳಿದುಕೊಂಡ ಸ್ಥಳಕ್ಕೆ ಬರಲು ಹೇಳಿದ.

ನಾನು ಕ್ಯಾಮರಾ, ಫಿಲ್ಮುಗಳನ್ನು ಹೊತ್ತು ವೇಳೆಗೆ ಸರಿಯಾಗಿ ಸಜ್ಜಾಗಿ ಹೋದರೆ, ಅವನು ಸರಿಯಾಗಿ ಮಾತನಾಡಿಸಲೇ ಇಲ್ಲ! ತನ್ನ ತೊಗಲು ಗೊಂಬೆಗಳನ್ನು ಛಾಯಾಗ್ರಹಣಕ್ಕೆ ಹೊರಗೆ ತರಲೂ ಸಿದ್ಧನಾಗಲಿಲ್ಲ. ಆತನ ಇಂಗಿತ ಅರಿತು, ಒಂದೆರಡು ಛಾಯಾಚಿತ್ರಗಳನ್ನು ಕ್ಲಿಕ್ಕಿಸಿದ ಶಾಸ್ತ್ರ ಮುಗಿಸಿ, ಹೊರಟು ನಿಂತಾಗ ''ನಮ್ಮ ಹಳ್ಳಿಗೆ ಬನ್ನಿ! ನನ್ನ ಸಂಗ್ರಹದಲ್ಲಿ ಒಂದು ಸಾವಿರಕ್ಕೂ ಹೆಚ್ಚು ತೊಗಲು ಗೊಂಬೆಗಳಿವೆ.'' ಎಂದ. ಇಲ್ಲಿಯೇ ಇದ್ದಷ್ಟು ಗೊಂಬೆಗಳನ್ನು ಕ್ಲಿಕ್ಕಿಸಲು ಅನುಕೂಲ ಮಾಡಿಕೊಡದವನು, ಅವನ ಹಳ್ಳಿಗೆ ಹೋದರೆ ಆ ಅನುಕೂಲ ಒದಗಿಸುವ ಸಾಧ್ಯತೆ ತೀರ ಕಡಿಮೆ. ಅಲ್ಲದೇ ಅವನ ತೊಗಲು ಗೊಂಬೆಗಳು ಅಷ್ಟೊಂದು ಕಲಾತ್ಮಕವಾಗಿಯೂ ಇರಲಿಲ್ಲ. ಆ ದೃಷ್ಟಿಯಿಂದ ಧಾರವಾಡದಲ್ಲಿ ಛಾಯಾಗ್ರಹಣ ಮಾಡಿದ ಪಿ. ಆರ್. ತಿಪ್ಪೇಸ್ವಾಮಿ ಅವರ ಸಂಗ್ರಹ ಅಪೂರ್ವವಾಗಿತ್ತು. ಈ ರಾಜು ಸಹಕರಿಸಿದ್ದರೆ, ಸ್ಪ್ಯಾಪ್ರೆಸ್ ಪ್ರವಾಸಕ್ಕೆ ಅವನ ತಂಡದ ಹೆಸರು ಸಿಫಾರಸು ಮಾಡಿ, ನೆರವು ನೀಡಬಹುದಾಗಿತ್ತು. ತೊಗಲು ಗೊಂಬೆಯಾಟದ ತಂಡವನ್ನು ಕರೆತರುವಂತೆ ಇಲ್ಲವೇ ಅಂಥ ತಂಡವೊಂದನ್ನು ಸೂಚಿಸುವಂತೆ ಆ ನಾಡಿನ ಸಂಸ್ಥೆಯೊಂದು ನಿನ್ನ ಸಹಾಯ ಕೇಳಿತ್ತಲ್ಲವೇ?

* * *

ನಾನು ಬಾಲಕನಾಗಿದ್ದಾಗ, 'ಹುಲಿಯ ಮೈಬಣ್ಣಕ್ಕೆ ನರಿ ಮೈ ಸುಟ್ಟುಕೊಂಡ ಕಥೆ' ಎಂಬ ಪಾಠವಿತ್ತು. ಅಂತೆಯೇ ಇನ್ನೊಬ್ಬರ ಅನುಕರಣೆ ಮಾಡಲೇ ಕೂಡದು! ಎಂದು ಆಗಲೇ ನಿರ್ಧರಿಸಿದ್ದೆ. ಹೀಗಾಗಿ ಸ್ವಂತಿಕೆ ಬೆಳೆಸಿಕೊಳ್ಳಲು ಅನುಕೂಲವೇ ಆಯಿತು. ಆದರೆ ಇಂದು ಅನುಕರಣೆಯೇ ಬಹುಸಂಖ್ಯಾತರ ಬಂಡವಲು ಆಗಿದೆ! ಎಲ್ಲರ ಮಕ್ಕಳೂ ಕಂಪ್ಯೂಟರ್ ವಿಜ್ಞಾನಿಯೇ ಆಗಬೇಕು, ಅವರೆಲ್ಲ ಅಮೇರಿಕೆಗೆ ಹೋಗಬೇಕು. ಅಲ್ಲಿ ಕೋಟ್ಯಾಧೀಶರೇ ಆಗಬೇಕು. ಇದಕ್ಕಾಗಿ ಪಾಲಕರು ಏನೇ ಮಾಡಲು ಸಿದ್ಧ! ಇತ್ತೀಚೆಗೆ ಎಲ್ಲ ರಾಜ್ಯಗಳೂ ಇದೇ ಪಿಡುಗಿನಿಂದ ಬಳಲುತ್ತಿವೆ. ಐ.ಟಿ. ಕ್ರಾಂತಿಯ ಹೆಸರಿನಲ್ಲಿ ಲೆಕ್ಕವಿಲ್ಲದಷ್ಟು ಕಂಪ್ಯೂಟರ್ ಕೋರ್ಸುಗಳು ದೇಶದಲ್ಲಿ ತಲೆ ಎತ್ತಿವೆ. ಕರ್ನಾಟಕ

ಸರಕಾರವಂತೂ ಈ ''ಕ್ರಾಂತಿ''ಯ ಮುಂಚೂಣಿಯಲ್ಲಿದೆ. ಅಂತೆಯೇ ಕಂಪ್ಯುಟರ್ ಹಾಗೂ ಇಂಟರನೆಟ್ ಬಳಸಲು ಅನುಕೂಲವಾಗುವಂತೆ ಬೆಂಗಳೂರು ಮಹಾನಗರದ ರಸ್ತೆಗಳನ್ನು ಅಗೆದು ಕೇಬಲ್ ಹರವಲು ಅನುಮತಿ ನೀಡಲಾಯಿತು. ಖಾಸಗೀ ಕಂಪನಿಗಳು ಯದ್ವಾತದ್ವಾ ರಸ್ತೆಗಳನ್ನು ಕಡಿದು ತಮ್ಮ ಕೆಲಸವನ್ನು ಮುಗಿಸಿಕೊಂಡರು. ಈಗ ಬೆಂಗಳೂರು ಸ್ಮಶಾನದಂತೆ ಭಾಸವಾಗುತ್ತದೆ. ಸಾಲದ್ದಕ್ಕೆ ಕಳೆದ ಎರಡು ದಿನಗಳಿಂದ ಸತತವಾಗಿ ಮಳೆ ಸುರಿಯಲಾರಂಭಿಸಿದ್ದರಿಂದ, ತಗ್ಗು, ಹೊಂಡ, ಕೊಳಚೆಗಳಿಂದಾಗಿ ಕಾಲು ನಡಿಗೆಯಲ್ಲಿ ಹೋಗುವದು ಕೂಡ ಗಂಡಾಂತರಕಾರಿಯಾಗಿದೆ. ಎಲ್ಲಿಯ ಸಿಂಗಪುರ? ಎಲ್ಲಿಯ ಬೆಂಗಳೂರು?

ರಸ್ತೆಗಳನ್ನು ಅಗೆಯುವಾಗ, ಕೇಬಲ್‌ಗಳನ್ನು ಹಾಸುವಾಗ ನಾನು ಕ್ಯಾಮರಾದೊಂದಿಗೆ ಕಾರ್ಮಿಕರ ಹಿಂದೆ ಅಲೆದಾಡಿದ್ದೇ ಅಲೆದಾಡಿದ್ದು. ಮೊದಲಲ್ಲಿ ಅವರು ಸಹಕರಿಸದಿದ್ದರೂ ಒಂದೆರಡು ಫೋಟೊಗಳನ್ನು ಕ್ಲಿಕ್ಕಿಸಿ, ಪ್ರತಿಗಳನ್ನು ಕೊಟ್ಟಾಗ, ನಂತರದ ದಿನಗಳಲ್ಲಿ ನನ್ನನ್ನು ಕಂಡೊಡನೆ, ತಮ್ಮ ಕೆಲಸ ಬಿಟ್ಟು ತಮ್ಮ ಫೋಟೊ ಹಿಡಿಯಲು ದುಂಬಾಲು ಬೀಳುತ್ತಿದ್ದರು. ಇವರಲ್ಲಿ ಹೆಂಗಳೆಯರೇ ಹೆಚ್ಚು ಆಸಕ್ತಿ ವಹಿಸುತ್ತಿದ್ದರು. ಅವರ ಕೆಲಸಕ್ಕೆ ವ್ಯತ್ಯಯ ಬಾರದಂತೆ ಜಾಗ್ರತೆ ವಹಿಸಿ, ಮನಸ್ವಿ ಛಾಯಾಗ್ರಹಣ ಮಾಡಲು ಅನುಕೂಲವೇಳೆ (ಊಟದ ವೇಳೆ) ನೋಡಿಕೊಂಡೆ. ಇವನ್ನೆಲ್ಲ ಹೊಂದಿಸಿ, ಹೈ-ಲೋ-ಟೆಕ್' (ಅತ್ಯಾಧುನಿಕ ಮಾಧ್ಯಮಕ್ಕೆ, ಮಾನವಮೂಲಶಕ್ತಿ) ಎಂಬ ಚಿತ್ರ ಲೇಖನವನ್ನು ನಿನ್ನ ವೆಬ್‌ಸೈಟಿಗೆ ಕಳಿಸುತ್ತಿದ್ದೇನೆ. ಅಮೇರಿಕೆಯಂತಹ ಮುಂದುವರಿದ ದೇಶದ ವೀಕ್ಷಕರಿಗೆ ಈ ವಿಷಯ ಕುತೂಹಲಕಾರಿಯಾಗಬಹುದು ಅಂದುಕೊಂಡಿದ್ದೇನೆ.

ನಾನು ಬಳಸುವ ರಸ್ತೆಯಲ್ಲಿ ಕೇಬಲ್ ಹಾಸುವ ಕೆಲಸ ಮುಗಿಸಿ, ಕಾರ್ಮಿಕರು, ಬೇರೆಲ್ಲೋ ಕೆಲಸ ಪ್ರಾರಂಭಿಸಿದರು. ಆದರೆ ಒಂದು ವಾರದ ನಂತರ ಒಂದು ಮುಂಜಾನೆ, ಲ್ಯಾಬಿಗೆ ಹೊರಟಾಗ, ಕಾರ್ಮಿಕರ ತಂಡವೇ ನಾನು ಬರುವದನ್ನು ಕಾದಿದ್ದು, ಘೇರಾಯಿಸಿ ಬಿಟ್ಟಿತು! ಅವರಲ್ಲಿ ಯಾರಿಗೂ ಕನ್ನಡ, ಹಿಂದಿ, ಇಂಗ್ಲಿಷು, ಬರುವದಿಲ್ಲ. ತೆಲುಗು ಕೂಡಾ ತೀರ ಗ್ರಾಮೀಣ. ಕೈ ಜೋಡಿಸಿ ಹೇಳುವದೇನು? ಚಾಮಿ! ಏಮಿ! ಎಂದು ಎಲ್ಲರೂ ಶಂಖನಾದ ಪ್ರಾರಂಭಿಸಿದರು. ನನಗೆ ಅರ್ಥವಾದದ್ದು - ಅವರ ೧೫ ವರ್ಷದ ಹುಡುಗಿ ನಾಪತ್ತೆ ಆಗಿದ್ದಾಳೆ! ಎರಡು ದಿನಗಳಿಂದ ಹುಡುಕುತ್ತಾ ಇದ್ದಾರೆ! ಎಲ್ಲರೂ ಅದನ್ನೆ ಹೇಳುತ್ತಿದ್ದಾರೆ. ''ಇದೇನು ಬಂತಪ್ಪಾ ಗ್ರಾಚಾರ! ಅವರ ಕನ್ಯೆ ನಾಪತ್ತೆ ಆದರೆ ನಾನು ಹೇಗೆ ಹೊಣೆಗಾರನಾಗುತ್ತೇನೆ?'' ಕಕ್ಕಾವಿಕ್ಕಿಯಾಗಿ ನಿಂತುಬಿಟ್ಟೆ.

ಪುಣ್ಯಕ್ಕೆ ಅವರ ಮುಕಾದಂ ಮೇಸ್ತ್ರಿ ಪ್ರತ್ಯಕ್ಷನಾದ! ಅವನ ಹೇಳಿಕೆಯ ಪ್ರಕಾರ, ಲಂಗ-ಜಾಕೀಟು ಧರಿಸುವ ಯುವ ಕೆಲಸಗಾರ್ತಿಯೋರ್ವಳು, ತನ್ನ ಸಹಕಾರ್ಮಿಕ ಪ್ರೇಮಿಯೊಂದಿಗೆ ಓಡಿ ಹೋಗಿದ್ದಾಳೆ. ಅವಳನ್ನು ಹುಡುಕಿ ಕೊಡಲು ಪೋಲೀಸರಿಗೆ ದೂರು ಕೊಟ್ಟರು. ಅವರು ಫೋಟೋ ಕೇಳಿದರು. ಎರಡು ದಿನ ಮೊದಲು ಅವರ

ತಂಡದ ಫೋಟೊ ಕ್ಲಿಕ್ಕಿಸಿದ ದುರ್ದೈವ ನನ್ನದಾಗಬೇಕೇ? ಇದರ ಮೊದಲು ಯಾರೂ ಅವಳ ಫೋಟೊ ತೆಗೆದಿಲ್ಲವಂತೆ. ಅವಳ ಭಾವಚಿತ್ರಕ್ಕಾಗಿ ನನ್ನನ್ನು ಮಲ್ಲೇಶ್ವರದ ಸಕಲ ಓಣಿ-ಬೀದಿಗಳನ್ನೆಲ್ಲ ಹುಡುಕಿದರಂತೆ! ಹೆಸರು - ವಿಳಾಸ ಅರಿಯದೇ! ಅವರ ಗುಂಪಿನಲ್ಲಿ ಲಂಗದ ಹುಡುಗಿ ಅವಳೊಬ್ಬಳೇ ಇದ್ದುದರಿಂದ ಅವಳ ಭಾವಚಿತ್ರ ಗುರುತಿಸಲು ಒಂದಿಷ್ಟು ಕಷ್ಟ ಪಡಬೇಕಾಗಲಿಲ್ಲ. ಒಂದರ ಬದಲಿಗೆ ಎರಡು ಪ್ರಿಂಟ್ ಹೊಡಿಸಿ ಮರುದಿನ ಅವರ ಕೈಗಿತ್ತಾಗ, ಅವರಿಗಾದ ಆನಂದಕ್ಕೆ ಮೇರೆಯಿರಲಿಲ್ಲ. ಆ ಹುಡುಗಿ ತಾನಾಗಿಯೇ ಹಿಂದಿರುಗಿ ಬಂದಿದ್ದರೆ ಇಷ್ಟು ಸಂತೋಷ ಪಡುತ್ತಿದ್ದರೋ ಇಲ್ಲವೋ! ನಂತರ ಮತ್ತೆ ಅವರಾರೂ ಕಾಣಿಸಲಿಲ್ಲ. ಆ ಹುಡುಗಿಯ ಕತೆ ಗೊತ್ತಾಗಲೇ ಇಲ್ಲ. ಇಂಥ ಕಾರ್ಮಿಕರ ಸಂಪರ್ಕ ಬೆಳೆಸಿದಾಗ ಅವರ ಜೀವನದ ಎಷ್ಟೊಂದು ರೀತಿ-ರಿವಾಜುಗಳು ಅರ್ಥವಾಗುತ್ತ ಹೋಗುತ್ತವೆ. ಇವರೆಲ್ಲರನ್ನು ಕ್ಲಿಕ್ಕಿಸಿ ಒಂದು ಕಿರುಪ್ರತಿಯನ್ನು ಅವರಿಗೆ ನೀಡುವದರಿಂದ ಸುಲಭವಾಗಿ ಅವರ ವಿಶ್ವಾಸವನ್ನು ಗೆಲ್ಲಬಹುದು! ಎಂದು ಅನಿಸಿಬಿಟ್ಟಿದೆ. ಕಳೆದ ಒಂದು ವರ್ಷದಿಂದ ಇದೇ ತಂತ್ರವನ್ನು ನನ್ನದಾಗಿ ಮಾಡಿಕೊಂಡಿದ್ದೇನೆ.

ಹಿಂದೆ ಜೋಗತಿಯರ ತಂಡದ ಕೆಲವು ಚಿತ್ರಗಳನ್ನು ತೆಗೆದಿದ್ದೆ. ರಾಜುನ ತೊಗಲುಗೊಂಬೆ ಛಾಯಾಗ್ರಹಣಕ್ಕೆ ಹೊರಟಾಗ, ದಾರಿ ಪಕ್ಕ ಹೊಟೇಲೊಂದರಲ್ಲಿ ಈ ತಂಡ ಕಾಫಿ ಸವಿಯುತ್ತ ನಿಂತಿತ್ತು. ನನ್ನನ್ನು ಕೂಗಿ ಕರೆದು, ಒತ್ತಾಯದಿಂದ ಕಾಫಿ ಕುಡಿಸಿದರು. ನಾನು ಹೊರಟಲ್ಲಿಯೇ ತಾವೂ ಹೋಗಬೇಕು ಎಂದು ಜೊತೆಗೇ ಬಂದರು. ಅವರ ಜೊತೆಯಲ್ಲಿ ನನ್ನನ್ನು ನೋಡಿದ ದಾರಿಹೋಕರು, ಸಿಳ್ಳು ಹಾಕಿ ಗೇಲಿ ಮಾಡಿದರು. ಅವರು ಇಳಿದ ನಿವಾಸದಲ್ಲಿ ಇತರ ಹಿರಿಯರೂ ಇದೇ ಪ್ರವೃತ್ತಿ ತೋರ್ಪಡಿಸಿದರು. ಇದೆಲ್ಲ ನನಗೆ ಹೊಚ್ಚ ಹೊಸ ಅನುಭವವಾದರೂ, ಅವರಿಗೆ ಪ್ರತಿದಿನದ ಕಹಿ ಗುಟುಕು ಆಗಿರಬೇಕು! ಹಿಂದೊಮ್ಮೆ ಮಡಿಕೇರಿಯಲ್ಲಿ ಇವರ ನೃತ್ಯ ಏರ್ಪಡಿಸಿದಾಗ, ಯಾವನೋ ಚಿತ್ರಕಾರನು ಪ್ರತಿಗಳನ್ನು ಕಳಿಸುತ್ತೇನೆಂದು ಮುಂಗಡ ಹಣ ಪಡೆದರೂ ಪ್ರತಿಗಳನ್ನು ಕಳಿಸಲೇ ಇಲ್ಲವಂತೆ. ನೆನಪಿನ ಪತ್ರ ಬರೆದರೂ ಪತ್ತೆ ಇಲ್ಲವಂತೆ. ಈ ಹಿನ್ನೆಲೆಯಲ್ಲಿ ನಾನು ಅವರ ವರ್ಣಛಾಯಾಚಿತ್ರಗಳನ್ನು ತೆಗೆದು, ಪ್ರತಿಗಳನ್ನು ಕಾಸಿಲ್ಲದೇ ಅಂಚೆಯಿಂದ ಕಳಿಸಿದ್ದಕ್ಕೆ ತುಂಬ ಸಂತಸಪಟ್ಟು ಪತ್ರ ಬರೆದು ಕೃತಜ್ಞತೆ ತಿಳಿಸುವ ಸೌಜನ್ಯಕೂಡ ತೋರಿದರು.

ನಾನು ರಾಜಸ್ಥಾನದಲ್ಲಿ ಮೂರು ವರ್ಷಗಳ ದೀರ್ಘಕಾಲ ವಾಸವಾಗಿದ್ದೆ. ಅನೇಕಾನೇಕ ಕಪ್ಪು-ಬಿಳುಪು ಛಾಯಾಚಿತ್ರಗಳನ್ನು ಕ್ಲಿಕ್ಕಿಸಿಯೂ ಇದ್ದೆ. ಆದರೆ ಅವರ ವರ್ಣಮಯ ಜೀವನವನ್ನು ಸೆರೆ ಹಿಡಿಯಲು ಆಗಿರಲಿಲ್ಲ. ಇದಕ್ಕೆ ಅನೇಕಾನೇಕ ಕಾರಣಗಳಿವೆ. ಆದರೆ ಹಣ-ಕಾಸಿನ ಅಭಾವ ಮುಖ್ಯವಾಗಿತ್ತು. ಆಗ ನಮ್ಮ ಭವಿಷ್ಯವೇ ಅನಿಶ್ಚಿತವಾಗಿತ್ತು. ಬರುವ ಸಂಬಳ ಕಡಿಮೆಯಾಗಿತ್ತು. ವರ್ಣಛಾಯಾಗ್ರಹಣ ತುಂಬ ದುಬಾರಿಯಾಗಿತ್ತು. ವರ್ಣಚಿತ್ರಗಳಿಗೆ ಬೇಡಿಕೆಯೂ ಇರಲಿಲ್ಲ. ಮುಂದೊಮ್ಮೆ ರಾಜಸ್ಥಾನಿ ಜನರ ವರ್ಣಚಿತ್ರಗಳ ಕೊರತೆಯನ್ನು ಬೆಂಗಳೂರಿನಲ್ಲಿಯೇ ತುಂಬಿಕೊಳ್ಳಲು

ಸಾಧ್ಯವಾಗಬಹುದು; ಎಂದು ಯಾರಾದರೂ ಹೇಳಿದ್ದರೆ ನಾನು ನಂಬುತ್ತಲೇ ಇರಲಿಲ್ಲ!

ಆದರೆ ಹಾಗಾದದ್ದು ನಿಜ. ಒಂದು ಸಂಜೆ ಮಲ್ಲೇಶ್ವರಂ ಮಾರ್ಕೆಟಿಗೆ ಎಂದಿನಂತೆ ಸಾಮಾನು ಖರೀದಿಗೆ ಹೋಗಿದ್ದೆ. ಈರ್ವರು ರಾಜಸ್ಥಾನಿಗಳು ಕೈಗಳಲ್ಲಿ ಗೊಂಬೆಗಳನ್ನು ಹಿಡಿದು ಹೊರಬಿದ್ದರು. ಅವರನ್ನೇ ಹಿಂಬಾಲಿಸಿದೆ. ಆದರೆ ಕ್ಲಿಕ್ಕಿಸುವದು ಹೇಗೆ? ಎಂದು ಯೋಚಿಸಲಾರಂಭಿಸಿದೆ. ಅವರು ರಸ್ತೆ ಪಕ್ಕದಲ್ಲಿ ಗೊಂಬೆಗಳನ್ನು ಇಟ್ಟು ಬದಿಯ ಚಹಾದ ಗೂಡಂಗಡಿಯಲ್ಲಿ ಇಡ್ಲಿ-ವಡೆ ಖರೀದಿಸಿ ತಿನ್ನಲಾರಂಭಿಸಿದರು. ಚಾ ಕುಡಿದು ಇನ್ನೇನು ಹೊರಡಬೇಕು, ಎಂದಾಗ ನಿಮ್ಮ ಫೋಟೊ ತೆಗೆಯಬಹುದೇ? ಎಂದು ಹಿಂದಿಯಲ್ಲಿ ಕೇಳಿದೆ. ''ಯಾಕಾಗಬಾರದು ಬಾಬೂಜಿ!'' ಎಂದು ನಿಂತರು, ಪೊಟ್ಟಣದೊಳಗಿನ ಇನ್ನಷ್ಟು ಗೊಂಬೆಗಳನ್ನು ಹೊರಗೆಳೆದು ಅನುವು ಮಾಡಿಕೊಟ್ಟರು. 'ನಾವು ಇನ್ನೊಂದು ವಾರ ನಗರದ ಈ ಭಾಗದಲ್ಲೇ ಅಲೆಯುತ್ತ ಗೊಂಬೆ ಮಾರುತ್ತ ಇರುತ್ತೇವೆ. ನಮ್ಮ ಚಿತ್ರದ ಒಂದೆರಡು ಪ್ರತಿ ಕೊಡಿ ಬಾಬುಜಿ' ಎಂದು ವಿನಂತಿಸಿಕೊಂಡರು. ನಂತರ ಮಲ್ಲೇಶ್ವರದ ಅನೇಕ ರಸ್ತೆಗಳಲ್ಲಿ ಎಷ್ಟು ಹುಡುಕಿದರೂ ಕೊನೆಗೂ ಅವರು ಸಿಗಲಿಲ್ಲ.

ಭಾರತೀಯ ಕುಶಲಕಲಾಕರ್ಮಿಗಳ ಪ್ರದರ್ಶನ ಈ ತಿಂಗಳು ಬೆಂಗಳೂರಿನಲ್ಲಿ ಹತ್ತು ದಿನಗಳ ಕಾಲ ನಡೆದಾಗ ರಾಜಸ್ಥಾನಿಗಳನ್ನು ಹತ್ತಿರದಿಂದ ನೋಡಿ ಕ್ಲಿಕ್ಕಿಸುವ ಅವಕಾಶ ಸಿಕ್ಕಿತು. ಆ ಮಳಿಗೆಯ ಮುಖ್ಯಸ್ಥ ಅತ್ಯಂತ ಆಕರ್ಷಕವಾದ ವೇಷಭೂಷಣಗಳನ್ನು ಧರಿಸಿದ್ದ. ರಕ್ತವರ್ಣದ ಟೈ ಆ್ಯಂಡ್ ಡೈ ನಕ್ಷೆಯ ದೊಡ್ಡ ಪಗಡಿ, (ರುಮಾಲು) ಬಣ್ಣದ ಬಗಲಬಂಡಿ, ಕಿರುಧೋತರ, ಬೆಳೆಯಗೊಟ್ಟ ಗಡ್ಡ. ಪತ್ನಿಯೂ ಬಣ್ಣಬಣ್ಣದ ಉಡಿಗೆ-ತೊಡಿಗೆಯಲ್ಲಿದ್ದಳು. ವರ್ಣಮಯ ಸೂತ್ರದ ಗೊಂಬೆಗಳನ್ನು ತೂಗ ಹಾಕಿ ಕುಣಿಸಿ ನೋಡುಗರನ್ನು ರಂಜಿಸುತ್ತಿದ್ದರು. ಅರಗಿನ ಹಾಗೂ ಗಾಜಿನ ಬಳೆಗಳ ವೈಖರಿ, ನಮ್ಮ ಜೋಬನೇರ ಮನೆಯ ಬಳಿಯಲ್ಲಿ ಇಂಥ ಅರಗಿನ ಬಳೆಗಳನ್ನು ಮಾಡುತ್ತಿದ್ದ ಕುಟುಂಬವನ್ನು ನೆನಪಿಸಿತು. ಹಳದಿ, ಕೆಂಪು, ಹಸಿರು ವರ್ಣದ ಅರಗು ಕರಗಿಸಿ ವಿವಿಧ ಅಳತೆಯ ಬಳೆಗಳನ್ನು ನಿರ್ಮಿಸಿ, ಅವುಗಳಿಗೆ ಗಾಜಿನ ತುಂಡುಗಳನ್ನು ಕಲಾತ್ಮಕವಾಗಿ ಜೋಡಿಸುತ್ತಿದ್ದುದನ್ನು ನೋಡುವದೇ ಮೋಜಿನ ಸಂಗತಿಯಾಗಿತ್ತು.

ಬಹುಸಂಖ್ಯಾತ ರಾಜಸ್ತಾನಿಗಳು ನಿರಕ್ಷರಿಗಳಾದರೂ ಸುಸಂಸ್ಕೃತರು. ಸೌಜನ್ಯವೇ ಮೈವೆತ್ತಿ ಬಂದಂತೆ ವರ್ತಿಸುವ ಸರಳ ಜೀವಿಗಳು. ಮನೆಬಾಗಿಲಿಗೆ ಬಂದವರಿಗೆ ನೀರು ಕೊಡಲಾಗದ ಮರಳುಗಾಡಿನಲ್ಲಿ ಮಟ್ಠಾ (ಮಜ್ಜಿಗೆ ನೀರು) ಕೊಟ್ಟಾರು! ಬಿಸಿಲಿನಿಂದ ಹುರಪಳಿಸುವ ನಾಡಿನಲ್ಲಿಯ ವರ್ಣಮಯ ಜೀವನ ಅತ್ಯಾಕರ್ಷಕ! ಬಟ್ಟೆ-ಬರೆಗಳು ಇನ್ನೂ ಆಕರ್ಷಕ. ವಿಶೇಷ ಸಂದರ್ಭಗಳಲ್ಲಿ ಬಟ್ಟೆಬರೆಗೆ ಗೋಟಾ (ಜರಿಯ ಪಟ್ಟೆ) ಹಚ್ಚಿ ಹೊಲಿದಿರುತ್ತಾರೆ. ಯಾವ ಶುಭ ಸಂದರ್ಭ, ಹಬ್ಬ ಬಂದರೂ ರಾತ್ರಿಯೆಲ್ಲ ಢೋಲಕ್ ಬಾರಿಸಿಕೊಂಡು ಹಾಡುತ್ತ ಕಳೆಯುತ್ತಾರೆ.

ರುಮಾಲು ಸುತ್ತಿಕೊಳ್ಳುವ ಬಗೆಯನ್ನು ನಿನಗೆ ಈ-ಮೇಲ್ ಮೂಲಕ

ವಿಚಾರಿಸಿದ್ದು, ನೀನು ಕೊಟ್ಟ ಉತ್ತರ ಹಾಗೂ ನಿನ್ನ Timeless Theatreದ (ಸಿ.ಡಿ. ರೋಮ್) ಮುಖಪುಟ ನೋಡಿ ತುಂಬಾ ಖುಷಿಯಾಯಿತು. ನನ್ನ ಛಾಯಾಗ್ರಹಣ ಕೌಶಲ್ಯವನ್ನು ಸುಧಾರಿಸಿಕೊಳ್ಳಲು ಸದಾಕಾಲ ಪ್ರಯತ್ನ ನಡೆಸಿಯೇ ಇದ್ದೇನೆ. ಸಾಮಾನ್ಯರನ್ನು ಅಪೂರ್ವರಂತೆ ಕ್ಲಿಕ್ಕಿಸುವ ಸಾಹಸ ಸಾಮಾನ್ಯವಲ್ಲ. ಈ ಬಾರಿ ಕೆಲ ತರಕಾರಿ ಮಾರಾಟಗಾರರ ಛಾಯಾಚಿತ್ರಗಳನ್ನು ಕಳಿಸಿದ್ದೇನೆ. ಇವರೆಲ್ಲರನ್ನು ನೀನು ನೋಡಿರುವಿ. ಅಮ್ಮಾ ಕೂಡ ಆಗಾಗ ನೋಡುತ್ತಿರುತ್ತಾಳೆ. ನೋಡಿ ಬಲ್ಲವರಿಗೆ ಮಾತ್ರ ಅವರು ಇರುವ ಮತ್ತು ಫೋಟೊಗಳಲ್ಲಿ ಕಾಣುವ ಅಂತರ ಅರಿಯುವಂತಾಗುತ್ತದೆ. ನಾನು ಅವರೆಲ್ಲರ ಫೋಟೊಗಳನ್ನು ಪರದೇಶದಲ್ಲಿ ಮಾರಿ ಭಾರಿ ಹಣ ಮಾಡುತ್ತ ಇದ್ದೇನೆ! ಎಂದು ಯಾರೋ ಗುಲ್ಲು ಎಬ್ಬಿಸಿದ್ದರು. ''ಅಮೇರಿಕೆಯಲ್ಲಿ ಸುಂದರ ಹೆಣ್ಣುಗಳಿಗೆ ಬರಗಾಲವೆಂದು, ನಿಮ್ಮಂಥವರ ಫೋಟೋ ಪಡೆಯಲು ಹಣ ಸುರಿಯುತ್ತಾರೆಯೇ? ಎಂದು ಗೇಲಿ ಮಾಡಿದ್ದೆ. ನನ್ನ ಹೊಸ ಬಗೆಯ ಛಾಯಾಗ್ರಹಣ, ಹಾಗೂ ನಾನು ಎದುರಿಸಬೇಕಾದ 'ವಸ್ತು'ಗಳ ಪ್ರಶ್ನೆಗಳು, ಕೊಟ್ಟ ಉತ್ತರಗಳಿಗೆ ಕೊನೆ ಮೊದಲಿಲ್ಲ. ಇವನ್ನೆಲ್ಲ ಸಂಗ್ರಹಿಸಿ ಬರೆದರೆ, ಒಳ್ಳೆಯ ಪ್ರಬಂಧವಾದೀತು!

ಭಾರತದ ವೈವಿಧ್ಯಮಯ ಸಂಸ್ಕೃತಿ ಕುರಿತಾದ ನಿನ್ನ Timeless Theatre ಒಂದು ಅಪೂರ್ವ ಕಾಣಿಕೆಯಾಗಿ ಉಳಿಯುವದರಲ್ಲಿ ನನಗೆ ಎಳ್ಳಷ್ಟೂ ಸಂದೇಹವಿಲ್ಲ. ಇಲ್ಲಿಂದ ಅಮೇರಿಕೆಗೆ ಹೋದವರು, ಲಕ್ಷ ಗಟ್ಲೆ ಡಾಲರಗಳನ್ನು ಗಳಿಸಿರಬಹುದು. ಆದರೆ ಲಕ್ಷಗಟ್ಲೆ ವೀಕ್ಷಕರಿಂದ ತಲೆ ತೂಗಿಸಿಕೊಂಡು, ಬೆನ್ನು ಚಪ್ಪರಿಸಿಕೊಂಡು, ಅಸಂಖ್ಯ ಈ-ಮೇಲ್ ಮೂಲಕ ಮೆಚ್ಚಿಕೆ ಪಡೆಯುವದು ಸುಲಭಸಾಧ್ಯವಾದ ಸಾಧನೆಯಲ್ಲ. ದೇವರು, ನಿನ್ನನ್ನು ಇದೇ ಪ್ರಗತಿ ಪಥದಲ್ಲಿ ನಡೆಸಿಕೊಂಡು ಹೋಗಲಿ! ಎಂಬ ಆಸೆ!

◆ ◆ ◆

೪೪. ಸದಾ ಸಿದ್ಧ

ನಿನ್ನ ವಯಸ್ಸಿಗೆ ನನ್ನ ವಯಸ್ಸಿನವರ ವಿಚಾರಸರಣಿಯನ್ನು ಅರಿತುಕೊಳ್ಳುವದು ತುಂಬ ಕಷ್ಟ! ನಾನು ಇದಾಗಲೇ ನಾಡಿನ ಜೀವನ ಮುಗಿಸಿ, ಕಾಡಿನ ಜೀವನಕ್ಕೆ ಅಣಿಯಾಗುತ್ತಿದ್ದೇನೆ. ಕಾಕಾರವರು ತಮ್ಮ ಅರವತ್ತೇಳನೆಯ ವರ್ಷಕ್ಕೆ ಸ್ವರ್ಗಸ್ಥರಾಗಿದ್ದರೆಂದು ಇಲ್ಲಿ ನೆನೆಸಿಕೊಳ್ಳಬಹುದು. ಇದಾಗಲೇ ನನ್ನ ಸಮವಯಸ್ಕರು, ಕೆಲ ಕಿರಿಯರೂ ಕೂಡ, ಸ್ವರ್ಗದ ಬಾಗಿಲು ತಟ್ಟಿ ಒಳಗೆ ಸೇರಿಕೊಂಡೂ ಆಯಿತು. ನನ್ನ ಸ್ನೇಹಿತ ಎಸ್.ಪಿ. ಆಚಾರ್ಯನ ನಿಧನದ ವಿಚಾರ ನಿನಗೆ ತಿಳಿಸಿಯೂ ಇದ್ದೇನೆ. ಆಮ್ಮಾರ ಸಹೋದ್ಯೋಗಿ, ಲೇಖಕ, ಚಿಂತಕ, ಆಕಾಶವಾಣಿಯ ಎಮ್. ಎಸ್. ಕೆ. ಪ್ರಭು ನನಗಿಂತ ಚಿಕ್ಕವರಾದರೂ ಯಮಧರ್ಮರಾಯ, ಅವರನ್ನು ಸೆಳೆದುಕೊಂಡು ಬಿಟ್ಟ. ಪಿ. ಲಂಕೇಶ್ ಕೂಡ ಹೋಗಿಬಿಟ್ಟರು. ದೂರದರ್ಶನದ ಶಿರಹಟ್ಟಿಯ ಪತ್ನಿ ನಾಲ್ಕು ಮಕ್ಕಳನ್ನು ಅನಾಥವಾಗಿಸಿ ನಡೆದೇ ಬಿಟ್ಟಳು! ಹೀಗೆ ಪರಿಚಿತರು, ಸರಿವಯಸ್ಕರು, ಕಿರಿಯರೆಲ್ಲ ಸಾವನ್ನಪ್ಪುವದನ್ನು ಕಂಡಾಗ ನಾವೂ ಅದಕ್ಕಾಗಿ ಸದಾ ಸಿದ್ಧರಾಗಿಯೇ ಇರಬೇಕಲ್ಲವೇ? ಕಾಕಾ, ಸೀತಾರಾಮಣ್ಣರಂಥವರ ಸಾವು ಬರುವದಾದರೆ ನಾನು ಈ ಕ್ಷಣವೂ ಸಿದ್ಧನಾಗಿಯೇ ಇದ್ದೇನೆ. ನನಗೆ ಹೆಚ್ಚು ಕಾಲ ಬದುಕಿರಬೇಕು, ಎಂಬ ಯಾವ ಹಪಾಪಿಯೂ ಇಲ್ಲ. ಆದರೆ ಬದುಕಿ ಇದ್ದಷ್ಟು ಕಾಲ, ಆರೋಗ್ಯದಿಂದ ಇರಬೇಕೆಂಬ ಹಂಬಲ ಮಾತ್ರ ಖಂಡಿತ ಇದೆ. ಆದ್ದರಿಂದ ಸುರಕ್ಷಿತ ಅನಿಸದ ಯಾವ ಕಡೆಗೂ ಹೋಗುವದಿಲ್ಲ. ಅನವಶ್ಯಕವಾಗಿ ಓಡಾಡುವದಿಲ್ಲ. ನೀಗದ ಯಾವ ಕೆಲಸವನ್ನು ಕೈಕೊಳ್ಳುವದಿಲ್ಲ. ಕಾಕಿಯವರನ್ನು ನೋಡಲು ಹೊನ್ನಾವರಕ್ಕೂ ಹೋಗದೇ ಮೂರು ವರ್ಷಗಳಾದವು. ಛಾಯಾಗ್ರಹಣಕ್ಕೆ ಬೇಕಾಗುವ ಸಾಮಗ್ರಿಗಳನ್ನು ಕೊಳ್ಳಲು ಮೆಜೆಸ್ಟಿಕ್‌ಗೆ ಕೂಡ ಹೋಗುವದಿಲ್ಲ. ಬನ್ನೇರ ಘಟ್ಟದ ಮಾರ್ಗದಲ್ಲಿರುವ ಮಾಲಿ, ಮಂಗಲಾರ ಮನೆಗೆ ಕೂಡ ಹೋಗುವ ಸಾಹಸ ಮಾಡಲಿಲ್ಲ.

ಇಂದಿನ ದಿನಗಳಲ್ಲಿ ಅತಿ ಕ್ರಮಬದ್ಧವಾದ ಜೀವನ ನಡೆಸುತ್ತಿದ್ದೇನೆ. ಬೆಳಿಗ್ಗೆ ನಾಲ್ಕು ಗಂಟೆಗೆ ಚಹಾ-ಟೋಸ್ಟ್ ಸೇವಿಸಿ ಕೆಲಸ ಪ್ರಾರಂಭಿಸುತ್ತೇನೆ. ಏಳು ಗಂಟೆಗೆ ಲಘು ನಾಶ್ತಾ. ಹನ್ನೊಂದು ಗಂಟೆಗೆ ಊಟ. ನಂತರ ವಾಮಕುಕ್ಷಿ. ಒಂದು ಗಂಟೆಗೆ ಚಹ. ನಾಲ್ಕು ಗಂಟೆಗೆ ತಿಂಡಿ, ಸೂಪ್, ಸೇವಿಸಿ ಒಂದೆರಡು ಗಂಟೆ ತಿರುಗಾಟ ಮತ್ತು ಶಾಪಿಂಗ್. ಏಳುವರೆ ಗಂಟೆಗೆ ಅರೆಹೊಟ್ಟೆ ಊಟ. ಒಂಬತ್ತು ಗಂಟೆಗೆ ಮಲಗಿ ಬಿಡುತ್ತೇನೆ. ಹೊರಗೆ ಹೋಗುವಾಗ ನನ್ನ ವಿಳಾಸ ಫೋನು ನಂಬರಗಳಿದ್ದ ಚೀಟಿಯನ್ನು ಸದಾ ಜೇಬಿನೊಳಗೆ ಇಟ್ಟುಕೊಂಡಿರುತ್ತೇನೆ. 'ಫೋಟೋತೀಟೆ'ಗೆ ರವೀಂದ್ರ ಕಲಾಕ್ಷೇತ್ರ, ಇನ್ನಿತರ ಕಡೆ ಹೋಗುವಾಗ, ಆಮ್ಮಾರನ್ನು ಕರೆದುಕೊಂಡು ಹೋಗುತ್ತೇನೆ. ಇಷ್ಟೊಂದು ಆರೋಗ್ಯದ ಕಾಳಜಿ ತೆಗೆದುಕೊಳ್ಳುತ್ತಿರುವದರಿಂದ ನನ್ನ ರಕ್ತ ಒತ್ತಡ, ಮಧುಮೇಹಗಳು ಸಂಪೂರ್ಣ ನಿಯಂತ್ರಣದಲ್ಲಿವೆ. ಆದರೂ ಇದಕ್ಕಾಗಿ ಸೇವಿಸುವ ಔಷಧಗಳ

ಪರಿಣಾಮವಾಗಿ, ಶರೀರದಲ್ಲಿ ಸಕ್ಕರೆಯ ಅಭಾವದಿಂದಾಗಿ, ಎಂದಾದರೊಮ್ಮೆ ತಲೆ ಸುತ್ತುತ್ತಿರುತ್ತದೆ. ಪುಪ್ಪುಸಗಳಲ್ಲಿ ಕಫ ತುಂಬಿಕೊಳ್ಳುತ್ತಿರುತ್ತದೆ. ಈ ಕುರಿತು ಡಾಕ್ಟರರಿಗೆ ತೋರಿಸಿದಾಗ, ಈ ವಯಸ್ಸಿಗೆ, ಹಾಗೂ ಔಷಧ ಸೇವನೆಗೆ ಇದು ಸಾಮಾನ್ಯ. ಪರಿಸರ ಮಾಲಿನ್ಯವೂ ಕಫಕ್ಕೆ ಕಾರಣ! ಎಂದರು. ಆದರೆ ಒಮ್ಮಿಂದೊಮ್ಮೆ ತಲೆ ಸುತ್ತಿಬಂದರೆ, ಸೇವಿಸಲು ಮಾತ್ರೆಗಳನ್ನು ಬರೆದುಕೊಟ್ಟಿದ್ದಾರೆ. ನಮ್ಮ ಅಜ್ಜನವರಿಗೆ, ಕಾಕಿಯವರಿಗೆ ಆಗಾಗ ತಲೆ ಸುತ್ತುವದು ಇತ್ತು, ಎಂದು ಇಲ್ಲಿ ಜ್ಞಾಪಿಸಿಕೊಳ್ಳಬಹುದು. ನಾನು ಎಲ್ಲಿಯೇ ಹೊರಗೆ ಹೋಗಲಿ, ಎಲ್ಲಿಗೆ ಹೋಗುತ್ತೇನೆ, ಯಾವಾಗ ಹಿಂದಿರುಗಬಹುದು, ಎಂದು ಆಮ್ಮಾಗೆ ಹೇಳಿಯೇ ಹೋಗುತ್ತೇನೆ. ಇಷ್ಟಾದರೂ ಬರಲು ಐದು ನಿಮಿಷ ತಡವಾದರೂ ಆಮ್ಮಾ ಕಾಳಜಿ ಮಾಡುತ್ತಾಳೆ!

ನಾವಿಬ್ಬರೂ ತುಳಯುತ್ತಿರುವ ಹಾದಿಯಿಂದ ಇನ್ನೂ ಕೆಲವರ್ಷ ಸುಸೂತ್ರವಾಗಿ ಹೋಗಬಹುದು ಎಂದು ಅನಿಸುತ್ತದೆ. ಆರೋಗ್ಯ, ನೆಮ್ಮದಿಗಳ ಜೊತೆಗೆ ರಚನಾತ್ಮಕ ಚಟುವಟಿಕೆಗಳನ್ನೂ ನಡೆಸುತ್ತಿದ್ದೇನೆ. ಈ ಇಳಿವಯಸ್ಸಿನಲ್ಲಿ ಇದಕ್ಕೂ ಉತ್ತಮ ಜೀವನ ಹೇಗಿರುತ್ತದೆ? ಎಂದು ನಾನು ಬೇರೆ ಅರಿಯೆ! ದೇಹ ಗಟ್ಟಿ ಮುಟ್ಟಾಗಿ ಇದ್ದಾಗ, ಸಾಕಷ್ಟು ಅಲೆದಿದ್ದೇನೆ, ಬಗೆಬಗೆಯ ಸಾಹಸ ಮಾಡಿದ್ದೇನೆ. ಈಗ ಕೈಯಲ್ಲಿ ರುದ್ರಾಕ್ಷಿ ಮಾಲೆ ಹಿಡಿದು ಶಿವಶಿವ! ಎಂದು ಜಪಿಸುವ ಬದಲಾಗಿ ಕಾಗದ, ಪೆನ್ನು, ಕ್ಯಾಮರಾ ಹಿಡಿದು, ಇಷ್ಟುವರ್ಷ ಗಳಿಸಿದ ಅನುಭವ, ತರಬೇತಿ, ಮಾಹಿತಿಗಳ ಪ್ರಯೋಜನವನ್ನು ಪಡೆದುಕೊಳ್ಳಲು ಹವಣಿಸುತ್ತಿದ್ದೇನೆ. ಈ ಜೀವನದಿಂದ ವಂಚಿತನಾಗಿದ್ದರೆ, ಇಷ್ಟೊಂದು ಪುಲಕಿತನಾಗುತ್ತಿದ್ದೆನೆಂದು ನನಗನಿಸುವದಿಲ್ಲ. ಇಲ್ಲಿ ಇಲ್ಲದ ಯಾವ ಸುಖ, ಸಂತೋಷ, ನೆಮ್ಮದಿ ಅಮೇರಿಕೆಯಲ್ಲಿದೆ? ಎಂದು ತಿಳಿಯುವದಿಲ್ಲ. ನಿನ್ನ ಆಮಂತ್ರಣದಂತೆ ನಾನು ಅಮೇರಿಕೆಗೆ ಬಂದು, ನಿನ್ನ ಯಶಸ್ಸನ್ನು ಕಣ್ಣಾರೆ ಕಂಡು, ಅತಿಸಂತೋಷ ಪಡುತ್ತೇನೆ, ಎಂದು ನನಗನಿಸುವದೇ ಇಲ್ಲ. ಆದ್ದರಿಂದ, ನೀನು ತಿರುತಿರುಗಿ ಅಮೇರಿಕೆಗೆ ಬರುವಂತೆ ಆಗ್ರಹಿಸುವದು ಸರಿಯಲ್ಲ. ನನಗೆ ಇದಕ್ಕಿಂತ ನೆಮ್ಮದಿಯ ಜೀವನ, ಬೇರೆಲ್ಲಿಯೂ ಸಿಗುವದೆಂದು ಅನಿಸುವದೇ ಇಲ್ಲ!

ನಾನು ಜೀವನದುದ್ದಕ್ಕೂ ಸ್ವತಂತ್ರ ಜೀವನ ನಡೆಸಿದ್ದೇನೆ. ಹಣಕ್ಕಾಗಿ ಎಂದೂ ಕಾಕಾರಿಗೆ ತೊಂದರೆ ಕೊಡಲಿಲ್ಲ. ಪಿತ್ರಾರ್ಜಿತ ಆಸ್ತಿಯ ಪಾಲಿಗಾಗಿ ಸಹೋದರರನ್ನು ಕೇಳಲಿಲ್ಲ. ನನ್ನ ಹವ್ಯಾಸಗಳಿಗಾಗಿ ತಪ್ಪಿ ಕೂಡ ಆಮ್ಮಾರ ಸಂಬಳವನ್ನು ಬಳಸಿಕೊಳ್ಳಲಿಲ್ಲ. ಇಳಿವಯಸ್ಸಿನಲ್ಲಿ ಪುತ್ರನಿಂದ ಯಾವ ಸಹಾಯವನ್ನೂ ಕೋರಲಿಲ್ಲ. ಮುದಿವಯಸ್ಸಿನಲ್ಲಿ ಯೋಗಕ್ಷೇಮವನ್ನು ಬೇರೊಬ್ಬರು ನೋಡಿಕೊಳ್ಳಬೇಕು! ಎಂಬುದು ಸರಿಯಲ್ಲ. ಅಂತೆಯೇ ತೀರ ಅಸಹಾಯಕ ಸ್ಥಿತಿಯಲ್ಲಿ ಏನು ಮಾಡಬೇಕು? ಎಂದು ಯೋಚಿಸಿ ನಿರ್ಣಯವನ್ನು ಕೈಕೊಂಡಿದ್ದೇನೆ. ಕೈ-ಕಾಲುಗಳಲ್ಲಿ ಶಕ್ತಿ-ಸಾಮರ್ಥ್ಯಗಳು ಇರುವವರೆಗೆ 'ಶಶಿಕಿರಣ'ದಲ್ಲಿಯೇ ಇರುವದು. ಜನಬಲ ಬೇಕೇ ಬೇಕು! ಅನಿಸಿದಾಗ, ಸೋದರ, ಸೋದರಿಯರಲ್ಲಿ ಯಾರಾದರೂ ನೆರವಾಗುವಂತಿದ್ದರೆ, ಹೊನ್ನಾವರ, ಕುಮಟಾಕ್ಕೆ ಹೋಗಿ ನೆಲೆಸುವದು. ಅಂತಹ ನೆರವು ಸಿಗುವ ಸಾಧ್ಯತೆ ಇಲ್ಲದಿದ್ದರೆ, ಬೆಂಗಳೂರಿನ

ಆಸುಪಾಸಿನಲ್ಲಿ ತಲೆ ಎತ್ತುತ್ತಿರುವ ವೃದ್ಧಾಶ್ರಮದಲ್ಲಿ ಆಶ್ರಯ ಪಡೆಯುವದು ಎಂದು ನಿರ್ಧರಿಸಿದ್ದೇನೆ. ಇದಕ್ಕಾಗಿ ಪೆನ್ಶನ್, ಹಾಗೂ ಉಳಿತಾಯವನ್ನು ಖರ್ಚಿಗೆ ಮೀಸಲಿಟ್ಟಿದ್ದರಿಂದ ತಲೆ ಕೆಡಿಸಿಕೊಳ್ಳಬೇಕಾಗಿಲ್ಲ.

೧೯೯೦ರಲ್ಲಿ ನೀನು ಅಮೇರಿಕೆಗೆ ಹೊರಟು ನಿಂತಾಗಲೆ ನೀನು ತಿರುಗಿ ಬಂದು ನಮ್ಮೊಡನೆ ಬಾಳುವೆ ನಡೆಸುವ ಸಾಧ್ಯತೆ ತೀರ ಕಡಿಮೆ! ಎಂದು ಆಮ್ಮಾರಿಗೆ ಮನವರಿಕೆ ಮಾಡಿದ್ದೆ. ಆದರೆ ನೀನು ನಂಬಿರಲಿಲ್ಲ. ಅಷ್ಟೇ ಅಲ್ಲ ತಿರುಗಿ ಬರುವದು ಖಂಡಿತ! ಎಂದು ಆಗಾಗ ಪತ್ರ ಬರೆದು ಆಸೆಯ ಸಸಿ ಕಮರಿ ಹೋಗದಂತೆ ಮಾಡುತ್ತಿದ್ದಿ. ನಂತರದ ವರ್ಷಗಳಲ್ಲಿ ನಡೆದ ಘಟನೆಗಳು ನನ್ನ ಮೂಲ ಅಭಿಪ್ರಾಯದ ಸತ್ಯಾಂಶವನ್ನು ಎತ್ತಿ ತೋರಿಸುತ್ತವೆ. ನಿನ್ನ ಜೀವನವನ್ನು ರೂಪಿಸಿಕೊಳ್ಳುವ ಅಧಿಕಾರ ನಿನಗೆ ಇದ್ದೇ ಇದೆ. ಇದಕ್ಕೆ ಯಾವ ರೀತಿಯ ಅಡ್ಡಿ - ಆತಂಕಗಳು ಬರದಂತೆ ಎಚ್ಚರಿಕೆ ವಹಿಸುತ್ತಲೇ ಬಂದಿದ್ದೇನೆ. ಅಂತೆಯೇ ೧೯೯೭ರ ಕೊನೆಯಲ್ಲಿ ರಕ್ತಪೂರೈಕೆಯ ಅಭಾವದಿಂದ ನನ್ನ ಆರೋಗ್ಯ ಒಮ್ಮಿಂದೊಮ್ಮೆ ಕೆಟ್ಟಾಗಲೂ, ನೀನು ಇಲ್ಲಿ ಧಾವಿಸಿ ಬಾರದಂತೆ ಎಚ್ಚರಿಕೆ ವಹಿಸಿದ್ದೆ. ನಾನು ಇಂದು ಇದ್ದೇನೆ. ನಾಳೆ ಇಲ್ಲ. ಆದ್ದರಿಂದ ನನಗಾಗಿ ನೀನು ಒಂದಿಷ್ಟೂ ತ್ಯಾಗ ಮಾಡುವದು ನನಗೆ ಇಷ್ಟವಿಲ್ಲ. ನಿನಗೆ ಯಾವುದು ಸರಿ ಹೋಗುತ್ತದೋ ಹಾಗೆ ಮಾಡುವಲ್ಲಿ ನೀನು ಸ್ವತಂತ್ರ. ಬೇರೆಯವರು ಏನು ಅಂದುಕೊಂಡಾರು! ಎಂದು ನೀನು ಅಳುಕಬೇಕಾಗಿಲ್ಲ. ಈ ಪತ್ರದಲ್ಲಿ ಬರೆದ ಅನೇಕ ವಿಚಾರಗಳನ್ನು ನಿನಗೆ ಈಗಾಗಲೇ ಬರೆದಿದ್ದೇನೆ. ನೀನು ಓದಿ ಮರೆತಿರಬೇಕು.

ಯಾವುದೇ ಕಾರಣಕ್ಕೆ ನೀನು ಭಾರತಕ್ಕೆ ಮರಳಿ ಬರುವದಾಗಲಿ, ಇಲ್ಲಿ ಸ್ಥಾಯಿಯಾಗುವದಾಗಲಿ ವಿಚಾರ ಮಾಡಿದರೆ, ಅದಕ್ಕೂ ಸಂಪೂರ್ಣ ಸ್ವಾಗತ. ನಾವು ಈ ಮನೆಯನ್ನು ನಿನಗೆ ಬಿಟ್ಟುಕೊಟ್ಟು, ಧಾರವಾಡದ ಮನೆ ರಿಪೇರಿ ಮಾಡಿಸಿಕೊಂಡು ಅಲ್ಲಿ ಹೋಗಿ ಇರುತ್ತೇವೆ. ಇಲ್ಲವೇ ಹೊನ್ನಾವರದಲ್ಲಿ ಪುಟ್ಟ ಮನೆ ಕಟ್ಟಿಸುತ್ತೇವೆ. ಇಲ್ಲವೇ ಕೊಂಡುಕೊಳ್ಳುತ್ತೇವೆ. ನನ್ನ, ನಮ್ಮ ಭವಿಷ್ಯಯೋಜನೆಯನ್ನು ವಿವರವಾಗಿ ಬರೆದಿದ್ದೇನೆ. ನೀನು ನಿನ್ನ ಭವಿಷ್ಯದ ಬಗ್ಗೆ ಗಂಭೀರವಾಗಿ ಯೋಚಿಸಿ ನಿರ್ಧಾರಕ್ಕೆ ಬಂದು ಕಾರ್ಯೋನ್ಮುಖಿಯಾಗು. ಅಮೇರಿಕೆಯ ಜೀವನವೇ ನಿಜವಾದ ಸುಖದ ಅಥವಾ ನೆಮ್ಮದಿಯ ಜೀವನ. ಭಾರತದಲ್ಲಿ ಇರುವವರೆಲ್ಲ ಅಜ್ಞಾನಿಗಳು, ಸುಖದ ನೆಲೆ ಕಂಡರಿಯದವರು! ಎಂಬ ಮಾತನ್ನು ನಾನು ಒಪ್ಪುವದೇ ಇಲ್ಲ. ನೆಮ್ಮದಿಯ ಜೀವನ ನಡೆಸುವದು ನಮ್ಮ ಕೈಯಲ್ಲಿಯೇ ಇದೆ. ಇಂದಿನ ಪೀಳಿಗೆಯವರೆಲ್ಲ ಏನೇನೋ ಕನಸುಗಳನ್ನು ಕಟ್ಟಿಕೊಂಡು ಅಮೇರಿಕೆಗೆ ಧಾವಿಸುವುದನ್ನು ನೋಡಿದಾಗ, ಅಯ್ಯೋ! ಎಂದು ಅನಿಸದೇ ಇರುವದಿಲ್ಲ. ಒಮ್ಮೆ ಹೋದ ಬಳಿಕ, ತಿರುಗಿ ಇಲ್ಲಿ ಬರಲು ಮನಸ್ಸು ಬರುವದಿಲ್ಲ. ಸ್ವತಃ ಅಮೇರಿಕನ್ನರಿಗೆ ಧನಪಿಶಾಚಿ ಬೆನ್ನತ್ತಿ, ಲೌಕಿಕ ಸುಖಗಳ ಮೋಹ ಹತ್ತಿಸಿ, ಈಗ ಜೀವನವೆಂದರೆ ಇಷ್ಟೇನೆ? ಎಂದು ಬರಡು ಭಾವನೆ ಬೆಳೆಯುತ್ತಿದೆಯಂತೆ. ಅವರಲ್ಲಿ ಕೆಲವರಾದರೂ ಭಾರತೀಯರಿಂದ ಅಧ್ಯಾತ್ಮವಿದ್ಯೆ, ದೈವಭಕ್ತಿಗಳನ್ನು ಕಲಿಯಲಾರಂಭಿಸಿದ್ದಾರೆ! ಎಂದು ಅಪ್ಪಟ ಅಮೇರಿಕನ್‌ಳಾದ ಕಾರ್ಲಾಕಿಂಗ್,

ಹೇಳಿದಾಗ ನೆಮ್ಮದಿ ಅನಿಸದೇ ಇದ್ದೀತೆ?

◆ ◆ ◆

- - - - - - - -

ಈ ಪತ್ರವನ್ನು ಕಾಮತರು ನಿಧನದ ಎರಡು ವರ್ಷ ಮೊದಲು ಬರೆದಿದ್ದರು. ಆದರೆ ಸಾವನ್ನು ಸ್ವಾಗತಿಸಲು ಸದಾ ಸಿದ್ಧರಾಗಿಯೇ ಇದ್ದರು, ಎಂಬ ಮಾತನ್ನು ದೃಢಪಡಿಸಲು ಕೊನೆಯಲ್ಲಿ ಸೇರಿಸಲಾಗಿದೆ. ತಂದೆಯು ಪರಂಧಾಮವನ್ನು ಐದಿದ ರೀತಿಯಲ್ಲಿಯೇ, ಸುಮಾರು ಅದೇ ವಯಸ್ಸಿನಲ್ಲೇ ಮಗನ ಅಂತ್ಯವಾದದ್ದು ಆಕಸ್ಮಿಕವೊ, ದೈವಚಿತ್ತವೋ ಹೇಳಲಾಗದು! ಆದರೆ ಬಯಸಿದ ರೀತಿಯಲ್ಲಿ ಕೊನೆಯಾದದ್ದು ನಿಜ. - ಸಂ -

ಮನೋಹರ ಗ್ರಂಥ ಮಾಲಾ

ಲಕ್ಷ್ಮೀ ಭವನ, ಸುಭಾಸ ರಸ್ತೆ, ಧಾರವಾಡ - 580 001
ದೂರವಾಣಿ : 0836-2441822

ಛಂದಾ ಪರಿಚಯ

ಸಂಸ್ಥಾಪಕ-ಸಂಪಾದಕ : ದಿ. ಜಿ. ಬಿ. ಜೋಶಿ
ಸಾಹಿತ್ಯ ಸಲಹೆಗಾರ : ಡಾ. ಗಿರೀಶ ಕಾರ್ನಾಡ
ಸಂಪಾದಕ-ಪ್ರಕಾಶಕ : ಡಾ. ರಮಾಕಾಂತ ಜೋಶಿ
ವ್ಯವಸ್ಥಾಪಕ : ಸಮೀರ ಜೋಶಿ

ಆತ್ಮೀಯ ಕನ್ನಡಾಭಿಮಾನಿಗಳಲ್ಲಿ,

ಸವಿನಯ ವಿಜ್ಞಾಪನೆಗಳು.

ಮನೋಹರ ಗ್ರಂಥ ಮಾಲೆಯು ಕನ್ನಡದ ಸೃಜನಶೀಲ ಸಾಹಿತ್ಯವನ್ನು ಪ್ರಕಟಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತ ಬಂದಿದೆ. ಕಳೆದ ೭೧ ವರ್ಷಗಳಿಂದ ಅವಿಚ್ಛಿನ್ನವಾಗಿ ಪ್ರಕಟನೆಯ ಕಾರ್ಯ ಕೈಗೊಂಡು ಕನ್ನಡ ಸಾಹಿತ್ಯದ ಪ್ರಕಟನಾಪ್ರಪಂಚದಲ್ಲಿ ತನ್ನದೇ ಆದ ವಿಶಿಷ್ಟ ಸ್ಥಾನವನ್ನು ಗಳಿಸಿದೆ. ಕನ್ನಡದ ಅನೇಕ ಹಿರಿಯ ಸಾಹಿತಿಗಳು ತಮ್ಮ ಮೊದಲ ಕೃತಿಗಳನ್ನು ಗ್ರಂಥಮಾಲೆಯ ಮೂಲಕ ಪ್ರಕಟಿಸಿ ಗ್ರಂಥಮಾಲೆಗೆ ಹಿರಿಮೆಯನ್ನು ತಂದುಕೊಟ್ಟಿದ್ದಾರೆ. ೨೫ ವರ್ಷಗಳ ನೆನಪಿಗಾಗಿ ಪ್ರಕಟಿಸಿದ "ನಡೆದು ಬಂದ ದಾರಿ"ಯ ಮೂರು ಸಂಪುಟಗಳು, ೫೦ ವರ್ಷಗಳ ನೆನಪಿಗಾಗಿ ಪ್ರಕಟಿಸಿದ "ಪುಟ ಬಂಗಾರ"ದ ಐದು ಸಂಪುಟಗಳು ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ಮೈಲುಗಲ್ಲುಗಳಾಗಿವೆ. ಅಲ್ಲದೆ ಕನ್ನಡದ ಜ್ಞಾನಪೀಠ ಪ್ರಶಸ್ತಿ ವಿಜೇತರೆಲ್ಲರ ಕೃತಿಗಳನ್ನು ಗ್ರಂಥಮಾಲೆಯಿಂದ ಪ್ರಕಟಿಸಿದ ಹೆಮ್ಮೆಯೂ ಇದೆ. ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಪಡೆದವರಲ್ಲಿ ಶೇಕಡಾ ೭೫ರಷ್ಟು ಲೇಖಕರು ಗ್ರಂಥಮಾಲೆಯ ಲೇಖಕರಾಗಿದ್ದಾರೆ.

ಪ್ರಾರಂಭ:

ಮನೋಹರ ಗ್ರಂಥಮಾಲೆಯು ೧೫ ಆಗಸ್ಟ್ ೧೯೩೩ರಂದು (ಶ್ರೀ ಅರವಿಂದರ ಜನ್ಮದಿನ ನೆನೆದು) ಪ್ರಾರಂಭವಾಗಿದೆ. ಪ್ರಾರಂಭದಿಂದಲೂ ದ.ರಾ. ಬೇಂದ್ರೆ, ವಿ.ಕೃ.ಗೋಕಾಕ ಹಾಗೂ ರಂ.ಶ್ರೀ.ಮುಗಳಿಯವರು ಸಾಹಿತ್ಯ ಸಲಹೆಗಾರರಾಗಿ ಗ್ರಂಥಮಾಲೆಯ ಸಾಹಿತ್ಯದ ಉನ್ನತ ಮಟ್ಟವನ್ನು ಕಾಯ್ದುಕೊಳ್ಳಲು ಸಹಾಯ ನೀಡಿದರು. ಜಿ. ಬಿ. ಜೋಶಿಯವರು ಸಂಪಾದಕರಾಗಿ, ಪ್ರಕಾಶಕರಾಗಿ ಗ್ರಂಥಮಾಲೆಯ ಪ್ರಕಟಣೆಯ ಜವಾಬ್ದಾರಿಯನ್ನು ವಹಿಸಿಕೊಂಡರು. ಶ್ರೀ ಕೀರ್ತಿನಾಥ ಕುರ್ತಕೋಟಿಯವರು ೧೯೫೮ ರಿಂದ ೨೦೦೩ರ ವರೆಗೆ - ಅವರ ಮರಣದ ವರೆಗೆ ಗ್ರಂಥಮಾಲೆಯ ಸಾಹಿತ್ಯ ಸಲಹೆಗಾರರಾಗಿದ್ದರು. ಈಗ ಡಾ. ಗಿರೀಶ ಕಾರ್ನಾಡರು ಸಾಹಿತ್ಯ ಸಲಹೆಗಾರರಾಗಿದ್ದಾರೆ.

ಚಂದಾ ಯೋಜನೆ:

ಗ್ರಂಥಮಾಲೆಯ ಮೂಲ ಉದ್ದೇಶ ಕನ್ನಡದಲ್ಲಿ ಸ್ವತಂತ್ರ ಸೃಜನಶೀಲ ಸಾಹಿತ್ಯ ನಿರ್ಮಾಣ ಹಾಗೂ ಪ್ರಸಾರ. ಗ್ರಂಥಮಾಲೆ ಪ್ರಾರಂಭವಾದಾಗ ಕನ್ನಡ ಪುಸ್ತಕಗಳನ್ನು ಮಾರಾಟ ಮಾಡುವ ಅಂಗಡಿಗಳಿರಲಿಲ್ಲ. ಹೀಗಾಗಿ ಕನ್ನಡ ಪುಸ್ತಕಗಳನ್ನು ಓದುಗರಿಗೆ ತಲುಪಿಸಲು ಹೊಸ ಯೋಜನೆಯನ್ನು ರೂಪಿಸುವ ಅವಶ್ಯಕತೆ ಉಂಟಾಯಿತು. ಈ ಯೋಜನೆಯೇ ಚಂದಾದಾರರಿಗೆ ನೇರವಾಗಿ ಪುಸ್ತಕಗಳನ್ನು ಅವರ ಮನೆ ಬಾಗಿಲಿಗೇ ತಲುಪಿಸುವ ಚಂದಾಯೋಜನೆ. ಈ ಯೋಜನೆಯಲ್ಲಿ ಗ್ರಂಥಮಾಲೆಗೆ ಚಂದಾದಾರರನ್ನಾಗಿ ಮಾಡಿಕೊಂಡು ಅವರಿಗೆ

ನೇರವಾಗಿ ಪುಸ್ತಕಗಳನ್ನು ತಲುಪಿಸುವದು. ಈ ವ್ಯವಸ್ಥೆಯಿಂದ ಗ್ರಂಥಮಾಲೆಗೆ ನಿಶ್ಚಿತ ಓದುಗರು ದೊರೆಯುವದರ ಜೊತೆಗೆ ಉನ್ನತ ಮಟ್ಟದ ಸಾಹಿತ್ಯವನ್ನು ನಿರ್ಮಿಸಿ ಓದುಗರಿಗೆ ನೀಡುವ ಜವಾಬ್ದಾರಿ ಗ್ರಂಥಮಾಲೆಯ ಮೇಲೆ ಬಿದ್ದಿತು. ಅಲ್ಲದೆ ಓದುಗರ ಅಭಿರುಚಿಯನ್ನು ನಿರ್ಮಿಸುವಲ್ಲಿ ಪ್ರಮುಖ ಪಾತ್ರ ವಹಿಸುವ ಜವಾಬ್ದಾರಿಯೂ ಗ್ರಂಥಮಾಲೆಗೆ ಬಂದಿತು. ಕನ್ನಡದ ಅನೇಕ ಹಿರಿಯ ಸಾಹಿತಿಗಳು ತಮ್ಮ ಕೃತಿಗಳನ್ನು ಗ್ರಂಥಮಾಲೆಯ ಮೂಲಕ ಪ್ರಕಟಿಸಲು ಒಪ್ಪಿ ಗ್ರಂಥಮಾಲೆಗೆ ಹಿರಿಮೆಯನ್ನು ತಂದು ಕೊಟ್ಟಿದ್ದಾರೆ. ಜಿ. ಬಿ. ಜೋಶಿಯವರು ಪ್ರಕಾಶಕರಾಗಿ ಲೇಖಕ-ಓದುಗರ ನಡುವಿನ ಸಂಪರ್ಕ ಸೇತುವೆಯಾಗಿ ಸಾಹಿತ್ಯ ಪ್ರಸಾರದ ಕಾರ್ಯ ನಿರ್ವಹಿಸಿದರು. ಉತ್ತರ ಕರ್ನಾಟಕದ ಅನೇಕ ಊರುಗಳಲ್ಲಿ ಸ್ವತಃ ಚಂದಾದಾರರಿಗೆ ಪುಸ್ತಕ ತಲುಪಿಸಿ, ಚಂದಾದಾರರನ್ನು ಬೆಳೆಸಿದರು. ಅವರ ಅಭಿಪ್ರಾಯಗಳನ್ನು ಲೇಖಕರಿಗೆ ತಲುಪಿಸಿ ಲೇಖಕ-ಓದುಗರ ಸಂವಾದಿಯಾಗಿ ಸಾಹಿತ್ಯದ ಬೆಳವಣಿಗೆಗೆ ಕಾರಣರಾದರು. ಈ ಯೋಜನೆಯನ್ನು ಕಳೆದ ೭೧ ವರ್ಷಗಳಿಂದಲೂ ನಡೆಯಿಸಿಕೊಂಡು ಬಂದಿದ್ದು, ಜಿ. ಬಿ. ಜೋಶಿಯವರ ನಿಧನದ ತರುವಾಯವೂ, ಚಂದಾ ಯೋಜನೆ ನಿರ್ವಿಘ್ನವಾಗಿ ಸಾಗಿಕೊಂಡು ಬಂದಿದೆ. ಚಂದಾದರರೇ ನಮ್ಮ ಗ್ರಂಥಮಾಲೆಯ ಜೀವಾಳ.

ಸದ್ಯಕ್ಕೆ ಜಿ. ಬಿ. ಜೋಶಿಯವರ ಹಿರಿಮಗ ಡಾ. ರಮಾಕಾಂತ ಜೋಶಿಯವರು ಕಳೆದ ೫೦ ವರ್ಷಗಳಿಂದಲೂ ಜಿ.ಬಿ.ಯವರಿಗೆ ಸಹಾಯಕರಾಗಿ ದುಡಿದು, ಈಗ ಸ್ವತಂತ್ರವಾಗಿ ಅವರು ನಡೆದ ದಾರಿಯಲ್ಲೇ ಗ್ರಂಥಮಾಲೆಯನ್ನು ಮುನ್ನಡೆಸಿಕೊಂಡು ಹೊರಟಿದ್ದಾರೆ. ಜಿ. ಬಿ. ಜೋಶಿಯವರ ಇನ್ನೊಬ್ಬ ಮಗ ಶ್ರೀ ಗೋಪಾಲ ಜೋಶಿಯವರು ಅನೇಕ ವರ್ಷಗಳವರೆಗೆ ಪುಸ್ತಕ ವಿತರಣೆ ಕಾರ್ಯವನ್ನು ನಿರ್ವಹಿಸಿ ಈಗ ಅನಾರೋಗ್ಯದ ನಿಮಿತ್ತ ತಮ್ಮ ಕಾರ್ಯದಿಂದ ನಿವೃತ್ತಿ ಹೊಂದಿದ್ದಾರೆ. ಇತ್ತೀಚೆಗೆ ಡಾ. ರಮಾಕಾಂತ ಜೋಶಿಯವರ ಮಗ ಚಿ. ಸಮೀರ ಜೋಶಿಯವರೂ ತಮ್ಮ ವಿದ್ಯಾಭ್ಯಾಸ ಮುಗಿಸಿ ಇದೇ ಪ್ರಕಟಣ ಪ್ರಪಂಚಕ್ಕೆ ಸೇರಿ ಗ್ರಂಥಮಾಲೆಯನ್ನು ಮುಂದಿನ ತಲೆಮಾರಿಗೂ ನಡೆಯಿಸುವ ಮುನ್ಸೂಚನೆಯನ್ನು ನೀಡಿದ್ದಾರೆ.

ಚಂದಾ ವ್ಯವಸ್ಥೆ:

ಗ್ರಂಥಮಾಲೆಯು ತನ್ನ ಪ್ರಾರಂಭದಿಂದಲೂ ಚಂದಾವ್ಯವಸ್ಥೆಯನ್ನು ಯೋಜಿಸಿಕೊಂಡಿದೆ. ಪ್ರಾರಂಭದಲ್ಲಿ ಎರಡು ತಿಂಗಳಿಗೆ ಒಂದರಂತೆ , ಒಂದು ವರ್ಷದಲ್ಲಿ ೧೫೦ ಪುಟಗಳ ಆರು ಪುಸ್ತಕಗಳನ್ನು ತನ್ನ ಚಂದಾದಾರರಿಗೆ ಪೂರೈಸುವ ಯೋಜನೆಯನ್ನು ಹೊಂದಿತ್ತು. ಕಾಲಾನುಕ್ರಮದಲ್ಲಿ ಕೃತಿಗಳ ಪುಟಸಂಖ್ಯೆಯಲ್ಲಿ ವ್ಯತ್ಯಾಸವಾದಂತೆ ಆರು ಪುಸ್ತಕಗಳ ಬದಲಾಗಿ ಒಟ್ಟು ವರ್ಷಕ್ಕೆ ೧/೮ ಕ್ರೌನ್ ಆಕಾರದ ೧೦೦೦ ಪುಟಗಳನ್ನು ಚಂದಾದಾರರಿಗೆ ತಲುಪಿಸುವ ಯೋಜನೆಯನ್ನು ಕಾರ್ಯರೂಪಕ್ಕೆ ತರಲಾಯಿತು. ಕಳೆದ ಏಳೆಂಟು ವರ್ಷಗಳ ಹಿಂದೆ ಗ್ರಂಥಮಾಲೆಯ ಪುಸ್ತಕಗಳೆಲ್ಲವನ್ನೂ ಕ್ರೌನ್ ಆಕಾರದಿಂದ ಡೆಮಿ

ಆಕಾರಕ್ಕೆ ಬದಲಾಯಿಸಲಾಯಿತು. ಆದ್ದರಿಂದ ಈಗ ಡೆಮಿ ೧/೮ ಆಕಾರದ ೩೦೦ ರಿಂದ ೭೦೦ ಪುಟಗಳ ಸಾಹಿತ್ಯವನ್ನು ಚಂದಾದಾರರಿಗೆ ತಲುಪಿಸುವ ಯೋಜನೆಯನ್ನು ನಿರೂಪಿಸಿದ್ದೇವೆ. ಗ್ರಂಥಮಾಲೆಯ ಚಂದಾದಾರ ಓದುಗರೇ ಅದರ ಜೀವಾಳ. ಅವರ ಅಭಿಮಾನದಿಂದಲೇ ಗ್ರಂಥಮಾಲೆ ಯಾರ ಹಂಗಿಗೂ ಒಳಗಾಗದೇ ಸ್ವತಂತ್ರವಾಗಿ ಜೀವಿಸುತ್ತಿದೆ.

ಕನ್ನಡ ಸಾಹಿತ್ಯಾಭಿಮಾನಿಗಳಾದ ತಾವು ಗ್ರಂಥಮಾಲೆಗೆ ಚಂದಾದಾರರಾಗಿ ಕನ್ನಡ ಸಾಹಿತ್ಯದ ಬಗ್ಗೆ ನಿರಂತರ ಸಂಪರ್ಕ ಮುಂದುವರೆಸಿಕೊಂಡು ಹೋಗಬೇಕಾಗಿ ಬಿನ್ನಹ.

ಹೊಸ ಚಂದಾ ಯೋಜನೆಗಳು :

1. ದಶವಾರ್ಷಿಕ ಚಂದಾದಾರರು — ರೂ. 3000-00
   (10 ವರ್ಷಗಳ ವರೆಗೆ ಚಂದಾಪುಸ್ತಕ ಪೂರೈಸಲಾಗುವದು)
2. ಪಂಚವಾರ್ಷಿಕ ಚಂದಾದಾರರು — ರೂ. 1500-00
   (5 ವರ್ಷಗಳ ವರೆಗೆ ಚಂದಾಪುಸ್ತಕ ಪೂರೈಸಲಾಗುವದು)
3. ವಾರ್ಷಿಕ ಚಂದಾದಾರರು — ರೂ. 300-00
   (1 ವರ್ಷದ ಚಂದಾಪುಸ್ತಕ ಪೂರೈಸಲಾಗುವದು)

ಆಗಸ್ಟ 2004 ವರ್ಷದ ಗ್ರಂಥಗಳು

1. ಹಳ್ಳ ಬಂತು ಹಳ್ಳ (ಕಾದಂಬರಿ)	- ಶ್ರೀನಿವಾಸ ವೈದ್ಯ	ರೂ.200
2. ಪತ್ರ ಪರಾಚಿ (ಪತ್ರಸಾಹಿತ್ಯ)	- ಕೃಷ್ಣಾನಂದ ಕಾಮತ	ರೂ. 90
3. ತಿಪ್ಪೆಯ ರಾಣಿ (ಕತೆಗಳು)	- ದಮಯಂತಿ ನರೇಗಲ್ಲ	ರೂ. 75
4. ಬಿಂಬ ಮತ್ತು ಇತರ ನಾಟಕಗಳು	- ಗಿರೀಶ ಕಾರ್ನಾಡ ಮಹೇಶ ಎಲಕುಂಚವಾರ	ರೂ. 60

ಉಚಿತ ಕಾಣಿಕೆ :

5. ದಕ್ಷಿಣ ಏಶ್ಯಾದಲ್ಲಿ ಇತಿಹಾಸ ಚಿಂತನೆ - ಮಿಖಾಯೆಲ್ ಗೊಟ್‌ಲೊಬ್
   (ವೈಚಾರಿಕ) ಅನು : ಆರ್ಯ — ರೂ. 90

ಮನೋಹರ ಗ್ರಂಥ ಮಾಲೆಯ ಚಂದಾದಾರರಿಗೆ ಪರಿಷ್ಕೃತ ಬೆಲೆಪಟ್ಟಿಯಲ್ಲಿ ಲಭ್ಯವಿರುವ ಪುಸ್ತಕಗಳನ್ನು ವಿಶೇಷ ರಿಯಾಯತಿ 20% ದರದಲ್ಲಿ ಪೂರೈಸಲಾಗುವದು.

ತಮ್ಮ ವಿಶ್ವಾಸಿ,

ಸಮೀರ ಜೋಶಿ

ಮನೋಹರ ಗ್ರಂಥ ಮಾಲಾ
ಲಕ್ಷ್ಮೀ ಭವನ, ಸುಭಾಸ ರಸ್ತೆ, ಧಾರವಾಡ - 580 001

ಚಂದಾ ಅರ್ಜಿ

ವ್ಯವಸ್ಥಾಪಕರು
ಮನೋಹರ ಗ್ರಂಥ ಮಾಲಾ
ಧಾರವಾಡ - 580 001

ಮಾನ್ಯರೇ,

ನಾನು ತಮ್ಮ ಗ್ರಂಥಮಾಲೆಗೆ ಚಂದಾದಾರನಾಗಲು ಬಯಸುತ್ತೇನೆ. ನನ್ನನ್ನು ಈ ವರ್ಷದಿಂದ ಚಂದಾದಾರ ಎಂದು ಪರಿಗಣಿಸಿ ಗ್ರಂಥಮಾಲೆಯ ಪುಸ್ತಕಗಳನ್ನು ಕಳುಹಿಸಿ ಕೊಡಬೇಕಾಗಿ ವಿನಂತಿ.

ಚಂದಾ ಪುಸ್ತಕಗಳನ್ನು ನಾನು ಕೋರಿಯರ್ / ಅಂಚೆಯಿಂದ ಪಡೆದುಕೊಳ್ಳಲು ಇಚ್ಛಿಸುತ್ತೇನೆ. ಹಾಗೂ ಚಂದಾಹಣವನ್ನು ಹೊತ್ತಿಗೆ ಸರಿಯಾಗಿ ಸಲ್ಲಿಸುವ ಭರವಸೆ ಕೊಡುತ್ತೇನೆ.

1.	ದಶವಾರ್ಷಿಕ ಚಂದಾ ಹಣ	ರೂ. 3000-00
2.	ಪಂಚವಾರ್ಷಿಕ ಚಂದಾ ಹಣ	ರೂ. 1500-00
3.	ವಾರ್ಷಿಕ ಚಂದಾ ಹಣ	ರೂ. 300-00

ಚಂದಾಹಣವನ್ನು ಎಂ.ಓ. / ಡಿ.ಡಿ. ಮುಖಾಂತರ ಕಳಿಸುತ್ತೇನೆ.
ಚೆಕ್ ಮೂಲಕ ಕಳಿಸುವುದಾದರೆ ರೂ. 20/- ಕಮೀಶನ್ ಸೇರಿಸಿ ಕಳಿಸುತ್ತೇನೆ.

ತಮ್ಮ ವಿಶ್ವಾಸಿ

ಸಹಿ

ಹೆಸರು : ____________________

ವಿಳಾಸ : ____________________

____

____

ಫೋನ್ : ____________________

ಇ-ಮೇಲ್ : ____________________

CUT HERE

ಮನೋಹರ ಗ್ರಂಥ ಮಾಲೆಯ ಚಂದಾದಾರರನ್ನು ಇನ್ನೂ ಬೆಳೆಸುವ ಉದ್ದೇಶಕ್ಕಾಗಿ ತಮ್ಮ ಸಹಕಾರವನ್ನು ಅಪೇಕ್ಷಿಸುತ್ತಿದ್ದೇವೆ. ತಮಗೆ ಪರಿಚಿತರಿರುವ ಸಾಹಿತ್ಯಾಭಿಮಾನಿಗಳ ಹೆಸರು, ವಿಳಾಸಗಳನ್ನು ತಿಳಿಸಿದರೆ ಅವರನ್ನು ಸಂಪರ್ಕಿಸಿ ಗ್ರಂಥಮಾಲೆಗೆ ಚಂದಾದಾರರಾಗುವಂತೆ ವಿನಂತಿಸುತ್ತೇವೆ ಹಾಗೂ ತಾವು ಅವರ ಹೆಸರನ್ನು ಸೂಚಿಸಿದ್ದಾಗಿಯೂ ತಿಳಿಸುತ್ತೇವೆ.

ಹೆಸರು : ____________________

ವಿಳಾಸ : ____________________

____

____

ಫೋನ್ : ____________________

ಹೆಸರು : ____________________

ವಿಳಾಸ : ____________________

____

____

ಫೋನ್ : ____________________

ಹೆಸರು : ____________________

ವಿಳಾಸ : ____________________

____

____

ಫೋನ್ : ____________________

ಜಡಭರತ ಪ್ರಕಾಶನ

ಲಕ್ಷ್ಮಿ ಭವನ, ಸುಭಾಸ ರೋಡ, ಧಾರವಾಡ - ೫೮೦ ೦೦೧

ಫೋನ್ : 0836-2441823

ಪುಸ್ತಕ ಪಟ್ಟಿ

ಮಕ್ಕಳ ಕಾದಂಬರಿ :

1. ಹಕ್ಕಿಗೊಂದು ಗೂಡು ಕೊಡಿ	ನಾ. ಡಿಸೋಜ	50/-

ಮಕ್ಕಳ ಕತೆಗಳು :

1. ಕೊಕ್ಕರೆ ತಾತ	ಆರ್ಯ	50/-
2. ಅಧುನಿಕ ಜಗತ್ತಿಗೆ ಒಂದು ಹಳೆಯ ಕತೆ	ಮೂಲ : ಬದರಿನಾರಾಯಣ ಅನು : ಕೀರ್ತಿನಾಥ ಕುರ್ತಕೋಟಿ	40/-

ಮಕ್ಕಳ ನಾಟಕ

1. ಉಪ್ಪಿನಕಾಯಿಯ ಅತ್ತೆ	ಆರ್. ಕೆ. ಶಾನುಭೋಗ	40/-
2. ಪಾರಿತೋಷ	ಆರ್. ಕೆ. ಶಾನುಭೋಗ	35/-
3. ಮೋಡರಾಜ	ಆರ್ಯ	35/-

ಇತರ ಪುಸ್ತಕಗಳು

1. ಪಕ್ಷಿಗಳ ಅದ್ಭುತ ಲೋಕ	ಶಿವರಾಮ ಕಾರಂತ	120/-
2. ಸಸ್ತನಿಗಳು	ಸುರೇಶ ವೆಂ. ಕುಲಕರ್ಣಿ	100/-
3. Mammals (Original) (Translation)	Suresh Kulkarni Dr. T. A. Balakrishna Adiga	100/ -
4. ಭೌತಶಾಸ್ತ್ರ ನೋಬೆಲ್ ಪ್ರಶಸ್ತಿ ವಿಜೇತ ವಿಜ್ಞಾನಿಗಳು	ಸುರೇಶ ವೆಂ. ಕುಲಕರ್ಣಿ	120/-
5. ರಸಾಯನಶಾಸ್ತ್ರ ನೋಬೆಲ್ ಪ್ರಶಸ್ತಿ ವಿಜೇತ ವಿಜ್ಞಾನಿಗಳು	ಸುರೇಶ ವೆಂ. ಕುಲಕರ್ಣಿ	120/-
6. ವೈದ್ಯಶಾಸ್ತ್ರ ನೋಬೆಲ್ ಪ್ರಶಸ್ತಿ ವಿಜೇತ ವಿಜ್ಞಾನಿಗಳು	ಸುರೇಶ ವೆಂ. ಕುಲಕರ್ಣಿ	120/-
7. ಭಾವ ತರಂಗಿಣಿ	ಶ್ರೀಮತಿ ಸುಧಾ ರಾವ	30/-

DISTINGUISHED PUBLISHER AWARD

(For Outstanding Service to the cause of Publishing in Kannada)

1993

Instituted by


THE FEDERATION OF INDIAN PUBLISHERS NEW DELHI



Citation

Messrs Monohara Grantha Mala, Dharwad has been awarded The Distinguished Publishers Award In Kannada.

Despite many odds, Manohar Grantha Mala has to its credits many publications in Kannada. It has contributed a great deal in establishing a new literary scene in Kannada by Publishing a number of Prize Winning titles on its lists. This publishing house has evolved new techniques for distribution of their books for which they deserve special commendation.



ದಿ. ಕೃಷ್ಣಾನಂದ ಕಾಮತರು ಪಿಎಚ್.ಡಿ. ಮಾಡಿದ್ದು ಕೀಟಶಾಸ್ತ್ರದಲ್ಲಿ. ಅಮೇರಿಕೆಯಲ್ಲೇ ನೆಲೆಸುವ ಅವಕಾಶವನ್ನು ತಿರಸ್ಕರಿಸಿ ಭಾರತಕ್ಕೆ ಬಂದು ಕೆಲಸವಿಲ್ಲದೇ 'ಫೂಲ ಆಫೀಸರ' ಎಂದು ಸೇರಿ, ಕೊನೆಗೆ ನೌಕರಿಗೆ ಶರಣು ಹೊಡೆದು, ಬೆಂಗಳೂರಿನಲ್ಲಿ ಸ್ವಂತ ಸ್ಟುಡಿಯೋ ಪ್ರಾರಂಭಿಸಿದರು. ಅವರ ಸ್ಟುಡಿಯೋ ಇತರ ಫೋಟೋ ಸ್ಟುಡಿಯೋಗಳಂತಲ್ಲ. ವಿಶೇಷ ಕೆಲಸಗಳಿಗಾಗಿ, ಸಂಶೋಧನೆಗಳಿಗಾಗಿ ಬೇಕಾಗುವ ಚಿತ್ರಗಳನ್ನು ತಯಾರಿಸಿಕೊಡುವ ಕಾರ್ಯದಲ್ಲಿ ನಿರತರಾದರು.

ಅವರ 'ನಾನೂ ಅಮೇರಿಕೆಗೆ ಹೋಗಿದ್ದೆ' ಪ್ರವಾಸ ಕಥನ ತಿಳಿಹಾಸ್ಯದ ಜೊತೆಗೆ ಭಾರತೀಯ ಸ್ವಾಭಿಮಾನವನ್ನು ಎತ್ತಿ ತೋರಿಸುತ್ತದೆ. 'ವಂಗದರ್ಶನ', 'ಪ್ರಾಣಿ ಪರಿಸರ', 'ಪ್ರೇಯಸಿಗೆ ಪತ್ರಗಳು', 'ಮರುಪಯಣ' ಹೀಗೆ ವಿಶಿಷ್ಟ ಸಾಹಿತ್ಯ ಪ್ರಕಾರಗಳಲ್ಲಿ ಕೈಯಾಡಿಸಿದ್ದಾರೆ.

ಈಗ 'ಪತ್ರ-ಪರಾಚಿ' ಅವರು ಮಗನಿಗೆ ಬರೆದ ಪತ್ರಗಳ ಹಿತವಚನ ಹಾಗೂ ಜೀವನದ ಧ್ಯೇಯಗಳ ಬಗ್ಗೆ ದಿಕ್‌ಸೂಚಿಸುವ ಸಾಹಿತ್ಯ ಕೃತಿ ಅಪರೂಪದ್ದು.

Rs. 90/-

ISBN : 81-88478-13-X